ಮಾಡಿ ಹೇಳುತ್ತಿದ್ದೀರೋ ಅಥವಾ ಏನು ಮಾಡುತ್ತಿದ್ದೀರಿ. Are you referring to Kudoor Commission?

ಶ್ರೀ ಕಾಗೋಡು ತಿಮ್ಮಪ್ಪ:-ಹೌದು.

ಶ್ರೀ ಎಸ್.ಬಂಗಾರಪ್ಪ:- ಇಲ್ಲಿರತಕ್ಕ ಪಟ್ಟಿ ಪ್ರಕಾರ, ಖಾಯಂ ಆಯೋಗದ ರಚನೆ ವಿಚಾರದಲ್ಲಿ, ನಾನು ನೋಡಿದಹಾಗೆ ಇಲ್ಲಿ ಯಾವುದನ್ನೂ ಇಟ್ಟಹಾಗೆ ಕಾಣಲಿಲ್ಲ. ಏಕೆಂದರೆ ಎರಡು ವಿಚಾರಗಳು ಮಾತ್ರ ಇವೆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕಾರ ಮಾಡುವುದು ಎಂದು ಇದೆ. ಹಾಗಿದ್ದರೆ ನೀವು ಇದನ್ನು ಯಾವಾಗ ಮಂಡನೆ ಮಾಡಿದ್ದೀರಿ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. Because you are making a reference for consideration and passing of the bill. When was this Bill actually introduced in the Assembly? I can't understand this. ಯಾವಾಗ ಇದು ಆಗಿರತಕ್ಕಂಥಾದ್ದು. ಹಿಂದೆ ಯಾವಾಗಲಾದರೂ ಆಗಿದೆಯೇ?

**11.30 ಎ.ಎಂ**

ಅಧ್ಯಕ್ಷರು:- 7-9-94ರಂದು ಮಂಡನೆ ಆಗಿದೆ.

ಶ್ರೀ ಎಸ್.ಬಂಗಾರಪ್ಪ: -ಅದು ಮೊದಲೇ ಆಗಿತ್ತೋ? ಆಗಿದ್ದರೆ you are now not pressing that, but you are with drawing that Bill. Am I correct? ವಿತ್‌ಡ್ರಾ ಮಾಡುತ್ತಿದ್ದೀರಾ ಅದನ್ನು?

ಅಧ್ಯಕ್ಷರು:- ಅದನ್ನು ಅವರು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದಾರೆ.

Sri S. Bangarappa :- O.K.

Mr. Speaker :- Deferred.

**ಶಾಸನ ರಚನೆ**

ಕರ್ನಾಟಕ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳು ಮತ್ತು ಇತರೇ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ. 1994.

**ಪರ್ಯಾಲೋಚನಾ ಪ್ರಸ್ತಾವ**

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳ ಮತ್ತು ಇತರೇ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ 1994 ಅನ್ನು ಚರ್ಚೆಗೆ ಮಂಡಿಸುತ್ತಿದ್ದೇನೆ.

ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಇದನ್ನು ಮಂಡನೆ ಮಾಡುವುದಕ್ಕಿಂತ ಮೊದಲು ನಾನು ಕೇಳುವುದನ್ನು ಕೇಳುತ್ತೇನೆ. ತಾವು ಮಾಡುವುದನ್ನು ಮಾಡಿಯೇ ಮಾಡುತ್ತೀರಿ ಎಂದು ಗೊತ್ತಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ: -ದಯಮಾಡಿ ಒಂದು ನಿಮಿಷ ತಾವು ಏನು ಕೇಳಿದಿರಿ ಎಂದರೆ, ತಾವು ಇಂಟರ್‌ಡ್ಯುಸ್ ಮಾಡುವ ಮೊದಲು ಅಂತ ಮಾತನಾಡಿದಿರಿ. ಅದಕ್ಕೆ ನಾನು ಒಂದು ಸ್ಪಷ್ಟೀಕರಣ ಕೊಡುತ್ತೇನೆ. ಇದನ್ನು ಇಂಟರ್‌ಡ್ಯೂಸ್ ಮಾಡಿದ್ದುದು ಹೋದ ಅಧಿವೇಶನದಲ್ಲಿ. ಈಗ ಕನ್ಸಿಡರೇಶನ್‌ಗೆ ಮಾತ್ರ ಇರುವುದು. ಇದು ತಮ್ಮ ತಿಳುವಳಿಕೆಗೆ ಮಾತ್ರ ತಾವು ಅದರಲ್ಲಿ ಅಪಾರ್ಥ ಮಾಡಿಕೊಳ್ಳುವಂಥಾದ್ದು ಅಥವಾ ಇಂಟರ್‌ಪ್ರಿಟ್ ಮಾಡತಕ್ಕಂಥಾದ್ದು ಏನೂ ಉಳಿದಿಲ್ಲ.

ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ನಮ್ಮ ಪ್ರಾರ್ಥನೆ ಇಷ್ಟೆ. ಈ ವಿಶೇಷ ಅಧಿವೇಶನವನ್ನು ಕರೆಯಲಿಕ್ಕೆ ಸರ್ಕಾರಕ್ಕೆ ಇದ್ದಂತಹ ವಿಶೇಷ ಸಂದರ್ಭ ಏನು? ಏಕೆಂದರೆ, ನಾವು ಮೊನ್ನೇ ತಾನೇ ಸದನದಿಂದ ಹೊರಗೆ ಹೋಗಿದ್ದೇವೆ. ಅವತ್ತೇ ಈ ಸಭೆಯನ್ನು ಎರಡು ದಿವಸ ಮುಂದಕ್ಕೆ ಹಾಕಿ ಈ ಸಭೆಯಲ್ಲಿ ಚರ್ಚೆಮಾಡಬಹುದಿತ್ತು. ಈ ಒಂದು ವಾರದೊಳಗಾಗಿ ನಿಮ್ಮ ಸರ್ಕಾರಕ್ಕೆ ಬಂದಂತಹ ಗಂಡಾಂತರ ಏನು? ವಿಶೇಷ ಪರಿಸ್ಥಿತಿ ಏನು? ಈ ವಿಶೇಷ ಅಧಿವೇಶನವನ್ನು ಕರೆದು ಯಾವತ್ತೋ ಬಂದಂತಹ ವರದಿಯನ್ನು ಅನುಷ್ಠಾನಕ್ಕೆ ತಾರದೇ ಸುಮ್ಮನೆ ಕುಳಿತಿದ್ದು ಇವತ್ತು ಇದ್ದಕ್ಕಿದ್ದ ಹಾಗೆ ಬಂದಂಥ ಆತುರ ಯಾವುದು? ವಿಶೇಷ ಪರಿಸ್ಥಿತಿ ಏನು ಎನ್ನತಕ್ಕಂಥಾದ್ದನ್ನು ಮುಖ್ಯಮಂತ್ರಿಗಳು ನಮಗೆ....

ಶ್ರೀ ಎಂ. ವೀರಪ್ಪ ಮೊಯಿಲಿ: - ತಾವು ಮಾತನಾಡಿ ಆಮೇಲೆ....

ಶ್ರೀ ವೈ.ಕೆ.ರಾಮಯ್ಯ:- ಇಲ್ಲಾ ಇಲ್ಲಾ, ತಾವು ಇದನ್ನು ಇಂಟರಡ್ಯೂಸ್ ಮಾಡುವುದಕ್ಕಿಂತ ಮೊದಲೇ ಹೇಳಿದರೆ ಉತ್ತಮ. ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಸರಿಯಾದ ಎಕ್ಸ್‌ಪ್ಲೇನೇಷನ್ಸ್ ಕೊಟ್ಟರೆ ನಾವು ಮಾತನಾಡುವುದೇ ಇಲ್ಲ. If you give convincing explanation I will keep quiet.

ಅಧ್ಯಕ್ಷರು:- ರಾಮಯ್ಯನವರೇ, ತಾವು ಮಾತನಾಡಿ, ತಮಗೆ ಮೊದಲು ಉತ್ತರ ಕೊಟ್ಟು ಆಮೇಲೆ ಎಲ್ಲಾ ವಿವರ ಕೊಡುತ್ತಾರೆ.

ಶ್ರೀ ವೈ.ಕೆ.ರಾಮಯ್ಯ:- ಸ್ವಾಮಿ, ಅದು ನಮಗೆ ಗೊತ್ತಿದೆ. ನಾವು ಕೇಳುತ್ತಿರುವುದು ವಿಶೇಷ ಅಧಿವೇಶನ ಕರೆಯುವಂತಹ ಸಂದರ್ಭ ಏನಿತ್ತು?

* ಶ್ರೀ ವಾಟಾಳ್ ನಾಗರಾಜ್: - ಮಾನ್ಯ ಅಧ್ಯಕ್ಷರೇ, ನಾವೇನು ಇಲ್ಲಿ ಗೊಂದಲ ನಿರ್ಮಾಣ ಮಾಡಬೇಕು ಅಥವಾ ರಾಜಕೀಯ ಮಾಡಬೇಕು ಎನ್ನುವ ಉದ್ದೇಶದಿಂದ ಬಂದಿಲ್ಲ. ಹೋದ ಅಧಿವೇಶನದಲ್ಲಿ ಈ ವಿಧೇಯಕದ ಮಂಡನೆ ಆಯಿತು. ಮಂಡನೆ ಆದಾಗ ಸ್ವಲ್ಪ ಚರ್ಚೆ ಪ್ರಾರಂಭ ಆಯಿತು. ನಮ್ಮ ಚಂದ್ರೇಗೌಡರು ಚರ್ಚೆಮಾಡಿದರು. ಆ ನಂತರ ಆಗಲೇ ಬೇಕಾದರೆ ಅದನ್ನು ಚರ್ಚೆಗೆ ತೆಗೆದುಕೊಂಡು ಅಧಿವೇಶನವನ್ನು ಒಂದು ಎರಡು ದಿವಸ ಮುಂದಕ್ಕೆ ಹಾಕಿ

ಸಮಗ್ರವಾಗಿ ಚರ್ಚೆನಡೆಸಿ ಒಪ್ಪಿಗೆ ತೆಗೆದುಕೊಳ್ಳಬಹುದಾಗಿತ್ತು. ನಮಗೆ ಹಿಂದುಳಿದ ವರ್ಗದವರ ಬಗ್ಗೆ ಆಗಲಿ, ಏನೂ ಇಲ್ಲ. ಅದರೆ ಇಲ್ಲಿ ವಿಧಿ ವಿಧಾನಗಳು, ಕ್ರಮಗಳು ಏನೂ ನಡೆದುಕೊಂಡು ಬರುತ್ತಿವೆ ಅದರ ಬಗ್ಗೆ ಮಾತ್ರ ನಾವು ವಾದ ಮಾಡುತ್ತಿದ್ದೇವೆಯೇ ಹೊರತು ನೀವು ವಿರೋಧ ಪಕ್ಷಗಳ ಸಭೆಗಳನ್ನು ಕರೆದಾಗ ಪ್ರತಿ ಸಾರಿ ನಾವು ಬಂದಿದ್ದೇವೆ. ನಾವು ಎಲ್ಲಾ ವಿಚಾರದಲ್ಲೂ ಬಂದಿದ್ದೇವೆ, ತಪ್ಪಿಸಿಕೊಂಡಿಲ್ಲ ಈ ವಿಚಾರದಲ್ಲಿ ನಮಗೆ ಏಕೆ ಮುನುಸು ಬಂತು? ಎನ್ನತಕ್ಕಂಥ ಪ್ರಶ್ನೆಯನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಈ ಒಂದು ವಿಚಾರದಲ್ಲಿ ಅಂದರೆ ಮೀಸಲಾತಿಯ ಬಗ್ಗೆ ನಿಮ್ಮ ಸರ್ಕಾರ ಕಾಲಕಾಲಕ್ಕೆ ಏನು ನಿರ್ಧಾರಗಳನ್ನು ಕೈಗೊಂಡಿದೆ, ಆ ನಿರ್ಧಾರಗಳನ್ನು ಕೈಗೊಳ್ಳುವುದಕ್ಕಿಂತ ಮುಂಚಿತವಾಗಿ ನಾವು ಇದ್ದೇವೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಳ್ಳಬಹುದಿತ್ತು. ಯಾವ ಸಂದರ್ಭದಲ್ಲೂ ನಮ್ಮನ್ನು ನೀವು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಕೊನೆ ಗಳಿಗೆಯಲ್ಲಿ ನೀವು ನಮ್ಮನ್ನು ಈ ಸದನ ಕರೆಯುತ್ತೇವೆಂದು ಹೇಳಿದಾಗ ಮಾತ್ರ ಕರೆದಿರೋ ಹೊರತು ಅದಕ್ಕೆ ನಮ್ಮ ತಾಂತ್ರಿಕ ವಿರೋಧ ಮತ್ತು ಇದು ಸರಿಯಾದ ರೀತಿಯಲ್ಲ, ವೈಯುಕ್ತಿಕವಾಗಿ ಇದು ಸರಿಯಲ್ಲ, ನೀವು ಕರೆದಿರತಕ್ಕಂಥ ಸಭೆ ಸರಿ ಅಲ್ಲ ಎನ್ನುವಂಥವಾದ ನಾವು ಮಾಡುತ್ತಿಲ್ಲ. ಆ ಉದ್ದೇಶದಿಂದ ನೀವು ಎರಡು ಸಭೆ ಕರೆದಿರಿ. ಮೊದಲನೇ ಸಭೆ ಕರೆದಿರಿ, ಅದಕ್ಕೆ ನೀವು ಒಂದು ಕಥೆ ಹೇಳಿದಿರಿ. ಅಧಿಕೃತವಾದ ವಿರೋಧಪಕ್ಷದವರು ಬರಲಿಲ್ಲ ಅಂದ್ರೆ ನಾವು ಯಾರಾದರು ಬಂದರೆ ಮಾತನಾಡುವುದಿಲ್ಲ ಎನ್ನುವ ಅರ್ಥ ಆಯಿತು. ಅಧಿಕೃತವಾಗಿ ವಿರೋಧಪಕ್ಷದವರು ಬರಲಿಲ್ಲ ಅದಕ್ಕೆ ನಾವು ಸಭೆ ಮುಂದಕ್ಕೆ ಹಾಕುತ್ತೇವೆಂದು ಹೇಳಿದಿರಿ. ಸರಿ ಬಿಡಪ್ಪ ಅಧಿಕೃತವಾಗಿ ಬರಲಿ ಎಂದು ನಾವು ಹೋದೆವು. ಅಧಿಕೃತವಾಗಿ ಎರಡನೇ ಸಾರಿ ಕರೆದರೆ, ಅದಕ್ಕೂ ಬರಲಿಲ್ಲ. ಅಂದ್ರೆ ಪ್ರಶ್ನೆ ಏನೆಂದರೆ, ನೀವು ಮೊದಲಿನಿಂದಲೂ ವಿರೋಧಪಕ್ಷಗಳನ್ನು ಎಲ್ಲಾ ವಿಚಾರಗಳಲ್ಲೂ ಕರೆದು ಮಾತನಾಡಿದ್ದೀರಿ ಈ ಸಂದರ್ಭದಲ್ಲಿ ಮೀಸಲಾಯಿತಿಯ ಬಗ್ಗೆ ಕಾಲಕಾಲಕ್ಕೆ ನೀವು ಚಿನ್ನಪ್ಪರೆಡ್ಡಿ ವರದಿಯನ್ನು ಎಷ್ಟು ಸಾರಿ ಬದಲಾವಣೆ ಮಾಡಿದ್ದೀರಿ? ಈ ಬದಲಾವಣೆ ಮಾಡುವುದಕ್ಕಿಂತ ಮುಂಚಿತವಾಗಿ ಏನಾದರೂ ತಾವು ನಮ್ಮನ್ನು ಕರೆದು ನಮ್ಮನ್ನು ಗಮನಕ್ಕೆ ತೆಗೆದುಕೊಂಡು ಮಾಡಿದಿರಾ? ಕೊನೆಗಳಿಗೆಯಲಿ ತಾವೆಲ್ಲ ಬರಬೇಕು ಎನ್ನತಕ್ಕಂಥ ಮಾತನ್ನು ತಾವು ಹೇಳುತ್ತಿದ್ದೀರಿ. ನಿಮ್ಮ ಕಾರ್ಯಕ್ರಮದ ಪ್ರಕಾರ ತಾವು ಅದನ್ನು ಹೇಳಿದಿರಿ. ಇದರಿಂದ ನಮಗೆ ನೋವಾಗಿ ತಾವು ಸಂಪೂರ್ಣವಾಗಿ ಎಲ್ಲಾ ಸಂದರ್ಭದಲ್ಲೂ ನಮ್ಮನ್ನು ಕಡೆಗಾಣಿಸಿ ಈ ಕೊನೆ ಗಳಿಗೆಯಲ್ಲಿ ಕರೆದಿದ್ದೀರಿ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ ಮತ್ತು ಈ ಮಸೂದೆಯನ್ನು ಮಂಡಿಸುವಾಗಲೇ ಒಂದು ದಿನ ಮುಂದುವರಿಸಿ ಸಂಪೂರ್ಣವಾಗಿ ಚರ್ಚೆ ಮುಂದುವರಿಸಿ ಅವತ್ತೆ ಮತದಾನ ಮಾಡಬಹುದಿತ್ತು? ಆಗ ಯಾವ ಕಾರಣಕ್ಕೆ ಈ ಸದನವನ್ನು ಮುಂದೆಹಾಕಿದಿರಿ. ನಾವು ನೇರವಾಗಿ ತಮ್ಮನ್ನು ಕೇಳಿದೆವು. ಸ್ವಾಮಿ ಸದನವನ್ನು ಇನ್ನೂ ಎರಡು ದಿವಸ ಮುಂದುವರಿಸಿ ಎಂದು. ಇಲ್ಲಾ ಸದನ ಖಂಡಿತ ನಡೆಸುವುದಿಲ್ಲ ಎನ್ನತಕ್ಕಂಥ ಮಾತನ್ನು ಸಹ ತಾವು ಹೇಳಿದಿರಿ. ಮತ್ತೆ ಮುಂದೆಯಾದರೂ ಎರಡು ದಿವಸ ಸದನ ನಡೆಸುತ್ತೀರಾ ಎಂದು ಕೇಳಿದೆವು. ಇಲ್ಲಾ ಸದನ ನಡೆಸುವುದಿಲ್ಲ ಎಂದು ಹೇಳಿದಿರಿ. ಈಗ ಏಕಾಏಕಿ ತಾವು ಈ ಸದನವನ್ನು ಕರೆದಿದ್ದೀರಿ. ಮಾನ್ಯ ರಾಮಯ್ಯನವರು ಹೇಳಿದಂತೆ ನಾನು ತಮ್ಮ ಮೂಲಕ ಏನು ಹೇಳುತ್ತಿದ್ದೇನೆಂದರೆ, ಈ ವಿಧೆಯಕ ಏನು ಮಂಡನೆ ಆಗಿದೆ

ಇದಕ್ಕಿಂತ ಮುಂಚೆ ಈ ಸದನವನ್ನು ಇವತ್ತು ಕರೆಯತಕ್ಕಂಥ ಉದ್ದೇಶ ಏನು ಇತ್ತು ಎನ್ನತಕ್ಕಂಥಾದ್ದನ್ನು ಸದನಕ್ಕೆ ತಾವು ಮೊದಲನೇ ಹಂತವಾಗಿ ಒಂದು ಮಾತನ್ನು ಹೇಳಿದರೆ ನಮಗೆ ಸ್ವಲ್ಪ ಮುಂದೆ ಮಾತನಾಡುವುದಕ್ಕೆ ಅವಕಾಶ ಆಗುತ್ತದೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

*ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾವು ಕೇಳುತ್ತಿಲ್ಲ. ಚುನಾವಣೆಗಳು ಹತ್ತಿರ ಬಂತು ನಾವು ಕೆಲಸ ಮಾಡೋಣ ಎಂದು ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ಜನಗಳು ಬೆಂಗಳೂರಿಗೆ ಏತಕ್ಕೆ ಹೋಗುತ್ತಿದ್ದೀರಿ ಎಂದು ಕೇಳಿದರು. ಅದಕ್ಕೆ ಏನೋ ವಿಶೇಷ ಅಧಿವೇಶನವಂತೆ ಎಂದು ಹೇಳಿದೆವು. ಆದರೆ ಮತ್ತೆ ಹೋದರೆ ಕೇಳ್ತುತ್ತಾರೆ. ಈ ಪ್ರಶ್ನೆಯನ್ನು ನಾನು ವೈ.ಕೆ. ರಾಮಯ್ಯನಾಗಿ ಕೇಳುತ್ತಿಲ್ಲ. ನೀವು ವೀರಪ್ಪ ಮೊಯಿಲಿಯಾಗಿ ಉತ್ತರ ಹೇಳಬೇಕಾಗಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ಈ ವಿಶೇಷ ಪರಿಸ್ಥಿತಿ ಸೃಷ್ಟಿಯಾಗಲಿಕ್ಕೆ ಕಾರಣ ಏನು? ನೀವು ಇದೇ ಹಂತದಲ್ಲಿ ನ್ಯಾಯವಾಗಿ ನಿಯಮಾವಳಿಗಳ ಚೌಕಟ್ಟಿನಲ್ಲಿ ಬರುವಂತಹ ಈ ರಾಜ್ಯದ ಜನತೆಗೆ ಕಲ್ಯಾಣ ಮಾಡುವಂತಹ ಕಾರಣ ಇತ್ತು ಎಂದು ನೀವು ಹೇಳಿದರೆ ನಾವು ಮುಂದೆ ಚರ್ಚೆಗೇ ಬರುವುದಿಲ್ಲ, ನಾವು ಕೈ ಎತ್ತು ಬಿಡುತ್ತೇವೆ. ನಾವು ನಿಮ್ಮ ಜೊತೆ ಸೇರಿಕೊಳ್ಳುತ್ತೇವೆ ನಾವು ಇರುವುದು ಇಬ್ಬರು, ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈ ಒಂದು ಸಂಸ್ಕಾರ, ಸಂಸ್ಕೃತಿ ನಾಳೆ ನಿಮಗೂ ಬರುತ್ತದೆ. ನನಗೂ ಬರುತ್ತದೆ. ಅದಕ್ಕಾಗಿ ನಾನು ಈ ರಾಜ್ಯದ ಜನತೆಯ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಒಂದು ವಿಶೇಷ ಪರಿಸ್ಥಿತಿ ಸೃಷ್ಟಿ ಆದುದು ಯಾವಾಗ? ಏತಕ್ಕೆ ಆಯಿತು. ಈ ರಾಜ್ಯದ ಜನರ ಕಲ್ಯಾಣ ಮಾಡಲು ವಿಶೇಷ ಪರಿಸ್ಥಿತಿ ಸೃಷ್ಟಿ ಆಯಿತು, ಅದಕ್ಕೆ ವಿಶೇಷ ಅಧಿವೇಶನ ಕರೆದಿದ್ದೇವೆ ಎಂದು ನೀವು ನಮಗೆ ಮನವರಿಕೆ ಮಾಡಿಕೊಡುವುದಾದರೆ ನಾವು ಚರ್ಚೆ ಮಾಡುವುದಿಲ್ಲ, ನಾವು ನಿಮ್ಮ ಜೊತೆ ಕೈ ಎತ್ತುತ್ತೇವೆ. ಇಲ್ಲಾ ರಾಜಕೀಯಾ ದೊಂಬರಾಟಕ್ಕೆ ನಾವು ತಂದಿದ್ದೇವೆ ಎಂದು ಹೇಳುವುದಾದರೆ ನಾವು ಚರ್ಚೆ ಮಾಡುತ್ತೆವೆ. ಅದಕ್ಕೆ ತಾವು ಎರಡು ಮಾತಿನಲ್ಲಿ ಏನು ವಿಶೇಷ ಸಂದರ್ಭ ಇತ್ತು ಎಂದು ನಮಗೆ ಹೇಳಿಬಿಟ್ಟರೆ ನಾವು ನಿಮ್ಮ ಜೊತೆಯಲ್ಲೇ ಸೇರಿಕೊಳ್ಳುತ್ತೇವೆ. ಈ ರಾಜ್ಯದ ಕಲ್ಯಾಣ ಸಾಧನೆ ಮಾಡುವುದರಲ್ಲಿ ನಾವು ನಿಮ್ಮ ಜೊತೆಯಲ್ಲೇ ಸೇರಿಕೊಂಡು ನಾವೂ ಹೂವಿನ ಜೊತೆಯಲ್ಲಿ ಸ್ವರ್ಗಕ್ಕೆ ಹೋಗುವಂತಹ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ: – ಮಾನ್ಯ ಅಧ್ಯಕ್ಷರೆ, ಇದಕ್ಕೆ ಕಾರಣ ಅವರು ಕೇಳಿದ್ದಾರೆ. ಅದು ಕೂಡ ಸನ್ಮಾನ್ಯ ವೈಕೆ ರಾಮಯ್ಯನವರು ನಾನು ಕೇಳುತ್ತಿಲ್ಲ ಕೆಲವು ಜನ ನಮಗೆ ಕೇಳಿದರು ಅದನ್ನು ಕೇಳುತ್ತಿದ್ದೇನೆ ಎಂದು ಹೇಳಿದರು. ಸನ್ಮಾನ್ಯ ಸದಸ್ಯರಿಗೆ ಮತ್ತು ಯಾರು ಜನರು ಕೇಳಿದರು ಅವರೆಲ್ಲರನ್ನು ಸೇರಿಸಿ ನಾವು ಉತ್ತರ ಕೊಡುತ್ತೇವೆ, ಅದಕ್ಕೇನೂ ಇಲ್ಲ. ಏಕೆಂದರೆ ತಾವು ಹೇಳಿದ ಪ್ರಕಾರ ಸಮಂಜಸವಾದ ಉತ್ತರ ಕೊಟ್ಟರೆ ನಮ್ಮ ಉದ್ದೇಶ ಕೂಡ ಇಷ್ಟೇ. ಇದನ್ನು ನಾವೆಲ್ಲ ಜೊತೆಯಲ್ಲೇ ಕುಳಿತಿಕೊಂಡು ಪಾಸ್ ಮಾಡೋಣ ಅಂತ ಹೇಳಿ ನಾವು ಇವತ್ತು ಸೇರಿದ್ದೇವೆ. ಅದಕ್ಕಾಗಿ ನಾನು ಹೇಳುವುದು ಕ್ರಮವತ್ತಾಗಿ ಇದು ಮೂವ್ ಆಗಲಿ, ಮೂವ್ ಆದ

ಮೇಲೆ ಚರ್ಚೆ ಪ್ರಾರಂಭ ಆಗುವ ಮೊದಲು ಇದಕ್ಕೆ ಸಮಂಜಸವಾದ ಉತ್ತರ ಕೊಡೋಣ ಎಂದು. ಏಕೆಂದರೆ, ಸಮಾಜ ಕಲ್ಯಾಣ ಸಚಿವರು ಇದನ್ನು ಮೂವ್ ಮಾಡುತ್ತಿದ್ದಾರೆ. ಅದು ಕನ್ಸಿಡರೇಶನ್. ಆ ಎರಡೂ ಹಂತಗಳು ಮೂವ್ ಆದ ಮೇಲೆ ಅದನ್ನು ಮುಂದೆ ವಿಸ್ತೃತವಾಗಿ ಚರ್ಚೆಗೆ ತೆಗೆದುಕೊಳ್ಳುವ ಮೊದಲು ನಾವು ಇದಕ್ಕೆ ಸಮಂಜಸವಾದ ಉತ್ತರ ಕೊಟ್ಟು ಆ ಮೇಲೆ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ತಾವು ಕರೆದಿದ್ದೀರಿ ಕರೆದ ಮೇಲೆ ಮೂವ್ ಆಗಬೇಕು. ಫಾರ್ ದಿ ಕನ್ಸಿಡರೇಶನ್. ಅದು ಆದ ಮೇಲೆ ತಾವು ವಿಸ್ತೃತವಾಗಿ ಚರ್ಚೆ ಮಾಡುವ ಮೊದಲು ನಾನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, 1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಬೇಡಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

*ಶ್ರೀ ಎಂ. ವೀರಪ್ಪ ಮೊಯಿಲಿ:(ಮುಖ್ಯಮಂತ್ರಿಯವರು):- ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಎತ್ತಿದರು. ಈ ವಿಶೇಷ ಅಧಿವೇಶನವನ್ನು ಕರೆಯಲು ಏನು ಕಾರಣ ಎಂದು ಕೂಡ ಕೇಳಿದ್ದಾರೆ. ಏಕೆ ವಿಶೇಷ ಅಧಿವೇಶನವನ್ನು ಮಾಡಿದ್ದೀರಿ? ಮೊನ್ನೆಯೇ ಏಕೆ ಮಾಡಿಲ್ಲ ಎಂದು ಕೇಳಿದ್ದಾರೆ. ಮಾನ್ಯ ವಿರೋಧ ಪಕ್ಷದವರು ಎತ್ತಿದಂಥ ವಿಚಾರಗಳು ಬಹಳ ಸಮಂಜಸವಾದುದು. ಏಕೆಂದರೆ ತಮಗೆ ಮತ್ತು ಸದನದ ಮೂಲಕ ಜನತೆಗೆ ಈ ವಿಚಾರಗಳು ಸ್ಪಷ್ಟವಾಗಿ ಪರಿಚಯವಾಗಿ ಬೇಕಾಗುತ್ತದೆ. ಆ ಒಂದು ಸಮಂಜಸತೆಯ ಬಗ್ಗೆ ಪುಷ್ಟಿ ಕೊಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಯವರು ವರದಿಯನ್ನು ಕೊಟ್ಟಿದ್ದಾರೆ. 1986ರಲ್ಲಿ ಈ ಬಗ್ಗೆ ಒಂದು ತಾತ್ಕಾಲಿಕವಾದಂಥ ಮೀಸಲಾತಿ ನಿಯಮಗಳು ಜಾರಿಗೆ ಬಂದುವು. ಅದು ಎರಡು ವರ್ಷಗಳಿಗೆ ಮಾತ್ರ ಆ ಮೇಲೆ ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಯವರ ವರದಿಯು ಬರಬೇಕು, ಅದರ ಆಧಾರದ ಮೇಲೆ ಶಾಸ್ತ್ರಿಯವಾಗಿ ಈ ಮೀಸಲಾತಿ ನೀತಿಯನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡಬೇಕು ಎಂಬ ವಿಚಾರ ಬಂತು. ಇದು ಬಂದ ಮೇಲೆ ಅದನ್ನು ತತ್‌ಕ್ಷಣ ಅನುಷ್ಠಾನ ಏಕೆ ಮಾಡಲಿಲ್ಲ? ಆ ಮೇಲೆಯೂ ಏಕೆ ಮಾಡಲಿಲ್ಲ? ಮತ್ತೆ ಏತಕ್ಕಾಗಿ ಕೊನೆಯಲ್ಲಿ ಮಾಡಿದ್ದೀರಿ ಎಂಬ ಪ್ರಶ್ನೆಯನ್ನು ತಾವುಗಳು ಎತ್ತಿದ್ದೀರಿ. ಒಂದು ಮಾತನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಒಂದು ಆಯೋಗವು ರಚನೆಯಾದ ಮೇಲೆ, ಅದು ತನ್ನ ಶಿಫಾರಸ್ಸನ್ನು ಕೊಟ್ಟ ಮೇಲೆ, ಅದೂ ಕೂಡ 1986ರಲ್ಲಿ ಯಾವ ಮೀಸಲಾತಿ ನೀತಿಯು ಜಾರಿಗೆ ಆಯಿತು, ಅದು ಯಾವುದೇ ಒಂದು ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಅನುಷ್ಠಾನ ಆಗದೇ ಇರುವ ಹಿನ್ನೆಲೆಯಲ್ಲಿ ಮೀಸಲಾತಿ ನೀತಿಯಲ್ಲಿ ಒಂದು ವ್ಯಾಕ್ಯೂಮ್ ಇತ್ತು. ಕರ್ನಾಟಕ ರಾಜ್ಯದಲ್ಲಿ 1986ರಿಂದ ನಾವು ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಯವರ ಆಯೋಗದ ಶಿಫಾರಸ್ಸನ್ನು ಅನುಷ್ಠಾನ

ಮಾಡುವವರೆಗೂ there is a vaccum in the reservation of Backward classes. ಇವೊತ್ತು ಆ ಒಂದು ಶೂನ್ಯತೆಯನ್ನು ಯಾವುದೇ ಒಂದು ಸರಕಾರವು, ಯಾವುದೇ ಒಂದು ಸಂದರ್ಭದಲ್ಲಿ ಅನುಷ್ಠಾನ ಮಾಡಲೇಬೇಕಾಗುತ್ತದೆ, ಚುನಾವಣೆ ಇರಲಿ, ಇಲ್ಲದೆ ಇರಲಿ, ಸಾಮಾಜಿಕವಾಗಿ ಕೊಡತಕ್ಕಂಥ ನ್ಯಾಯವನ್ನು ಚುನಾವಣೆ ಇದೆ ಎಂದು ನಾವು ಮುಂದುವರಿಸುವುದಕ್ಕೆ ಆಗುವುದಿಲ್ಲ. ಚುನಾವಣೆ ಇಲ್ಲ ಎಂದು ನಾವು ಇದನ್ನು ಅನುಷ್ಠಾನ ಮಾಡದೇ ಇರಲು ಆಗುವುದಿಲ್ಲ. ಇದನ್ನು ಒಂದಲ್ಲ ಒಂದು ಕಾಲದಲ್ಲಿ ಮಾಡಲೇ ಬೇಕಾಗುತ್ತದೆ. ಇದು ಏಕೆ ತಡವಾಯಿತು ಎಂದು ತಾವುಗಳು ಕೇಳಬಹುದು. ಇವೊತ್ತು ಯಾವುದೇ ಒಂದು ವರದಿ, ಈ ದೇಶದ, ಈ ರಾಜ್ಯದ ಮಟ್ಟಿಗೆ ತೆಗೆದುಕೊಳ್ಳುವುದಿದ್ದರೆ, ನಾವು ಈ ಸಮಾಜದ ಕಾನ್‌ಸೆನ್ಸಸ್ ಎಂದು ಏನು ಹೇಳುತ್ತೇವೆ, ಅದನ್ನು ಅನುಸರಿಯೇ ಅನುಷ್ಠಾನ ಮಾಡಬೇಕಾಗುತ್ತದೆ. ದೇಶದಲ್ಲಿ ಮಂಡಳ ಸಮಿತಿಯು ಬಂತು. ಅದರ ವರದಿಯನ್ನು ಅನುಷ್ಠಾನ ಮಾಡಬೇಕೆಂದು ಕೇಂದ್ರ ಸರಕಾರ ಆಗಿನ ಪ್ರಧಾನಿಯವರು ಮಾನ್ಯ ವಿ.ಪಿ.ಸಿಂಗ್‌ರವರು ಅನುಷ್ಠಾನ ಮಾಡಲು ಹೊರಟರು. ಅದರ ಪರಿಣಾಮ ಏನಾಯಿತು? ಅದು ಅನುಷ್ಠಾನಕ್ಕೆ ಬರಲೇ ಇಲ್ಲ, ರಕ್ತಪಾತವಾಯಿತು. ಆದರೆ ಅದೇ ಮಂಡಳ ಸಮಿತಿ ವರದಿಯ ಶಿಫಾರಸ್ಸುಗಳನ್ನು ಎಲ್ಲರಿಗೂ ಒಮ್ಮತ ಬರುವ ರೀತಿಯಲ್ಲಿ ಇಡೀ ರಾಷ್ಟ್ರದಲ್ಲಿಯೇ ಅದ್ವಿತೀಯವಾದಂಥ ರೀತಿಯಲ್ಲಿ ನಮ್ಮ ಪ್ರಧಾನ ಮಂತ್ರಿಯವರಾದ ಶ್ರೀ ಪಿ.ವಿ.ನರಸಿಂಹರಾವ್‌ರವರು ಜಾರಿಗೆ ತಂದರು, for the first time in the country. ಅದನ್ನು ಇವೊತ್ತು ಜನರು ಸ್ವೀಕಾರ ಮಾಡಿದ್ದಾರೆ. that has come to stay for the first time in the country. ಇವೊತ್ತು ಆಯೋಗದ ವರದಿ ಇದೆ ಎಂದು ನಾವು ಅನುಷ್ಠಾನ ಮಾಡಿದ್ದೇವೆ ಎಂದು ಹೇಳಿದ ಕೂಡಲೆ ಆಗುವುದಿಲ್ಲ. ಅದು ಅನುಷ್ಠಾನವಾದಾಗ ಮಾತ್ರ ಅದಕ್ಕೆ ಒಂದು ಅರ್ಥ ಬರುತ್ತದೆಯೇ ಹೊರೆತು, ಆ ಸಾಮಾಜಿಕ ನ್ಯಾಯಕ್ಕೆ ಅರ್ಥ ಬರುತ್ತದೆಯೇ ಹೊರತು, ಕೇವಲ ಘೋಷಣೆಗಳಿಂದ ಇದು ಏನೂ ಆಗುವುದಿಲ್ಲ. ಅನುಷ್ಠಾನಕ್ಕೆ ಬರಲೇ ಬೇಕಾಗುತ್ತದೆ. ಆ ದೃಷ್ಟಿಯಲ್ಲಿ ನಮ್ಮ ದೇಶದ ಪ್ರಧಾನಿಯವರಾದಂಥಾ ಸನ್ಮಾನ್ಯ ಪಿ.ವಿ.ನರಸಿಂಹರಾಯರು ಈ ರಾಷ್ಟ್ರದ ಇತಿಹಾಸದಲ್ಲಿಯೇ ಹಿಂದುಳಿದ ವರ್ಗದವರ ಮೀಸಲಾತಿಯನ್ನು ಅನುಷ್ಠಾನಕ್ಕೆ ತಂದರು. ಇದು ನಿಜವಾಗಿ ಇಡೀ ರಾಷ್ಟ್ರದ ಮನ್ನಣೆಯನ್ನು ಗಳಿಸಿದೆ. ಇದನ್ನು ಜನರು ಸ್ವೀಕಾರ ಮಾಡಿದ್ದಾರೆ. ಇದನ್ನು ಇನ್ನೂ ವಿಸ್ತೃತವಾಗಿ ಬೆಳೆಸತಕ್ಕಂಥಾದ್ದು ಬೇರೆ ವಿಚಾರ. It has come to stay in the country. ಇದು ದೇಶದ ಮಟ್ಟದಲ್ಲಿ ಇರಲಿಲ್ಲ. ಮಂಡಳ ಕಮಿಶನ್‌ನ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಚರ್ಚೆಯಾಯಿತು. ಅದು ವಾದ ನಡೆಯುವಾಗ ಚರ್ಚೆ ನಡೆಯುವಾಗ ನಾವೂ ಕೂಡ ಆ ಒಂದು ಅಂತಿಮ ತೀರ್ಪು ಬರವವರೆಗೆ ಇಲ್ಲಿ ಜಾರಿಗೆ ತರುವುದು ಬೇಡ ಎಂದು ಆಲೋಚನೆ ಮಾಡಿದ್ದರಿಂದ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಶಿಫಾರಸ್ಸು ಅನುಷ್ಠಾನಗೊಳಿಸುವುದು ತಡವಾಯಿತೇ ಹೊರತು ಅದಕ್ಕೆ ಬೇರೆ ಕಾರಣಗಳಿಲ್ಲ. ಇವೊತ್ತು ನಾವು ಆಯೋಗದ ವರದಿಯ ಅನುಷ್ಠಾನಕ್ಕೆ ಹೊರಟಾಗ ಏನಾಯಿತು ಎಂಬುದು ತಮಗೂ ಗೊತ್ತಿದೆ. ಬೇರೆ ಬೇರೆ ರಾಜ್ಯದ ಪ್ರತಿಯೊಂದು ಕಡೆಯೂ ಸಾಮಾಜಿಕ ಜೀವನದಲ್ಲಿ ವ್ಯತ್ಯಾಸ ಇದೆ. ಕೆಲವು ಕಡೆಗಳಲ್ಲಿ ಒಂದು ಜಾತಿಯು ಹಿಂದುಳಿದ ವರ್ಗದವರಿರಬಹುದು, ಅದೇ

ಜಾತಿಯವರು ಮತ್ತೊಂದು ಕಡೆಯಲ್ಲಿ ಮುಂದುವರಿದವರಾಗಿರಬಹುದು. ಏಕೆಂದರೆ ಸಾಮಾಜಿಕವಾದಂಥ ಆ ಭಾವನೆಗಳು sociological ethos. ಅದು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವ್ಯತ್ಯಾಸ ಇದ್ದೇ ಇದೆ. ನಮ್ಮ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಯಾವಾಗಲೂ ಕೂಡ ಕ್ವಾಂಟಮ್ ಆಫ್ ರಿಸರ್ವೇಶನ್ ಹೈಯೆಸ್ಟ್ ಇರುತ್ತದೆ. ಮೊದಲು ಇಲ್ಲಿ ಮಿಲ್ಲರ್ಸ್ ಸಮಿತಿಯು ಇತ್ತು, ಹಾವನೂರ್ ಸಮಿತಿಯ ಸಂದರ್ಭದಲ್ಲಿಯೂ ಕೂಡ ನಮ್ಮ ರಾಜ್ಯದಲ್ಲಿ 69 ಪ್ಲಸ್ ಅಂಗವಿಕಲರು ಮತ್ತಿತರ ರಿಸರ್ವೇಶನ್ಸ್ ಸೇರಿ 73ಪರ್‌ಸೆಂಟ್ ತನಕ ರಿಸರ್ವೇಶನ್ ಕರ್ನಾಟಕ ರಾಜ್ಯದಲ್ಲಿ ಯಾವಾಗಲೂ ಇತ್ತು. ಚಿನ್ನಪ್ಪ ರೆಡ್ಡಿ ಕಮಿಟಿಯವರು ವಕ್ಕಲಿಗರನ್ನು ಬಿಟ್ಟರು ಅಥವಾ ಲಿಂಗಾಯತರಲ್ಲಿನ ಒಂದು ಜಾತಿಯನ್ನು ಬಿಟ್ಟರು ಎಂದು ಹೇಳಿ, ಒಂದು ವಾದ ಬಂದಾಗ, ತಮಗೆ ಗೊತ್ತಿದ ಅನೇಕ ವರದಿಗಳು ವಕ್ಕಲಿಗರನ್ನು ಸೇರಿಸಿದ್ದವು. ಹಾವನೂರು ಸಮಿತಿಯ ವರದಿಯ ಅನುಷ್ಠಾನವಾದಾಗ ವಕ್ಕಲಿಗರನ್ನು ಮೀಸಲಾತಿಯಲ್ಲಿ ಸೇರಿಸಿದ್ದರು. ಆ ಮೇಲೆ ಲಿಂಗಾಯತರ ಅನೇಕ ಸಬ್‌ಕ್ಯಾಸ್ಟ್‌ಗಳನ್ನು ಹಾವನೂರು ಸಮಿತಿಯವರು ಮೀಸಲಾತಿಯಲ್ಲಿ ಸೇರಿಸಿದ್ದರು. ಆ ಮೇಲೆಯೂ ಸೇರಿಸಿದ್ದಾರೆ, 1986ರಲ್ಲಿಯೂ ಕೂಡ ಸೇರಿಸಿದ್ದಾರೆ. ಇದೆಲ್ಲಾ ನಡೆದುಕೊಂಡು ಬಂದಂಥ ದಾರಿ ಆಗಿದೆ. ಇವೊತ್ತು ಕೆಲವು ಹಕ್ಕುಗಳು, ಸೌಲಭ್ಯಗಳು, ಕೆಲವು ಮೀಸಲಾತಿಯ ಸಾಮಾಜಿಕ ನ್ಯಾಯವು ಒಂದು ಸಮೂಹಕ್ಕೆ ಅಥವಾ ಒಂದು ಸಮುದಾಯಕ್ಕೆ ಬಂದಮೇಲೆ ಅದನ್ನು ನಾವು ಕಿತ್ತುಕೊಳ್ಳುವುದು ಅಷ್ಟು ಸುಲಭವಾದುದು ಅಲ್ಲ. ಅದೇ ಕಿತ್ತುಕೊಳ್ಳಬಹುದು ಎಂದು ಹೇಳುವುದು ಸುಲಭವಾಗಬಹುದು. ಆ ಒಂದು ಸಾಮಾಜಿಕ ನ್ಯಾಯವನ್ನು ಅನುಭವಿಸತಕ್ಕಂಥ ಜನರು ಯಾರಿದ್ದಾರೆ ಅವರಿಂದ ಈ ಹಕ್ಕನ್ನು ಕಿತ್ತು ತೆಗೆದು ಅವರನ್ನು ಹೊರ ವಲಯಕ್ಕೆ ಹಾಕತಕ್ಕ ವಿಚಾರ ಹೇಳಲು ಬಹಳ ಸುಲಭವಾಗಬಹುದು. ಆದರೆ ಆ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಜನರು ಎಷ್ಟರಮಟ್ಟಿಗೆ ಅದನ್ನು ಒಪ್ಪುತ್ತಾರೆ? ಇದರ ಅರ್ಥ ಅಂದರೆ ಯಾರು ಬಡವರು ಇದ್ದಾರೆ, ಬಡತನದ ರೇಖೆಯೊಳಗೆ ಇದ್ದಾರೆ, ಅವರುಗಳು ಕೂಡ ಈ ಶೈಕ್ಷಣಿಕ ಮುಖ್ಯ ಪ್ರವಾಹಕ್ಕೆ ಬರಬೇಕು ಅಥವಾ ಔದ್ಯೋಗಿಕ ಮುಖ್ಯ ಪ್ರವಾಹಕ್ಕೆ ಈ ಜನರು ಬರಬೇಕು. ಯಾರು ಈ ಸವಲತ್ತುಗಳಿಂದ ಅಪಹರಿಸಲ್ಪಟ್ಟರು ಅಂಥವರು ಮೀಸಲಾತಿಯಲ್ಲಿ ಸೇರಲು ಅಸಾಧ್ಯವಾಗುತ್ತದೆ. ಒಂದು ವಿಚಾರ ಸತ್ಯ. ಕೇವಲ ಮೆರಿಟ್ ಆಧಾರದ ಮೇಲೆ ಯಾವುದೇ ದೇಶವನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಯಾವುದೇ ದೇಶವನ್ನು ಆ ಆಧಾರದ ಮೇಲೆ ಕಟ್ಟಿಲ್ಲ. ಹಿಟ್ಲರ್ ಕೂಡ ಈ ದಿಶೆಯಲ್ಲಿ ಮಾಡಿದ ಪ್ರಯತ್ನವು ಆಗಲಿಲ್ಲ. ಸೌಥ್ ಆಫ್ರಿಕಾದಲ್ಲಿ ಅವರು ಮೆರಿಟ್ ಥಿಯರಿ ಮೇಲೆ ದೇಶ ಕಟ್ಟುತ್ತೇವೆಂದು ಮಾಡಿದರು, ಆಗಲಿಲ್ಲ ಮೆರಿಟ್ ಎಫಿಶಿಯನ್ಸಿ ಇದು ಸಿನಾನಿಮಸ್ ಇದು ಜೊತೆಯಲ್ಲಿ ಹೋಗುವುದಿಲ್ಲ. ಏಕೆಂದರೆ, ಶ್ರಮ ಪಡತಕ್ಕಂಥ ಜನರು, ಬುದ್ಧಿವಂತಿಕೆಯ ಜನರು ಯಾರಿದ್ದಾರೆ ಅವರನ್ನು ಹುಟ್ಟಿನಿಂದ ಅಳೆಯಲು ಆಗುವುದಿಲ್ಲ. ಅದು ಅನೇಕ ಭಾರಿ ಆ ಒಂದು ಪರಿಸರದಿಂದ ಬೆಳೆಯುತ್ತದೆ ಮತ್ತು ಇವೊತ್ತು ನಾವು ಬಡತನವನ್ನು ಹೋಗಲಾಡಿಸುತ್ತೇವೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ, ಬಡತನದ ರೇಖೆಯ ಮೇಲೆ ಜನರ ಸಂಖ್ಯೆಯು ಜಾಸ್ತಿಯಾಗುತ್ತಾ ಇದೆ. ಇದನ್ನು ಕಡಿಮೆ ಮಾಡಲು ನಮಗೆ ಏಕೆ ಸಾಧ್ಯವಾಗಿಲ್ಲ? ಈ

ಸೋಶಿಯಲಾಜಿಕಲ್ ಫ್ಯಾಕ್ಟರ್ಸ್‌ನಿಂದಾಗಿ ಇದು ಆಗಿಲ್ಲ. ಹೈಯರಾರ್ಕಿಲ್ ಸಿಸ್ಟಂನ ನಮ್ಮ ಸಮಾಜದಿಂದಾಗಿ ಅದು ಆಗಿಲ್ಲ. ಇವೊತ್ತು ಉಳ್ಳವರು ಮತ್ತು ಇಲ್ಲದವರು ಎಂದು ಯಾರಿದ್ದಾರೆ, ಇವರು ಎಲ್ಲಾ ಜನ ಸಮುದಾಯದಲ್ಲಿಯೂ ಇದ್ದಾರೆ. ಈ ಸಾಮಾಜಿಕ ನ್ಯಾಯವನ್ನು ನಾವು ಅವರಿಗೂ ತಲುಪಿಸ ಬೇಕಾಗುತ್ತದೆ. ಅವರಿಂದ ಅದನ್ನು ಅಪಹರಿಸಕೊಳ್ಳಲು ಆಗುವುದಿಲ್ಲ. ಅದ್ದರಿಂದ ಇವೊತ್ತು ಸಾಮಾಜಿಕವಾಗಿ ,ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ, ಅವರಿಗೆ ಒಂದು ಒತ್ತು ಕೊಟ್ಟು ಒಂದು ರಕ್ಷಣೆಯನ್ನು ಕೊಟ್ಟು ಅವರನ್ನು ಮೇಲೆ ತಾರದಿದ್ದರೆ ಬಡತನ ರೇಖೆಯ ಒಳಗೆ ಇರತಕ್ಕಂಥ ಜನರ ಸಂಖೆಯು ಜಾಸ್ತಿಯಾಗುತ್ತದೆಯೇ ಹೊರತು, ಕಡಿಮೆಯಾಗುವುದಿಲ್ಲ. ಆ ದೃಷ್ಟಿಯಿಂದ ಈ ಮೀಸಲಾತಿಯನ್ನು ರಾಜ್ಯದಲ್ಲಿ ಮತ್ತು ದೇಶದಲ್ಲಿ ಜಾರಿಗೆ ತಂದಿದ್ದೇವೆ. ಈಗ ನೀವು ಮೀಸಲಾತಿಯನ್ನು 50 ಪರ್‌ಸೆಂಟ್ ಮಾಡಬಹುದು, 65 ಪರ್‌ಸೆಂಟ್ ಮಾಡಬಹುದು ಎಂದು ಹೇಳಬಹುದು. ನೀವು 80ಪರ್‌ಸೆಂಟ್‌ಗೆ ಏಕೆ ಹೋಗಿದ್ದೀರಿ ಎಂಬಿತ್ಯಾದಿ ವಾದಗಳು ಬರುತ್ತವೆ. ಇಲ್ಲಿಯವರೆಗೆ ಈ ದೇಶದಲ್ಲಿ ಏನು ನಡೆದುಕೊಂಡು ಬಂದಿತ್ತು ಎಂದರೆ, ಆಯಾಯ ರಾಜ್ಯಗಳು ಅವರವರ ಹಿಂದುಳಿದ ವರ್ಗದವರ ಅಥವಾ ಪರಿಶಿಷ್ಠ ವರ್ಗ, ಪಂಗಡದವರ ಜನಸಂಖ್ಯೆಗೆ ಹೊಂದಿಕೊಂಡು ಆಯಾಯ ರಾಜ್ಯದವರು ಅಲ್ಲಲ್ಲೇ ಒಂದು ಮೀಸಲಾತಿ ನೀತಿಯನ್ನು ಮಾಡಿಕೊಂಡು ಹೋಗುತ್ತಿದ್ದರು. ಕೆಲವು ಕಡೆ 27 ಪರ್ಸೆಂಟ್ ಇರಬಹುದು, ಕೆಲವು ಕಡೆ 47 ಪರ್ಸೆಂಟ್ ಇರಬಹುದು, ಕೆಲವು ಕಡೆ 73 ಪರ್ಸೆಂಟ್ ಇರಬಹುದು ಕೆಲವು ಕಡೆ 75 ಪರ್ಸೆಂಟ್ ಇತ್ತು. ಇದಕ್ಕೆ ಯಾವ ಕೋರ್ಟ್‌ಗಳೂ ಅಡ್ಡಿ ಬರುತ್ತಿರಲಿಲ್ಲ. ಸುಪ್ರೀಂ ಕೋರ್ಟ್ ಆಗಲೀ, ಹೈಕೋರ್ಟ್ ಆಗಲೀ ಅಡ್ಡಿ ಬರುತ್ತಿರಲಿಲ್ಲ. 15.4 ಮೇಲೆ 16.4 ಮೇಲೆ, ಮತ್ತು 335 ಏನು ಷೆಡ್ಯೂಲ್ಡ್ ಕ್ಯಾಸ್ಟ್, ಟ್ರೈಬ್ ಮೇಲೆ ಏನು ಮೀಸಲಾತಿ ಮಾಡುತ್ತಿದ್ದರು ಆಯಾಯ ರಾಜ್ಯದವರು, ಆಯಾ ಸಾಮಾಜಿಕ ಪರಿಸ್ಥಿತಿಯನ್ನು ನೋಡಿ ಸಾಮಾಜಿಕ ನ್ಯಾಯ ಯಾವ ವರ್ಗಕ್ಕೆ ಸೇರಬೇಕು ಎಂಬ ಬಗ್ಗೆ ವಿಚಾರ ಮಾಡುತ್ತಿದ್ದರು. ಯಾವ ವರ್ಗಕ್ಕೆ ಮೀಸಲಾತಿ ಏನು ಸೇರಬೇಕು ಆ ವರ್ಗಕ್ಕೆ ಸೇರುವ ರೀತಿಯಲ್ಲಿ ಆಯಾಯ ರಾಜ್ಯದವರು ಮಾಡಲಿಕ್ಕೆ ಅಭಾದಿತವಾದಂತಹ ಕಾನೂನು ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿತ್ತು. ಇದಕ್ಕೆ ಯಾವ ತಡೆ ಬರುತ್ತಿರಲಿಲ್ಲ. For the first time in the country ತಮಗೆ ಗೊತ್ತಿರಬಹುದು, ಇದು ವೀರಪ್ಪ ಮೊಯಿಲಿ ಮಾಡಿದಂತಹ ಗೊಂದಲ ಅಲ್ಲ ಅಥವಾ ಯಾವುದೇ ಸರಕಾರ ಮಾಡಿದಂತಹ ಗೊಂದಲ ಅಲ್ಲ , ಇದು ಸುಪ್ರೀಂ ಕೋರ್ಟಿನವರು ಇಂದಿರಾಸಹಾನಿ ಕೇಸಿನಲ್ಲಿ ಒಂದು ನೀತಿಯನ್ನು ಪ್ರಥಮ ಬಾರಿಗೆ ಮುಂದೆ ತಂದರು. ಎಲ್ಲಾ ನಿಮ್ಮ ಮೀಸಲಾತಿಯನ್ನು ಅಂದರೆ ನೀವು ಎಷ್ಟೇ ಮೀಸಲಾತಿ ಕೊಡಿ ಅದು 50 ಪರ್ಸೆಂಟ್‌ಗಿಂತ ಜಾಸ್ತಿ ಹೋಗಬಾರದು ಎಂದು ಮಾಡಿದರು. ಇದು ಮೂಲಭೂತವಾದ ಕಾರಣ. ಇಲ್ಲದಿದ್ದರೆ 75 ಪರ್ಸೆಂಟ್ ಆಗಲಿ, 80 ಆಗಲೀ ನಮ್ಮ ಸಮುದಾಯಕ್ಕೆ ಸಂಬಂಧಪಟ್ಟ ಹಾಗೆ ನೀತಿ ಮಾಡಲಿಕ್ಕೆ ಅಬಾಧಿತವಾದಂತಹ ಕಾನೂನು ಇತ್ತು, ಪರಿಸರ ಇತ್ತು. ಅದರ ಪ್ರಕಾರ ನಾವು ಮಾಡಿಕೊಂಡು ಬಂದಿದ್ದೇವೆ. ಇಂದಿರಾ ಸಹಾನಿ ಕೇಸಿನಲ್ಲಿ ತೀರ್ಪು ಕೊಟ್ಟ ಮೇಲೆ ಆ ಇಂದಿರಾ ಸಹಾನಿ ಜಡ್ಜ್‌ಮೆಂಟಿನಲ್ಲಿ ಕೂಡ ಕೆಲವು ಕಡೆ ಹೇಳಿದ್ದಾರೆ. ಆ್ಯಡ್ವಕೇಟ್ ರೆಪ್ರಸೆಂಟೇಷನ್ ಸಿಕ್ಕದಿದ್ದರೆ ಜಸ್ಟಿಫಿಕೇಷನ್ ಕೊಡಬೇಕೆಂದು

ಹೇಳಿದ್ದಾರೆ. ಜಸ್ಟಿಫಿಕೇಷನ್ ನೀವು ಎಕ್ಸಿಕ್ಯುಟಿವ್ ಆರ್ಡರ್ 16-4 15-4 ಪ್ರಕಾರ ಕೊಡಬಹುದೇ ಅಥವಾ ಶಾಸನಾತ್ಮಕವಾದ ಜಸ್ಟಿಫಿಕೇಷನ್ ಕೊಡಬೇಕೇ ಎಂಬ ವಾದ ಬಂದಾಗ ನಾವು ಇವತ್ತು ಶಾಸನ ಮಾಡುವಾಗ ಸ್ವಲ್ಪ ತಡವಾಗುತ್ತದೆ. ಆದ್ದರಿಂದ ನಾವು ಇವತ್ತು 15.4, 16.4 ಏನು ಸಂವಿಧಾನಾತ್ಮಕ ರಕ್ಷಣೆ ಇದೆ ಅದರ ಪ್ರಕಾರ ನಾವು ಎಕ್ಸಿಕ್ಯುಟಿವ್ ಆರ್ಡರ್ 73 ಪರ್‌ಸೆಂಟ್ ಮಾಡಿದೆವು, ಮತ್ತೆ 80 ಪರ್‌ಸೆಂಟ್ ಮಾಡಿದೆವು. ಅದನ್ನು ಅನುಷ್ಠಾನ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಇದು ಯಾವಾಗಲೂ ಸದಾ ರಾಜ್ಯದಲ್ಲಿ ನಡೆದು ಬಂದಂತಹ ವಿದ್ಯಮಾನ. ಇದಕ್ಕೆ ಬದಲಾವಣೆ ಯಾವಾಗ ಬಂತು , ಇದಕ್ಕೆ ಆತಂಕ ಯಾವಾಗ ಬಂತು ಅಂದರೆ ಸುಪ್ರೀಂ ಕೋರ್ಟಿನವರು ಇಲ್ಲ, ಇದನ್ನು 50 ಪರ್ಸೆಂಟ್‌ಗೆ ನಿಗದಿತಗೊಳಿಸಬೇಕೆಂದು ಪುನರುಚ್ಚಾರ ಮಾಡಿದಾಗ ನಮಗೆ ಬೇರೆ ಉಪಾಯ ಇಲ್ಲ. 50 ಪರ್ಸೆಂಟ್‌ನಲ್ಲಿ ನಾವು ನಿಲ್ಲಿಸಲಿಕ್ಕೆ ಆಗುತ್ತದೆ. ನಾವು ಇದನ್ನು ನಿಲ್ಲಿಸಲಿಕ್ಕೆ ಹೋದರೆ ಅಪಾರ ಜನ ಸಮುದಾಯ ಏನು ನಿಜವಾದಂತಹ ಸಾಮಾಜಿಕ ನ್ಯಾಯವನ್ನು ಇಲ್ಲಿಯವರೆಗೆ ಪಡೆದುಕೊಂಡು ಬರುತ್ತಿದ್ದರು ಇವತ್ತೂ ಕೂಡ ಅದನ್ನು ಪಡೆದುಕೊಳ್ಳತಕ್ಕಂತಹ ಸಂಪೂರ್ಣವಾದಂತಹ ಅರ್ಹತೆ ಯಾವ ಜನರಿಗೆ ಇದೆ ಅವರಿಗೆ ಈ ಅಧಿಕಾರ, ನ್ಯಾಯ ನಾವು ಅಪಹರಿಸಿದ ಹಾಗಾಗುತ್ತದೆ. ಚುನಾವಣೆ ಬರುತ್ತಿದೆ ನಿಮಗೆ ರಜೆ ಕೊಡೋಣವೆಂದು ಅವರನ್ನು ಹಾಗೆಯೇ ಬಿಡಲಿಕ್ಕಾಗುವುದಿಲ್ಲ. ಚುನಾವಣೆ ಬರಬಹುದು, ಹೋಗಬಹುದು ಆದರೆ ಅಬಾಧಿತವಾಗಿ ಅವರಿಗೆ ಬಂದಂತಹ ಸಾಮಾಜಿಕ ನ್ಯಾಯವನ್ನು ಇವತ್ತು ಚುನಾವಣೆ ಬಂತು ಎಂದು ನಾವು ನಿಲ್ಲಿಸಲಿಕ್ಕಾಗುವುದಿಲ್ಲ. ಏಕೆಂದರೆ, ಅವರಿಗೆ ಸಿಗತಕ್ಕಂತಹ ನ್ಯಾಯ ಅದರಿಂದ ಅಪಹರಿಸಲ್ಪಡುತ್ತದೆ. ಇದರ ಜವಾಬ್ದಾರಿ ಬರೀ ಟ್ರೈಬರಿ ಬೆಂಚಿಗೆ ಅಲ್ಲ ಇದು ಇಡೀ ರಾಜ್ಯದ ಜನರಿಗೆ ತಮಗೆಲ್ಲರಿಗೆ ಸಮಾಜಕ್ಕೆ ಇದೆ. ಆದರೆ ಅದರಲ್ಲಿ ಕಮಿಟ್‌ಮೆಂಟ್ ಇದೆ. ಒಂದು ವೇಳೆ ಆ ತತ್ವದಲ್ಲಿ ಸಿದ್ಧಾಂತದಲ್ಲಿ ಕಮಿಟ್‌ಮೆಂಟ್ ಇಲ್ಲದಿದ್ದರೆ ಹೌದು ಇದರಲ್ಲಿ ರಾಜಕೀಯ ಮಾಡೋಣ ಎಂದು ನಾವೂ, ತಾವೂ ಕುಳಿತುಕೊಳ್ಳಬಹುದು. ಆದರೆ ಯಾರ ನ್ಯಾಯಕ್ಕಾಗಿ ಹೋರಾಟ ಮಾಡಲಿಕ್ಕೆ ಈ ಸದನದ ಒಳಗೆ ಆಯ್ಕೆಯಾಗಿ ಬಂದಿದ್ದೇವೆ. ಆ್ಯಸ್ ದಿ ಮ್ಯಾನ್‌ಡೇಟ್ ಆಫ್ ದಿ ಪೀಪಲ್, ಆ ಮ್ಯಾನ್‌ಡೇಟ್ ಆಫ್ ದಿ ಪೀಪಲ್‌ಗೆ ನೀವು ರೆಸ್ಪಾನ್ಸ್ ಕೊಟ್ಟ ಹಾಗೆ ಆಗುವುದಿಲ್ಲ. ಸ್ಪಂದಿಸಿದ ಹಾಗಾಗುವುದಿಲ್ಲ. ನಾವು ಕರೆಯುವುದಿಲ್ಲ ಚುನಾವಣೆಯಾದ ಮೇಲೆ ಕರೆಯೋಣ, ಈಗ ಸ್ಪಂದಿಸುವುದಿಲ್ಲವೆಂದು ಕುಳಿತುಕೊಂಡರೆ ಸಾಮಾಜಿಕ ನ್ಯಾಯಕ್ಕಾಗಿ ಸ್ಪಂದಿಸತಕ್ಕಂತಹ ಪ್ರತಿನಿಧಿಗಳಾಗುವುದಿಲ್ಲ. ಈ ಕಾರಣದಿಂದ ಮೊನ್ನೆ ಬಿಲ್ ಇಂಟ್ರಡ್ಯೂಸ್ ಮಾಡಿದಾಗ ಆಕ್ಷೇಪಣೆ ಬಂತು. ಆಗ ಇದನ್ನು ಹೇಳಿದೆವು. ಇದನ್ನು ಮಾಡಬೇಕಾಗುತ್ತದೆ. ನಮ್ಮ ಜವಾಬ್ದಾರಿ ಇದೆ. ಇದೊಂದು ಸಂವಿಧಾನತ್ಮಕವಾದ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂತಹ ಒಂದು ಹೊಣೆಗಾರಿಕೆಯಿಂದ ಸರಕಾರದವರು ಮಾಡುತ್ತಿದ್ದೇವೆ. ತಾವೂ ಕೂಡ ಇದಕ್ಕೆ ಸಹಕಾರ ಕೊಡಬೇಕೆಂದು ಹೇಳಿದ್ದೇವೆ. ಅದಕ್ಕಿಂತ ಹಿಂದೆ ಏಕೆ ಡಿಸ್‌ಕಸ್ ಮಾಡಲಿಲ್ಲವೆಂದು ತಾವು ಕೇಳಬಹುದು. ತಮ್ಮ ವಾದವನ್ನೇ ತೆಗೆದುಕೊಳ್ಳುವುದಿದ್ದರೆ ಚಿನ್ನಪ್ಪರೆಡ್ಡಿ ಕಮಿಷನ್ 90ರಲ್ಲಿ ಬಂದಿದೆ. ಅದರ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಚರ್ಚೆಯಾಗಿದೆ. ಸಾರ್ವಜನಿಕವಾಗಿ ಚರ್ಚೆಯಾದ ಮೇಲೆ, ಸುಪ್ರೀಂ ಕೋರ್ಟ್ ಡಿಸಿಷನ್ ಬಂದ ಮೇಲೆ ಮಂಡಲ್

ಕಮಿಷನ್ ಮೇಲೆ ನಾವು 73 ಪರ್‌ಸೆಂಟ್ ಮೀಸಲಾತಿ ಮಾಡಿದೆವು. ಆಮೇಲೆ 80 ಪರ್‌ಸೆಂಟ್ ಮಾಡಿದೆವು. ವಾದಗಳಿಗೆ ಸಾಕಷ್ಟು ಸಮಯಾವಕಾಶ ಇತ್ತು. ಇವತ್ತು ನಾವು ಆಕಸ್ಮಾತ್ತಾಗಿ ಈ ಅನುಷ್ಠಾನವನ್ನು ತಂದು ನಾವೊಂದು ಮೀಸಲಾತಿ ನೀತಿಯನ್ನು ಅನುಭವಿಸುವುದಲ್ಲ. 73 ಪರ್‌ಸೆಂಟ್ ಏನು ನಮ್ಮಲ್ಲಿ ಮೀಸಲಾತಿ ಇತ್ತು, ಇದು ವಾದಕ್ಕೆ ಇಟ್ಟಂಥ ವಿಚಾರವಲ್ಲ. ಇದು ವಿವಾದಾತೀತವಾದಂಥ ಒಂದು ಮೀಸಲಾತಿ ನೀತಿ ಕರ್ನಾಟಕ ರಾಜ್ಯದಲ್ಲಿ ಇದ್ದದ್ದು ಅದು ಚರ್ಚೆಯ ವಸ್ತುವಾಗುವುದಿಲ್ಲ. ಚರ್ಚೆಗೆ ವಸ್ತು ಆಗಬೇಕಾದರೆ, ತಾವು ಅದನ್ನು ಚರ್ಚೆ ಮಾಡಬೇಕು ಎಂದು ಹೇಳಿದರೆ ನಾವು ಅದಕ್ಕೆ ಸಿದ್ಧರಿದ್ದೇವೆ. ಅದರ ಬಗ್ಗೆ ಚರ್ಚೆ ಇಲ್ಲದಾಗ, ವಿವಾದಸ್ಪದವಾದಂಥ ವಿಚಾರ ಮೀಸಲಾತಿಯ ಈ ಕ್ವಾಂಟಮ್ ಬಗ್ಗೆ ಅಥವಾ ಈ ಒಂದು ಒಟ್ಟು ಮೊತ್ತದ ಬಗ್ಗೆ ವಿವಾದಸ್ಪದವಾದರೆ ನಾವು ಖಂಡಿತವಾಗಿಯೂ ಚರ್ಚೆ ಮಾಡುತ್ತಿದ್ದೆವು. ಆದರೆ ಅದು ವಿವಾದಾಸ್ಪದವಾಗಿರಲಿಲ್ಲ. ಆದರೆ ಒಂದು ಮೀಸಲಾತಿಯ ನೀತಿ ಶಾಸನ ಸಭೆಗೆ ಬಂದ ಮೇಲೆ ಯಾವ ರೀತಿ ಆ ನೀತಿಯನ್ನು ಈ ಕಡೆ ಇರುವವರು ಅನುಸರಿಸುತ್ತೇವೆ ಎನ್ನುವುದು ಮುಖ್ಯ. ಮಸೂದೆ ಬಂದ ಮೇಲೆ ಇಂಟ್ರಡಕ್ಷನ್ ಆಗುತ್ತದೆ. ಅಲ್ಲಿ ಚರ್ಚೆಯಾದಾಗ ನಾವು ಏನು ಮಾಡುತ್ತೇವೆ ಎಂದರೆ ನಾವು ಈ ಸದನದ ಹೊರಗೆ ಕೂಡ ನಾವು ಚರ್ಚೆ ಮಾಡೋಣ ಎಂದು ಹೇಳಿ ತಮ್ಮನ್ನೆಲ್ಲಾ ಕರೆಯಿಸಿ ಮಾತನಾಡುವಂಥ ಪ್ರತೀತಿ ಇದೆ. ಇದೇ ಪದ್ಧತಿ. ಇಲ್ಲಿ ಇಂಟ್ರಡ್ಯೂಸ್ ಆದ ಮೇಲೆ ಇಲ್ಲ ಅದರ ಬಗ್ಗೆ ಚರ್ಚೆಯಾಗುವುದಿದ್ದರೆ, ಆ ಚರ್ಚಾಸ್ಪದವಾಗುವಂಥ ರೀತಿ ವಿಚಾರವಾಗುವುದು ಇದ್ದರೆ ದಯಮಾಡಿ ನಾವು ಚರ್ಚೆ ಮಾಡೋಣ ಎಂದು ಹೇಳಿ. I should offer ತಾವು ಕೂಡ ಒಪ್ಪಲೇಬೇಕಾಗುತ್ತದೆ, ಆಮೇಲೆ ಚರ್ಚೆ ಮಾಡಬೇಕಾಗುತ್ತದೆ. ಇದಕ್ಕೆ ನಮ್ಮದು ಆಕ್ಷೇಪಣೆ ಇಲ್ಲ. ಅದಕ್ಕೆ ಬಂದಾಗ ಇದರ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿ ವಿರೋಧ ಪಕ್ಷದ ಅನೇಕ ಸನ್ಮಾನ್ಯ ಸದಸ್ಯರು ಅಪೇಕ್ಷೆಪಡುವುದರಿಂದ ಇಡೀ ಕರ್ನಾಟಕದ ದೃಷ್ಟಿಯಲ್ಲಿ ಒಂದು consensusಗೆ ಬರಬೇಕು, ಇದರ ಬಗ್ಗೆ ಒಂದು ಒಮ್ಮತ ಅಭಿಪ್ರಾಯದ ಬಗ್ಗೆ ಈ ಸದನದಲ್ಲಿ ಕೆಲವರು ಶಂಕೆ ವ್ಯಕ್ತಪಡಿಸಿದ್ದಾರೆ. ಹೊರಗೆ ವ್ಯಕ್ತಪಡಿಸಲಿಲ್ಲ. ಇಂದಿನ ವಿದ್ಯಮಾನಗಳನ್ನು ತಾವು ದಯಮಾಡಿ ಪರಿಶೀಲನೆ ಮಾಡಬೇಕಾಗುತ್ತದೆ. ಇಲ್ಲಿ ಪ್ರಶ್ನೆ ಉದ್ಭವವಾಯಿತು. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಅಲ್ಲಿಯವರಗೆ ಏನೂ ಹೇಳಿರಲಿಲ್ಲ. ಈ ವಿವಾದ ಬಂದಮೇಲೆ ಅವರು ಇದನ್ನು ಹುಟ್ಟಿಸಿದ್ದುದು, ಈ ಪ್ರಶ್ನೆ ಮಾಡಿದ್ದುದು. ಇದು ತಡವಾದರೂ ಕೂಡ ಪರವಾಗಿಲ್ಲ ಎಂದು ಹೇಳಿ ನಾವು ಅದಕ್ಕೆ ಒಪ್ಪಿ ಸ್ಪಂಧಿಸಿ we deferred the Bill. ನಾವು ಬಿಲ್ಲನ್ನು ವಿತ್‌ಡ್ರಾ ಮಾಡಿಲ್ಲ, ಈ ಸದನದಲ್ಲೇ ಉಳಿದುಕೊಂಡಿದೆ. ನಾವು ಹೇಳಿದ್ದೇವೆ, ಇದು ಪ್ರಾಮುಖ್ಯವಾದ ಬಿಲ್ ಎಂದು ಹೇಳಿ ನಾವು ಆ ರೀತಿ ಮಾಡಿದ್ದೇವೆ. ಅದರ ಮೇಲೆ ಚರ್ಚೆ ಮಾಡೋಣ ಎಂದು ಹೇಳಿ ಅಲ್ಲಿಗೆ ನಿಲ್ಲಿಸಿಬಿಟ್ಟೆವು. ಏತನ್ಮಧ್ಯೆ ಸುಪ್ರೀಂ ಕೋರ್ಟಿನಲ್ಲಿ ಅವರು ಪುನಃ 50 ಪರ್‌ಸೆಂಟ್‌ಗೆ ನೀವು ನಿಲ್ಲಿಸಬಿಡಬೇಕು, ಸೀಮಿತಗೊಳಿಸಬೇಕು ಎಂದು ಹೇಳಿ ತೀರ್ಪು ಬಂದ ಮೇಲೆ ಈ ಒಂದು ಪ್ರಶ್ನೆ ಉದ್ಭವವಾಗಿದ್ದುದು. 50 ಪರ್‌ಸೆಂಟ್ ನಾವು ನಿಗಧಿಪಡಿಸಬೇಕಾದಂಥ ಅವಶ್ಯಕತೆ ಬಂದಾಗ ಇವತ್ತು ಪುನಃ ಸದನದಲ್ಲಿ ಮಸೂದೆ ಮಂಡನೆಯ ಅವಶ್ಯಕತೆಗೆ ಇನ್ನೂ ಪುಷ್ಟಿ ಬಂತು. ಅವಶ್ಯಕತೆಗೆ ಪುಷ್ಟಿ ಬಂದಾಗ, ನಾವು ಪುನಃ

ಸದನಕ್ಕೆ ಬಂದು ಶಾಸನವನ್ನು ಮಾಡದಿದ್ದರೆ ನಾವು ಕರ್ತವ್ಯಚ್ಯುತಿಯನ್ನು ಮಾಡಿದ ಹಾಗೆ ಆಗುತ್ತಿತ್ತು. ತಾವೇ ಪ್ರಶ್ನೆ ಹಾಕುತ್ತಿದ್ದಿರಿ. ನೀವು 50 ಪರ್‌ಸೆಂಟ್‌ಗೆ ಸೀಮಿತಗೊಳಿಸಿ ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿದ್ದೀರಿ, ನೀವು ಶಾಸನವನ್ನು ಮಾಡಿಸಬೇಕಾಗಿತ್ತು. ನೀವು ವಿಶೇಷ ಅಧಿವೇಶನವನ್ನು ಕರೆಯಬೇಕು ಎಂದು ಹೇಳಿ ತಮ್ಮಿಂದ ಕೂಗು ಬರುತ್ತಿತ್ತು. ತಮ್ಮಿಂದ ಕೂಗು ಬರುತ್ತದೆ ಎಂದು ಹೇಳಿ ನಾವು ನಿರೀಕ್ಷೆ ಮಾಡಿಯೇ ಸ್ಪಂಧಿಸತಕ್ಕಂಥ ಕೆಲಸವನ್ನು ನಾವು ಇವತ್ತು ಮಾಡಿದರೆ ನಮ್ಮನ್ನು ಮೆಚ್ಚಬೇಕೇ ಹೊರತು ದೂರತಕ್ಕಂಥ ಒಂದು ಪ್ರತೀತಿ, ಅಥವಾ ದೂರತಕ್ಕಂಥ ಅವಕಾಶ ತಮಗೆ ಇಲ್ಲ. ಅದಕ್ಕಾಗಿಯೇ ತಮ್ಮನ್ನು ಎರಡು ಬಾರಿ ಕರೆದೆವು. ಮೀಸಲಾತಿ ಬಗ್ಗೆ ಚರ್ಚೆ ಮಾಡೋಣ, ಬಿಲ್ಲಿನ ಬಗ್ಗೆ ಚರ್ಚೆ ಮಾಡೋಣ, ಈ ಬಿಲ್ ಬರಬೇಕು ಎಂದು. We did not take a view for one or two Cabinet Meetings. ಒಂದು ಸ್ಪಷ್ಟವಾದ ವಿಚಾರವನ್ನು ತಿಳಿದುಕೊಂಡು ಆ ಒಂದು ಲಾಭವನ್ನು ಪಡೆದು ನಾವು ಈ ಮಸೂದೆಯನ್ನು ಯಾವ ರೀತಿಯಲ್ಲಿ ತರಬೇಕು, ತಮ್ಮ ಅಭಿಪ್ರಾಯ, ಒಮ್ಮತ ಇದನ್ನೆಲ್ಲಾ ತಂದೇ ಇಲ್ಲಿ ಮಾಡೋಣ ಎಂದು ಸದುದ್ದೇಶದಿಂದ – ಎರಡು ಬಾರಿ ತಮ್ಮನ್ನು ಕರೆದವು. ಏಕೆಂದರೆ, ಪ್ರಥಮ ಬಾರಿ ತಮ್ಮನ್ನು ಕೂಡ ಕರೆದಿದ್ದೇವೆ. ಫ್ಲೋರ್ ಲೀಡರ್ಸ್‌ನ್ನೆಲ್ಲಾ ಕರೆದಿದ್ದೇವೆ. ಕರೆದ ಮೇಲೆ ಅದೇ ದಿವಸ ಸನ್ಮಾನ್ಯ ದೇಶಪಾಂಡೆಯವರು He is the designated leader, ಅಧಿಕೃತ ವಿರೋಧ ಪಕ್ಷದ ನಾಯಕರು ಅಲ್ಲ ಎಂಬ ಸಂಶಯವೇನಾದರೂ ಇದೆಯೇ ವಾಟಾಳ್ ನಾಗರಾಜ್‌ರೇ, ತಮ್ಮನ್ನೂ ಕರೆದಿದ್ದೇವೆ. ಅವರು ಏನು ಬರೆದರು, ಅವರ ಆಪ್ತ ಸಹಾಯಕರು ....

ಶ್ರೀ ವಾಟಾಳ್ ನಾಗರಾಜ್ :- ಅಧಿಕೃತ, ಅನಧಿಕೃತದ ಬಗ್ಗೆ ಮಾತನಾಡುತ್ತಿಲ್ಲ. ನಿಮಗೆ ಅಧಿಕೃತವಾದಂತಹವರಾಗಲಿ, ಅನಧಿಕೃತವಾದಂಥವರಾಗಲಿ ವಿರೋಧ ಪಕ್ಷದವರನ್ನು ಕರೆಯುವ ಜ್ಞಾನೋದಯ ಯಾವಾಗ ಉದ್ಭವವಾಯಿತು? ಮೊದಲೆಲ್ಲ ಏತಕ್ಕೆ ಕರೆಯಲಿಲ್ಲ ಎಂದು ನಮ್ಮದು ಅಷ್ಟೇ ವಾದ. 73 ಪರ್‌ಸೆಂಟ್ ಮಾಡಿದಿರಿ, ಆಮೇಲೆ 80 ಮಾಡಿದಿರಿ, ಹಿಂದೆ ಎಲ್ಲಾ ಮಾಡಿಕೊಂಡು ಬಂದಿರಲ್ಲಾ, ಆಗ ನಿಮಗೆ ನಮ್ಮ ಗಮನ ಬರಲಿಲ್ಲವೇ ಎಂದು ನಾನು ಕೇಳುತ್ತಿರುವುದು. ಈಗ ನೀವು ಕರೆಯುವ ಪ್ರಶ್ನೆ ಬೇರೆ. ಅವತ್ತು ಮಾಡಿದಿರಲ್ಲ, ಸಚಿವ ಸಂಪುಟದ್ದು ಒಂದು ಉಪಸಮಿತಿ ಮಾಡಿದಿರಿ, ಅದಾದ ನಂತರ ಬಹಳ ಬದಲಾವಣೆಗಳನ್ನು ಮಾಡಿದಿರಿ. ಆ ಬದಲಾವಣೆಗಳೆಲ್ಲ ಮಾಡುವಾಗ ನಾವು ನಿಮ್ಮ ಕಣ್ಣಿಗೆ ಬೀಳಲಿಲ್ಲವೋ ಈ ರಾಜ್ಯದಲ್ಲಿ, ಅಧಿಕೃತವಾಗಿಯಾಗಲಿ, ಅನಧಿಕೃತವಾಗಿಯಾಗಲಿ ನಿಮಗೆ ಯಾರು ಕಾಣಲಿಲ್ಲವೇ ಎಂದು ಕೇಳುತ್ತಿರುವುದು.

* ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ವಿವಾದ ಇರಲಿಲ್ಲ.

**12.00 ಪಿ.ಎಂ.**

ವಿವಾದಾದೀತವಾದಂತಹ ವಿಚಾರಗಳಿಗೆ ಚರ್ಚೆ ಮಾಡಲಿಕ್ಕೆ ಏನು ಇದೆ? ಇಲ್ಲಿಗೆ ಬಂದ ಮೇಲೆ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಜ್ಞಾನೋದಯವಾಯಿತು. ಇಲ್ಲಿ ಒಳಗೆ ಬಂದ ಮೇಲೆ ಅವರಿಗೆ ಜ್ಞಾನೋದಯವಾಯಿತು. ಅವರಿಗೆ ತಡವಾಗಿ ಜ್ಞಾನೋದಯ ಆದರೂ ಸಹ ಅದಕ್ಕೆ ಸ್ಪಂಧಿಸತಕ್ಕಂಥ ವಿವೇಕ ಸರ್ಕಾರ ತೋರಿಸಿತು. ಅದು ತಪ್ಪೇ. ಹಾಗಾದರೆ, ಸ್ಪಂಧಿಸಿರತಕ್ಕ

ಅವಿವೇಕವನ್ನು ನಾವು ತೋರಿಸಬೇಕಿತ್ತೇ? ಈಗ ರಾಮಕೃಷ್ಣ ಹೆಗಡೆಯವರಿಗೆ ಈ ಸದನದ ಒಳಗಡೆ ಜ್ಞಾನೋದಯ ಆದಾಗ ಅವರು ಅದರ ಮೇಲೆ ಮಾತನಾಡಿದಾಗ ನಾವು ಸ್ಪಂದಿಸಿದ್ದೇವೆ. We deferred it. ಇಂಟ್ರಡ್ಯೂಸ್ ಆದ ಮೇಲೆ ನಾವು ಹೇಳಿದ್ದೇವೆ. It is on record. ಇದರ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದವರನ್ನೆಲ್ಲಾ ಕರೆದು ನಾವು ಚರ್ಚೆ ಮಾಡುತ್ತೇವೆ, ಮಾತನಾಡುತ್ತೇವೆಂದು ಹೇಳಿದ್ದೇವೆ. ಅದಾದ ನಂತರ ಸುಪ್ರೀಂ ಕೋರ್ಟ್ ಡಿಸಿಷನ್ ಬಂತು, ಆದ್ದರಿಂದ ಇನ್ನೂ ಈ ಒಂದು ಮಸೂದೆ ಇಲ್ಲಿ ಆಗಲೇಬೇಕೆಂದು ಒತ್ತಾಯಕ್ಕೆ ಮಣಿದಿದ್ದೇವೆ. ಸುಪ್ರೀಂ ಕೋರ್ಟ್ ನಿರ್ಣಯಕ್ಕೆ ಕೂಡ ಪುಷ್ಟಿ ಬಂದಿದೆ. ಈ ವಾತಾವರಣದಲ್ಲಿ ನಾವು ಸಭೆ ಕರೆದಿದ್ದೆವು. ಅವರು ಹೇಳಿದರು, ವಿರೋಧ ಪಕ್ಷ ಎಂದು. ನಾನು ಹೇಳಿದೆ ಅಧಿಕೃತ ವಿರೋಧ ಪಕ್ಷದ ನಾಯಕರು ಎಂದು. ರೆಕಗ್ನೈಸ್ಡ್ ಪಕ್ಷ ತಮ್ಮನ್ನೂ ಕರೆದಿದ್ದೆ, ವಿರೋಧ ಪಕ್ಷದ ನಾಯಕರನ್ನೂ ಕರೆದಿದ್ದೆವು, ಹೊಸದೇನಲ್ಲ. ಸಭೆ ಕರೆದ ಮೇಲೆ ಅವರ ಆಪ್ತ ಸಹಾಯಕರು ನಮಗೆ ಒಂದು ಪತ್ರ ಬರೆದಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಎರಡು ದಿವಸಗಳ ಕಾಲ ಈ ಸಭೆಯನ್ನು ಮುಂದೂಡಬೇಕೆಂದು ಹೇಳಿದ್ದಾರೆ ಎಂದು. ಅಲ್ಲಿ ವಿನಂತಿ ಇದೆ, ನನ್ನ ಹತ್ತಿರ ಪತ್ರ ಇದೆ. ಅದನ್ನು ಹೇಳಿದ ಮೇಲೆ ನಾವು ಎರಡು ದಿವಸಗಳ ಕಾಲ ಮುಂದೂಡಿದೆವು. ನಮ್ಮ ಕ್ಯಾಬಿನೇಟ್ ಕೂಡ ಮುಂದೂಡಿದೆವು. ಎರಡನೆಯ ದಿವಸ ಆದ ಮೇಲೆ ಕೂಡ ಅವರು ಬರಲಿಲ್ಲ. ಬಾರದಿದ್ದ ಮೇಲೆ ನಾವು ಇವತ್ತು ಸದನವನ್ನು ಕರೆದಿದ್ದೇವೆ. ಅದರ ಬಗ್ಗೆ ತಾವು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಪುನಃ ತಾವು ಇಲ್ಲಿ ಮಾತನಾಡಬೇಕು, ಒಳಗೆ ಕರೆದು ತಮ್ಮಲ್ಲಿ ಮಾತನಾಡಬೇಕು ಎಂದು ಹೇಳಿದರೆ ಯಾವುದೇ ಒಂದು ರೀತಿಯ ವಿಧಾನದ ಚರ್ಚೆಗೆ ಸಮಾಲೋಚನೆಗೆ ನಾವು ಸಿದ್ಧರಿದ್ದೇವೆ. ಆದರೆ ಇವತ್ತು ಅಥವಾ ನಾಳೆ ಈ ಮಸೂದೆ ಮಂಜೂರು ಆಗಬೇಕಾಗುತ್ತದೆ. ಇಲ್ಲದಿದ್ದರೆ ನಾವು ಸಾಮಾಜಿಕ ಹೊಣೆಯಿಂದ ಜಾರಿಕೊಳ್ಳತಕ್ಕ ಪ್ರಶ್ನೆ ನಮ್ಮ ಸರ್ಕಾರಕ್ಕೆ ಬರುತ್ತದೆ. ನಮ್ಮ ಸರ್ಕಾರದಿಂದ ಅದನ್ನು ಮಾಡಲಿಕ್ಕೆ ಆಗುವುದಿಲ್ಲ. ತಾವೇನಾದರೂ ಇದರಿಂದ ಜಾರಿಕೊಳ್ಳೋಣ, ನಾವು ಮುಂದೆ ರಾಜಕೀಯವಾಗಿ ಇದನ್ನು ಉಪಯೋಗ ಮಾಡಿಕೊಳ್ಳೋಣ, ಮೀಸಲಾಗಿ, ಸಾಮಾಜಿಕ ನ್ಯಾಯವನ್ನು ಕೂಡ ಒಂದು ರಾಜಕೀಯ ವಸ್ತುವನ್ನಾಗಿ ಮಾಡಿಕೊಳ್ಳಬೇಕೆಂಬ ಅಪೇಕ್ಷೆ ನಿಮಗೆ ಇಲ್ಲ. ಆದ್ದರಿಂದಲೇ, ತಾವು ಬಂದಿದ್ದೀರಿ, ನಿಮಗೆ ಸುಸ್ವಾಗತ. ತಮಗೆ ಅಭಿನಂದಿಸಬೇಕಾಗುತ್ತದೆ. ಸಾಮಾಜಿಕವಾದಂತಹ ನ್ಯಾಯವನ್ನು ಕೊಡತಕ್ಕಂಥ ರೀತಿಯಲ್ಲಿ ನಮಗೆ ಎಷ್ಟು ಹುಮ್ಮಸ್ಸು ಇದೆಯೋ ಅಷ್ಟೇ ಹುಮ್ಮಸ್ಸು ಇದೆ ಎಂದು ತಾವು ಇವತ್ತು ಪ್ರತ್ಯಕ್ಷವಾಗಿ ಪ್ರದರ್ಶನ ಮಾಡಿದ್ದೀರಿ. ಆದರೆ ತಮ್ಮ ವಿಚಾರದಲ್ಲಿ ಆಕ್ಷೇಪಣೆ ನಮ್ಮದು ಇಲ್ಲ. ನಮ್ಮ ಸ್ನೇಹಿತರದು ಏನು ವಿಚಾರ ಅಂದರೆ, ಇವತ್ತು ನಾವು ಏಕೆ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಮಗೆ ಏಕೆ ಈ ಸಾಮಾಜಿಕ ಹೊಣೆ, ಸಾಮಾಜಿಕ ನೀತಿ, ಇವತ್ತು ನಮ್ಮ ಸ್ವಾರ್ಥ ರಾಜಕೀಯದ ಒರೆಗಲ್ಲಿಗೆ ಹಚ್ಚಿ, ನಮಗೇನು ಅನುಕೂಲ ಆಗುತ್ತದೆ ಅದೇ ರೀತಿಯಲ್ಲಿ ಶೇಪ್ ಮಾಡೋಣ ಎಂದು ಹೇಳಿ ಅವರು ಬಯಸಿದ್ದರೆ ಅದಕ್ಕೆ ನಾವೇನು ಮಾಡಲಿಕ್ಕೆ ಸಾಧ್ಯ ಇದೆ. ನಾನು ಪುನಃ ತಮ್ಮ ಮುಖೇನ, ಈ ಸದನದ ಮುಖೇನ, ಈ ರಾಜ್ಯದ ಜನತೆ ಮುಖೇನ ಏನು ಮಾಡುವುದು ಎಂದರೆ, ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ದಯಮಾಡಿ ರಾಜಕೀಯವನ್ನು ಬೆರೆಸಿ, ತಾವು ರಾಜಕೀಯ

ಮಾಡುವುದಕ್ಕೆ ಹೋಗಬೇಡಿ ಎಂಬುದನ್ನು ತಮ್ಮ ಮುಖೇನ, ಈ ಜನತೆಯ ಮುಖೇನ ನಾನು ಸನ್ಮಾನ್ಯ ಸ್ನೇಹಿತರನ್ನು ಇವತ್ತು ಬೇಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಕೆಲವು ಜನ ತಮಗೂ ಗೊತ್ತಿದೆ. ಮೀಸಲಾತಿ ವಿಚಾರದಲ್ಲಿ ಬರೀ ಮೊಸಳೆ ಕಣ್ಣೀರು ಮಾತ್ರ ಮಾಡತಕ್ಕವರು. ಅವರಿಗೆ ಅದರಲ್ಲಿ ಭದ್ರತೆ ಇಲ್ಲ. ಅವರಿಗೆ ಅದರಲ್ಲಿ ವಿಶ್ವಾಸ ಇಲ್ಲ. ಆದರೆ ರಾಜಕೀಯ ವೇದಿಕೆ ಚುನಾವಣೆ ಬಂದಾಗ ಅವರು ಒಂದು ರೀತಿಯ ಮಾಯಾ ಮಾರ್ಜಾಲ ರೂಪದಲ್ಲಿ ಇವತ್ತು ಮೀಸಲಾತಿ ಬಗ್ಗೆ ಬದ್ಧತೆ ಇದೆ ಎಂದು ತೋರಿಸಿಕೊಳ್ಳತಕ್ಕ ಪದ್ಧತಿ, ಪರಿಸ್ಥಿತಿ ನಮ್ಮ ದೇಶದಲ್ಲಿದೆ. ಈಗ ಅಷಾಢಭೂತಿತನದ ಮಾತು ಇಲ್ಲಿ ನಡೆಯಲಿಕ್ಕೆ ಆಗುವುದಿಲ್ಲ. ಇವತ್ತು ನಾವು ನೇರವಾಗಿ ಯಾರಿಗೆ ಸಾಮಾಜಿಕ ನ್ಯಾಯ ಕೊಡಬೇಕೋ ಏನೇ ತೊಂದರೆ ಬಂದರೂ ಕೂಡ, ಯಾವುದೇ ಕಷ್ಟ ಬಂದರೂ ಕೂಡ, ಯಾವುದೇ ಸವಾಲು ಬಂದರೂ ಕೂಡ, ಯಾವುದೇ ಒಂದು ಅತಂತ್ರಕ್ಕೆ ಹೋಗದೆ ಮತ್ತು ಚಂಚಲರಾಗದೇ ನಿಶ್ಚಿತವಾದಂತಹ ಸ್ಥಿರವಾದಂತಹ ಮನಸ್ಸಿನಿಂದ ಸಾಮಾಜಿಕ ನ್ಯಾಯವನ್ನು ಕೊಂಡು ಹೋಗತಕ್ಕಂಥ ಸಂಕಲ್ಪವನ್ನು ನಾವು ಮಾಡಿಯೇ ಮಾಡಿದ್ದೇವೆ. ಅದರ ರೀತಿ ನಾವು ಮುಂದುವರೆಯುತ್ತೇವೆ, ಯಾವುದೇ ಪರಿಣಾಮ ಬಂದರೂ ಪರವಾಗಿಲ್ಲ. ಇದಕ್ಕೆ ನಾವು ಹಿಂಜರಿಯುವುದಿಲ್ಲ. ಈಗ ತಾವು ಒಂದು ವಿಚಾರ ಹೇಳಬಹುದು. ಯಾವುದು 50 ಪರ್ಸೆಂಟ್ ಅಂಡ್ ಎಬೋವ್ ಇದೆ, ಯಾವ ರೀತಿ ಮಾಡಲಿಕ್ಕೆ ಸಾಧ್ಯ ಇದೆ ಎಂದು. ಇಂದ್ರಾ ಸಹಾನಿ ಜಡ್ಜ್‌ಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಜಸ್ಟಿಫಿಕೇಷನ್ ಕೊಡಬೇಕೆಂದು ಹೇಳಿದ್ದಾರೆ. ಆ ಜಸ್ಟಿಫಿಕೇಷನ್ ಕೊಡಬೇಕಾದರೆ ನಾವು ಶಾಸನಾತ್ಮಕವಾಗಿಯೇ ಮಾಡಬೇಕು ಎನ್ನುವುದು ಉದ್ದೇಶ. ಸಬ್ಸಿಕ್ವೆಂಟ್ ಆಗಿ ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟ್ ಬಂದಿದ್ದರಿಂದ ಈ ಪರಿಸ್ಥಿತಿ ಉದ್ಭವ ಆಯಿತು. ಕಳೆದ ವಾರ ಏನು 50 ಪರ್ಸೆಂಟ್‌ಗೆ ಸೀಮಿತಗೊಳಿಸಬೇಕು ಎಂದು ಯಾವಾಗ ಹೇಳಿದರು, Then, there is no doubt, because ಎಕ್ಸಿಕ್ಯೂಟೀವ್ ಆರ್ಡರ್‌ನಿಂದ ಅದನ್ನೂ ಮಾಡುವುದಕ್ಕೆ ಆಗುವುದಿಲ್ಲ. ಶಾಸನಾತ್ಮಕವಾಗಿಯೇ ಮಾಡಬೇಕು. ನಾವು ತಿಳಿದುಕೊಂಡೆವು ಏನೆಂದರೆ, ಇವತ್ತು ಹಿಂದಿನಿಂದ ಇದ್ದಂತಹ ಸ್ಟೇಟಸ್‌ಕೋ 73 ಪರ್ಸೆಂಟ್ ಅಥವಾ 69 ಪರ್ಸೆಂಟ್ ಅದನ್ನು ಸುಪ್ರೀಂ ಕೋರ್ಟ್‌ನವರು ಉಳಿಸಿಕೊಳ್ಳುತ್ತಾರೆ. ರೆಕಗ್ನೈಸ್ ಮಾಡುತ್ತಾರೆ, ಮುಂದೆ ಕಾನ್‌ಸ್ಟಿಟ್ಯೂಷನ್ ಬೆಂಚಿಗೆ ಬಂದಾಗ ಅದಕ್ಕೆ ಶಾಶ್ವತವಾದಂತಹ ಪರಿಹಾರವನ್ನು ಹುಡುಕಬಹುದು ಎಂದು ಹೇಳಿ ನಾವು ನ್ಯಾಯವಾಗಿ ವಿಚಾರ ಮಾಡಿದ್ದೆವು. ಇಲ್ಲ ಈಗ ಶಾಸನಾತ್ಮಕವಾಗಿ ಮಾಡಬೇಕೆಂಬ ಒಂದು ಅಭಿಪ್ರಾಯಕ್ಕೆ ನಾವು ಬಂದು ಪುನಃ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ 50 ಪರ್ಸೆಂಟಿಗೆ ಕೊಟ್ಟಿದ್ದರಿಂದ ಇವತ್ತು ನಾವು ಬರಬೇಕಾಯಿತು. ಇನ್ನೂ ಕೂಡ ಶೇಕಡ 50 ಕ್ಕೆ ಮೇಲ್ಪಟ್ಟು ಜ್ಯುಡಿಷಿಯಲ್ ಸ್ಕ್ರೂಟಿನಿ ಮಾಡುವುದಿದ್ದರೆ ಆ ವಿಚಾರ ಅವರಿಗೆ ಬಿಟ್ಟಿದ್ದುದು. ಈ ದಿಸೆಯಲ್ಲಿ ನಮ್ಮ ಪಾಲಿನ ಕರ್ತವ್ಯ ನಾವು ಮಾಡದಿದ್ದರೆ ಬಹುಶಃ ಈ ಒಂದು ಸಮೂಹಕ್ಕೆ ಅನ್ಯಾಯವೆಸಗಿದಂತಾಗುತ್ತದೆ. ಆ ಅನ್ಯಾಯವನ್ನು ನಾವು ಖಂಡಿತವಾಗಿಯೂ ಮಾಡುವುದಕ್ಕೆ ಸಿದ್ಧರಿಲ್ಲ. ಪ್ರಾಮಾಣಿಕವಾಗಿ ಈ ಮಸೂದೆಯನ್ನು ತಂದಿದ್ದೇವೆ. ಮಸೂದೆ ಬಗ್ಗೆ ಸದನದಲ್ಲಿ ಅಥವಾ ಹೊರಗಡೆಯೂ ಚರ್ಚೆಯಾಗಲಿ, ನಾವು ಸಿದ್ಧರಿದ್ದೇವೆ. ಆದುದರಿಂದ, ಇವೊತ್ತು ಅಥವಾ ನಾಳೆ ಈ ಮಸೂದೆಯನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

*ಶ್ರೀ ಎಸ್. ಬಂಗಾರಪ್ಪ (ಸೊರಬ) :- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮ ಮುಂದೆ ಎರಡು ಮಸೂದೆಗಳನ್ನು ತಂದಿದ್ದು, ಮತ್ತೊಂದು ಮಸೂದೆ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದಿದ್ದರೂ ಕೂಡ ಖಾಯಂ ಆಯೋಗ ರಚನೆ ವಿಚಾರದಲ್ಲಿ ಅದು ಈಗಾಗಲೇ ಸದನದ ಮುಂದೆ ಇತ್ತು. ಆ ಮಸೂದೆಯನ್ನು ಅವರು ಹಿಂತೆಗೆದುಕೊಂಡಿದ್ದಾರೆ. ಅದರ ವ್ಯಾಪ್ತಿ ಮತ್ತು ಪರಿಣಾಮ ಏನು ಎನ್ನುವ ವಿಚಾರ ಮತ್ತೊಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಏಕೆಂದರೆ, ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ಅಲ್ಲಿ ಒಂದು ಅಂತಹ ಆಯೋಗವನ್ನು ನೇಮಕ ಮಾಡುವ ಉದ್ದೇಶದಿಂದ ಬರೀ ನಮ್ಮ ಕರ್ನಾಟಕ ರಾಜ್ಯಕಷ್ಟೇ ಅಲ್ಲ ಇಡೀ ರಾಷ್ಟ್ರದ ಎಲ್ಲಾ ರಾಜ್ಯದವರೂ ಕೂಡ ಇಂತಹ ಆಯೋಗವನ್ನು ನೇಮಕ ಮಾಡಬೇಕೆನ್ನತಕ್ಕ ಆದೇಶ ಸುಪ್ರೀಂ ಕೋರ್ಟ್‌ನಿಂದ ಬಂದಿದ್ದರಿಂದ ಎನ್.ಆರ್.ಕುಮಾರ್ ಆಯೋಗ ನಮ್ಮ ರಾಜ್ಯದಲ್ಲಿ ನೇಮಕವಾಯಿತು. ಈಗ ಈ ಆಯೋಗದ ವಿಚಾರದಲ್ಲಿ ಮಸೂದೆಯನ್ನು ನಾವು ಹಿಂತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಅದರ ವ್ಯಾಪ್ತಿ, ಪರಿಣಾಮ ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಏನು ಎನ್ನುವ ವಿಚಾರವನ್ನು ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಆ ವಿಷಯ ಇಲ್ಲ. ಇದರ ಬಗ್ಗೆ ಮಾತನಾಡಲು ಯಾವುದೇ ಪಕ್ಷದ ಅಥವಾ ಪಕ್ಷೇತರ ಮಾನ್ಯ ಸದಸ್ಯರುಗಳು ಮಾನಸಿಕ ಸಿದ್ಧತೆಯ ಅಭ್ಯಾಸದ ಜೊತೆ ಬಂದಿಲ್ಲ. ಆದರೂ ಕೂಡ ಖಾಯಂ ಆಯೋಗದ ರಚನೆ ವಿಚಾರದಲ್ಲಿ ಮಸೂದೆಯನ್ನು ಹಿಂತೆಗೆದುಕೊಂಡಿದ್ದೇವೆಂದು ಸಚಿವರು ಹೇಳಿದ್ದಾರೆ. ನಾನು ಅದರ ಬಗ್ಗೆ ವ್ಯಾಖ್ಯಾನ ಮಾಡುವುದಿಲ್ಲ. ಏಕೆಂದರೆ, ಆ ವಿಚಾರದ ವ್ಯಾಪ್ತಿ ಬಗ್ಗೆ ಚರ್ಚಿಸುವುದಕ್ಕೆ ನಾನೂ ಕೂಡ ಇತರ ಮಾನ್ಯ ಸದಸ್ಯರುಗಳಂತೆ ಅಭ್ಯಾಸ ಮಾಡಿ ಬಂದಿಲ್ಲ. ಆ ವಿಷಯವೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ನನಗೆ ಗೊತ್ತಿರುವಂತೆ ಇಲ್ಲ. ಅದು ಶಾಸನ ರಚನೆಯ 2(ಅ) ಇರಬಹುದೆಂದು ನನಗನ್ನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಕಾರ್ಯಕಲಾಪಗಳ ಪಟ್ಟಿಯ ಪುಟ 2ರಲ್ಲಿ ಮೊದಲನೇ ಐಟಂ ನೋಡಿ.

*ಶ್ರೀ ಎಸ್. ಬಂಗಾರಪ್ಪ :- ಅದು ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಸಂಬಂಧಿಸಿದ್ದಾಗಿದೆ. ಇದು ಎರಡನೆಯ ವಿಚಾರ. ಅದನ್ನು ಕೈಬಿಟ್ಟಿದ್ದೀರಿ. That is O.K. ಅದನ್ನು ಬಿಟ್ಟುಬಿಡೋಣ. Now coming to the matter on hand. ಈ ವಿಚಾರದಲ್ಲಿ ಸುದೀರ್ಘವಾಗಿ ಇರತಕ್ಕಂಥ ಒಂದು ಚರ್ಚೆ ಮಾಡುವುದಕ್ಕಿಂತ ಮುಂಚಿತವಾಗಿ ಒಂದು ದೊಡ್ಡ ಚರಿತ್ರೆಯನ್ನೇ ಈಗಾಗಲೇ ಈ ಸರ್ಕಾರ ನಿರ್ಮಾಣ ಮಾಡಿದೆ. ಅಸಮತೋಲನದಡಿ ಹುಟ್ಟಿ ಬಂದಿರುವ ಇವರ ನಿರ್ಧಾರಗಳೆಲ್ಲವನ್ನೂ ಇವೊತ್ತು ಒಂದು ದೊಡ್ಡ ಪುಸ್ತಕದ ರೂಪದಲ್ಲಿ ಬರೆದಿಡಬಹುದು. ಆ ಮಟ್ಟದಲ್ಲಿ ಇವರ ಮಂತ್ರಿಮಂಡಲದ ತೀರ್ಮಾನಗಳು, ಹೇಳಿಕೆಗಳು, ಸುಪ್ರೀಂ ಕೋರ್ಟಿನವರು ನೀಡಿರತಕ್ಕಂತಹ ಆದೇಶದ ಹಿನ್ನೆಲೆಯಲ್ಲಿ ದೊಡ್ಡ ಪುಸ್ತಕದ ರೂಪದಲ್ಲಿ ಬರೆದಿಡಬಹುದು. ಈ ಮಟ್ಟಕ್ಕೆ ಈಗಾಗಲೇ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ

ಎಷ್ಟೋ ವ್ಯಾಖ್ಯಾನ ಮಾಡಿದರೂ ಕೂಡ, I don't think he can wriggle out of the situation where he himself is caught on the wrong foot. ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಇದರ ಬಗ್ಗೆ ಬಹಳ ತರಾತುರಿಯಲ್ಲಿ, ಭವಿಷ್ಯದ ಬಗ್ಗೆ ಯಾವುದೇ ರೀತಿಯಾದ ಯೋಚನೆ ಮಾಡದೆ ವಿವೇಚನಾರಹಿತವಾದಂಥ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಯಾವಾಗಲೂ ಹೆಜ್ಜೆಯನ್ನು ಸರಿಯಾದಂಥ ರೀತಿಯಲ್ಲಿ ಹಾಕಬೇಕು. ತಪ್ಪು ಅಡಿ ಇಟ್ಟರೆ ಅದರ ಪರಿಣಾಮಕ್ಕೆ ಸಂಪೂರ್ಣವಾಗಿ ಈ ಸರ್ಕಾರ ಹೊಣೆಯಾಗಬೇಕಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದರೂ ಕೂಡ ಇವತ್ತು ಅಖಂಡ ಕರ್ನಾಟಕ ಜನತೆಯು ತಪ್ಪುದಂಡ ತೆರತಕ್ಕ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಮೂಲ ಕಾರಣ ಪ್ರಸ್ತುತವಿರತಕ್ಕ ಮಾನ್ಯ ವೀರಪ್ಪ ಮೊಯಿಲಿಯವರ ಸರ್ಕಾರ. ಇದರ ಬಗ್ಗೆ ಅನುಮಾನ ಪಡಬೇಕಾಗಿಲ್ಲ. ಇವತ್ತು ಈ ಶೈಕ್ಷಣಿಕ ವರ್ಷಕ್ಕೆ ಸಂಬಂಧಪಟ್ಟಂತೆ ಮಕ್ಕಳು ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾಯಮಾನವಾಗಿ ಪರದಾಡತಕ್ಕ ಸ್ಥಿತಿಯಲ್ಲಿದೆ. ಅವರುಗಳ ತಂದೆ ತಾಯಂದಿರ ಪರಿಸ್ಥಿತಿಯನ್ನು ನೋಡಲು ಯಾರೂ ಬರುವುದಿಲ್ಲ. ಸುಪ್ರೀಂ ಕೋರ್ಟ್‌ನ ಆದೇಶದ ಹಿನ್ನೆಲೆಯಲ್ಲಿ ಇವರು ಮಾಡಿರತಕ್ಕ ಅಸಂಖ್ಯಾತ ತಪ್ಪುಗಳು, ನಿರ್ಧಾರಗಳು ಇನ್ನು ಏನೇನು ಇದೆ ಅವುಗಳಿಗೆಲ್ಲ ಸಂಪೂರ್ಣವಾಗಿ ಇವರೇ ಹೊಣೆಯಾಗಬೇಕಾಗುತ್ತದೆ. ಏಕೆಂದರೆ, ಇವರು ಮಾಡುವ ತಪ್ಪಿಗೆ ಅಖಂಡ ಕರ್ನಾಟಕ ರಾಜ್ಯದ ಮಕ್ಕಳು ದಂಡವನ್ನು ತೆರಬೇಕಾಗಿದೆ. ಇದು ನನಗೆ ಅರ್ಥವಾಗದೆ ಇರತಕ್ಕ ವಿಚಾರ. ಒಂದು ಅಸತ್ಯವನ್ನು ಹೇಳಲು ಹೋಗಿ ತಮ್ಮ ರಾಜಕೀಯ ದಾಳಕ್ಕಾಗಿ ಒಂದು ಸುಳ್ಳನ್ನು ಸೃಷ್ಟಿ ಮಾಡಿ, ಅದನ್ನು ಸಂಪೂರ್ಣವಾಗಿ ಮುಚ್ಚಿ ಹಾಕತಕ್ಕ ವಿಚಾರದಲ್ಲಿ ಅಸಂಖ್ಯಾತ ಸುಳ್ಳುಗಳ ಸರಮಾಲೆಯನ್ನು ಸೃಷ್ಟಿ ಮಾಡತಕ್ಕ ರೀತಿಯಲ್ಲಿ ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರ ಮಾಡಿದೆ ಎನ್ನತಕ್ಕದ್ದು ಜನಜನಿತವಾದ, ಮೂಲೆಮೂಲೆಗಳಲ್ಲಿ, ಪತ್ರಿಕೆಗಳಲ್ಲಿ, ಜನ ಸಾಮಾನ್ಯರ ಮನಸ್ಸಿನಲ್ಲಿ, ವಿದ್ಯಾವಂತ, ಅವಿದ್ಯಾವಂತರ ಮನಸ್ಸಿನಲ್ಲಿ, ಗ್ರಾಮೀಣ ಪ್ರದೇಶ, ಪಟ್ಟಣ, ನಗರಪ್ರದೇಶಗಳ ಮೂಲೆಮೂಲೆಗಳಲ್ಲಿ ಈಗಾಗಲೇ ಉದ್ಭವವಾಗಿರತಕ್ಕ ವಿಚಾರವಾಗಿದೆ. ನಿಮ್ಮ ವಿಚಾರಧಾರೆಯನ್ನು ನೀವು ಎಷ್ಟೇ ಪುಷ್ಟೀಕರಿಸಿಕೊಂಡು ಮಾತನಾಡಿದರೂ ಸಹ ಈಗಾಗಲೇ ಅಸಂಖ್ಯಾಂತ ಮಕ್ಕಳಿಗೇನು ಅನ್ಯಾಯವಾಗಿದೆ ಅದಕ್ಕೆ ಹೊಣೆ ನೀವೆ, ಆ ರೀತಿ ಆಗಿರುವ ಅನ್ಯಾಯವನ್ನು ಸರಿಸಿಡಿಸುವ ಪರಿಸ್ಥಿತಿಯಲ್ಲಿ ನೀವಿಲ್ಲ ಎನ್ನತಕ್ಕದ್ದು ನನಗೂ ಗೊತ್ತಿದೆ. ನಿಮಗೂ ಗೊತ್ತಿದೆ. ಅದನ್ನು ಸರಿಪಡಿಸಲು ನಿಮ್ಮಿಂದ ಆಗುವುದಿಲ್ಲ. ಈ ಶೈಕ್ಷಣಿಕ ವರ್ಷದಲ್ಲಿ ಆ ರೀತಿ ಮಕ್ಕಳಿಗೇನು ಅನ್ಯಾಯವಾಗಿದೆ ಅವರಿಗೆ ನಾನು ಇದೇ ಸಂದರ್ಭದಲ್ಲಿ ಕೇವಲ ಅನುಕಂಪವನ್ನು ತೋರತಕ್ಕ ಪರಿಸ್ಥಿತಿಯಲ್ಲಿ ಇದ್ದೇನೆ. ಈ ಸನದದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮಾನ್ಯ ಸದಸ್ಯರುಗಳಿದ್ದಾರೆ. ರಾಜಕೀಯ ಕಾರಣಗಳಿಂದ ಕಾನೂನಿನ ಚೌಕಟ್ಟಿನಲ್ಲಿ ಸಿಕ್ಕಿ ನರಳತಕ್ಕ ಪರಿಸ್ಥಿತಿಯಲ್ಲಿ, ಮಾನಸಿಕ ವೇದನೆಯಲ್ಲಿ ನರಳತಕ್ಕ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಅಂಥ ಪರಿಸ್ಥಿತಿ ಜವಾಬ್ದಾರಿಯುತವಾಗಿರತಕ್ಕ ಈ ಸದನದ ಮಾನ್ಯ ಸದಸ್ಯರಿಗೆ ಬರಬಾರದಿತ್ತು. ತಮ್ಮ ಮೂಲಕ ರಾಜ್ಯದ ಜನಸಾಮಾನ್ಯರಿಗೆ ಮಾನಸಿಕ ವೇದನೆ ಎಂದೂ ಉದ್ಭವವಾಗಬಾರದಿತ್ತು. ಅದಕ್ಕೆ ಕಾರಣ ನಿಮ್ಮ ಅಸಮತೋಲನದ ಅಥವಾ ಯಾವ ವಿಚಾರಧಾರೆಯಲ್ಲಿ ನಿಮಗೆ ಬದ್ಧತೆ ಇರಬೇಕಾಗಿತ್ತೊ, ಕಮಿಟ್‌ಮೆಂಟ್ ಇರಬೇಕಾಗಿತ್ತೋ

ಆ ಬದ್ಧತೆಯು ನಿಮ್ಮಲ್ಲಿ ಇಲ್ಲದೆ ಇರುವುದರಿಂದ ಪ್ರತಿಯೊಂದು ಹಂತದಲ್ಲೂ ಸಹ ರಾಜ್ಯದ ಹಿತವನ್ನು ದಾಳವಾಗಿ ಉಪಯೋಗ ಮಾಡಿರತಕ್ಕ ಪರಿಣಾಮವಾಗಿ ಸಂಪೂರ್ಣವಾಗಿ you are on the wrong foot. ಇವತ್ತು ಹೆಜ್ಜೆಹೆಜ್ಜೆಗೂ ನೀವು ತಪ್ಪು ಮಾಡುತ್ತಾ ಹೋಗಿರುವ ಪರಿಸ್ಥಿತಿಯೇ ಕಾರಣ. ಇದರ ಹೊಣೆಗಾರಿಕೆ ಸರ್ಕಾರದ ಮೇಲೆ ಮತ್ತು ಈ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿರುವ ಯಾರೇ ಆಗಿರಲಿ ಅವರಿಗೆ ಹೋಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಒಂದು ಮಾತನ್ನು ಹೇಳಿದರೆ ಬಹಳ ಒಳ್ಳೆಯದು ಎಂದು ನನ್ನ ಭಾವನೆ. ತಮಗೆಲ್ಲ ಗೊತ್ತಿರುವ ಹಾಗೆ, ನಾನು ಇವತ್ತು ಚಿನ್ನಪ್ಪರೆಡ್ಡಿ ವರದಿಯ ಬಗ್ಗೆ ಮಾತನಾಡುವುದಕ್ಕೂ ಮೊದಲು ಸೂಕ್ಷ್ಮವಾಗಿ ಎರಡು ಮಾತುಗಳನ್ನು ಹೇಳಿದರೆ ಬಹಳ ಒಳ್ಳೆಯದೆಂದು ಭಾವಿಸಿದ್ದೇನೆ. ನಾವು ಇವತ್ತು ದಿವಂಗತ ದೇವರಾಜ್ ಅರಸುರವರನ್ನು ನೆನಸಿಕೊಳ್ಳಬೇಕಾಗುತ್ತದೆ. ಅವರು ಇದ್ದಂಥ ಕಾಲದಲ್ಲಿ ಹಾವನೂರು ಆಯೋಗವನ್ನು ರಚನೆ ಮಾಡಿದ ಮೇಲೆ ಅದರ ವರದಿಯ ಬಗ್ಗೆ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನವಾಗಿದೆ. ಯಾವ ಜಾತಿ ಬಹಳ ಮುಂದುವರೆದಿದೆ ಎನ್ನತಕ್ಕ ಮಾತನ್ನು ಕೆಲವರ ಭಾವನೆಯಿಂದ ನಾವೆಲ್ಲರೂ ಅರಿತುಕೊಂಡಿದ್ದೆವೊ ಅದನ್ನು ಸುಳ್ಳು ಮಾಡಿದರು.

ಬಹಳ ಅರ್ಥಪೂರ್ಣವಾದ ನಾಯಕತ್ವವನ್ನು ಅವರು ಸಮಾಜದಲ್ಲಿರತಕ್ಕಂಥ ಜನರಿಗೆ ಕೊಟ್ಟರು. ನಮ್ಮಂಥ ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಈಗ ಮತ್ತೊಂದು ಬಿಲ್‌ನ್ನು ಇಟ್ಟಿದ್ದೀರಿ. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿ ಇರುವಂತಹ ವಿಚಾರದಲ್ಲಿ ಇಟ್ಟಿದ್ದೀರಿ. ಅದಕ್ಕೆ ನಾವು ವಿರೋಧಿಗಳಲ್ಲ. ಇವತ್ತು 18-3 ಇತ್ಯಾದಿ 21ಕ್ಕಿಂತಲೂ ಜಾಸ್ತಿ ಹೋಗಿ ನಾವು 23,24, 25ಕ್ಕೆ ಇಟ್ಟರೆ ನಾನು ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ನಾವು ಅದಕ್ಕೆ ವಿರೋಧಿಗಳಲ್ಲ. ನಾವು ಇದರ ಪರವಾಗಿ ಇದ್ದೇವೆ. ಜಾಸ್ತಿ ಕೊಡುವಂತಹ ವಿಚಾರದಲ್ಲಿ ನಮ್ಮ ಬೆಂಬಲ ಸದಾ ಕಾಲ ಇದೆ. ಯಾರು ಈ ವಿಚಾರಧಾರೆಗೆ ಮೂಲಭೂತವಾಗಿ ಬದ್ಧವಾಗಿದ್ದಾರೆ, ಆ ವಿಚಾರ ಧಾರೆಗೆ ನಾವು ಯಾವಾಗಲೂ ಇಂಬು ಕೊಡತಕ್ಕಂಥ ಬೆಂಬಲ ಕೊಡತಕ್ಕಂಥ ವಿಚಾರಧಾರೆ ನಮ್ಮದು. ನಮ್ಮ ಈ ವಿಚಾರದಲ್ಲಿ ಯಾರಾದರೂ ರಾಜಕೀಯ ಮಾಡಿದರೆ, ನಾವು ಆ ರಾಜಕೀಯವನ್ನು ಪ್ರತ್ಯೇಕವಾಗಿ ವಿಂಗಡಿಸಿ ತನ್ಮೂಲಕ ಅದನ್ನು ವಿರೋಧ ಮಾಡಬೇಕಾಗುತ್ತದೆ. ಮತ್ತೊಂದು ವಿಚಾರ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ಪ್ರಮಾಣವನ್ನು ಆಧರಿಸಿ ಕೊಡುವಂತಹ ಸೌಲಭ್ಯಗಳು, ತಮಗೆಲ್ಲಾ ಗೊತ್ತಿದೆ. ರಾಜ್ಯಾಂಗದಲ್ಲಿ ಹರಿಜನ-ಗಿರಿಜನರಿಗೆ ವಿಶೇಷ ಸೌಲಭ್ಯಗಳನ್ನು ಇಟ್ಟುಕೊಂಡು ಬಂದಾಗ ನಾನು ಈ ಸದನದ ವಿರೋಧ ಪಕ್ಷದ ನಾಯಕನಾಗಿ, ಮುಖ್ಯಮಂತ್ರಿಯಾಗಿ ಸಾಂದರ್ಭಿಕವಾಗಿ ಕೆಲವು ವಿಚಾರಗಳನ್ನು ಇಟ್ಟಿದ್ದೇವೆ. ಡಾ. ಬಾಬ ಸಾಹೇಬ್ ಅಂಬೇಡ್ಕರ್‌ರವರ ಮಹಾನ್ ನಾಯಕತ್ವದಲ್ಲಿ ಸಂವಿಧಾನದ ರಚನೆ ಮಾಡುವಂತಹ ಕಾಲದಲ್ಲಿ ಮೀಸಲಾತಿ ಇರಬೇಕು ಎನ್ನುವಂತಹ ವಿಚಾರವನ್ನು ದಿವಂಗತ ಶ್ರೀ ಜವಹರಲಾಲ್ ನೆಹರುರವರು ಪ್ರಧಾನಮಂತ್ರಿಯಾಗಿದ್ದಂತಹ ಕಾಲದಲ್ಲಿ ಹತ್ತತ್ತು ವರ್ಷಗಳವರೆಗೆ ಅದನ್ನು ಮುಂದುವರೆಸುತ್ತಾ ಬಂದರು. ಹಾಗೆಯೇ ದಿವಂಗತ ಶ್ರೀಮತಿ ಇಂದಿರಾಗಾಂಧಿ ಅವರು

ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಮತ್ತು ಶ್ರೀ ವಿ. ಪಿ. ಸಿಂಗ್ ಅವರು ಪ್ರಧಾನ ಮಂತ್ರಿಯಾಗಿದ್ದಂತಹ ಕಾಲದಲ್ಲಿ – ಹೀಗೆ ಅವರು ಯಾರೇ ಇರಬಹುದು ಅವರೆಲ್ಲರೂ ಇದಕ್ಕೆ ಬೆಂಬಲ ಕೊಡುತ್ತಾ ಬಂದಿದ್ದಾರೆ. ಈ ರಾಷ್ಟ್ರದಲ್ಲಿ ಕೆಲವರು ಇದಕ್ಕೆ ವಿರೋಧವಾಗಿದ್ದರೂ ಕೂಡ ನಾವು ಮಾತ್ರ ಒಂದು ವಿಚಾರವನ್ನು ಇಟ್ಟಿದ್ದೇವೆ. ಈ ಸಮಾಜದಲ್ಲಿ ಅಂತಹ ವರ್ಗಗಳಿಗೆ ಇರುವಂತಹ ಸೌಲಭ್ಯಗಳಿಂದ ಅವರು ವಂಚಿತರಾಗಿರುವಂತಹ ವರ್ಗಗಳು ಎನ್ನುವಂತಹ ಅನಿಸಿಕೆಗಳನ್ನು ಮೂಲಭೂತವಾಗಿ ನಾವೇನು ಇಟ್ಟಿದ್ದೇವೆ, ಆ ಸೌಲಭ್ಯಗಳ ಸಂಪೂರ್ಣ ಫಲಿತಾಂಶ ಆ ಜನಸಾಮಾನ್ಯರಿಗೆ ದೊರೆಯುವವರೆಗೆ, ಅವರು ಅದನ್ನು ಅನುಭವಿಸಿ ತಮ್ಮ ಸಂಸಾರ, ಕುಟುಂಬ ಮತ್ತು ಮಕ್ಕಳು ಮೇಲೆ ಬರುವವರೆಗೆ ನಾವು ಅವರಿಗೆ ಸಂಪೂರ್ಣ ಬೆಂಬಲವಾಗಿದ್ದೇವೆ. ಆದುದರಿಂದ, ಪುನಃ ರಾಜ್ಯಾಂಗ ತಿದ್ದುಪಡಿ ಮಾಡಿ 10 ವರ್ಷಗಳವರೆಗೆ ಎಸ್‌ಸಿ, ಎಸ್‌ಟಿ ಇತ್ಯಾದಿ ವರ್ಗಗಳಿಗೆ ಈ ಸೌಲಭ್ಯಗಳನ್ನು ನೀಡುವಂತಹ ವಿಚಾರ ಧಾರೆ ಅಭಾದಿತ. ಆ ವಿಚಾರವನ್ನು ನಾವು ಎಂದೂ ಕೂಡ ಮುಟ್ಟುವುದಕ್ಕೆ ಹೋಗಬಾರದು. ಮುಂದೆ ಆ ಸಂದರ್ಭ ಬಂದಾಗ ಮತ್ತೆ 10 ವರ್ಷಗಳವರೆಗೆ ಎಸ್‌ಸಿ, ಎಸ್‌ಟಿಯವರೆಗೆ ಈ ಸೌಲಭ್ಯಗಳನ್ನು ಮುಂದುವರೆಸುವಂತಹ ವಿಚಾರವನ್ನು ಒಪ್ಪಿ ಈ ಮಾತನ್ನು ಆಡುತ್ತಿದ್ದೇನೆ. ಮತ್ತೆ ಸಮಯ ಬಂದಾಗ ಬೆಂಬಲವನ್ನು ಕೂಡ ಕೊಡುತ್ತೇವೆ. Constitution amendment Bill, when it is passed in the Houses of Parliament, the samething is sent for ratification to this August House, ಮಾನ್ಯ ಸಭಾಧ್ಯಕ್ಷರೆ, ಮತ್ತೆ ನಾವು ಬೆಂಬಲ ಕೊಡುವಂತಹ ಸಂದರ್ಭವನ್ನು ಇಟ್ಟುಕೊಂಡಿದ್ದೇನೆ. ಈ ವಿಚಾರದ ಹಿನ್ನೆಲೆಯಲ್ಲಿ ಅದು ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಸಂಬಂಧಪಟ್ಟ ಹಾಗೆ ಎರಡನೆಯ ಬಿಲ್ ಇಲ್ಲಿ ಏನಿದೆ, ಅದಕ್ಕೆ ನಾವು ಬೆಂಬಲ ರೂಪವಾಗಿ ಕೂಡ ಇದ್ದೇವೆ. ಅಂದರೆ, 21 ಪರ್‌ಸೆಂಟ್ ಗಿಂತ ಜಾಸ್ತಿ ಹೋಗಬೇಕು. ಎಸ್‌ಸಿ. ಎಸ್‌ಟಿ ಇತ್ಯಾದಿಗಳಿಗೆ ಗರಿಷ್ಠ ಪ್ರಮಾಣ ಏನಿದೆ ಅದು ಇನ್ನೂ ಜಾಸ್ತಿ ಹೋಗಬೇಕು ಎನ್ನುವ ವಿಚಾರವನ್ನು ನಾವು ಇಟ್ಟಿದ್ದೇವೆ. ಆದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಯಾರಾದರೂ ರಾಜಕೀಯ ಮಾಡಿದರೆ ನಾವು ಅಂತಹ ರಾಜಕೀಯಕ್ಕೆ ವಿರೋಧಿಗಳು ಎನ್ನುವಂತಹ ಮಾತನ್ನು ಕೂಡ ಸ್ಪಷ್ಟಪಡಿಸುತ್ತೇನೆ. We should not play with the poor souls of this great society. ಈ ವಿಚಾರ ದೃಷ್ಟಿಯಿಂದ ನಾವು ವಿರೋಧ ಮಾಡುವಂತಹ ಸಂದರ್ಭ ಬರುತ್ತದೆ. No.2, coming exactly to the Bill on hand, relating to the reservation quota or the matter relating to backward classes. ಅದು ನೀವು ಇಟ್ಟಿರುವಂತಹ ಮೊದಲನೆಯ ಬಿಲ್. ಪರ್ಯಾಲೋಚನೆ ಮತ್ತು ಈ ಸದನದಲ್ಲಿ ಒಪ್ಪಿಗೆ ಪಡೆಯುವಂತಹ ಬಿಲ್ ನಮ್ಮ ಮುಂದೆ ಇದೆ. ಮಾನ್ಯ ಅಧ್ಯಕ್ಷರೆ, ನಾನು 4–5 ವಿಚಾರಗಳನ್ನು ಪ್ರಮುಖವಾಗಿ ಪ್ರಸ್ತಾಪ ಮಾಡುವುದಕ್ಕೋಸ್ಕರ ನಾನು ತಮ್ಮ ಅಪ್ಪಣೆ ಪಡೆದು ಎದ್ದು ನಿಂತಿದ್ದೇನೆ. ನಾವು 2–3 ವಿಚಾರಗಳನ್ನು ಗಮನದಲ್ಲಿಡಬೇಕು. ನಂ. 1 ರಾಜ್ಯಾಂಗದಲ್ಲಿ ಒಂದು ವಿಚಾರವನ್ನು ಎತ್ತಿದ್ದಾರೆ. ಎಸ್‌ಸಿ, ಎಸ್‌ಟಿ ಗೆ ಇಟ್ಟಿರುವ ಹಾಗೆ, ಹಿಂದುಳಿದ ವರ್ಗಗಳಿಗೂ ಸೌಲಭ್ಯಗಳನ್ನು ಕೊಡುವಂತಹ ವಿಚಾರದಲ್ಲಿ ಈ ದೇಶದಲ್ಲಿರುವಂತಹ ಆಡಳಿತವರ್ಗದವರು ಯಾವುದೇ ಪಕ್ಷದವರೂ ಇರಬಹುದು.

ರಾಷ್ಟ್ರದಲ್ಲಿ ಅಥವಾ ಇಲ್ಲಿ ನಾವು ಕಾನೂನಿನ ಮುಖಾಂತರ ಅವರಿಗೆ ಸೌಲಭ್ಯಗಳನ್ನು ಒದಗಿಸಬೇಕು, ಎನ್ನುವಂತಹ ವಿಚಾರವನ್ನು ಅದರಲ್ಲಿ ಬರೆದಿಟ್ಟಿದ್ದಾರೆ.

ನನಗೆ ಗೊತ್ತಿಲ್ಲ. ಹಲವಾರು ವರ್ಷಗಳವರೆಗೆ ಹಾಗೆಯೇ ಅದನ್ನು ನೆನಗುದಿಗೆ ತಂದು ತಂದು ಬಿಟ್ಟು ಬಿಟ್ಟು ಬಂದರು. ಮಂಡಲ್ ಆಯೋಗದ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. Because that is not the matter on hand right now. Yes, 27% under Central Government Services ನಾವು ಕೊಡಬೇಕು ಎಂದು. ಏಕೆಂದರೆ, ಇಲ್ಲಿ ಹಾವನೂರು ಆಯೋಗದ ಬಗ್ಗೆ 1986ರಲ್ಲಿ ಆರ್ಡರ್ ಬಂದಮೇಲೆ, ಯಾವುದೇ ಆರ್ಡರ್ ಬಂದರೂ ಕೂಡ that restricts all of us to the State Government Services only. That is admission for the educational institutions in the State area here but the Central Government ಅಲ್ಲಿ ಏನು ಮಾಡಬೇಕು. ನಮಗೆ ಹಕ್ಕಿಲ್ಲವೇನು? ನಾವು ತೆರಿಗೆ ಕೊಡುವುದಿಲ್ಲವೇನು? ಕೇಂದ್ರ ಸರ್ಕಾರಕ್ಕೆ ಇಂತಹ ವಿಚಾರಗಳು ಬಂದಂಥ ಕಾಲದಲ್ಲಿ ಮಂಡಲ ಆಯೋಗದ ರಚನೆ ಬಗ್ಗೆ ಅಭಿಮಾನದಿಂದ ಹೇಳತಕ್ಕಂಥ ಮಾತು. 27 ಪರ್ಸೆಂಟ್ ಇರಬಹುದು. 37 ಪರ್ಸೆಂಟ್ ಇರಬಹುದು. ಎಷ್ಟಾದರೂ ಇರಬಹುದು. ಅನೇಕ ಜನ ಇರತಕ್ಕಂತಹ ಖೋಟಾ ವಿಚಾರದಲ್ಲಿ ತಮ್ಮದೇ ಆದಂತಹ ವ್ಯಾಖ್ಯಾನ ಮಾಡಿದ್ದಾರೆ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥ ಸೇವೆಯಲ್ಲಿ 27 ಪರ್ಸೆಂಟ್ ಏನಿದೆ ಅದು ಇನ್ನೂ ಕೂಡ ಜಾಸ್ತಿಯಾಗಬೇಕು, ಎನ್ನತಕ್ಕಂಥಾದ್ದು. ಈ ವಿಚಾರದಲ್ಲಿ ನಾವೂ ಕೂಡ ಅದೇ ಅಭಿಪ್ರಾಯವನ್ನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೇವೆ. ಆ ವಿಚಾರ ಬಂದಾಗ ಆ ಮಾತನ್ನು ಹೇಳೋಣ. ಈಗ ಆ ವಿಚಾರದ ಚರ್ಚೆ ಅಪ್ರಕೃತ. ಆದರೆ ಕೊನೆಪಕ್ಷ ಅಲ್ಲಿ ಬಂದಿದೆಯಲ್ಲ ಎಂದು ಸಂತೋಷ. ಇದಕ್ಕೆ ಕಾರಣಕರ್ತರು ಈಗಿರತಕ್ಕಂತಹ ಪ್ರಧಾನ ಮಂತ್ರಿಯವರಾದ ಪಿ.ವಿ.ನರಸಿಂಹರಾವ್ ಅವರ ಹೆಸರನ್ನು ಇಲ್ಲಿಯ ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಹೇಳಿ ಶಹಭಾಸ್‌ಗಿರಿ ತೆಗೆದುಕೊಳ್ಳತಕ್ಕಂತಹ ಅವರ ಪ್ರಯತ್ನ ನನಗೆ ಅರ್ಥವಾಗುತ್ತಿದೆ. ರಾಜಕೀಯ ಏನು ಎಂದು. ಆದರೆ ಹಿಂದೆ ಇದನ್ನುಯಾರು ತಂದರು ಎನ್ನುವಂತಹ ವಿಚಾರವನ್ನು ಹೇಳುವಂತಹ ಸೌಜನ್ಯ ಕೂಡ ನಿಮ್ಮಲ್ಲಿ ಇಲ್ಲವಲ್ಲ ಎನ್ನುವ ವಿಚಾರ ನಿಜವಾಗಲೂ ಮನಸ್ಸಿಗೆ ನೋವು ತರತಕ್ಕಂತಹ ವಿಚಾರ. ನಿಜ ಹೇಳಿ, ಮಂಡಲ್ ಆಯೋಗದ ರಚನೆ ಯಾವ ಕಾಲದಲ್ಲಿ ಆಯಿತು? ವರದಿ ಯಾವಾಗ ಬಂತು? 27 ಪರ್ಸೆಂಟ್ ಎಂದು ಇದರ ಅಂತಿಮ ನಿರ್ಧಾರ ತೆಗೆದುಕೊಂಡಿರತಕ್ಕಂಥವರು ಯಾರು? 27 ಪರ್ಸೆಂಟ್ ಜಾರಿಗೆ ಕೊಟ್ಟವರು ಪಿ.ವಿ. ನರಸಿಂಹರಾವ್ ಅವರ ಸರ್ಕಾರ ಆದರೂ ಕೂಡ 27 ಪರ್ಸೆಂಟ್ ಎಂದು ನಿಗದಿ ಮಾಡಿದ್ದು ಪಿ.ವಿ. ನರಸಿಂಹರಾವ್ ಅವರ ಸರ್ಕಾರ ಅಲ್ಲ. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ಹಿಂದಿನ ಕೇಂದ್ರಸರ್ಕಾರ ನಿಗದಿ ಮಾಡಿದ್ದುದು. ಅನಿವಾರ್ಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಕೇಂದ್ರಸರ್ಕಾರ ನಿಗದಿ ಮಾಡಿದ್ದುದು, ಅನಿವಾರ್ಯವಾಗಿರತಕ್ಕಂಥ ಪರಿಸ್ಥಿತಿಯಲ್ಲಿ ಕೇಂದ್ರಸರ್ಕಾರ ಇವತ್ತು ಜಾರಿ ಕೊಟ್ಟಿದೆ ಎನ್ನುವ ಮಾತನ್ನು ಬಿಟ್ಟರೆ, ನಿಮ್ಮ ಭುಜವನ್ನು ನೀವೇ ತಟ್ಟಿಕೊಳ್ಳುವುದಕ್ಕೋಸ್ಕರ ಅದಕ್ಕೆ ಕಾರಣ

ಸಕಾರಣವಾಗಿ ಅಲ್ಲಿ ಲಕ್ಷಣಗಳು ಎಳ್ಳಷ್ಟೂ ಕೂಡ ಕಾಣುತ್ತಿಲ್ಲ. ಅದು ಏನೇ ಇರಬಹುದು, ನೀವು ಏನಾದರೂ ಮಾಡಿಕೊಳ್ಳಿ. I am not bother about it. Now the point is this....

ಬ್ಯಾಕ್‌ವರ್ಡ್ ಕ್ಲಾಸ್ ವಿಚಾರದಲ್ಲಿ ಇವತ್ತು ತಮಗೆ ಗೊತ್ತಿರುವ ಹಾಗೆ, ಎರಡು ವಿಚಾರ ಇದೆ. ಒಂದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುವ ಹಾಗೆ, ನಾನು ಈ ಮಾತನ್ನು ಆಡಬೇಕಾದರೆ ತಮಿಳುನಾಡು ಸರ್ಕಾರ ಏನು ಮಾಡಿದೆ, ಶ್ರೀಮತಿ ಜಯಲಲಿತಾ ಅವರ ಸರ್ಕಾರ ಏನು ಮಾಡಿದೆ ಎನ್ನುವ ವಿಚಾರವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಆ ಮಾತನ್ನು ಕೂಡ ನೀವು ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಮಾಡಬೇಕಾಗಿತ್ತು. You are too late... ನೀವು ಅಷ್ಟರಲ್ಲಿ ರಾಜಕೀಯ ಮಾಡಬಾರದು. ರಾಜಕೀಯ ಮಾಡಿ ಆಡಬಾರದ ಆಟ ಆಡಿ ಅದನ್ನೆಲ್ಲಾ ಸಂಪೂರ್ಣವಾಗಿ ಗಬ್ಬೆಬ್ಬಿಸಿ ಬಿಟ್ಟಿದ್ದೀರಿ. ಅದು ಯಾವುಕ್ಕೂ ಕೂಡ ಆ ಮಟ್ಟಕ್ಕೆ ಬರುವ ಹಾಗೆ ಇಲ್ಲ. ಏನಾಗಿದೆ ನಿಮ್ಮ ಪರಿಸ್ಥಿತಿ? ಈ ಬಿಲ್‌ನ್ನು ಸದನದಲ್ಲಿ ಪಾಸ್ ಮಾಡಿದಿರಿ, ಮುಂದೆ ಆಗಲೇ ಏನಾಗುತ್ತದೆ ಎನ್ನುವಂತಹ ವಿಚಾರವನ್ನು ನಾನು ಹೇಳುತ್ತಿದ್ದೇನೆ. ರಾಜ್ಯದ ಪರಿಸ್ಥಿತಿಯಲ್ಲಿ ನೀವು ಏನು ಮಾಡುತ್ತಿದ್ದೀರಿ ಎನ್ನುವಂತಹ ಮಾತನ್ನು ನಾನು ಈ ಸದನದ ಗಮನಕ್ಕೆ ಮಾನ್ಯ ಸಭಾಧ್ಯಕ್ಷರೆ, ನಿಮ್ಮ ಅಪ್ಪಣೆ ಪಡೆದು ಹೇಳುತ್ತಿದ್ದೇನೆ. ಅದು ಏನೆಂದರೆ, ತಮಿಳುನಾಡು ಸರ್ಕಾರದವರು ಅಲ್ಲಿ ಏನು ಮಾಡಿದರು, ಎಲ್ಲಾ ವಿರೋಧ ಪಕ್ಷದವರನ್ನು ಕೂಡ ಮೊದಲಿಗೆ ಕರೆದರು. ನೀವು ಹೇಳಬಹುದು, ನಾನೂ ಕೂಡ ವಿರೋಧ ಪಕ್ಷದವರನ್ನು ಕರೆದೆ ಎಂದು. ಯಾರು ವಿರೋಧ ಪಕ್ಷದವರು ಇಲ್ಲಿ. ನೀವು ಹೇಳಿ. ಇವತ್ತು ಮಾನ್ಯತೆ ಪಡೆದಿರತಕ್ಕಂಥ ವಿರೋಧ ಪಕ್ಷದ ನಾಯಕರು, ಮಾನ್ಯತೆ ಇಲ್ಲದೆ ಇರತಕ್ಕಂತಹ ಪಕ್ಷವನ್ನು ಕೂಡ ನೀವು ಕರೆದಿರಿ, ಏಕೆ ಸ್ವಾಮಿ, ನನ್ನನ್ನು ಕರೆಯಲಿಲ್ಲ ನೀವು? I am putting a straight question to the Leader of the House of this August House who is the Hon'ble Chief Minister.. ಒಂದು ಕಾಗದ ಕೂಡ ಇವರ ಸರ್ಕಾರದಿಂದ ನನಗೆ ಬಂದಿಲ್ಲ. I am not your party member, I am not in your Government. I am sitting in the opposition. ಇವತ್ತು ಈ ಸೀಟ್ ನನಗೆ ಅಲಾಟ್ ಆದರೂ ಕೂಡ that is left to the Speaker of the August House, ನಾನು ಎಲ್ಲಿ ಕುಳಿತುಕೊಳ್ಳಬೇಕು ಎನ್ನತಕ್ಕಂಥ ವಿಚಾರ. ನಾನು ಅವರಿಗೆ ಪ್ರತ್ಯೇಕವಾಗಿ ನನಗೆ ಒಂದು ಸೀಟು ಕೊಡಿ ಎಂದು ಬರೆಯುವುದಕ್ಕೆ ಹೋಗಲಿಲ್ಲ. There is a rule under which you can say I should go and sit there... ಇವತ್ತು ಇರತಕ್ಕಂಥಾದ್ದು. ನಾನು ಹಿಂದಿನ ಮುಖ್ಯಮಂತ್ರಿ ಎಂಬ ಮಾತನ್ನು ಆಡುವುದಕ್ಕೆ ಹೋಗುತ್ತಿಲ್ಲ. ಅದು ದೇಶಕ್ಕೆ, ಜನರಿಗೆ ಗೊತ್ತಿರತಕ್ಕಂಥ ವಿಚಾರ. ಇವತ್ತು ನಾನು ಹಿಂದಿನ ಮುಖ್ಯಮಂತ್ರಿ ಆದರೆ, ಅದು ನಿಮಗೂ ಕೂಡ ಬಹಳ ಹತ್ತಿರ ಹತ್ತಿರ ಬಂದಿದೆ, ಹಿಂದಿನ ಮುಖ್ಯಮಂತ್ರಿ ಆಗುವುದಕ್ಕೆ ಚುನಾವಣೆ ಬಹಳ ಹತ್ತಿರ ಇದೆ. Very much round the corner.

ಇವತ್ತು ಏನಾಗಿದೆ, ನೀವು ಇವತ್ತು ಒಂದು ಪತ್ರವನ್ನೂ ಕೂಡ ಕಳುಹಿಸತಕ್ಕಂಥ ಸೌಜನ್ಯ ಆದ್ದರಿಂದ ದೂರ ಇರತಕ್ಕಂಥ ನಿಮ್ಮ ನಾಯಕತ್ವ – ಇದನ್ನು ನಾನು ಖಂಡಿಸಬೇಕೋ ಇಲ್ಲವೋ, ದಯವಿಟ್ಟು ವಿಚಾರ ಮಾಡಿ. ಮಾನ್ಯ ಸಭಾಧ್ಯಕ್ಷರೆ, ಇವತ್ತು ನನ್ನ ಜಾಗದಲ್ಲಿ ನೀವೇ ಕುಳಿತುಕೊಂಡಿದ್ದಾರೆ, ನಿಮ್ಮ ಜಾಗದಲ್ಲಿ ಮತ್ತೊಬ್ಬರು ಮುಖ್ಯಮಂತ್ರಿಯಾಗಿದ್ದು ನಿಮ್ಮನ್ನು ಕರೆಯದಿದ್ದರೆ ಆಗ ನಿಮಗೆ ಏನಾಗುತ್ತಿತ್ತು? ಏಕೆ ನೀವು ನನಗೆ ಪತ್ರವನ್ನು ಕಳುಹಿಸಿಕೊಡಲಿಲ್ಲ. ಒಂದು ವೇಳೆ ಆ ಸಭೆಗೆ ನನ್ನನ್ನು ಕರೆದಿದ್ದರೆ, ಸಭೆಗೆ ನಾನು ಬರುತ್ತಿದ್ದೆನೋ ಬಿಡುತ್ತಿದ್ದೆನೋ ಆ ವಿಚಾರ ಪ್ರತ್ಯೇಕ.

ಸೌಜನ್ಯರಹಿತವಾಗಿ, ಸ್ವಲ್ಪ ದೂರ ಇರತಕ್ಕಂಥ ನಿಮ್ಮ ನೀತಿಯನ್ನು ನಾನು ಈ ಸಂದರ್ಭದಲ್ಲಿ ಖಂಡಿಸಬೇಕು. ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ಖಂಡಿಸತಕ್ಕಂಥ ವಿಚಾರವನ್ನು ನಾನು ಮನದಟ್ಟು ಮಾಡಿಕೊಳ್ಳುತ್ತಿದ್ದೇನೆ. ನಿಮಗೆ ಮನದಟ್ಟು ಮಾಡಿ ಉಪಯೋಗವಿಲ್ಲ ಎಂಬುದು ನನಗೆ ಗೊತ್ತಿದೆ. ಈ ಸದನವನ್ನು ಏತಕ್ಕಾಗಿ ಕರೆಯುತ್ತೀರಿ ಎನ್ನತಕ್ಕಂಥ ವಿಚಾರ ನನಗೆ ಗೊತ್ತಿರಲಿಲ್ಲ. ಮೊನ್ನೆ ತಾನೆ ಇದ್ದಂತ ಬಿಲ್ಲನ್ನು ನಾನು ಪ್ರೆಸ್ ಮಾಡುವುದಿಲ್ಲ, ಹಿಂದಕ್ಕೆ ತೆಗೆದುಕೊಂಡಿದ್ದೇವೆ ಎಂಬತಕ್ಕಂಥ ಮಾತನ್ನು ಮಾನ್ಯ ಸಭಾಧ್ಯಕ್ಷರೇ, ಹೇಳಿದ್ದಾರೆ. ನಾನು ಆ ದಿವಸವೇ ಮಾತನಾಡಬೇಕು ಎಂದು ಇದ್ದೆ. ನಾನು ಆ ದಿನ ವಿರೋಧಪಕ್ಷದವರು ಮಾತನಾಡಿದ್ದರಿಂದ ಮತ್ತೊಮ್ಮೆ ಮಾತನಾಡುವುದಕ್ಕೆ ಹೋಗಲಿಲ್ಲ. ನಾನು ಆ ದಿನ ಸದನದಲ್ಲಿ ಸಂಪೂರ್ಣವಾಗಿ ಕುಳಿತುಕೊಂಡಿದ್ದೆ. ತಮಗೆಲ್ಲಾ ಗೊತ್ತಿರುವ ಹಾಗೆ ಶ್ರೀಮತಿ ಜಯಲಲಿತರವರು ತಮಿಳುನಾಡಿನಲ್ಲಿ ಏನು ಮಾಡಿದರು, ಇದನ್ನು ಈ ಸದನದ ಸಭಾನಾಯಕರು ಸರಿಯಾಗಿ ಅರಿತರೆ ಬಹಳ ಒಳ್ಳೆಯದು, ಅವರು ನಿಮ್ಮ ಹಾಗೆ ರಾಜಕೀಯ ಮಾಡಲಿಲ್ಲ. ಅವರು ಏನು ಮಾಡಿದರೆಂದರೆ, ಎಲ್ಲರನ್ನೂ ಕರೆದರು, ನಂಬಿಕೆಯಿಂದ ಮಾತನಾಡಿದರು. ಈ ಬಿಲ್ಲನ್ನು ಈ ರೀತಿಯಾಗಿ ತರೋಣವೆ ಎಂಬ ವಿಚಾರದಲ್ಲಿ ಮೊದಲೆ ಮಾತನಾಡಿದರು. ಆದರೆ ನೀವು ಈ ರೀತಿ ಮಾಡಲಿಲ್ಲ. ನೀವು ಏನು ಮಾಡಿದಿರಿ, ಶೇಕಡಾ 80ರಷ್ಟು ಮೀಸಲಾತಿ ಹಿಂದುಳಿದವರ್ಗದವರಿಗೆ ಎನ್ನತಕ್ಕಂಥ ತೀರ್ಮಾನವನ್ನು ನೀವು ಕ್ಯಾಬಿನೇಟ್‌ನಲ್ಲಿ ಮಾಡಲಿಲ್ಲವೇ? ಪತ್ರಿಕೆ ತುಂಬಾ ಈ ದೇಶದಲ್ಲೆಲ್ಲಾ ಬಂದಿಲ್ಲವೇ? ಸ್ವಾಮಿ, ನಾನು ಕೇಳುತ್ತಿದ್ದೇನೆ, ಎನ್.ಆರ್.ಕುಮಾರ್ ಆಯೋಗ, ಮಾನ್ಯ ಸಭಾಧ್ಯಕ್ಷರೆ, ತಮಗೆಲ್ಲಾ ಗೊತ್ತಿರುವ ಹಾಗೆ it is a permanent body, ನೀವೇ ನೇಮಕ ಮಾಡಿರತಕ್ಕ ಸರ್ಕಾರವೇ ನೇಮಕ ಮಾಡಿರತಕ್ಕ ಆಯೋಗ ಏನಿದೆ ಆ ಆಯೋಗಕ್ಕೆ ರೆಫರ್ ಮಾಡಿ ಅದರ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕ ಸೌಜನ್ಯತೆಯೂ ಕೂಡ ನಿಮ್ಮ ಹತ್ತಿರ ಬರಲಿಲ್ಲ. ನೀವು ಆಯೋಗವನ್ನು ಏಕೆ ನೇಮಕ ಮಾಡಿದ್ದುದು ಅವರಿಗೆ ಸಂಬಳ ಸಾರಿಗೆ ಕೊಡುವುದಿಲ್ಲ ತಿಂಗಳಿಗೆ ಲಕ್ಷಾಂತರ ರೂಪಾಯಿ ಖರ್ಚಾಗುವುದಿಲ್ಲವೆ, ನೀವು ಆ ಆಯೋಗವನ್ನು ರದ್ದು ಮಾಡತಕ್ಕಂಥ ತೀರ್ಮಾನ ಮಾಡಿದ್ದಕ್ಕೆ straightway we took a Cabinet decision, ಅದರ ಬಗ್ಗೆ ನೀವೇನು ಮಾಡಿದಿರಿ. ಆಯೋಗದ ಖರ್ಚನ್ನು ಕೂಡ ಹಾಗೆ ಇಟ್ಟಿರಿ, ಈ ತೆರಿಗೆಯ ಹೊರೆಯ ಹಣದ ಖರ್ಚನ್ನು ಸಂಪುಟ ರಾಜ್ಯದ ಜನತೆಯ ತಲೆ ಮೇಲೆ ಇಟ್ಟಿರಿ. ಜೊತೆಗೆ ಅದೇ ಸಂದರ್ಭದಲ್ಲಿ ನೀವು ಅರ್ಜೆಂಟಾಗಿ ಕ್ಯಾಬಿನೇಟ್ ಮೀಟಿಂಗನ್ನು ಕರೆದಿರಿ, ಏನು ತೀರ್ಮಾನ ಮಾಡಿದಿರಿ, ಶೇಕಡ 80ರಷ್ಟು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನಾವು ಕೊಡುತ್ತೇವೆ ಎನ್ನತಕ್ಕ ಮಾತನ್ನಾಡಿ

bypassing your own Commission by yourself. ನೀವೇ ಮಾಡಿರತಕ್ಕಂಥ ಆಯೋಗವನ್ನು ಸಂಪೂರ್ಣವಾಗಿ ಬದಿಗೊತ್ತಿದಿರಿ, ಏಕೆ? ಯಾವ ಕಾರಣಕ್ಕೆ? ಇವತ್ತು ಸುಪ್ರೀಂ ಕೋರ್ಟ್ ಆದೇಶ ದ ಪ್ರಕಾರ ಆಯೋಗ ನೇಮಕ ಆಯಿತು. ಅದನ್ನು ಎಲ್ಲಾ ರಾಜ್ಯಗಳಲ್ಲೂ ಮಾಡಬೇಕು ಎಂಬ ಉದ್ದೇಶ ಕೂಡ ಆಗ ಇತ್ತು. ನೀವು ಅದಕ್ಕೆ ರೆಫರ್ ಮಾಡಿ ಅದರ ಒಪ್ಪಿಗೆಯನ್ನು ತೆಗೆದುಕೊಳ್ಳತಕ್ಕ ಸೌಜನ್ಯವೂ ಕೂಡ ನಿಮ್ಮ ಹತ್ತಿರ ಬರಲಿಲ್ಲ. ಅದನ್ನು ಸಂಪೂರ್ಣವಾಗಿ ಕೈಬಿಟ್ಟು, 80ರಷ್ಟು ಮೀಸಲಾತಿ ಮಾಡಿದಿರಿ. ನಾವೆಲ್ಲಾ ಪತ್ರಿಕೆಯಲ್ಲಿ ನೋಡಿದ್ದೇವೆ. ಇವತ್ತು ಈ ಬಿಲ್ಲು ಈಗ ಇಷ್ಟಿದ್ದರೂ ಕೂಡ ಪಾಸಾಗುವ ಹೊತ್ತಿಗೆ ಎಷ್ಟು ಪರ್ಸೆಂಟೇಜ್ ತರುತ್ತಾರೆ ನನಗೆ ಗೊತ್ತಿಲ್ಲ. ಏಕೆಂದರೆ, as a matter of a minute ಈಗ ನನಗೆ ಗೊತ್ತಿರುವ ಹಾಗೆ, ವಿರೋಧ ಪಕ್ಷದ ಮಾನ್ಯತೆ ಪಡೆದ ನಾಯಕರು ಎಂದು ದೊಡ್ಡ ದೊಡ್ಡ ಮಾತುಗಳನ್ನು ಪ್ರಯೋಗ ಮಾಡಿದಿರಲ್ಲ ದೇಶಪಾಂಡೆಯವರು ಮತ್ತು ಉಳಿದಿರತಕ್ಕ ಮಿತ್ರರು, ಅವರೆಲ್ಲ ಸದನದ ಕಾರ್ಯಕಲಾಪಗಳಿಗೆ ಬಹಿಷ್ಕಾರ ಹಾಕುತ್ತಾರೆ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ, ಬೇರೆ ಪಕ್ಷದ ಕೆಲವರು ಅದೇ ರೀತಿ ಮಾಡುತ್ತಾರೆ ಎಂಬ ವಿಚಾರವನ್ನೂ ಓದಿದ್ದೇನೆ. ಇವತ್ತು ಅವರು ಏಕೆ ಬಂದಿಲ್ಲ ಎಂಬುದು ಬಹುಶಃ ಅದಕ್ಕಾಗಿ ಇರಬೇಕು ಎಂದು ನನ್ನ ಊಹೆ. ಏಕೆ ಬಂದಿಲ್ಲ ಎಂಬುದು ನನಗೆ ಗೊತ್ತಿಲ್ಲ. ಹೊರಗೆ ಕೂಡ ಅವರು ಹೇಳಬಹುದು. ಅದು ಅವರಿಗೆ ಬಿಟ್ಟಿರತಕ್ಕ ವಿಚಾರ. I am not commenting upon their stand which they have taken to boycott as far as this Special Session of this August House is concerned. It is not my concern. The point is this..

ಇವತ್ತು ಮಾನ್ಯತೆ ಪಡೆದಿರತಕ್ಕಂಥಹ ನಾಯಕರು, ಮತ್ತೊಬ್ಬರು ಅವರೆಲ್ಲರನ್ನು ನೀವು ಮೊದಲೇ ಕರೆದು ನಂಬಿಕೆ ತೆಗೆದುಕೊಳ್ಳತಕ್ಕ ಸೌಜನ್ಯತೆ ನಿಮ್ಮ ಹತ್ತಿರ ಬರುತ್ತಾ ಇಲ್ಲ ಏತಕ್ಕೆ ಗೊತ್ತೇ ಈ ನಿಮ್ಮ ಅಪನಂಬಿಕೆಯ ನಿರ್ಧಾರಗಳು. ತಮಿಳುನಾಡಿನಲ್ಲಿ ಜಯಲಲಿತರವರು ನಿಮ್ಮ ಹಾಗೆ ತೆಗೆದುಕೊಂಡು ಹೋಗಿ ಶೇಕಡಾ 69ಕ್ಕೆ ನಿರ್ಬಂಧಿಸಿದ್ದಾರೆ. ಶೇಕಡ 69ರಷ್ಟಕ್ಕೆ ಅಲ್ಲಿ ನಿರ್ಬಂಧಿಸಿ ಬಿಲ್ಲನ್ನು ಪಾಸು ಮಾಡಿದಾಗ ಇಡೀ ಸದನದಲ್ಲಿ ಯಾರೂ ಕೂಡ ವಿರೋಧವಾಗಿ ಚಕಾರವನ್ನು ಎತ್ತಲಿಲ್ಲ. ಅಷ್ಟೊಂದು ನಂಬಿಕೆಯಿಂದ ಮಾಡಿದರು, ಮತ್ತೆ ಡಿಎಂಕೆ, ಎಡಿಎಂಕೆ all of them, as far as giving benefit to the backward classes is concerned they are one, to the party politics they along with their parties seperate in that House. ನೀವು ತೆಗೆದುಕೊಳ್ಳತಕ್ಕಂಥ ತೀರ್ಮಾನ 80. 70, 56, 60 ಹೀಗೆ ಮನಸ್ಸಿಗೆ ಬಂದಂತೆ ಇಲ್ಲೊಂದು ಹೇಳುವುದು, ಹೋಗಿ ಭಾಷಣ ಮಾಡುವುದು, ಪತ್ರಿಕಾ ಹೇಳಿಕೆಯನ್ನು ಕೊಡುವುದು ಅಲ್ಲದೆ ಸುಪ್ರೀಂಕೋರ್ಟ್‌ಗೆ ಮತ್ತೊಂದು ಹೇಳುವುದು. ನಿಮ್ಮ ಕತ್ತನ್ನು ನೀವೇ ಕತ್ತರಿಸಿಕೊಳ್ಳುವುದು. ಆದರೆ ಅದು ನಿಮ್ಮ ಕತ್ತು ಅಲ್ಲ. You are scuttling the progress of the real backward classes of hte Society in Karnataka State...

**12.30 ಪಿ.ಎಂ.**

ಏನಾದರೂ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಿದ್ದರೆ ಅದು ಸಂಪೂರ್ಣವಾಗಿ ನಿಮ್ಮ ಧೋರಣೆ, ಅಸಮತೋಲನ ಮತ್ತು ನಿಮ್ಮ ಕಮಿಟ್‌ಮೆಂಟ್ ಇದೆಯಲ್ಲ ಅದುಇಲ್ಲದಿರುವುದು. ಇದಕ್ಕೆಲ್ಲಾ ಕಾರಣ, ಪ್ರತಿಯೊಂದು ಹಂತದಲ್ಲಿಯೂ ಕರ್ನಾಟಕ ರಾಜ್ಯದ ಜನರು ನಿಮ್ಮನ್ನು ವಾಚ್ ಮಾಡಿದ್ದಾರೆ. ಇಲ್ಲಿರತಕ್ಕ ಎಲ್ಲಾ ರಾಜಕೀಯ ಪಕ್ಷಗಳವರೂ ಕೂಡ ನಿಮ್ಮನ್ನು ವಾಚ್ ಮಾಡಿದ್ದಾರೆ. ನಿಮ್ಮ ಪಕ್ಷದ ಮಾನ್ಯ ಸದಸ್ಯರು ಕೂಡ ನಮ್ಮನ್ನು ವಾಚ್ ಮಾಡಿದ್ದಾರೆ. ಇವತ್ತು ನಿಮ್ಮ ಹತ್ತಿರ ಇರತಕ್ಕದ್ದು ಈ ರಾಜಕೀಯ. ಸದನದ ಮಾನ್ಯ ಸದಸ್ಯರು ಇರಬಹುದು, ಬೇರೆ ಬೇರೆ ರಾಜಕೀಯ ಪಕ್ಷಗಳು ಇರಬಹುದು. ಈ ಸದನದ ಮೂಲಕ ಅಖಿಲ ಕರ್ನಾಟಕದ ಜನತೆಯನ್ನು ಕೂಡ ಆ ಮಟ್ಟದಲ್ಲಿ ತೆಗೆದುಕೊಂಡು ಹೋಗಿ ಹಿಂದುಳಿದ ವರ್ಗದ ವಿಚಾರದಲ್ಲಿ ಸಂಪೂರ್ಣವಾಗಿ ನಿಮ್ಮ ನಡವಳಿಕೆ ನಿಮ್ಮ ಹೆಜ್ಜೆಗಳು ತಪ್ಪು ತಪ್ಪಾಗಿ, ಅಂಕುಡೊಂಕಾಗಿ ಹೋಗಿರತಕ್ಕ ಸಂದರ್ಭದಲ್ಲಿ ನೀವು ನೇರವಾಗಿರತಕ್ಕ ಒಂದು ತೀರ್ಮಾನದ ವ್ಯಕ್ತಿ ಅಲ್ಲ, ನಿಮ್ಮ ಆಡಳಿತ ಆ ರೀತಿ ಅಲ್ಲ. ರಾಜಕೀಯ ದುರುದ್ದೇಶದಿಂದ ಕೂಡಿರತಕ್ಕ ಸಂದರ್ಭದಲ್ಲಿ ಅಂಕುಡೊಂಕಾಗಿ ವಿಚಾರಧಾರೆ ಯಾವ ರೀತಿ ಇದೆಯೋ ಅದೇ ರೀತಿ ನಿಮ್ಮ ತೀರ್ಮಾನ ಇರುವುದರಿಂದ ಹಿಂದುಳಿದ ವರ್ಗಗಳ ಜನರು ಮೊದಲು ನಿಮ್ಮನ್ನು ನಂಬುತ್ತಿಲ್ಲ. ಬೇರೆ ವರ್ಗದ ಜನರ ಬಗ್ಗೆ ಈ ಸದನದಲ್ಲಿ ಮಾತನಾಡುವ ಅವಶ್ಯಕತೆ ಇಲ್ಲ. ಇವರು ಒಂದು ಸಾರಿ 80 ಪರ್ಸೆಂಟ್, ಮತ್ತೊಂದು ಸಾರಿ 70, 75 ಪರ್ಸೆಂಟ್ ಎಂದು ಹೇಳದೆ ನೇರವಾಗಿ ವಿರೋಧ ಪಕ್ಷದವರನ್ನು ಮೊದಲೇ ಮಾತುಕತೆ ಮಾಡಿ ಎಲ್ಲರನ್ನೂ ಸಂಪೂರ್ಣವಾಗಿ ನಂಬಿಕೆಗೆ ತೆಗೆದುಕೊಂಡಿದ್ದರೆ ಈ ಪ್ರಶ್ನೆ ಬರುತ್ತಿರಲಿಲ್ಲ. ಅಲ್ಲಿ ತಮಿಳ್ನಾಡು ಸರ್ಕಾರದ ಮುಖ್ಯ ಮಂತ್ರಿಯವರು ಆ ಕೆಲಸ ಮಾಡಿದ್ದರಿಂದ ಅವರ ಕೆಲಸ ಸುಸೂತ್ರವಾಗಿ ಆಯಿತು. ನಾನು ಮುಂದಿನ ಮತ್ತೊಂದು ವಿಚಾರ ಬಹಳ ಮುಖ್ಯವಾದುದು ಹೇಳತಕ್ಕದ್ದು ಇದೆ. ಈ ಬಿಲ್ ಪಾಸ್ ಮಾಡಿದರೂ ಕೂಡ ಏನಾಗುತ್ತದೆಂದರೆ, I am giving you a warning from this August House. ನಾನು ಹೇಳತಕ್ಕ ಈ ಸಂದರ್ಭ ಇದರಲ್ಲಿ ಅಡಗಿದೆ. ಅದು ಏನು ಎಂಬ ವಿಚಾರವನ್ನು ಹೇಳುತ್ತೇನೆ. ಅವರು ಏನು ಮಾಡಿದರು ಅಲ್ಲಿ ? ಬಿಲ್ ಪಾಸ್ ಮಾಡಿದರು. ಸರ್ವಾನುಮತದಿಂದ ಬಿಲ್ ಪಾಸ್ ಮಾಡಿದ ಮೇಲೆ ಎಲ್ಲ ಇಡೀ ಡೆಲಿಗೇಷನ್ ತೆಗೆದುಕೊಂಡುಹೋಗಿ ಅಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಶನ್ ಆ್ಯಕ್ಟ್ ಎಂದು ಪಾಸ್ ಮಾಡಿಸಿಕೊಂಡರು. They wanted that to be included under IXth Schedule of the Constitution. ಅದಕ್ಕೆ ಅವರು ಏನು ಮಾಡಿದರು? Straightway the Hon'ble Chief Minister led an All Party Delegation to the Government of India. ಹೋದರು, ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಯವರನ್ನು ನೋಡಿದರು. ಆಮೇಲೆ ಸಂಬಂಧಪಟ್ಟ ಸಚಿವರಾದ ಸೀತಾರಾಂ ಕೇಸರಿಜಿ ಅವರನ್ನು ನೋಡಿದರು. ಅನಂತರ ತಮಗೆಲ್ಲ ಗೊತ್ತಿರುವ ಹಾಗೆ ರಾಷ್ಟ್ರಾಧ್ಯಕ್ಷರನ್ನು ನೋಡಿದರು. ಸಂಪೂರ್ಣವಾಗಿ ಅಲ್ಲೆಲ್ಲ ನೋಡಿ ಆದಮೇಲೆ ಒಪ್ಪಿಗೆ

ತೆಗೆದುಕೊಂಡು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಬೇಕೆಂಬ ಬಗ್ಗೆ ಒಪ್ಪಿಗೆ ಪಡೆದರು, long before this bill was introduced to bring an Act by Tamil Nadu Legislature. Actually, the Government of India gave consent for this. All those things has appeared in the press. ಇದು ಸಂಪೂರ್ಣವಾಗಿ ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರ. They introduced the bill which was passed in the Legislature later Loksabha passed it. ಮಾಡಿದರೆ ಆ ರೀತಿ ಮಾಡಬೇಕು. ನಾನು ಅವರನ್ನು ಹೊಗಳುತ್ತೇನೆಂಬ ಪ್ರಶ್ನೆ ಅಲ್ಲ. ಅವರು ಮಾಡಿದ ಪ್ರಯತ್ನದಿಂದ ಅದು ಲೋಕಸಭೆಯಲ್ಲೂ ಬಂತು, ಲೋಕಸಭೆಯಲ್ಲಿ ಕೂಡ ಪಾಸ್ ಆಯಿತು. ನಾನು ಆ ದಿವಸ ಅಲ್ಲಿದ್ದೆ. in connection with Rajiv Gandhi Foundation. I met Sri Sitaram Kesari because he was one of the Speakers in that Conference, ನಾನು ಅವರು 3-4 ಜನರಿದ್ದೆವು. ನಾನು ಅದನ್ನು ಕೇಳಿದೆ. he openly committed himself even in the open meeting, ಅವರು ಏನು ಹೇಳಿದರು ಅಂದರೆ, ನೋಡಿ, on par with the Legislation of Tamil Nadu, other States in the whole of the country ಅವರು ಕೂಡ ಏನಾದರೂ ಲೆಜಿಸ್ಲೇಷನ್ ಪಾಸ್ ಮಾಡಿ ತಂದು ಕೊಟ್ಟರೆ we are going to introduce a bill and include in the IXth Schedule of the Constitution, ಎಂಬ ಮಾತನ್ನು ಅವರು ತಮ್ಮ ಭಾಷಣದಲ್ಲಿ ಹೇಳಿದರು. Samething has reported that day in Parliament in Loksabha..

ಮರುದಿನ ಡೆಲ್ಲಿಯಲ್ಲಿದ್ದಾಗ ಪತ್ರಿಕೆಯಲ್ಲಿ ಓದಿ ನೋಡಿದೆ. ಅವರು ಏನು ಹೇಳಿದ್ದಾರೆಂದರೆ, ತಮಿಳ್ನಾಡಿನವರು ತಂದ ಹಾಗೆ ತಂದರೆ ನಾವು ಕೂಡ ಪಾಸ್ ಮಾಡಿ ಕೊಡುತ್ತೇವೆ. ಕರ್ನಾಟಕ ಎಂದು ಅಲ್ಲ, ಮಹಾರಾಷ್ಟ್ರ ಇರಬಹುದು, ಗುಜರಾತ್ ಇರಬಹುದು, ಯು.ಪಿ. ಇರಬಹುದು, ಯಾವುದೇ ರಾಜ್ಯದವರು ಇರಬಹುದು. ಈ ರೀತಿ ಅವರು ಯೋಜನೆ ಮಾಡಿ ಆ ಮಾತನ್ನು ಹೇಳಿದರು. ಆ ಮೀಟಿಂಗ್‌ನಲ್ಲಿ ನಾನು ಒಂದು ಸಲಹೆ ಕೊಟ್ಟೆ. ಏಕೆಂದರೆ, ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಸಂಬಂಧಪಟ್ಟ ಹಾಗೆ ಆ ಮೀಟಿಂಗ್ ಕರೆದದ್ದು. ಬೇರೆ ಏನು ಸಂಬಂಧ ಇರಲಿಲ್ಲ. ನಾನು ಏನು ಸಲಹೆ ಕೊಟ್ಟೆ ಎಂದರೆ, why don't you think of passing a common legislation by bringing an amendment to the Constitution itself ನೀವು ಜನರಲ್ ಆಗಿ ಮಾಡಿಬಿಡಿ, by giving powers to the State Government.. ರಾಜ್ಯ ಸರ್ಕಾರಕ್ಕೆ ನೀವು ಅಧಿಕಾರ ಕೊಟ್ಟುಬಿಡಿ. ಅಧಿಕಾರ ರಾಜ್ಯಸರ್ಕಾರಕ್ಕೆ ಕೊಟ್ಟುಬಿಟ್ಟರೆ ಆಗ ಅವರವರ ಸ್ಟೇಟ್‌ನಲ್ಲಿ ಅವರು ಪಾಸ್ ಮಾಡಿಕೊಳ್ಳುತ್ತಾರೆ. ಇವತ್ತು ಈ ಬಿಲ್ ತಂದಿದ್ದೀರಿ. ಇದು ಪಾಸ್ ಆದಮೇಲೆ ಏನು ಮಾಡುತ್ತೀರಿ? what are you going to do with this because this is beyond 50% of the order of the Supreme Court. ಸರಿಯಾಗಿ ನಾವು ಅರ್ಥಮಾಡಿಕೊಳ್ಳಬೇಕು. ನೀವು ಹೇಳುವುದು

ಎಪ್ಪತ್ತೂರೋ,ಎಪ್ಪತ್ತನಾಲ್ಕೋ, ಎಂಭತ್ತೋ. ಪಾಸ್ ಆಗುವ ಹೊತ್ತಿಗೆ ಎಷ್ಟು ಪರ್ಸೆಂಟೇಜ್ ಎಂಬುದು ನಿಮಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದೇನೇ ಇರಲಿ, anyway this is beyond 50%. 1986ರ ಆಡರ್ ಪ್ರಕಾರ ತಮಗೆಲ್ಲಾ ಗೊತ್ತಿರುವ ಹಾಗೆ, 69 ಪರ್ಸೆಂಟ್ ಈಗಾಗಲೇ ಕರ್ನಾಟಕ ರಾಜ್ಯದಲ್ಲಿದೆ. ನಾನು ಮುಖ್ಯಮಂತ್ರಿಯಾಗಿದಂಥ ಕಾಲದಲ್ಲಿಯೂ ಕೂಡ 69 ಪರ್ಸೆಂಟ್ ಇತ್ತು. we cannot go less than 69%, ಕಡಿಮೆ ಹೋಗುವುದಕ್ಕೆ ಬರುವುದಿಲ್ಲ. ಏನೋ ನೀವು ಬಿಲ್ ತಂದಿರಿ. ಇದು 69 ಪರ್ಸೆಂಟ್‌ಗಿಂತ ಹೆಚ್ಚಿಗೆ ಇದ್ದರೆ ಮಾತ್ರ ನೀವು ಬಿಲ್ ತರುವ ಅವಶ್ಯಕತೆ ಇಲ್ಲಿದೆ. ಆಮೇಲೆ ಇನ್ನೊಂದು ಏನಿದೆ ಎಂದರೆ, 50 ಪರ್ಸೆಂಟ್‌ಗೆ ಸುಪ್ರೀಂ ಕೋರ್ಟಿನವರು ರಿಸ್ಟ್ರಿಕ್ಷನ್ ಇಟ್ಟಿರುವುದರಿಂದ we should somehow overcome of this, ಅದಕ್ಕಾಗಿ ಈ ಬಿಲ್ ಪಾಸ್ ಮಾಡಿ ರಾಜ್ಯಾಂಗದ 9ನೇ ಷೆಡ್ಯೂಲ್‌ಗೆ ತಿದ್ದುಪಡಿ ತರಬೇಕು ಎಂಬ ಉದ್ದೇಶ ಇಟ್ಟು, by bringing this Legislation and include it under IXth schedule of the Constitution there by you are keeping the Act passed by us out of the judicial review of any of the courts of the country including Apex Courtie., the Supreme Court.. ಈ ವಿಚಾರ ಮೊದಲೇ ನಿಮಗೆ ಏತಕ್ಕೆ ಹೊಳೆಯಲಿಲ್ಲ ಎನ್ನತಕ್ಕ ಮಾತನ್ನು ನಾನು ಕೇಳುತ್ತಿದ್ದೇನೆ. ನಾನು ಹೇಳುತ್ತಿದ್ದೇನೆ, ಇವತ್ತು ಏನು ಮಾನ್ಯ ಸದಸ್ಯರು ಎಲ್ಲ ಪಕ್ಷದವರೂ ಇಲ್ಲಿ ಕುಳಿತುಕೊಂಡಿದ್ದೇವೆ, ಬಿಡಿ, ಬಾಯ್‌ಕಾಟ್ ಮಾಡಿರುವವರು ಏನೇ ಇರಲಿ, ನಾವು ಇಲ್ಲಿ ಕುಳಿತುಕೊಂಡಿದ್ದೇವೆ. On one commitment we thought of attending the proceedings of this August House. ನಾವು ವಿಚಾರ ಮಾಡೋಣ. I thought it would be better of I bring this to the notice of the Hon'ble Members of this House, ಮುಂದಿನ ಹೆಜ್ಜೆ ನಾವು ಏನು ಇಡಬೇಕು ಎನ್ನತಕ್ಕ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರೆ ತಮ್ಮ ಅನುಮತಿಯನ್ನು ಕೇಳುತ್ತೇನೆ. ಅದಕ್ಕಾಗಿ ಮಾತನಾಡುವುದಕ್ಕೆ ನಿಂತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಒಂದು ವಿಷಯವನ್ನು ತಿಳಿದು ಕೊಳ್ಳಬೇಕು. ತಮಿಳುನಾಡು ಸರ್ಕಾರ ಪಾಸ್ ಮಾಡಿದಮೇಲೆ including IXth Schedule Constitution amendment was brought in,ಪಾರ್ಲಿಮೆಂಟ್‌ನಲ್ಲಿ ಇದು ಪಾಸ್ ಆಗಬೇಕು. ನಾನು ಕೇಳುತ್ತಿದ್ದೇನೆ. ಇವತ್ತು ಅಥವಾ ನಾಳೆ ಪಾಸ್ ಮಾಡುತ್ತೀರಿ ಎಂದು ಇಟ್ಟುಕೊಳ್ಳಿ. ಮಾನ್ಯ ಸದಸ್ಯರು ಇದನ್ನು ಬಹಳ ಸೀರಿಯಸ್ಸಾಗಿ ತಿಳಿದುಕೊಳ್ಳಬೇಕು. ಪಕ್ಷಾತೀತವಾಗಿ ಇದನ್ನು ತಿಳಿದುಕೊಳ್ಳಬೇಕು. ಅವರು ಏನು ಹೇಳುತ್ತಿದ್ದಾರೆ ಎಂದರೆ, ಮಾನ್ಯ ಸಭಾನಾಯಕರು, ಮುಖ್ಯಮಂತ್ರಿಗಳು ಪಕ್ಷಾತೀತವಾಗಿ ನೀವೆಲ್ಲಾ ಬೆಂಬಲ ಕೊಡಬೇಕೆಂದು ಹೇಳಿದ್ದಾರೆ. suppose we extend our support, ನಾವು ಬೆಂಬಲ ಕೊಟ್ಟೆವು ಎಂದು ಇಟ್ಟುಕೊಳ್ಳೋಣ. ನಾವು ನಿಮಗೆ ಸಂಪೂರ್ಣವಾಗಿ ಬೆಂಬಲ ಕೊಟ್ಟಮೇಲೆ ಈ ಬಿಲ್ ಪಾಸ್ ಆದಮೇಲೆ ಸ್ವಾಮಿ ನೀವು ಏನು ಮಾಡುತ್ತೀರಿ? ಈ ಬಿಲ್ ಮೇಲ್ಮನೆಗೆ ಅಂದರೆ ವಿಧಾನಪರಿಷತ್ತಿಗೆ ಹೋಗುತ್ತದೆ. ಅಲ್ಲಿ ಚರ್ಚೆಯಾಗಿ ಪಾಸ್ ಮಾಡುತ್ತೇವೆ. ಆಮೇಲೆ ಏನು

ಮಾಡುತ್ತೀರಿ? still you cannot have this because this is going against the direction of the Supreme Court, ಅದಕ್ಕೆ ಏನು ಮಾಡಬೇಕು. we have to include it in IXth Schedule of the Constitution for which we have to seek an amendment to the Constitution. ಇವತ್ತು ರಾಷ್ಟ್ರದ ರಾಜ್ಯಾಂಗಕ್ಕೆ ಒಂದು ತಿದ್ದುಪಡಿ ತರಬೇಕಾಗುತ್ತದೆ. ಇದೇ 9ನೇ ಷೆಡ್ಯೂಲ್‌ನಲ್ಲಿ ಇರತಕ್ಕದ್ದು ಸ್ವಾಮಿ. ಇದು ಪಾಸ್ ಆದ ಮೇಲೆ ನೀವು ಏನು ಮಾಡುತ್ತೀರಿ? ರಾಜ್ಯಾಂಗದ ಒಂದು ತಿದ್ದುಪಡಿಗೋಸ್ಕರ ಪ್ರಧಾನಮಂತ್ರಿಯವರ ಹತ್ತಿರ ನೀವು ಹೋಗುತ್ತೀರಿ. ಆಲ್‌ರೈಟ್, ಆಲ್ ಪಾರ್ಟಿ ಡೆಲಿಗೇಷನ್ ನೀವು ತೆಗೆದುಕೊಂಡು ಹೋಗಬಹುದು ಎಂಬ ತೀರ್ಮಾನ ಮಾಡಬಹುದು, ತಮಿಳುನಾಡು ಸರ್ಕಾರ ಮಾಡಿದಹಾಗೆ ಎಂದು ಇಟ್ಟುಕೊಳ್ಳೋಣ. ಆರ್ಗ್ಯುಮೆಂಟ್ ದೃಷ್ಟಿಯಿಂದ, ಹೈಪೊತೆಟಿಕಲ್ಲಾಗಿ ನಾನು ಹೇಳುತ್ತಿದ್ದೇನೆ ಈ ರೀತಿ ತೆಗೆದುಕೊಂಡು ಹೋದಿರಿ ಎಂದು ಇಟ್ಟುಕೊಳ್ಳೋಣ. ನಾನು ಕೇಳುತ್ತಿದ್ದೇನೆ. now in the State, elections are round the corner,ತಮಗೆಲ್ಲಾ ಗೊತ್ತಿರುವ ಹಾಗೆ, ಇವತ್ತೋ ನಾಳೆಯೋ ಚುನಾವಣಾ ಆಯೋಗದಿಂದ ತಾರೀಖು ಪ್ರಕಟವಾಗತಕ್ಕ ಸಂದರ್ಭ ಇದೆ. ಚುನಾವಣೆ ನವೆಂಬರ್ ಕೊನೆಯಲ್ಲೋ ಡಿಸೆಂಬರ್ ಮೊದಲನೆಯ ವಾರದಲ್ಲೋ ಯಾವಾಗಲಾದರೂ ಇಡುತ್ತಾರೆ. ಮತ್ತೊಂದು ಸಾರಿ ಕರೆಯತಕ್ಕದ್ದು... ನಾನು ತಿಳಿದುಕೊಂಡಿದ್ದೆ. ಮೊನ್ನೆ ಸದನ ನಡೆದು ನಾವು ಅರ್ಜೆಂಟಾಗಿ ಹೋದಾಗ ಅದೇ ಕೊನೆಯ ದಿವಸ ಎಂಬ ಭಾವನೆ ಇಟ್ಟುಕೊಂಡಿದ್ದೆ. We have to summon the House to pass this bill....

ಕರೆದಮೇಲೆ ಮತ್ತೊಂದು ಸಾರಿ ಕರೆಯತಕ್ಕ ಪ್ರಮೇಯ ಬರುವುದಿಲ್ಲ. ಈ ಬಿಲ್ ಪಾಸ್ ಮಾಡುತ್ತೀರಿ. ಈ ಬಿಲ್ ಎರಡೂ ಮನೆಗಳಲ್ಲಿ ಪಾಸಾಗುತ್ತದೆ. ಆದಮೇಲೆ ಇದನ್ನು ತೆಗೆದುಕೊಂಡು ನೀವು ದೆಹಲಿಗೆ ಹೋಗುತ್ತೀರಿ. ಏನು ಮಾಡುತ್ತೀರಿ? ಯಾವಾಗ ಸ್ವಾಮಿ ಇದು ಪಾಸ್ ಆಗುವುದು? ಒಂದೇ ಒಂದು ಹೇಳಬಹುದು. ನಾನು ಮುಖ್ಯಮಂತ್ರಿ ಇದ್ದಾಗ ಮಾಡಿದೆ ಎಂದು ವೀರಪ್ಪಮೊಯಿಲಿಯವರು ತಮ್ಮ ಭುಜ ತಾವು ತಟ್ಟಿಕೊಳ್ಳಬಹುದು. ಅದು ಬಿಟ್ಟರೆ ನನಗೆ ಏನೂ ಕಾಣಿಸುತ್ತಿಲ್ಲ. ದಯವಿಟ್ಟು ವಿಚಾರ ಮಾಡಿ. ನಾನು ಮುಖ್ಯಮಂತ್ರಿ ಇದ್ದಾಗ ನಾನು ಪಾಸ್ ಮಾಡಿದೆ, ಎಪ್ಪತ್ತೋ ಎಪ್ಪತ್ತಾರೋ ಎಂಭತ್ನಾಲ್ಕೋ ಎಂಭತ್ತೋ ಪರ್ಸೆಂಟ್ ರಿಸರ್ವೇಷನ್ ಬ್ಯಾಕ್‌ವರ್ಡ್‌ಕ್ಲಾಸ್‌ಗೆ ನಾನು ಕೊಟ್ಟೆ ಎಂಬ ಮಾತನ್ನು ಮುಂದೆ ಬರತಕ್ಕ ಚುನಾವಣೆ ಕಾಲದಲ್ಲಿ ಭಾಷಣ ಮಾಡುವುದಕ್ಕೆ ನೀವು ಗ್ರಾಂಡ್ ಮಾಡುತ್ತೀರೇ ವಿನಹ ಮುಂದಿನ ಚುನಾವಣೆಯೊಳಗೆ ಇದನ್ನು ಜಾರಿಗೆ ಕೊಡುವುದಕ್ಕೆ ನಿಮ್ಮ ಹಣೆಬರಹಕ್ಕೆ ಆಗುವುದಿಲ್ಲ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ, ಪಾರ್ಲಿಮೆಂಟ್ ಸೆಷನ್ ಮೊನ್ನೆಮೊನ್ನೆ ಮುಗಿದಿದೆ. Parliament Session is not going to be convened or call for a Special Session. Then how are you going to get the Bill passed by the Parliament.

ಸ್ಪೆಷಲ್ ಸೆಷನ್ ಕರೆಯತಕ್ಕ ವಿಚಾರ ನೀವಾದರೂ ಹೋಗಿ ಮಾಡಿಸುತ್ತೀರಾ? ನೀವು ಹೇಳಿದ ತಕ್ಷಣ ಅವರು ಪಾರ್ಲಿಮೆಂಟ್ ಸೆಷನ್ ಕರೆಯುತ್ತಾರೋ ಸಂವಿಧಾನ ತಿದ್ದುಪಡಿ ಮಾಡುವುದಕ್ಕೆ ಅರ್ಜೆಂಟಾಗಿ ನಾವು ಏನು ಇಲ್ಲಿ ಸುಗ್ರೀವಾಜ್ಞೆ ತರುತ್ತೇವೆ ಆರೀತಿ ಸುಗ್ರೀವಾಜ್ಞೆ ತರುವುದಕ್ಕೆ ಸಾಧ್ಯವಿದೆಯೆ? ಸ್ವಲ್ಪ ದಯವಿಟ್ಟು ವಿಚಾರ ಮಾಡಿ.ಆ ಪ್ರಮೇಯ ಏನೇನೂ ಇಲ್ಲ. ಇವತ್ತು ಇದನ್ನು ಪಾಸು ಮಾಡಿದರೂ ನಿಮ್ಮ ಹಣೆಯ ಬರಹಕ್ಕೂ ಕೂಡ ಇದನ್ನು ಜಾರಿಗೆ ಕೊಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಏನು ಮಾಡಬೇಕು, the best judgement should be ಚುನಾವಣೆ ಹತ್ತಿರವಿರುವುದರಿಂದ you must leave all these things to the people because you have created a mess ಸಂಪೂರ್ಣವಾಗಿ ಹಾಳು ಮಾಡಿ ಇಟ್ಟಿದ್ದೀರಿ. ಆ ಮಕ್ಕಳು ಈ ಶೈಕ್ಷಣಿಕ ವರ್ಷದಲ್ಲಿ ಹಾಳಾಗಿ ಹೋದರು. ಅವರನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಆ ಮಕ್ಕಳ ತಂದೆತಾಯಿಗಳ ಗೋಳು ಏನಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. I can only pity for those youngsters. I stand by those boys and girls. We will stand by them. ನೀವು ಮಾಡತಕ್ಕ ರಾಜಕೀಯದಿಂದ ಏನು ಪೆಟ್ಟಾಗಿದೆ ಅದಕ್ಕೆ ಸಂಪೂರ್ಣವಾದ ಹೊಣೆಗಾರಿಕೆ ನಿಮ್ಮ ಮೇಲಿದೆ, ಇದು ಒಂದು. ಎರಡನೆಯದು, ಈಗ ಚುನಾವಣೆ ಹತ್ತಿರವಿರುವುದರಿಂದ ನೀವು ಈ ಆರ್ಡರನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ. ಪಾರ್ಲಿಮೆಂಟ್ ಅಧಿವೇಶನ ಈಗ ನಡೆಯುತ್ತಿಲ್ಲ. ನೀವು ಇಲ್ಲಿ ಇದನ್ನು ಪಾಸ್ ಮಾಡಿದರೂ ಕೂಡ ಇದನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಸಭಾನಾಯಕರೇ, ನಾನು ನಿಮಗೆ ಹೇಳತಕ್ಕ ಕಿವಿಮಾತು; you leave all these things to the next Government which is going to be constituted after the ensuing elections. ಏನಾಗುತ್ತದೆ ಅವರಿಗೆ ಬಿಡಿ. ಮುಂದೆ ಯಾರು ಬರುತ್ತಾರೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಯಾರು ಮುಖ್ಯಮಂತ್ರಿಯಾಗುತ್ತಾರೆ, ಯಾರು ಸರ್ಕಾರ ರಚನೆ ಮಾಡುತ್ತಾರೆ ಅವರಿಗೆ ಇದನ್ನು ಬಿಡಿ. ಇದು ಪ್ರಜಾಪ್ರಭುತ್ವದ ರೀತಿನೀತಿ ಮತ್ತು ಲಕ್ಷಣ. ಅದನ್ನು ಬಿಟ್ಟು ಹರೆಬಿರಿಯಲ್ಲಿ ಅಸೆಂಬ್ಲಿ ಕರೆಯುವುದು ಹರೆಬಿರಿಯಲ್ಲಿ ವ್ಯಾಖ್ಯಾನ ಮಾಡುವುದು, ಮನಸ್ಸಿಗೆ ಬಂದಹಾಗೆ ನೀವೆಲ್ಲ ಮಾತುಗಳನ್ನು ಆಡುವುದು, ಮನಸ್ಸಿಗೆ ಬಂದ ಹಾಗೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಳ್ಳುವುದು, ಮನಸ್ಸಿಗೆ ಬಂದ ಹಾಗೆ ವಿತ್‌ಡ್ರಾ ಮಾಡುವುದು, ಸುಪ್ರೀಂಕೋರ್ಟ್‌ಗೆ ಮಾತುಕೊಡುವುದು, ಇಲ್ಲಿ ಒಂದು ಮಾಡುವುದು, ಮತ್ತೆ ಅಲ್ಲಿ ಹೋಗಿ ವಿತ್‌ಡ್ರಾ ಮಾಡುವುದು. ನಾನು ಹೇಳುತ್ತೇನೆ, ನೀವು ಏಕೆ ಹೀಗೆ ಮಾಡಿದ್ದೀರಿ ಅಂದರೆ ಹಿಂದಿನ ಕಾನೂನು ಮುಂದಕ್ಕೆ ಹಾಕಿರತಕ್ಕದ್ದು ಮುಂದೆ ಬರತಕ್ಕ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿ ಚುನಾವಣೆಯನ್ನು ಏನಾದರೂ ಮಾಡಿ ಮುಂದಕ್ಕೆ ಹಾಕಬೇಕೆಂದು ಹೇಳಿ ಈ ರಿಸರ್ವೇಶನ್ ವಿಚಾರ ತಂದು ದುರುಪಯೋಗ ಪಡಿಸಿದಿರಿ. ಇವೆಲ್ಲ ತಮಗೆ ಗೊತ್ತಿರತಕ್ಕ ವಿಚಾರ ಪತ್ರಿಕೆಯವರು ಬರೆದಿದ್ದಾರೆ. ಜನ ಹೇಳಿದ್ದಾರೆ, ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಿಮ್ಮ ಪಕ್ಷದ ಅನೇಕ ಮಿತ್ರರು ನನ್ನ ಹತ್ತಿರ ಹೇಳಿದ್ದಾರೆ. ಅವರು ಹೇಳುವುದು ಬೇಡ, ನೀವು ಯಾರೂ ಹೇಳುವುದು ಬೇಕಾಗಿಲ್ಲ. ನನಗೆ ವಿಚಾರ ಗೊತ್ತಿದೆ. I can read your mind even . if you are

10 miles away from me ಇವತ್ತು ಈ ಮಟ್ಟಕ್ಕೆ, ತೆಗೆದುಕೊಂಡು ಬಂದು ಪುನಃ ಸದನವನ್ನು ಕರೆದು ಸದನದ ವೇಳೆ, ಸಾರ್ವಜನಿಕರ ಹಣವನ್ನು ಸಂಪೂರ್ಣವಾಗಿ ನಷ್ಟ ಮಾಡಿ, ಹಾಳು ಮಾಡತಕ್ಕ ಅಗೌರವಯುತ ನಡವಳಿಕೆಯನ್ನು ಮಾಡಿ, ಪ್ರಜಾಪ್ರಭುತ್ವದ ಮುಖಕ್ಕೆ ಮಸಿ ಬಳಿಯತಕ್ಕ ಕೆಲಸದಲ್ಲಿ ತೊಡಗಿ ಪುನಃ ಈ ಬಿಲ್ಲನ್ನು ತಂದು ಇವತ್ತು ಜನತೆಯ ಆಕ್ರೋಶಕ್ಕೆ, ಜನತೆಯ ನಿಧನೆಗೆ ಗುರಿ ಮಾಡಿದ್ದೀರಿ. ಆಡಳಿತದಲ್ಲಿ ನಿಮಗೆ ಇನ್ನೂ ಅನುಭವ ಸಾಲದು, ಆಡಳಿತದಲ್ಲಿ ಅಸಮತೋಲನೆ ಹೆಚ್ಚಾಗಿದೆ. ಇವತ್ತು ಬೆಳಗ್ಗೆ ಇದ್ದದ್ದು ಮಧ್ಯಾಹ್ನ ಇಲ್ಲ, ಮಧ್ಯಾಹ್ನ ಇದ್ದದ್ದು ಸಾಯಂಕಾಲ ಇಲ್ಲ, ಸಾಯಂಕಾಲ ಇದ್ದದ್ದು ಬೆಳಗ್ಗೆ ಇಲ್ಲ. ಬೆಳಗ್ಗೆ ಏನು ಹೇಳಿದ್ದೀರಿ ಏನ್ನುವುದು ನಿಮಗೆ ಗೊತ್ತೇ ಇಲ್ಲ. ಇವತ್ತು ಎಷ್ಟೆಷ್ಟು ತೀರ್ಮಾನ ಮಾಡಿದ್ದೀರಿ ಯಾವ್ಯಾವುದು ತೀರ್ಮಾನ ಮಾಡಿದ್ದೀರಿ ಎಂದು ಹೇಳಿ ನೋಡೋಣಾ. ಏಕೆಂದರೆ, ನಿಮ್ಮ ಸುಳ್ಳಿನ ಸರಮಾಲೆಯಲ್ಲಿ ಸತ್ಯವನ್ನು ಹುಡುಕುವುದು ನಿಮಗೆ ಕಷ್ಟವಾಗಿದೆ. ಇದು ಕರ್ನಾಟಕ ರಾಜ್ಯದಲ್ಲಿ ಮನೆ ಮನೆಯಲ್ಲಿ ಗೊತ್ತಿರತಕ್ಕ ಸಂದರ್ಭ. He has missed the bus ತಮಿಳುನಾಡು ಸರ್ಕಾರದವರು ಬಹಳ ಬುದ್ದಿವಂತಿಕೆಯಿಂದ ಟೈಮ್‌ಲಿ ಆ್ಯಕ್ಷನ್ ತೆಗೆದುಕೊಂಡರು. But where as our State Government, here, failed under the leadership of our Chief Minister Mr. Moily. ನಾನು ಇವತ್ತು ಅನಿವಾರ್ಯವಾಗಿ ತಮ್ಮ ಗಮನಕ್ಕೆ ಈ ಮಾತನ್ನು ಅಧ್ಯಕ್ಷರ ಮುಖಾಂತರ ತರಬೇಕಾಗಿದೆ. ಮತ್ತೊಂದು ವಿಚಾರ ಏನೆಂದರೆ, ಇವತ್ತು ನೀವು ಎಷ್ಟೇ ಮಾಡಿದರೂ ಕೂಡ ನಿಮ್ಮ ಸ್ಟೆಪ್ ಇದೆಯಲ್ಲ it is highly non- justifiable. ಆ ಸ್ಟೆಪ್ ಒಳ್ಳೆಯದಲ್ಲ ವೆನ್ನತಕ್ಕ ಮಾತನ್ನು ಈ ಸಂದರ್ಭಧಲ್ಲಿ ತಮ್ಮ ಗಮನಕ್ಕೆ ತಂದಿದ್ದೇವೆ. ಮುಂದೆ ಬರತಕ್ಕ ಚುನಾವಣೆಯ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನೀವು ಪೂರ್ತಿಯಾಗಿ in sincere, dishonest politically and electorallly motivated. ಚುನಾವಣೆಯ ದೃಷ್ಟಿಯಿಂದಲೇ ಮೋಟಿವೇಷನ್ ಇಟ್ಟುಕೊಂಡು ಮಾಡುತ್ತಿದ್ದೀರಿ ಎನ್ನುವುದು ಸುಸ್ಪಷ್ಟ ಇದೆ. ಮತ್ತೊಂದು ವಿಚಾರದಲ್ಲಿ ನೀವು ಒಂದು ಹೇಳಬೇಕು. ನೀವು ಈ ರೀತಿ ಮಾಡಿ, ನಾನು ಸ್ಪೆಷಲ್ ಅಧಿವೇಶನ ಕರೆಯುತ್ತೇನೆಂದು ಕೂಡಲೇ ವಿಧೇಯಕವನ್ನು ಲೋಕಸಭೆಯಲ್ಲಿ ಪಾಸ್ ಮಾಡುತ್ತೇವೆ ಎನ್ನತಕ್ಕ ಮಾತನ್ನು ಪ್ರಧಾನಮಂತ್ರಿಯವರ ಬಾಯಿಂದ ಆಡಿಸಿ ಆಗ ಬೇಕಾದರೆ ನಿಮಗೆ ಸಂಪೂರ್ಣವಾಗಿ ಬೆಂಬಲ ಕೊಡತಕ್ಕ ವಿಚಾರದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಬೆಂಬಲ ಕೊಡೋಣವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.69 ಪರ್ಸೆಂಟ್ ಮೀಸಲಾತಿ ಸರಿಯಾಗಿ ಹೋಗುತ್ತಿತ್ತು. ಅದು ಚೆನ್ನಾಗಿಯೇ ಇತ್ತು. ಇವರ ಹಲವಾರು ತಪ್ಪುತಪ್ಪುತೀರ್ಮಾನಗಳಿಂದ ಅದನ್ನು ಸಂಪೂರ್ಣವಾಗಿ ಮುಂದಕ್ಕೆ ಹಾಕುವುದಕ್ಕೋಸ್ಕರ ಎಲ್ಲಾ ರೀತಿಯಲ್ಲಿಯೂ ತಪ್ಪು ಹೆಜ್ಜೆಗಳನ್ನು ಇಟ್ಟು ಇಟ್ಟು ಇದು ಇವತ್ತು ಹೋಯಿತು. ಈ ಸಂದರ್ಭಧಲ್ಲಿ ನಿಮ್ಮ ನಿಲುವು ಏನಿರಬೇಕು ಎನ್ನತಕ್ಕ ವಿಚಾರ. ಇವತ್ತು ಬಹುಮತ ಇದೆಯೆನ್ನುವ ದೃಷ್ಟಿಯಿಂದ ಪಾಸ್ ಮಾಡಬಹುದು. ಇದನ್ನು ನೀವು ಜಾರಿಗೆ ತರುವುದಕ್ಕೆ ಬರುವುದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪರವಾಗಿ ನನ್ನ ಮಿತ್ರರ ಪರವಾಗಿ ಸದನದಲ್ಲಿ ಸ್ಪಷ್ಟವಾಗಿರತಕ್ಕ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ,

ಮೀಸಲಾತಿ ಪ್ರಮಾಣ. ನಾನು ಈಗಾಗಲೇ ಪತ್ರಿಕೆಗಳ ಮುಖಾಂತರ ಅನೇಕ ಸಾರಿ ಹೇಳಿದ್ದೇವೆ. That is, 50% as prescribed by the Supreme Court; I don't agree with that. There are 2 courses open to any State Government . One is,to take up the matter before the Division Bench of the Supreme Court for revision. ಅಲ್ಲಿ ರಿವಿಷನ್ ತೆಗೆದುಕೊಂಡು ಹೋಗತಕ್ಕದ್ದು. ಆ ಪ್ರಯತ್ನ ಏನೂ ಮಾಡಿದಹಾಗೆ ಆಗಲಿಲ್ಲ. ಎರಡನೆಯದು, ಇದಕ್ಕೆ ಏನಾದರೂ ಈ ರೀತಿ ತರಬೇಕಾದರೆ you are too late and you have missed the bus now. ಬಹಳ ಲೇಟಾಯಿತು, ನಿಮ್ಮಿಂದ ಮಾಡುವುದಕ್ಕಾಗುವುದಿಲ್ಲ. At best you can make use or this August House Proceedings to deliver big speeches before the electorate in the coming elections. Since the entire thing is involved in the shape of a political manouvering, ಇದರಲ್ಲಿ ಪೂರ್ತಿ ಈ ಹಿನ್ನಲೆ ಇರುವುದರಿಂದ ನಾವು ಇದನ್ನು ವಿರೋಧ ಮಾಡುತ್ತೇವೆಂದು ನಾನು ಸ್ಪಷ್ಟಪಡಿಸುತ್ತೇನೆ. ಈಗಿರತಕ್ಕದ್ದು 69 ಪರ್ಸೆಂಟ್, ಅದರ ಮೇಲೆ 73 ಪರ್ಸೆಂಟ್ 74 ಪರ್ಸೆಂಟ್, 75 ಪರ್ಸೆಂಟ್ ಮತ್ತು 80 ಪರ್ಸೆಂಟ್ ಪರ್ಸೆಂಟೇಜ್ ಎಷ್ಟಿರಬೇಕೆಂದು ಪ್ರಮಾಣದ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ, ಅದರ ಬಗ್ಗೆ ಚರ್ಚೆ ಇನ್ನು ಮಾಡಿಲ್ಲ. 69 ಪರ್ಸೆಂಟ್‌ಗಿಂತ ಜಾಸ್ತಿ ಪ್ರಮಾಣ ಇಡುವುದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಎಷ್ಟು ಪ್ರಮಾಣ ಇರಬೇಕು ಎಂಬ ಬಗ್ಗೆ ನಾನು ಈಗಾಗಲೇ ಪತ್ರಿಕಾಗೋಷ್ಠಿಯಲ್ಲಿ ಹೇಳಿದಹಾಗೆ, ಅನಂತರ ಹೇಳತಕ್ಕ ವಿಚಾರ ಅದು. ಹಿಂದುಳಿದ ವರ್ಗದವರ ಬಗ್ಗೆ ಈ ಮಾತನ್ನು ಆಡಬೇಕಾದರೆ including those subcastes, poor people who are there in Lingayat and Vokkaliga communities,

ದೇವರಾಜ ಅರಸ್‌ರವರ ಕಾಲದಿಂದಲೂ ಕೂಡ ಏನಿವೆ ಅವುಗಳನ್ನು ಕವರ್ ಮಾಡಿಕೊಂಡು ಈ ಮಾತನ್ನು ಆಡುತ್ತಿದ್ದೇನೆ. ಅವರಿಗೂ ಕೂಡ ಸೌಲಭ್ಯವನ್ನು ಸ್ಪಷ್ಟವಾಗಿ ವಿಸ್ತರಣೆ ಮಾಡಬೇಕು. ಈ ವಿಚಾರವನ್ನು ನಾನು ಮುಖ್ಯಮಂತ್ರಿಯಾಗಿ ನಡೆಸಿದ್ದೇನೆ. ಹಿಂದೆ ಮುಖ್ಯಮಂತ್ರಿಗಳಾಗಿದ್ದವರು ನಡೆಸಿಕೊಂಡು ಬಂದಿದ್ದಾರೆ. ದೇವರಾಜ ಅರಸ್‌ರವರ ಕಾಲದಲ್ಲಿ ಮೀಸಲಾತಿಯನ್ನು ಜಾರಿಗೆ ತರಬೇಕಾದರೆ, ಸರ್ವಾನುಮತದ ನಿರ್ಣಯ ಮಾಡಬೇಕಾದರೆ ಒಕ್ಕಲಿಗ ಬಂಧುಗಳು ಸಚಿವರಾಗಿದ್ದವರು ಲಿಂಗಾಯಿತ ಬಂಧುಗಳು ಸಚಿವರಾಗಿದ್ದರು ಅವರೆಲ್ಲರ ಒಪ್ಪಿಗೆ ಪಡೆದು ಸರ್ವಾನುಮತದ ತೀರ್ಮಾನ ಮಾಡಿದ ಮೇಲೆಯೇ ಅದು ಜಾರಿಗೆ ಬಂದಿದ್ದು. ಕರ್ನಾಟಕ ರಾಜ್ಯದಲ್ಲಿ That is the ಸ್ಪೆಷಲ್ ಕ್ಯಾಟಗರಿ ಅವರೆಲ್ಲ ಮಾಡಿಟ್ಟಿದ್ದರು ಅದಕ್ಕೋಸ್ಕರ ಆ ವಿಚಾರಧಾರೆಗೆ ಬಂದೆ. 69 ಪರ್ಸೆಂಟ್ ಏನಿದೆ ನಾನು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅದು ಕಡಿಮೆ ಹೋಗುವ ಹಾಗೆ ಇಲ್ಲ. ಅದರ ಮೇಲೆ ಎಷ್ಟು ಕೊಡಬೇಕೆನ್ನತಕ್ಕ ಬಗ್ಗೆ ಚರ್ಚೆಯನ್ನು ಮುಂದೆ ಮಾಡಬೇಕು. ಆದರೆ ರಾಜಕೀಯವಾಗಿ ನೀವು ಮಾಡುತ್ತಿರುವುದರಿಂದ ಅದಕ್ಕೆ ನಾವು ಮುಂದೆ ಹೇಳುತ್ತೇವೆ. ಚುನಾವಣೆ ಬಂದಮೇಲೆ ಏನು ಮಾಡಬೇಕೆಂದು ನನಗೆ

ಗೊತ್ತಿದೆ. ಈ ಬಿಲ್‌ನಿಂದ ನೀವು ರಾಜಕಾರಣ ಮಾಡಿ ಏನೇನೂ ಜಾರಿಗೆ ಕೊಡುವುದಕ್ಕಾಗುವುದಿಲ್ಲವೆಂದು ನನಗೆ ಗೊತ್ತಿದೆ. ಮುಂದಿನ ಚುನಾವಣೆಯಲ್ಲಿ ಜನ ತೀರ್ಮಾನ ಮಾಡತಕ್ಕ ಸಂದರ್ಭ. ಆ ತೀರ್ಮಾನವನ್ನು ಜನರು ಕೊಟ್ಟ ಮೇಲೆ ಯಾರು ಸರ್ಕಾರವನ್ನು ರಚನೆ ಮಾಡುತ್ತಾರೆ ಅವರು ಬಂದು ತೀರ್ಮಾನ ಮಾಡಲಿ. ಅವರು ಮತ್ತೊಂದು ಬಿಲ್ ತೆಗೆದುಕೊಂಡು ಬರಲಿ. ನಾನು ಈ ಸದನಕ್ಕೆ ಮತ್ತೊಮ್ಮೆ ಸದಸ್ಯನಾಗಿ ಆರಿಸಿ ಬಂದರೆ ನನ್ನ ಹಕ್ಕನ್ನು ನನ್ನ ವಿಚಾರಧಾರೆಯನ್ನು ನಾನು ಮತ್ತು ನನ್ನ ಮಿತ್ರರು ಇಟ್ಟುಕೊಳ್ಳುತ್ತೇವೆ. ಆದರೆ ಒಂದು ಮಾತು ಈ ಬಿಲ್‌ನಲ್ಲಿನ ಕಂಟೆನ್ಟ್ ಮೀಸಲಾತಿ ಜಾಸ್ತಿ ಮಾಡುವ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ ಎಷ್ಟು ಇಡಬೇಕೆನ್ನುವ ವಿಚಾರದಲ್ಲಿ I differ ಅದನ್ನು ನಾವು ಚರ್ಚೆ ಮಾಡಿ ಅನಂತರ ಹೇಳುತ್ತೇವೆ. ನಿಮ್ಮ ಸ್ಟೆಪ್ ಪೂರ್ತಿ manouvering politics politically motivated ಇರುವುದರಿಂದ ನಿಮ್ಮ ರಾಜಕಾರಣವನ್ನು ವಿರೋಧ ಮಾಡುತ್ತೇವೆ. ಹಿಂದುಳಿದವರಿಗೆ ಜಾಸ್ತಿ ಇಡತಕ್ಕ ವಿಚಾರಕ್ಕೆ ನಾವು ವಿರೋಧಿಗಳಲ್ಲ. ನೀವು ಮಾಡತಕ್ಕ ಕೆಲಸಗಳಲ್ಲಿ ನಿಮಗೆ ಸಿನ್ಸಿಯಾರಿಟಿ ಇಲ್ಲ, ಹಾನೆಸ್ಟಿ ಇಲ್ಲ. you are dishonest and insincere and this is politically motivated. ಇಷ್ಟು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿ, ನಾನು ಬಾಯ್‌ಕಾಟ್ ಮಾಡಬಾರದು ಸದನದ ಮೂಲಕ ನಮ್ಮ ಹಕ್ಕನ್ನು ಚಲಾವಣೆ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ನಾನು ಮತ್ತು ನನ್ನ ಮಿತ್ರರು ಇಲ್ಲಿ ಬಂದು ಕುಳಿತುಕೊಂಡಿದ್ದೇವೆ. ನಿಮ್ಮ ರಾಜಕೀಯ ಬುದ್ಧಿಯನ್ನು ನಿಮ್ಮ ವಿಚಾರಧಾರೆಯನ್ನು ಮತ್ತು ಮೆನವರಿಂಗ್‌ನ್ನು ನಾವು ವಿರೋಧಮಾಡುತ್ತೇವೆ, ಹಿಂದುಳಿದ ವರ್ಗದವರಿಗೆ ಜಾಸ್ತಿ ಕೊಡುವುದಕ್ಕೆ ನಾವು ವಿರೋಧಿಗಳಲ್ಲ ಎನ್ನತಕ್ಕ ಮಾತನ್ನು ಇಟ್ಟು ಮುಂದಿನ ಚುನಾವಣೆಯಲ್ಲಿ ಜನರ ಮುಂದೆ ಈ ವಿಚಾರವನ್ನು ಇಡುತ್ತೇವೆ. ಈ ಬಿಲ್ಲನ್ನು ತಂದಾಗ ಏನು ರಾಜಕೀಯ ನಡೆಯಿತು, ಏನು ಚರ್ಚೆ ನಡೆಯಿತು ಎನ್ನುವ ಮಾತನ್ನು ಹೇಳುತ್ತೇವೆ. ನೀವು ರಾಜಕೀಯ ಮಾಡಿದರೆ ನಾವು ಕೂಡ ರಾಜಕೀಯ ಮಾಡುತ್ತೇವೆ. ಕಣ ಸಿದ್ಧವಾಗಿದೆ, ಕಾಲ ಸನ್ನಿಹಿತವಾಗಿದೆ. ಸಂತೋಷ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಾವು ನೀವು ಎಲ್ಲಾ ನಮ್ಮ ನಮ್ಮ ವಿಚಾರಧಾರೆಗಳನ್ನು ಜನತೆಯ ಮುಂದೆ ಇಡೋಣ, ಅವರ ತೀರ್ಪಿಗೆ ತಲೆಬಾಗೋಣವೆಂದು ಇಷ್ಟು ಮಾತ್ರ ಹೇಳುತ್ತೇನೆ.

ಈ ಸಂದರ್ಭದಲ್ಲಿ ಅವರ ರಾಜಕೀಯ ನೀತಿ, Manoeuvre importance ಇದನ್ನೆಲ್ಲಾ ವಿರೋಧ ಮಾಡುತ್ತೇನೆ. ಹಿಂದುಳಿದ ವರ್ಗದ ಪರವಾಗಿ ನಾವಿದ್ದೇವೆ. ಜಾಸ್ತಿ ಪರ್ಸೆಂಟೇಜ್ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ ಎನ್ನತಕ್ಕಂಥ ಮಾತನ್ನು ಪುನಃ ಸ್ಪಷ್ಟಪಡಿಸಿ, ನಾನು ತಮ್ಮ ಅನುಮತಿಯನ್ನು ಪಡೆಯುತ್ತೇನೆ. ಅವರ ರಾಜಕೀಯ ನೀತಿಯನ್ನು ಸಂಪೂರ್ಣವಾಗಿ ವಿರೋಧ ಮಾಡಿ, ನಾನು ಮತ್ತು ನಮ್ಮ ಮಿತ್ರರು ಸಭಾತ್ಯಾಗ ಮಾಡುತ್ತೇವೆ. ತಮಗೆ ವಂದನೆಗಳು.

ಶ್ರೀ ಆರ್ ದಯಾನಂದರಾವ್ :- ಬೆಂಬಲ ಮಾಡಿದಹಾಗೆಯೇ ಇಲ್ಲ, ಸಭಾತ್ಯಾಗ ಎಂದರೆ....

ಶ್ರೀ ಎಸ್. ಬಂಗಾರಪ್ಪ :- ನೀವು ಕುಳಿತುಕೊಳ್ಳಿ, ಹಾಗೆಲ್ಲಾ ಮಾತನಾಡುವುದು ಬೇಡ. Don't take all these things so lightly. Be serious.

Sri R. Dayananda Rao : -We are serious only.

(ಈ ಹಂತದಲ್ಲಿ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು, ಶ್ರೀ ನಜೀರ್ ಅಹಮದ್‌ರವರು, ಶ್ರೀ ಕೆ.ಜೆ.ಜಾರ್ಜ್ ಮತ್ತು ಬಂಗಾರಪ್ಪನವರ ಕೆಲವು ಬೆಂಪಿಬಲಗ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ವೈ.ಕೆ.ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ನಾವು ಇಲ್ಲದಿದ್ದರೂ ನಡೆದುಹೋಗುತ್ತದೆ. ನಾವೆಲ್ಲರೂ ಮೊನ್ನೆ ಈ ಸದನದಿಂದ ಹೋಗುವಾಗ, ಬಹಳ ಜನ ಸ್ನೇಹಿತರು ತಮಾಶೆ ಮಾಡುತ್ತಿದ್ದರು. ಕೆಲವರು ಈ ಸ್ಥಾನಗಳಿಗೆ ಶರಣು ಮಾಡಿಕೊಂಡು ಹೋಗಿದ್ದಾರೆಂದು. ಏಕೆಂದರೆ, ಚುನಾವಣೆಯಾದ ಮೇಲೆ ಮತ್ತೆ ಬರುತ್ತೇವೆಯೋ, ಇಲ್ಲವೋ .......

ಶ್ರೀ ಎಂ.ವೀರಪ್ಪಮೊಯಿಲಿ :- ತಾವು ಇದಕ್ಕೆಲ್ಲಾ ಬದ್ಧರು. ಅವರಿಗೆ ಇದರಲ್ಲಿ ಬದ್ಧತೆ ಇಲ್ಲ. ಏಕೆಂದರೆ, ಅವರು ಯಾವಾಗಲೂ ಕೂಡ ಜವಾಬ್ದಾರಿಯಿಂದ ತಪ್ಪಿಸಿಕೊಂಡೆ ಈ ಪರಿಸ್ಥಿತಿಗೆ ಬಂದಿದ್ದಾರೆ. ಏಕೆಂದರೆ, ಚಿನ್ನಪ್ಪರೆಡ್ಡಿ ವರದಿ ಎಷ್ಟು ವರ್ಷ ಇತ್ತು, ಇವರು ಎರಡು ವರ್ಷಗಳ ಕಾಲ ಆಳಿದರು. ಇವರು ಎಷ್ಟು ಸಚಿವ ಸಂಪುಟದ ಉಪ ಸಮಿತಿ ಮಾಡಿದರು, ಏಕೆ ನಿರ್ಣಯ ತೆಗೆದುಕೊಳ್ಳಲಿಲ್ಲ. ಅದಕ್ಕೆಲ್ಲಾ ಉತ್ತರ ಹೇಳುತ್ತೇನೆ. ಇದೇ ವೆಂಕಟಸ್ವಾಮಿ ವರದಿ ಬಂದಾಗ ಅದನ್ನು ರದ್ದು ಮಾಡಲಿಕ್ಕೆ ಚಳುವಳಿ ಮಾಡಿದವರಲ್ಲಿ ಇವರೂ ಒಬ್ಬರು, ಅದನ್ನು ಮರೆಯಬಾರದು. ಅವರಿಗೆ ಆಯೋಗದ ಶಿಫಾರಸ್ಸುಗಳಲ್ಲಿ ನಂಬಿಕೆ ಇಲ್ಲ, ಹಿಂದುಳಿದ ವರ್ಗಧ ಆಯೋಗದಲ್ಲಿ ನಂಬಿಕೆ ಇಲ್ಲ, ಆ ವರದಿಗಳನ್ನು ಓದುವುದಕ್ಕೆ ಪುರಸೊತ್ತು ಇಲ್ಲ. ಆದ್ದರಿಂದ, ನೀವು ಗಾಬರಿಯಾಗಬೇಡಿ, ಸಭಾತ್ಯಾಗ ಮಾಡಿದ ಅವರನ್ನು ನೀವು ಹಿಂಬಾಲಿಸಿ ಹೋಗಬೇಡಿ. I do not want Mr.Ramaiah to follow our friends.

ಶ್ರೀ ವಾಟಾಳ್ ನಾಗರಾಜ್ :-ನಾವು ಯಾರೂ ಹೇಳಿಯೇ ಇಲ್ಲ. ನೀವು ಈ ಮಾತನ್ನು ಯಾರಿಗೆ ಹೇಳುತ್ತಿದ್ದೀರಿ. ನಾವು ಎದ್ದು, ಸಭಾತ್ಯಾಗ ಮಾಡುತ್ತೇವೆಂದು ಮೊದಲೇ ನಿಮಗೆ ಹೇಳಲಿಲ್ಲ. ನಾವು ಮುಂದೆ ಏನು ಮಾಡುತ್ತೇವೆಯೋ ಆ ಪ್ರಶ್ನೆ ಬೇರೆ. ನೀವು ಮೊದಲೇ ಉತ್ತರ ಕೊಡುತ್ತಿದ್ದೀರೋ ಹೇಗೆ?

(ಉಪಾಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

*ಶ್ರೀ ವೈ. ಕೆ. ರಾಮಯ್ಯ :- ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ರಾಜಕೀಯ ವಿದ್ಯಮಾನಗಳು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದ್ದರೆ, ವೈ.ಕೆ.ರಾಮಯ್ಯನವರು ಕಣ್ಣುಮುಚ್ಚಿಕೊಂಡು, ಯಾರನ್ನೂ ಹಿಂಬಾಲಿಸುವುದಿಲ್ಲವೆಂಬುದು ಅವರಿಗೆ ಗೊತ್ತು. I will not follow blindly anybody ನನ್ನದೇ ಆದಂಥ ನಿಲುವು ಇದೆ, ನನ್ನದೇ ಆದಂಥ ತೀರ್ಮಾನ ತೆಗೆದುಕೊಳ್ಳತಕ್ಕ ಶಕ್ತಿ ಇರುವುದರಿಂದ, ಯಾರನ್ನಾದರೂ ಫಾಲೋ ಮಾಡಿಕೊಂಡು, ಬ್ಲೈಂಡ್ ಆಗಿ ಹೋಗುತ್ತೇನೆ ಎನ್ನುವಂಥ ತಿಳುವಳಿಕೆ ಮಾನ್ಯಮಂತ್ರಿಯವರಿಗೆ ಹೇಗೆ ಬಂತೋ ನನಗೆ ಗೊತ್ತಿಲ್ಲ. ಅದೇನಾದರೂ ಆಗಲಿ, ಮೊಟ್ಟಮೊದಲನೆಯದಾಗಿ, ಒಂದು ವಿಷಯಕ್ಕೆ

ಮಾನ್ಯಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ನಾವೆಲ್ಲರೂ ಮತ್ತೆ ಈ ಸದನಕ್ಕೆ ಬರುತ್ತೇವೆಯೋ ಇಲ್ಲವೋ, ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆಯೋ, ಇಲ್ಲವೋ ಎಂದು ಬಹಳ ಜನ ಈ ಆಸನಗಳಿಗೆ ಶರಣು ಮಾಡಿಕೊಂಡು ಹೋಗಿದ್ದರೆ ಎಂದು ನಮ್ಮ ಸ್ನೇಹಿತರು ಹೊರಗಡೆ ತಮಾಶೆ ಮಾಡುತ್ತಾರೆ. ತಾವು ಮತ್ತೊಮ್ಮೆ ಈ ಸದನವನ್ನು ಕರೆದು, ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಈ ಅವಕಾಶನ್ನು ಕಲ್ಪಿಸಿಕೊಟ್ಟಿರುವುದಕ್ಕೆ ಕಾರಣ, ಈ ವಿಶೇಷ ಅಧಿವೇಶನ. ಈ ವಿಶೇಷ ಅಧಿವೇಶನ ಕರೆಯುವುದಕ್ಕೆ ಇದ್ದಂಥ ವಿಶೇಷ ಪರಿಸ್ಥಿತಿ ಏನು, ವಿಶೇಷ ಸಂದರ್ಭ ಏನು? What were the compulsions? What was the emergency? ಇದು ಸಾಮಾನ್ಯ ಸಭೆ ಅಲ್ಲ, ವಿಶೇಷಸಭೆ. ವಿಶೇಷ ಸಭೆಯನ್ನು ಕರೆಯಬೇಕಾದರೆ, ವಿಶೇಷವಾದ ಪರಿಸ್ಥಿತಿ ಇರಬೇಕು. ವಿಶೇಷವಾದ ಸಂದರ್ಭಗಳು ಇರಬೇಕು. ಅಂತಹ ಒಂದು ಪರಿಸ್ಥಿತಿಯ ಅಥವಾ ಸಂದರ್ಭ ಏನೆಂದು ಕೇಳಿದಾಗ, ಸನ್ಮಾನ್ಯ ಮುಖ್ಯಮಂತ್ರಿಯವರು ಎರಡು ಮೂರು ಕಾರಣಗಳನ್ನು ಕೊಟ್ಟಿದ್ದಾರೆ. ಅತ್ಯಂತ ಗೌರವದಿಂದ I like to disagree with those reasons. ಏಕೆಂದರೆ ಅವರೇ ಹೇಳಿದ್ದಾರೆ. ಮೀಸಲಾತಿಯನ್ನು ಶೇಕಡ 50 ಸೀಮಿತಗೊಳಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದಿಂದ ತೀರ್ಮಾನ ಏನು ಬಂತು. ಆದ್ದರಿಂದ, ನಾವು ಈ ವಿಶೇಷ ಅಧಿವೇಶನ ಕರೆಯಬೇಕಾಗಿ ಬಂತು ಎಂಬುದು ಮೊದಲನೆಯ ಕಾರಣ. ಸನ್ಮಾನ್ಯ ಮುಖ್ಯ ಮಂತ್ರಿಗಳು ಈ ಕಾರಣವನ್ನು ಏನು ಕೊಟ್ಟಿದ್ದಾರೆ. ಇದನ್ನು ಯಾರೂ ನಂಬುವುದಕ್ಕೆ ಸಿದ್ದರಿಲ್ಲ, ನಂಬುವುದಕ್ಕೆ ಸಾಧ್ಯವೂ ಇಲ್ಲ. ಕಾರಣ ಏನೆಂದರೆ, ಶೇಕಡ 50 ಮಿತಿಯನ್ನು ಹೇರಿದ್ದು ಈಗಲ್ಲ, 16-11-92 ರಂದು ಸನ್ಮಾನ್ಯ ಉಪಾಧ್ಯಕ್ಷರೇ, ತಾವೂ ಕೂಡ ವಕೀಲರಿದ್ದೀರಿ.

The fifty percent restriction was laid down by the Supreme Court in a land mark decision of the Supreme Court dated 16-11-92 in Indira Sahi V/s. Union of India. 16-11-92 ರಷ್ಟು ಹಿಂದೆಯೇ ಶೇಕಡ 50ರಷ್ಟು ಮೀಸಲಾತಿಯನ್ನು ಮೀರುವುದಕ್ಕೆ ಸಾಧ್ಯವಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ಏನು ತೀರ್ಪನ್ನು ಕೊಟ್ಟಿದೆ, ಅದು ಈ ವಿಶೇಷ ಅಧಿವೇಶನ ಕರೆಯುವುದಕ್ಕೆ ಕಾರಣ ಎಂದು ಮುಖ್ಯಮಂತ್ರಿಯವರು ವಾದ ಮಾಡಿದರೆ, ನಾನು ವಕೀಲನಾಗಿ ಒಪ್ಪುವುದಕ್ಕೆ ಸಿದ್ಧನಿಲ್ಲ. ಅವರ ಪ್ರಾಮಾಣಿಕತೆಯನ್ನು ಈ ರಾಜ್ಯದ ಜನರು ಒಪ್ಪುವುದಕ್ಕೆ ಸಿದ್ಧರಿಲ್ಲ. ಇದು ಅವರ ಮೊದಲನೇ ಕಾರಣ. ಈ ವಿಶೇಷ ಅಧಿವೇಶನ ಕರೆಯುವುದಕ್ಕೆ ಕೊಟ್ಟಿರತಕ್ಕ ಅವರ ಕಾರಣ,ಸಕಾರಣವಲ್ಲ ಇನ್ನು ಎರಡನೇ ಕಾರಣ ಅಧಿಕೃತ ವಿರೋಧಪಕ್ಷದ ಸದಸ್ಯರೂ, ಹಿರಿಯರೂ ಆದ, ರಾಮಕೃಷ್ಣ ಹೆಗೆಡೆಯವರು ಇಲ್ಲಿ ಏನು ಪ್ರಸ್ತಾಪ ಮಾಡಿದರು ಆ ಪ್ರಸ್ತಾಪ ಈ ವಿಶೇಷ ಸಭೆ ಕರೆಯುವುದಕ್ಕೆ ಪ್ರೇರಣೆ ಎಂದಿದ್ದಾರೆ ಇದನ್ನು ನಾನು ನಂಬಲೆ. ಹಾಗಾದರೆ ಮಾನ್ಯ ರಾಮಕೃಷ್ಣ ಹೆಗೆಡೆಯವರು ಮಾಡಿರುವಂಥ ಯಾವ ಯಾವ ಪ್ರಸ್ತಾಪಗಳಿಗೆ ಇವರು ಸ್ಪಂದಿಸಿದ್ದಾರೆ, ಇದಕ್ಕೆ ದೊಡ್ಡ ವಿಶ್ಲೇಷಣೆ ಕೊಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ಸದನದ ಸನ್ಮಾನ್ಯ ಸದಸ್ಯರೂ, ಮಾಜಿ ಮುಖ್ಯಮಂತ್ರಿಗಳೂ ಆದ ರಾಮಕೃಷ್ಣ ಹೆಗಡೆಯವರ ಪ್ರಸ್ತಾವನೆ, ಈ ವಿಶೇಷ ಸದನವನ್ನು

ಕರೆಯುವುದಕ್ಕೆ ಪ್ರೇರಣೆಯಾಯಿತು ಎನ್ನುವ ಮಾತನ್ನೂ ಕೂಡ ಈ ರಾಜ್ಯದ ಜನರಾಗಲೀ ಅಥವಾ ನಾವಾಗಲೀ ನಂಬುವುದಕ್ಕೆ ಸಿದ್ಧವಿಲ್ಲ. ಅವರು ಇನ್ನೊಂದು ಮಾತನ್ನು ಹೇಳುತ್ತಾರೆ. ಸಾಮಾಜಿಕ ನ್ಯಾಯ ಒದಗಿಸುವುದರಲ್ಲಿ, ವಂಚಿತ ವರ್ಗಕ್ಕೆ ಸವಲತ್ತುಗಳನ್ನು ಕೊಟ್ಟಂಥ ಸಂದರ್ಭದಲ್ಲಿ ಅದನ್ನು ಕಿತ್ತುಕೊಳ್ಳುವುದು ಧರ್ಮವಲ್ಲ, ಸತ್ಯವಲ್ಲ, ನ್ಯಾಯವಲ್ಲ, ಇದರಲ್ಲಿಯೂ ರಾಜಕಾರಣಿಗಳಿಗೆ ತರವಲ್ಲ. ಚುನಾವಣೆ ದೃಷ್ಟಿಯಿಂದ ಅದು ಸಾಧ್ಯವೇ ಇಲ್ಲ ಸತ್ಯ,ಧರ್ಮ, ನ್ಯಾಯ, ಬದ್ಧತೆ,ಕಠಿಣತೆ, ಕಟಬದ್ದತೆ ಇದನ್ನು ಆಮೇಲೆ ಹೇಳೋಣ. ಇವು ಬೇರೆ ವಿಷಯ. ಒಂದುಸಾರಿ ಯಾವುದಾದರೊಂದು ವರ್ಗಕ್ಕೆ ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸವಲತ್ತು ಕೊಟ್ಟಮೆಲೆ ಅದನ್ನು ಕಿತ್ತುಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ, ಮತ್ತು ಕಿತ್ತುಕೊಳ್ಳುವುದು ಕಷ್ಟದ ಕೆಲಸ ಎಂಬ ಅರಿವು ನನಗಿದೆ. ಇದೇ ಸಂದರ್ಭದಲ್ಲಿ, ಸಾಮಾಜಿಕ ನ್ಯಾಯ ಒದಗಿಸುವಂಥ ಸಂದರ್ಭದಲ್ಲಿ ಅಥವಾ ಸಮಾನತೆಯನ್ನು ಪ್ರತಿಪಾದನೆ ಮಾಡುವಂಥ ಸಂದರ್ಭದಲ್ಲಿ ಯಾವುದೇ ಒಂದು ವರ್ಗದ ಜನರ ಒತ್ತಡಕ್ಕೆ ಮಣಿದು, ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ತರುವಂಥ ನಿಲುವನ್ನು ಬದಲಾವಣೆ ಮಾಡಿಕೊಳ್ಳುವಂಥ ಪ್ರವೃತ್ತಿ ಇದೆಯಲ್ಲ, ಅದು ಏನು ಎನ್ನುವುದನ್ನು ನಾನು ಹೇಳುವುದಿಲ್ಲ, ಸುಪ್ರೀಂ ಕೋರ್ಟನವರು ಒಂದು ಮಾತಿನಲ್ಲಿ ಹೇಳಿದ್ದಾರೆ. ಅದನ್ನು ಓದುವುದಕ್ಕೆ ಇಚ್ಛೆಪಡುತ್ತೇನೆ. ಸಾಮಾಜಿಕ ನ್ಯಾಯವನ್ನು ಅನುಷ್ಠಾನ ಗೊಳಿಸುವಂಥ ಸಂದರ್ಭದಲ್ಲಿ, ಕೊಟ್ಟಿರುವಂಥ ಸವಲತ್ತನ್ನು ಕಿತ್ತುಕೊಳ್ಳುವುದು ಸುಲಭವಲ್ಲ ರಾಮಯ್ಯನವರೇ ಎಂದು ಮುಖ್ಯಮಂತ್ರಿಯವರು ಹೇಳಿದರು. ನಾನು ಒಪ್ಪಿಕೊಂಡೆ, ಅದೇ ಸಾಮಾಜಿಕ ನ್ಯಾಯವನ್ನು ಕೊಡುವಂಥ ಸಂದರ್ಭದಲ್ಲಿ, ಯಾವುದೋ ಒಂದು ಗುಂಪಿನ ಅಥವಾ ಒಂದು ವರ್ಗದ ಜನರ ಒತ್ತಡಕ್ಕೆ ಮಣಿದು, ನಿಲುವುಗಳನ್ನು ಬದಲಾವಣೆ ಮಾಡಿದರೆ, ಗೋಸುಂಬೆ ತರಹ ಬಣ್ಣವನ್ನು ಬದಲಾವಣೆ ಮಾಡಿದರೆ, ಅದೇನಾಗುತ್ತದೆ, ಅದನ್ನು ಏನೆಂದು ಕರೆಯುತ್ತಾರೆ ಎನ್ನುವುದನ್ನು ಸುಪ್ರೀಕೋರ್ಟ್‌ನವರು ಹೇಳಿದ್ದಾರೆ.

This is para 55 of the Indira Sahi's judgement. Determination of the Backward Class is not a matter of subjective satisfaction.

ಅವರು ಆಡುವಂಥ ಮಾತಿಗೂ, ಅವರ ಆತ್ಮದಲ್ಲಿರುವುದಕ್ಕೂ, ಒಂದಕ್ಕೊಂದಕ್ಕೆ ಏನಾದರೂ ಸಂಬಂಧ ಇದೆಯೇ? ನನಗೆ ಅವರ ಹಿನ್ನೆಲೆ ಗೊತ್ತಿದೆ, ಅವರು ಬೆಳೆದಂಥ ಪರಿಸರ ಗೊತ್ತಿದೆ, ಅವರು ಬದುಕಿನಲ್ಲಿ ಪಟ್ಟಿರುವಂಥ ಪಾಡು ಗೊತ್ತಿದೆ. ಇದನ್ನೆಲ್ಲಾ ಹೇಳೋಣವೆಂದರೆ, ಅವರು ಹೊರಟುಹೋದರು.

It is not for the subjective satisfaction of Veerappa Moily or YK Ramaiah. It is not for the subjective satisfaction of Bangarappa or Ramakrishna Hegde. If the Executive includes for the collateral reasons groups or the classes not satisfying relevant criteria, it would be a clear case of fraud on power.

**1.00 ಪಿ.ಎಂ**

ನಾನಲ್ಲ ಈ ಮಾತನ್ನು ಹೇಳುತ್ತಿರುವುದು, ಜಡ್ಜಮೆಂಟ್‌ನ 55ನೇ ಪುಟದಲ್ಲಿ ಹೇಳಿದ್ದಾರೆ. ಯಾವುದಾದರೂ ಒಂದು ಗ್ರೂಪನ್ನು ಯಾವುದಾದರೂ ಒಂದು ವರ್ಗವನ್ನು, ಯಾವುದಾದರೂ ಒಂದು ಸಮುದಾಯವನ್ನು ತೃಪ್ತಿಪಡಿಸಬೇಕು ಎಂದು ತೆಗೆದುಕೊಳ್ಳುವಂತಹ ತೀರ್ಮಾನ ಇದೆಯಲ್ಲ It is fraud on the power ಇದೊಂದು ಮೋಸದ ಕೃತ್ಯ. ಸಾಮಾಜಿಕ ನ್ಯಾಯವನ್ನು ಅನುಷ್ಠಾನಕ್ಕೆ ತರುವಂತಹ ಸಂದರ್ಭದಲ್ಲಿ ಒಂದು ವರ್ಗದ ಸೌಲತ್ತುಗಳನ್ನು ಕಿತ್ತುಕೊಳ್ಳುವುದು ಅಷ್ಟು ಸುಲಭದ ಮಾತಲ್ಲ ಎಂದು ಹೇಳಿದಂತಹ ಮುಖ್ಯಮಂತ್ರಿಗಳ ಮಾತಿಗೆ ಇದು ಉತ್ತರ. ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ. ಅದೇ ಸಂದರ್ಭದಲ್ಲಿ ಯಾವುದಾದರೂ ಒಂದು ವರ್ಗವನ್ನು ತೃಪ್ತಿಪಡಿಸಬೇಕು ಎಂದು ತೆಗೆದುಕೊಳ್ಳತಕ್ಕಂಥ ನೀತಿ ಇದೆಯಲ್ಲ, ತೀರ್ಮಾನ ಇದೆಯಲ್ಲ, ನಡವಳಿಕೆ ಇದೆಯಲ್ಲ It is a fraud on the power ಅದನ್ನು ಕೂಡ ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮತ್ತೊಂದು ವಿಷಯವನ್ನು ಅವರು ಹೇಳಿದರು ಒಂದು ಕಡೆ....

ಶ್ರೀ ವೈ.ಕೆ.ರಾಮಯ್ಯ :- ಇಂದಿರಾ ಸಾಹಿ ಕೇಸ್ ಜಡ್ಜ್‌ಮೆಂಟ್ ಓದದೇ ಅವರು ಮಂತ್ರಿ ಕೆಲಸ ಮಾಡುತ್ತಾರೆಯೇ? ಅದೂ ಇಂತಹ ಗಂಭೀರವಾದ ಪರಿಸ್ಥಿತಿಯಲ್ಲಿ ಲಾಡಿ ಪಾರ್ಟ್‌ಮೆಂಟ್ ನವರಿಗಂತೂ ಗೊತ್ತಿದೆ. AIR 1993 Supreme Court Page 477 ಇನ್ನೊಂದು ಕಾರಣವನ್ನು ಅವರು ವಿಶೇಷ ಅಧಿವೇಶನವನ್ನು ಕರೆಯಲಿಕ್ಕೆ ಕೊಟ್ಟರು. ಒಂದು ಕಡೆ ಸಾಮಾಜಿಕ ನ್ಯಾಯವನ್ನು ಕೊಡುವಂತಹ ತುಡಿತ. ಮುಖ್ಯಮಂತ್ರಿಗಳಿಗೆ ಈ ರಾಜ್ಯದ ಜನರಿಗೆ ಅದೂ ಹಿಂದುಳಿದವರಿಗೆ ಕಲ್ಯಾಣ ಮಾಡುವಂತಹ ಆತ್ಮದಲ್ಲಿ ತುಡಿತ, ಆತುರ ಒಂದು ಕಡೆ, ಮತ್ತೊಂದು ಕಡೆ ಸರ್ವೋಚ್ಚನ್ಯಾಯಾಲಯದವರ ನೀವು 50 ಪರ್ಸೆಂಟ್‌ನ್ನು ಮೀರಬಾರದು ಎಂದು ನಿರ್ಬಂಥ. ಅದರೆ ಮುಖ್ಯಮಂತ್ರಿಗಳು ಏನಾದರೂ ಮಾಡಿ ಈ ರಾಜ್ಯದ ಜನರಿಗೆ 80 ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟು ಅವರ ಕಲ್ಯಾಣವನ್ನು ಮಾಡಬೇಕು ಎನ್ನುವಂತಹ Unquestionable desire. ಇಟ್ಟುಕೊಂಡಿದ್ದಾರೆ. ನಾನು ಮುಖ್ಯಮಂತ್ರಿಗಳನ್ನು ಇವತ್ತು ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಬಹುಶ : ಇದು ಅತ್ಯಂತ ಪ್ರಮುಖವಾದಂತಹ ಪ್ರಶ್ನೆ . ನೀವು ಸಾಮಾಜಿಕವಾದಂತಹ ನ್ಯಾಯಕೊಡುತ್ತೀರೋ, ರಾಜಕೀಯ ನ್ಯಾಯ ಕೊಡುತ್ತೀರೋ, ಜಾತಿ ರಾಜಕೀಯ ಕೊಡುತ್ತೀರೋ ನನಗೆ ಗೊತ್ತಿಲ್ಲ. ನೀವು ಇವತ್ತು ಸರ್ವೋಚ್ಚನ್ಯಾಯಾಲಯದ ಆದೇಶವನ್ನು ಮೀರಿ ಸರ್ವೋಚ್ಚನ್ಯಾಯಾಲಯ ನಿಮ್ಮ ಮೇಲೆ ತಂದಿರುವ ನಿರ್ಭಂದವನ್ನು ಮೀರಿ ಈ ರಾಷ್ಟ್ರದಲ್ಲಿ ಯಾವುದೇ ವ್ಯಕ್ತಿಗಾಗಲಿ, ಯಾವುದೇ ಸರ್ಕಾರಕ್ಕೆ ಆಗಲಿ ಕಾನೂನನ್ನು ಮಾಡುವಷ್ಟು ಅವಕಾಶ ಇದೆಯೇ? ನೀವೇ ಹೇಳಿ ಸ್ವಾಮಿ ಹೋಗಲಿ. ನಾನು ಈ ರಾಜ್ಯದಲ್ಲಿ ಹಿಂದುಳಿಂದ ವರ್ಗದವರ ಕಲ್ಯಾಣ ಸಾಧನೆ ಮಾಡಿದೆ ಎಂದು ದೇವರಾಜು ಅರಸುರವರಂತೆ ಪ್ರತಿಮೆಯನ್ನು ಹಾಕಿಸಿ ಕೊಳ್ಳಲು ಪ್ರಯತ್ನ ಮಾಡುತ್ತೇನೆಯೇ? ನಮ್ಮ ಮುಂದಿನ ಪೀಳಿಗೆ ನಮ್ಮ ಮಂತ್ರಿಗಳ ಕಾಗೋಡು ತಿಮ್ಮಪ್ಪನವರ ಪ್ರತಿಮೆ ಮಾಡಿಸಿ 80 ಪರ್ಸೆಂಟ್ ಕೊಟ್ಟಿದ್ದಾರೆ ಎಂದು

ಕೂಗಲಿ, ಪ್ರತಿಪಾದನೆ ಮಾಡಲಿ, ಆಸೆ ಪಡೆಲಿ ಮುಂದಿನ ಜನಾಂಗ ಎಂದು ನೀವು ಪ್ರಯತ್ನ ಪಡುತ್ತೀರಿ. ನಾನು ಒಪ್ಪಿಕೊಳ್ಳುತ್ತೇನೆ. Can you do this against the direction of the supreme Court which is the highest authority of the land and the direction of which nobody and no Government can violate? ಇದು ಸಾಧ್ಯ ಇಲ್ಲ ಎಂದು ನಿಮ್ಮ ಆತ್ಮಕ್ಕೆ ಬಂದ ಮೇಲೆ ನೀವು ವಕೀಲರು, ಅವರು ವಕೀಲರು ನಾನು ವಕೀಲ. ನಾವು ಅದನ್ನು ಒಪ್ಪಿಕೊಂಡ ಮೇಲೆ ಮತ್ತೆ ಈ ವಿಶೇಷ ಅಧಿವೇಶನದ ನಾಟಕದ ಅವಶ್ಯಕತೆ ಏನು? ಸರ್ವೋಚ್ಚನ್ಯಾಯಾಲಯವು ನಿಗದಿ ಮಾಡಿರುವಂತಹ ಒಂದೇ ನಿರ್ದೇಶನವನ್ನು ನಾವು ಮೀರಿ ಕಾನೂನನ್ನು ಮಾರಲಿಕ್ಕೆ ಸಾಧ್ಯ ಇಲ್ಲ ಎಂದು ತಿಳಿದುಕೊಂಡಿರತಕ್ಕಂಥ ವಕೀಲರಾದಂತಹ ಮಂತ್ರಿಗಳು, ವಕೀಲರಾದಂತಹ ಮುಖ್ಯಮಂತ್ರಿಗಳು, ಅಲ್ಲಿ ವಾದವನ್ನೇ ಕೇಳುತ್ತಿರುವಂತಹ ಅಧ್ಯಕ್ಷರು, ವಾದವನ್ನೇ ಮಾಡುತ್ತಿರುವಂತಹ ನಾನು-ನಾವೆಲ್ಲರೂ ವಕೀಲರಾಗಿ ಗೊತ್ತಿದ್ದು ಕೂಡ ಈ ನಿರರ್ಥಕ ಶ್ರಮ ಏಕೆ? ಅದಕ್ಕಾಗಿಯೇ ಬಂಗಾರಪ್ಪನವರ ಜೊತೆಯಲ್ಲಿ ಬೇರೆ ವಿಷಯಗಳಲ್ಲಿ ನನ್ನ ವ್ಯತ್ಯಾಸ ಇದ್ದರೂ ಈ ಅದಿವೇಶನವನ್ನು ಕರೆದಿರುವುದು ಮುಂದಿನ ಚುನಾವಣೆಯಲ್ಲಿ ಏಕೆಂದರೆ ನಿಮ್ಮ ಕಳೆದ ಮ್ಯಾನಿಫೆಸ್ಟೋ-ಚುನಾವಣಾ ಪ್ರಣಾಳಿಕೆಯಲ್ಲಿ ಈ ಚಿನ್ನಪ್ಪರೆಡ್ಡಿ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನುವ ಮಾತನ್ನು ನೀವು ಹೇಳಿಬಿಟ್ಟಿದ್ದೀರಿ ನಾಳೆ ಊರು ಊರಿಗೆ ಹೋದಾಗ ಜನ ಹಿಡಿದುಕೊಳ್ಳುತ್ತಾರೆ. ಚಿನ್ನಪ್ಪರೆಡ್ಡಿ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದಿರಿ, ಏಕೆ ನೀವು ತರಲಿಲ್ಲ ಎಂದು ಕೇಳುತ್ತಾರೆ. ಯಾರಾದರೂ ಒಬ್ಬೊಬ್ಬರು ಈಗ ಅಲ್ಲಲ್ಲಿ ಜನ ವಿಜಿಲೆಂಟ್ ಆಗಿದ್ದಾರೆ. ಅವರ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ನಿಮಗೆ ಶಕ್ತಿ ಇಲ್ಲದೆ, ಅವರ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ತಪ್ಪಿಸಿಕೊಳ್ಳಲಿಕ್ಕಾಗಿ ನಾವು ಪ್ರಯತ್ನ ಮಾಡಿದೆವು, ಆದರೆ ವಿರೋಧಪಕ್ಷದವರು ಅಡ್ಡಿ ಮಾಡಿದರು ಎಂಬ ನೆಪವನ್ನು ಈ ರಾಜ್ಯದ ಜನರಿಗೆ ಇಟ್ಟು ಮೋಸಗೊಳಿಸುವುದಕ್ಕಾಗಿ ಈ ವಿಶೇಷ ಅಧಿವೇಶನವನ್ನು ನೀವು ಕರೆದಿದ್ದಿರೋ ಹೊರತು, ಈ ವಿಶೇಷ ಅಧಿವೇಶನವನ್ನು ಕರೆಯಲಿಕ್ಕೆ ಮುಖ್ಯಮಂತ್ರಿಗಳು ಕೊಟ್ಟ ಯಾವುದೇ ಕಾರಣ ಸಕಾರಣ ಅಲ್ಲ ಎಂದು ನಾನು ಪ್ರತಿಪಾದನೆಯನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮಾತನ್ನು ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಮೊದಲು ಉತ್ತರ ಕೊಡಲಿ, ಆಮೇಲೆ ನಾನು ಇದರ ಮೆರಿಟ್ಸ್ ಮತ್ತು ಡಿ ಮೆರಿಟ್ಸ್‌ಗೆ ಬರುತ್ತೇನೆ. ಅನೇಕ ಜನಗಳಿಗೆ ಇದರ ಬಗ್ಗೆ ಬದ್ಧತೆ ಇಲ್ಲ, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಕೆಲವರಿಗೆ ಮನಸ್ಸು ಇಲ್ಲ ವಿರೋಧ ಪಕ್ಷದಲ್ಲಿರುವವರಿಗೆ, ಅದು ನನಗೆ ಗೊತ್ತಿಲ್ಲ ಯಾರ್ಯಾರಿಗೆ ಅಂತ, ಅದು ಸ್ಕ್ರೀನಿಂಗ್ ಸ್ವಲ್ಪ ಕಷ್ಟ. ನನಗೂ ಆ ಅನುಮಾನ ಇದೆ. ಅವರಲ್ಲೇ ಎಷ್ಟೋ ಜನಗಳಿಗೆ ಇಲ್ಲ ಮಾನ್ಯ ಅಧ್ಯಕ್ಷರೇ, ನನಗಿಂತ ಜಾಸ್ತಿ ಅರ್ಥವಾಗುವಂತಹ ಪರಿಸ್ಥಿತಿಯಲ್ಲಿ ತಾವು ಬಂದವರು. ಆದ್ದರಿಂದ ಅದು ನಿಮಗೆ ಅರ್ಥವಾಗುತ್ತದೆ. ಈ ರಾಷ್ಟ್ರದಲ್ಲಿರುವಂತಹ ಯಾವ ಪಕ್ಷದ ಎಲ್ಲಾ ವ್ಯಕ್ತಿಗಳಿಗೂ ತುಳಿತಕ್ಕೆ ಒಳಗಾದವರ ಬಗ್ಗೆ ಅನುಕಂಪ ಇದೆ ಎಂದು ಯಾರಾದರೂ ಹೇಳಿದರೆ, ಅದನ್ನು ನಾನು ಒಪ್ಪಲಿಕ್ಕೆ ಸಿದ್ಧನಿಲ್ಲ. ಯಾವ ಮಾತನ್ನು ಮುಖ್ಯಮಂತ್ರಿಗಳು ವಿರೋಧಪಕ್ಷಕ್ಕೆ ಹೇಳಿದ್ದಾರೋ ಅದೇ ಮಾತನ್ನು ನಾನು ಆಡಳಿತಪಕ್ಷಕ್ಕೆ ನಿಮ್ಮ ಪ್ರಧಾನಿಯವರಿಂದ ಹಿಡಿದು ಹೇಳಬೇಕಾಗುತ್ತದೆ. ಈ

ರಾಷ್ಟ್ರದ ಪರಿಶಿಷ್ಟ ವರ್ಗಕ್ಕೆ ಪರಿಶಿಷ್ಟ ಪಂಗಡಕ್ಕೆ ಹಿಂದುಳಿದ ವರ್ಗಕ್ಕೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ಬದ್ಧತೆ ನಾನು ಅಲ್ಲಿ ಕುಳಿತಿರುವವರಲ್ಲಿ ಕೆಲವರನ್ನು ಅನುಮಾನ ಪಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಇಲ್ಲಿ ಕುಳಿತಿರುವವರ ಬಗ್ಗೆ ಅನುಮಾನ ಪಟ್ಟರೆ ಅದಕ್ಕೆ ನನ್ನ ತಕಾರಾರು ಏನೂ ಇಲ್ಲ. ಅವರು ಹೇಳುತ್ತಾರೆ ನನ್ನ ಸ್ನೇಹಿತರು ಜವಾಬ್ದಾರಿಯಿಂದ ನುಣುಚಿಕೊಳ್ಳಲಿಕ್ಕೆ ಗೈರು ಹಾಜರಾಗಿದ್ದಾರೆಂದು. ಪತ್ರಿಕೆಗಳಲ್ಲಿ ನಮ್ಮ ಅನೇಕ ಜನ ಸ್ನೇಹಿತರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. ಈ ಸದನದಲ್ಲಿ ವಿರೋಧಪಕ್ಷದ ಸದಸ್ಯರು ಗೈರು ಹಾಜರಾಗುವುದು ಇರಲಿ ಸ್ವಾಮಿ, ನಿಮ್ಮ ಸಂಪುಟದ ಸದಸ್ಯರು ಸಂಪುಟದ ಸಭೆಗೆ ಗೈರು ಹಾಜರಾಗಿದ್ದಾರೆ. ನಾನು ಹೇಳುತ್ತೇನೆ ಅವರು ಗೈರು ಹಾಜರಾಗಿದ್ದಕ್ಕೆ ಕಾರಣ ಜವಾಬ್ದಾರಿಯಿಂದ ನುಣುಚಿಕೊಳ್ಳಲಿಕ್ಕೆ. ಆದ್ದರಿಂದ ಈ ಒಂದು ಸಾಮಾಜಿಕ ನ್ಯಾಯವನ್ನು ವಿತರಣೆ ಮಾಡುವಂತಹ ಬದ್ಧತೆ ಏನು ಇದೆ ಕಮಿಟ್‌ಮೆಂಟ್ ಎಂದು ನೀವು ಏನು ಕರೆಯುತ್ತೀರೋ ಅದನ್ನು ಯಾವುದೇ ಪಕ್ಷ ಗುತ್ತಿಗೆಯನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯ ಇಲ್ಲ. ಅದು ಬದುಕಿನ ಪರಿಸರದ ಮೇಲೆ ಪ್ರಭಾವ ಬೀರಿದಂತಹ ಶಕ್ತಿಗಳು ವ್ಯಕ್ತಿಗಳಿಂದ ಬರಲಿಕ್ಕೆ ಸಾಧ್ಯತೆ ಇದೆಯೇ ಹೊರತು ಪಕ್ಷದಿಂದ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಇವರುಗಳು ಗೈರುಹಾಜರಾದರೆ ಅಲ್ಲಿ ನಿಮ್ಮ ಮಂತ್ರಿಗಳೇ ಗೈರು ಹಾಜರಾಗುತ್ತಾರೆ. ಮತ್ತೊಂದು ವಿಷಯವನ್ನು ಶ್ರೀ ನಾಗರಾಜುರವರು ಪ್ರಸ್ತಾಪ ಮಾಡಿದರು ವಿರೋಧಪಕ್ಷಗಳನ್ನು ನೀವು ಕರೆದು ಇಂತಹ ವಿಷಯಗಳಲ್ಲಿ ಚರ್ಚೆ ಮಾಡಿ ಅವರನ್ನು ನಂಬಿಕೆಗೆ ತೆಗೆದುಕೊಳ್ಳುವುದರಲ್ಲಿ ನೀವು ವಿಫಲರಾಗಿದ್ದೀರಿ. ನಾನು ಅವರ ಜೊತೆಯಲ್ಲಿ ಧ್ವನಿಗೂಡಿಸುವುದಕ್ಕೆ ಇಷ್ಟಪಡುತ್ತೇನೆ. ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ವಿರೋಧಪಕ್ಷಗಳನ್ನು ನಂಬಿಕೆಗೆ ತೆಗೆದುಕೊಳ್ಳುವುದರಲ್ಲಿ ಹಾಲಿ ಮುಖ್ಯಮಂತ್ರಿಗಳು ಕೂಡ ಈ ಮಾತನ್ನು ಹೇಳುವಾಗ ನಾನು ಉದ್ದೇಶವನ್ನು ಇಟ್ಟುಕೊಂಡೇ ಹೇಳುತ್ತಿದ್ದೇನೆ. ಹಾಲಿ ಮುಖ್ಯಮಂತ್ರಿಗಳು ಕೂಡ ಅಂದರೆ ಬೇರೆಯವರೂ ಇದ್ದರೂ ಎಂದು ಆಯಿತು. ಹಾಲಿ ಮುಖ್ಯಮಂತ್ರಿಗಳು ಕೂಡ ವಿಫಲರಾಗಿದ್ದಾರೆ. ಅದೇಕೋ ಇತ್ತೀಚಿನ ವರ್ಷಗಳಲ್ಲಿ ಇದೊಂದು ತರಹ ಆಗುತ್ತಿದೆ. ಆಡಳಿತಪಕ್ಷದವರು ವಿರೋಧಪಕ್ಷದವರ ಜೊತೆ ಸೇರಿಕೊಂಡಿರುತ್ತಾರೆ. ವಿರೋಧಪಕ್ಷದವರು ಆಡಳಿತ ಪಕ್ಷದೊಳಗೆ ಸೇರಿಕೊಂಡಿರುತ್ತಾರೆ. ನಮಗೆ ಅರ್ಥವೇ ಆಗುವುದಿಲ್ಲ. ಇದನ್ನು ನಾನು ಹೇಳಲಿಲ್ಲ. ಮೊನ್ನೆಮೊನ್ನೆ ನಮ್ಮ ಉಪಮುಖ್ಯಮಂತ್ರಿಗಳಾದ ಕೃಷ್ಣ ಅವರು ಹೇಳಿದ್ದಾರೆ, ಹಗಲು ವಿರೋಧ ಮಾಡುತ್ತಾರೆ, ರಾತ್ರಿಯಾದ ಮೇಲೆ ಆಡಳಿತ ಪಕ್ಷದವರ ಜೊತೆ ಬಂದು ಸಂಧಾನ ಮಾಡುತ್ತಾರೆ ಎಂದು. ಆದ್ದರಿಂದ ಈ ಎಲ್ಲಾ ವಿಷಯಗಳಿಗೆ ನಾವು ಯಾರನ್ನು ಗುರಿಮಾಡೋಣ ಹೇಳಿ. ವಿರೋಧಪಕ್ಷದವರನ್ನು ನಂಬಿಕೆಗೆ ತೆಗೆದುಕೊಳ್ಳಲು ನಾನು ಪ್ರಯತ್ನಪಟ್ಟೆ, ಎಂದು ಮುಖ್ಯಮಂತ್ರಿ ಹೇಳಿದರಲ್ಲ ಅದಕ್ಕೇ ನಾನು ಹೇಳುತ್ತಿದ್ದೇನೆ, ವಿರೋಧಪಕ್ಷದ ಒಳಗೆ ಆಡಳಿತ ಪಕ್ಷ ನುಗ್ಗಿಕೊಳ್ಳುವುದು, ಆಡಳಿತ ಪಕ್ಷದ ಒಳಗೆ ನಿಮ್ಮ ಉಪಮುಖ್ಯಮಂತ್ರಿಗಳು ಹೇಳಿದಂತೆ ರಾತ್ರಿಹೊತ್ತು ಸಂಧಾನ ಮಾಡುವ ಈ ಪದ್ಧತಿ ಏನುಬಂತು, ಈ ದರಿದ್ರ ವ್ಯವಸ್ಥೆ ಏನು ಬಂತು, ಇದು ವಿರೋಧ ಪಕ್ಷದಲ್ಲಿ ಆಡಳಿತ ಪಕ್ಷ ನಂಬಿಕೆ ಕಳೆದುಕೊಳ್ಳುವಂತಹ ವ್ಯವಸ್ಥೆ ಸೃಷ್ಟಿಯಾಯಿತೋ ಅದೇ ರೀತಿ ವಿರೋಧಪಕ್ಷಕ್ಕೆ ಆಡಳಿತಪಕ್ಷದಲ್ಲಿನ ನಂಬಿಕೆ ಕಳೆದುಕೊಳ್ಳುವಂತಹ ವ್ಯವಸ್ಥೆ ಸೃಷ್ಟಿಯಾಯಿತೆಂದು ತಮ್ಮ ಗಮನಕ್ಕೆ ತರಲು ಈ ಮಾತು

ಹೇಳುತ್ತಿದ್ದೇನೆ.ಆದ್ದರಿಂದ ನನ್ನ ಒಟ್ಟಾರೆ ವಾದ ಇಷ್ಟೇ ಈ ವಿಶೇಷ ಅಧಿವೇಶನ ಏನು ಕರೆದಿದ್ದಾರೋ ಇದು ಹಿಂದುಳಿದವರ್ಗದವರ ಕಲ್ಯಾಣಕ್ಕಾಗಿ ಕರೆದ ವಿಶೇಷ ಅಧಿವೇಶನವಲ್ಲ. ಮುಂದಿನ ಚುನಾವಣೆಯ ದೃಷ್ಟಿಯಿಂದ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದ ಆಶ್ವಾಸನೆಯನ್ನು ಈಡೇರಿಸಲಿಕ್ಕೆ ಆಗದೇ ಇದ್ದ ಪರಿಸ್ಥಿತಿಯಿಂದ ಹೊರಗೆ ಬರಲಿಕ್ಕಾಗಿ ಹೂಡಿದಂತಹ ಹುನ್ನಾರ ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಈ ಮೀಸಲಾತಿ ಬಗ್ಗೆ ಪ್ರಸ್ತಾಪಿಸಲು ತಮ್ಮ ಅಪ್ಪಣೆ ಕೇಳಬಯಸುತ್ತೇನೆ. ಈ ಮೀಸಲಾತಿ ಪದ್ಧತಿಯ ಅವಶ್ಯಕತೆ ಇದೆಯೇ? ಇದರ ಹಿನ್ನೆಲೆಯೇನು? ಇದಕ್ಕೆ ನಾವ್ಯಾರೂ ಕಾರಣವಲ್ಲ. ಇದಕ್ಕೆ ಮೂಲ ಕಾರಣ ನಮ್ಮನ್ನು ಹುಟ್ಟಿನ ಆಧಾರದಮೇಲೆ ವರ್ಗೀಕರಿಸಿದ ಹಿಂದಿನ ನಮ್ಮ ದರಿದ್ರ ವ್ಯವಸ್ಥೆಯಿದೆಯಲ್ಲ ಅದು ಕಾರಣ. ಹುಟ್ಟಿನ ಆಧಾರಮೇಲೆ ನಿಮಗೆ ಸ್ವರ್ಗನರಕ ಸಿಗುತ್ತದೆ, ಹುಟ್ಟಿನ ಆಧಾರದಮೇಲೆ ನಿಮಗೆ ಕೆಲಸ ಸಿಗುತ್ತದೆ, ಹುಟ್ಟಿನ ಆಧಾರದಮೇಲೆ ನಿಮ್ಮ ಗುಣಮಟ್ಟ ನಾವು ಅಳೆಯಬೇಕೆಂಬ ಹಿಂದಿನ ವರ್ಗೀಕರಣ ಏನು ನಡೆಯಿತೋ, ಯುದ್ಧ ಮಾಡುವವರದೊಂದು ವರ್ಗ, ಬೇಸಾಯ ಮಾಡುವವರದೊಂದು ವರ್ಗ, ವ್ಯಾಪಾರ ಮಾಡುವವರದೊಂದು ವರ್ಗ, ಪೂಜೆ ಮಾಡುವವರದೊಂದು ವರ್ಗ, ಚಿನ್ನದ ಕೆಲಸ ಮಾಡುವವರದೊಂದು ವರ್ಗ, ಕಬ್ಬಿಣದ ಕೆಲಸ ಮಾಡುವವರದೊಂದು ವರ್ಗ, ಬಟ್ಟೆ ಒಗೆಯುವವರದೊಂದು ವರ್ಗ- ಹೀಗೆ ವ್ಯಕ್ತಿ ಮಾಡುವ ಕಸುಬಿನ ಆಧಾರದ ಮೇಲೆ ಮತ್ತು ಅವರ ಹುಟ್ಟಿನ ಆಧಾರದಮೇಲೆ ಸಮಾಜವನ್ನು ವರ್ಗೀಕರಿಸಿ ಛಿದ್ರಮಾಡಿದ ವಿಕೃತ ವ್ಯವಸ್ಥೆ ಈ ಮೀಸಲಾತಿ ಪದ್ಧತಿಯನ್ನು ವಿಧಿಯಿಲ್ಲದೆ ಎಲ್ಲಾ ಸರ್ಕಾರಗಳೂ ತರಬೇಕಾದ ಪರಿಸ್ಥಿತಿ ಬಂತು. ಅದಕ್ಕಾಗಿಯೇ ರಾಜ್ಯಾಂಗದಲ್ಲಿ ಆರ್ಟಿಕಲ್ 16ಅನ್ನು ಅಳವಡಿಸುವಂತಹ ಅವಶ್ಯಕತೆ ಬಂತು. ಅ 16(4) ನೇ ಕಲಂ ಕೆಳಗೆ ನಾವು ಈ ಎಲ್ಲಾ ದೊಂಬರಾಟ ಆಡುತ್ತಿದ್ದೇವೆ. The constitution framers have included a provision, have provided facilities of reservation for the Backward classes.

ರಾಜ್ಯಾಂಗದ ಎರಡು ಪ್ರಮುಖ ಭಾಗಗಳ ಅರಿವು ತಮಗಿದೆ. ಒಂದು ನಮ್ಮ ಮೂಲಭೂತಹಕ್ಕುಗಳು ಇನ್ನೊಂದು ನಮ್ಮ directive principles of the State policy. ಈ ಎರಡರಲ್ಲಿ ಈ 40 ವರ್ಷಗಳ ನಮ್ಮ ಹಕ್ಕುಗಳ ಪ್ರತಿಪಾದನೆಗೆ ನಾವೆಲ್ಲರೂ ಪ್ರಯತ್ನ ಪಟ್ಟಿದ್ದೇವೆ. ಆದರೆ directive principles of the state Policy ಏನಿದೆ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಎಷ್ಟು ವಿಫಲರಾಗಿದ್ದೇವೆ ಅಥವಾ ಸಫಲತೆ ಪಡೆದಿದ್ದೇವೆಂದು ನಾವು ವಿಶ್ಲೇಷಣೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದಲೇ 16ನೇ ವಿಧಿಯನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳಬೇಕಾಗಿ ಬಂತು. ಈ ರಾಷ್ಟ್ರದಲ್ಲಿ ಅಧಿಕಾರಕ್ಕೆ ಬಂದ ಅನೇಕ ಸರ್ಕಾರಗಳಿಗೆ ಈ ರಾಷ್ಟ್ರದ ಹಿಂದುಳಿದ ಜನಗಳನ್ನು ತುಳಿತಕ್ಕೆ ಒಳಗಾದವರನ್ನು ನಿರ್ಲಕ್ಷ್ಯಕ್ಕೊಳಗಾದವರನ್ನು ಉದ್ಧಾರ ಮಾಡಬೇಕೆಂಬ ಆಸೆಗಿಂತ ಹೆಚ್ಚಾಗಿ ಈ ಸಂವಿಧಾನದಲ್ಲಿ ಇದ್ದ ವಿಧಿ ವಿಧಾನಗಳನ್ನು ಕಾರ್ಯರೂಪಕ್ಕೆ ತರಲೇಬೇಕಾದಂತಹ ಸಂದರ್ಭ ಇತ್ತು. ಆ ದೃಷ್ಟಿಯಿಂದ ಕೇಂದ್ರಸರ್ಕಾರದಲ್ಲಿ ಪ್ರಯತ್ನಗಳು ನಡೆದುವು. ಆ ಪ್ರಯತ್ನದ ಫಲವಾಗಿ ಮತ್ತು ಹಿಂದೆ ನೆಹರೂ ಅವರ ಕಾಲದಲ್ಲಿ ಪ್ರಯತ್ನ ನಡೆದಿತ್ತು, ಆದರೆ ವಿಧಿವತ್ತಾಗಿ ಇತ್ತೀಚಿನ ದಿನಗಳಲ್ಲಿ ನಡೆದ ಗಂಭೀರ ಪ್ರಯತ್ನ ಯಾವುದೆಂದರೆ ಮಂಡಲ್

ಆಯೋಗದ ರಚನೆಯಾಗಿ ನಂತರ ಅದರ ತೀರ್ಮಾನ ಕೂಡ ಬಂತು. ಆದರೆ ಮಂಡಲ ಆಯೋಗದ ವರದಿಯನ್ನು ಒಂದು ಕಪಾಟಿನಲ್ಲಿ ಹಾಕಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟು ಆಡಳಿತ ನಡೆಸುವ ಪ್ರಯತ್ನ ನಡೆಯಿತು. ನಾನು ಆಗಲೇ ಹೇಳಿದ್ದೇನೆ, ನನ್ನ ಮಿತ್ರರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಸಾಮಾಜಿಕ ನ್ಯಾಯ ಕೊಡುವ ಬದ್ಧತೆ ಬಗ್ಗೆ ಯಾವ ಪಕ್ಷಕ್ಕೂ ಗುತ್ತಿಗೆ ಇಲ್ಲ. ವಿ. ಪಿ. ಸಿಂಗ್‌ರವರ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿತ್ತು. I request my friends to recollect their memories as to what has happened then.

ಏನಾಯಿತು ಈ ರಾಷ್ಟ್ರದಲ್ಲಿ? ಅದಕ್ಕೇ ನಾನು ಆಗಲೇ ಹೇಳಿದುದ್ದು, ವಿಪಿ ಸಿಂಗ್‌ರವರು ತೆಗೆದುಕೊಂಡ ತೀರ್ಮಾನವನ್ನು ಅನುಷ್ಠಾನಕ್ಕೆ ಮಾಡಲು ಆಗಲಿಲ್ಲವೆಂದು ಹೇಳಬೇಡಿ, ಆಗಲಿಕ್ಕೆ ಬಿಡಲಿಲ್ಲ. ಅದಕ್ಕೆ ನಾನು ಆ ಪದಪ್ರಯೋಗ ಮಾಡಿದ್ದು. ಈ ರಾಷ್ಟ್ರದ ಹಿಂದುಳಿದವರ ಕಲ್ಯಾಣಕ್ಕಾಗಿ ರಚನೆಯಾಗಿದ್ದ ಮಂಡಲ್ ವರದಿಯ ಅನುಷ್ಠಾನ ಮಾಡಲೇಬೇಕೆಂಬ ಕಟ್ಟಿಬದ್ದ ತೀರ್ಮಾನ ವಿಪಿ ಸಿಂಗ್‌ರವರು ತೆಗೆದುಕೊಂಡು ಜಾರಿಗೆ ತಂದಾಗ ಅನುಷ್ಠಾನ ಮಾಡಲು ಅವರ ಕೈಲಿ ಸಾಧ್ಯವಾಗಲಿಲ್ಲವೆಂದು ನಾನು ಒಪ್ಪಲು ಸಿದ್ದನಿಲ್ಲ. ಈ ರಾಷ್ಟ್ರದ ಹಿತಾಸಕ್ತಿಗಳು ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ಬಿಡಲಿಲ್ಲ. ನನ್ನ ಸ್ನೇಹಿತರು ಯಾರೂ ತಪ್ಪು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ.ಯಾರೂ ಎಷ್ಟೇ ಎತ್ತರದ ವ್ಯಕ್ತಿಯಾಗಲಿ, ನಾನು ಯಾರನ್ನೂ ಪೂಜಿಸುವಂಥವನಲ್ಲ ಈ ರಾಷ್ಟ್ರದ ಜಾತ್ಯತೀತತೆಯನ್ನು ಕಾಪಾಡಲಿಕ್ಕೆ ಅವರು ಅಧಿಕಾರವನ್ನು ತ್ಯಜಿಸಿದರು. ಈ ರಾಷ್ಟ್ರದ ಹಿಂದುಳಿದವರ ಕಲ್ಯಾಣಕ್ಕಾಗಿ ಮಂಡಲ್ ವರದಿಯ ಹಿತ್ತಾಸಕ್ತಿಯ ವಿಕೃತಸ್ವರೂಪ, ಆ ಬೆಂಕಿ ಹಚ್ಚಿಕೊಳ್ಳುವುದು, ಬೆಂಕಿ ಹಚ್ಚುವುದು ಸ್ವಲ್ಪ ಜ್ಞಾಪಿಸಿಕೊಂಡರೆ ಮೈ ಜುಮ್ಮೆನ್ನುತ್ತದೆ. ಆ ಒಂದು ಸವಲತ್ತನ್ನು ಕಿತ್ತುಕೊಳ್ಳುವುದಕ್ಕೆ ಜನ ಪ್ರಯತ್ನಪಡುತ್ತಿದ್ದಾರೆಂದು ಯಾವ ಹಿತಾಸಕ್ತಿಗಳಿಗೆ ಗಮನಕ್ಕೆ ಬಂತೋ ಅವರು ಹೂಡಿದಂತಹ ಹೂಟ ಆ ಸಂದರ್ಭದಲ್ಲಿ ಅವರು ನಡೆಸಿದ ಕೃತ್ಯಗಳಿಗಾಗಿ ವಿಪಿ ಸಿಂಗ್‌ರವರು ಮಂಡಲ ವರದಿ ಅನುಷ್ಠಾನ ಮಾಡು ಸಾಧ್ಯ ಆಗಲಿಲ್ಲ.ಈ ವರದಿಯನ್ನು ಪ್ರಶ್ನೆಮಾಡಿ ಸರ್ವೋಚ್ಚನ್ಯಾಯಾಲಯದಲ್ಲಿ ದಾವೆ ಹೂಡಲಾಯಿತು. ಇದರ ಬಗ್ಗೆ ತೀರ್ಮಾನ ಕೊಡುತ್ತ ನ್ಯಾಯಾಧೀಶರುಗಳು ಮಂಡಲ ವರದಿ ಅನುಷ್ಠಾನವನ್ನು ಎತ್ತಿಹಿಡಿದರು. ಅದಕ್ಕೇ ಅವರು ಪದ ಉಪಯೋಗಿಸಿದ್ದಾರೆ. It is a landmark in the history of India, particularly in the history of Indian judiciery ಅದರಲ್ಲಿ ಕೆಲವು ನಿರ್ದೇಶನಗಳನ್ನು ಅವರು ಕೊಟ್ಟರು. ಈ ರಾಷ್ಟದಲ್ಲಿ ಸಂವಿಧಾನದ 16ನೇ ಕಲಂ ಪ್ರಕಾರ ಹಿಂದುಳಿದವರನ್ನು ಗುರ್ತಿಸುವ ಬಗ್ಗೆ, ಹಿಂದುಳಿದವರಿಗೆ ಮೀಸಲಾತಿ ಒದಗಿಸುವ ಬಗ್ಗೆ ಸಾಮಾಜಿಕ ನ್ಯಾಯ ಕೊಡುವ ಬಗ್ಗೆ ಆಡಳಿತ ನಡೆಸುವ ಜನ ಏನನ್ನು ಮಾಡಬೇಕು ಎನ್ನುವುದನ್ನು ತೀರ್ಪಿನಲ್ಲಿ ಸ್ಪಷ್ಟವಾಗಿ. ನಿರ್ದಿಷ್ಟವಾಗಿ ಹೇಳಿದರು. ಎರಡು ಬಹಳ ಪ್ರಮುಖವಾದ ಹೇಳಿಕೆಯನ್ನು ಹೇಳಿದ್ದಾರೆ ಎರಡು ವಿಷಯಗಳ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ. ಇಡೀ ತೀರ್ಪನ್ನು ವಿಶ್ಲೇಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಎರಡು ಪ್ರಮುಖವಾದ ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಒಂದನೆಯದು ಸಾಮಾಜಿಕ ನ್ಯಾಯವನ್ನು ಕೊಡಬೇಕೆನ್ನುವ ನೆಪದಲ್ಲಿ ನೀವು ಬೇರೆ ವರ್ಗಗಳಿಗೆ ಅನ್ಯಾಯ ಮಾಡಿ

50 ಭಾಗಕ್ಕಿಂತ ಮೀಸಲಾತಿ ಜಾಸ್ತಿ ಮಾಡಕೂಡದು. ಎರಡನೆಯದು, ಹಿಂದುಳಿದವರ್ಗದವರನ್ನು ಗುರುತಿಸುವಂತಹ ಸಂದರ್ಭದಲ್ಲಿಯಾದವರು ಸಭೆಗೆ ಕರೆದರೆ ದಿಕ್ಕಾರ ಕೂಗಿಕೊಂಡು ವಿಧಾನ ಸೌಧದ ಮುಂದೆ ಹೋದರೆ ಒಂದು ಆಜ್ಞೆ ನೀವು ಹೊರಡಿಸಲಿಕ್ಕೆ ಸಾಧ್ಯವಿಲ್ಲ . ಒಕ್ಕಲಿಗರು ಅವರ ಸ್ವಾಮೀಜಿಯವರ ನೇತೃತ್ವದಲ್ಲಿ ಕಬ್ಬನ್ ಪಾರ್ಕಿನಲ್ಲಿ ಮೆರವಣಿಗೆ ಬರುತ್ತಿದ್ದ ಹಾಗೆಯೇ ಸಭೆ ಇನ್ನು ಸೇರಿಯೇ ಇಲ್ಲ, ಅಷ್ಟು ಬೇಗ ಮಾನ್ಯ ಮೊಯಿಲಿಯವರು ಹೊರಟು ಹೋದರು. ಅವರಿವರು ಸುಳ್ಳು ಹೇಳುತ್ತಾರೆ, ಸುಳ್ಳು ಹೇಳುತ್ತಾರೆಂದು ಹೇಳುತ್ತಾರೆ. ಆದರೆ ಅದೆಷ್ಟು ಸುಳ್ಳು ಹೇಳುತ್ತಾರೋ ಗೊತ್ತಿಲ್ಲ. ಆದರೆ ನಿಮ್ಮ ಮುಖ್ಯಮಂತ್ರಿಗಳು ಬಹಳ ಪುಕ್ಕಲರು ಅಷ್ಟು ಮಾತ್ರ ಹೇಳಬಲ್ಲೆ.ನಮ್ಮಲ್ಲಿ ಹಿಡಪುಕ್ಕಲ ಎಂದು ಹೇಳುತ್ತಾರೆ. ಅವರು ಸುಳ್ಳು ಹೇಳುತ್ತಾರೋ ಇಲ್ಲವೋ ನಾನು ಹೇಳುವುದಕ್ಕಾಗುವುದಿಲ್ಲ. ಅವರಿನ್ನೂ ಜೆ.ಸಿ.ರಸ್ತೆಯಲ್ಲಿ ಬರುತ್ತಿದ್ದಾಗಲೇ ಇಲ್ಲಿ ಸಚಿವ ಸಂಪುಟದ ಸಭೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಅವರಿಗೆ ಈಗ ಭೀಮ ಧೈರ್ಯ ಇದೆ ಅವರ ಧೈರ್ಯಕ್ಕೇನೂ ಕೊರತೆ ಇಲ್ಲ. ಆ ಭೀಮ ಧೈರ್ಯದ ಬಲದಿಂದ ನಾವು ಮಾಡಿದ ಮೀಸಲಾತಿ ಇದೆಯಲ್ಲ ಯಾರ‍್ಯಾರು ಇಲ್ಲದೆ ಇದ್ದವರವನ್ನು ಸೇರಿಸಿದ್ದೇವಲ್ಲ ಅದು ಮಾಡಿದ್ದುದು ಸರಿಯೋ ಅಲ್ಲವೋ ಎನ್ನುವುದನ್ನು ಹೇಳಲಿ.

ಶ್ರೀ ವೈ.ಕೆ.ರಾಮಯ್ಯ :- ನನ್ನ ಮಾತನ್ನು ಕೊನೆ ಮಾಡುವ ಸಂದರ್ಭದಲ್ಲಿ ನೀವೇನು ಮಾಡಬೇಕು, At least now I expect the wisdom will prevail upon you. ಈಗಲಾದರೂ ನಿಮ್ಮ ಕಣ್ಣು ತೆರೆಯಬಹುದೆಂದು ಹೇಳುತ್ತೇನೆ. ಸ್ವಲ್ಪತಡೆದುಕೊಳ್ಳಿ, ನಾನು ಇನ್ನೂ ಅಲ್ಲಿ ಗೆ ಬಂದಿಲ್ಲ.ಈ ರಾಜ್ಯದಲ್ಲಿ ಹಿಂದುಳಿದವರು ಯಾರು, ಮುಂದುವರಿದವರು ಯಾರು ಎನ್ನುವುದನ್ನು ಹೇಗೆ ತೀರ್ಮಾನ ಮಾಡಬೇಕೆನ್ನುವುದನ್ನು ನ್ಯಾಯಾಲಯ ನಿಮಗೆ ನಿರ್ದೇಶನ ಕೊಟ್ಟಿದೆ. ಅದನ್ನು ಬಿಟ್ಟು ಒಂದು ಜಾತಿಯವರು ಮೆರವಣಿಗೆ ತೆಗೆದುಕೊಂಡು ಬರುತ್ತಿದ್ದ ಹಾಗೆ ನಮಗೆ ಅವರು ಓಟು ಕೊಡದೇ ಹೋದಾರು ಎಂದು ಇನ್ನು ಅವರು ಕಬ್ಬನ್ ಪಾರ್ಕಿನೊಳಗೆ ಬರುವುದಕ್ಕೆ ಮೊದಲೇ ನೀವು ಸಚಿವ ಸಂಪುಟದ ಸಭೆ ಕರೆದರೆ.....

ಶ್ರೀ ಕಾಗೋಡು ತಿಮ್ಮಪ್ಪ :- ಅಂದರೆ ಚಿನ್ನಪ್ಪ ರೆಡ್ಡಿ ವರದಿಯನ್ನು ಯಥಾವತ್ತಾಗಿ ಜಾರಿ ಮಾಡೋಣವೇ? ಆ ಅಭಿಪ್ರಾಯ ತಮ್ಮದೇ ಹಾಗೆ ಹೇಳಿ.

ಶ್ರೀ ವೈ.ಕೆ.ರಾಮಯ್ಯ :- ಮಾಡಿ. ಅಲ್ಲಿಗೆ ನಾನು ಬರುತ್ತೇನೆ. ಇವರ ಮುಖ್ಯಮಂತ್ರಿಗಳಿಗೆ ಇವರ ಸರಕಾರಕ್ಕೆ ಒಂದು ಸವಾಲನ್ನು ಹಾಕುವುದಕ್ಕೆ ಇಷ್ಟಪಡುತ್ತೇನೆ. ಈ ಸಾಮಾಜಿಕ ನ್ಯಾಯವನ್ನು ಈ ರಾಜ್ಯದ ಜನರಿಗೆ ಕೊಡುವಂತಹ ಬದ್ದತೆ ಪ್ರಾಮಾಣಿಕತೆ ಇದ್ದರೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಿ ಚುನಾವಣೆಗೆ ಬನ್ನಿ. ನಿಮಗೆ ಬದ್ಧತೆ ಇದ್ದರೆ ನಿಮಗೆ ಈ ವಿಷಯದಲ್ಲಿ ಪ್ರಾಮಾಣಿಕತೆ ಇದ್ದರೆ ನಿಮ್ಮ ಮುಖ್ಯ ಮಂತ್ರಿಗಳು ಅನೇಕ ಸಲ ಅಲ್ಲಿ

ನಿಂತುಕೊಂಡು ಹೇಳುತ್ತಾರೆ. I will do this at the cost of chair " I will do this at the cost of this chair" ಎಂದು ಇವರ ಮಾತಿನಲ್ಲಿ ಸತ್ಯ ಇದ್ದರೆ ಪ್ರಾಮಾಣಿಕತೆ ಬದ್ಧತೆ ಇದ್ದರೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೆ ಕೊಡುವ ಧೈರ್ಯ ಸಾಹಸವನ್ನು ತೋರಿ ಚುನಾವಣೆಗೆ ಬನ್ನಿ. ಮಾಡುತ್ತೀರಾ? ಮಾಡಿ ಎಂದು ನಾನು ಹೇಳುತ್ತಿದ್ದೇನೆ.. I request the Government to implement the Chinnappa Reddy Commission report as it is. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೆ ತಂದು ಚುನಾವಣೆಗೆ ಬನ್ನಿ, ಈ ವಿಶೇಷ ಅಧಿವೇಶನ, ಈ ಮೀಸಲಾತಿಯ ದೊಂಬರಾಟ ರಾಜಕೀಯ ಕಾರಣಕ್ಕಾಗಿ ಅಲ್ಲ, ಇದು ಪ್ರಾಮಾಣಿಕವಾಗಿ ಹಿಂದುಳಿಳ ವರ್ಗದವರ ಹಿತರಕ್ಷಣೆಗಾಗಿ ಎಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ಈ ವರದಿಯನ್ನು ಅನುಷ್ಠಾನಗೊಳಿಸಿ ಹೊರಗೆ ಬನ್ನಿ. ನೀವು ಮನ್ನಿಸುತ್ತೇನೆ ಎಂದು ಒಪ್ಪಿಕೊಳ್ಳುವುದಾದರೆ ನನ್ನ ವಾದವನ್ನು ಇಲ್ಲಿಗೆ ನಿಲ್ಲಿಸಿಬಿಟ್ಟು ಕುಳಿತುಕೊಳ್ಳುತ್ತೇನೆ. ನಾನು ಮುಂದಕ್ಕೆ ಮಾತನ್ನೇ ಆಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ನಾನು ಏಕೆ ಈ ಮಾತನ್ನು ಹೇಳುವುದಕ್ಕೆ ಬಂದೆ ಎಂದರೆ ಹಿಂದುಳಿದಿರುವಿಕೆಯನ್ನು ಗುರುತಿಸುವಂಥ ಸಂದರ್ಭದಲ್ಲಿ ಯಾವುದೇ ಒಂದು ವರ್ಗಕ್ಕೆ.......

ಪ್ರೊ ಎಂ.ಡಿ. ನಂಜುಂಡಸ್ವಾಮಿ :- ಮಾನ್ಯ ರಾಮಯ್ಯನವರೇ, ಒಂದು ತಿದ್ದುಪಡಿ ಬರುತ್ತದೆ, ನೋಡಿಕೊಂಡುಬಿಡಿ. ತಿದ್ದುಪಡಿ ಇಲ್ಲದೆ ಮಂಡಿಸಿದ್ದಾರೆಂದು ಅಭಿನಂದಿಸೋಣ ಎಂದು ಇದ್ದೆ ನಾನು. ಈಗ ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಅವರೇನು ಅಡಪುಕ್ಕಲರು ಎನ್ನುತ್ತಿದ್ದರಲ್ಲ, ಅದಕ್ಕೆ ಬೇರೆ ಇನ್ನೊಂದು ಏನಾದರೂ superlative ಇದೆಯೂ ಎಂದು ಹುಡುಕಬೇಕು ನಾನು.

ಶ್ರೀ ವೈ.ಕೆ. ರಾಮಯ್ಯ :- ಅವರು ಸುಳ್ಳು ಹೇಳುತ್ತಾರೆ ಎನ್ನುವುದರ ಬಗ್ಗೆ ರಾಜಕಾರಣದಲ್ಲಿ ಹೇಳಬೇಕಾಗುತ್ತದೊ ಏನೊ. ಇಷ್ಟಂತೂ ನಾನು ಹೇಳುತ್ತೇನೆ. I am convinced. ಅವರು ಬಹಳ ಪುಕ್ಕಲರು ಇದ್ದಾರೆ. I would like to repeat it with great reluctance. ತಿದ್ದುಪಡಿ 73 ಕ್ಕೆ ನಿಲ್ಲಿಸಿದ್ದಾರೆ. ಎಂದು ಕಾಣುತ್ತದೆ. ನೋಡೋಣ, ನಾಳೆ ಇನ್ನಾವ ತಿದ್ದುಪಡಿ ಬರುತ್ತದೋ ಎಂದು ಇನ್ನಾವುದಾದರೂ ಜಾತಿಯವರು ಇವತ್ತು ಸಾಯಂಕಾಲ ಮೆರವಣಿಗೆ ಹೊರಟರೆ ನಾಳೆ ಇನ್ನೊಂದು ತಿದ್ದುಪಡಿ ಬಂದರೂ ಬರಬಹುದು. ನಾವೇ ಪ್ರಯತ್ನಪಡೋಣ ಯಾರಾದರೂ ಜನರು ಸಿಕ್ಕಿದರೆ ಹೊರಡಿಸುವುದಕ್ಕೆ. ಈ ಮಾತನ್ನು ನಾನು ಲಘುವಾಗಿ ಅಥವಾ ಹಾಸ್ಯಕ್ಕಾಗಿ ಹೇಳುತ್ತಿಲ್ಲ. ಯಾವುದೇ ಸರ್ಕಾರ ಅದು ವೀರಪ್ಪಮೊಯಿಲಿಯವರ ಸರ್ಕಾರವಾಗಿರಲಿ, ಮತ್ತೊಂದು ಸರ್ಕಾರವಾಗಲಿ, ಯಾವುದೇ ರಾಜ್ಯಸರ್ಕಾರ ಆಗಿರಲಿ, ಕೇಂದ್ರಸರ್ಕಾರ ಆಗಿರಲಿ, ಹಿಂದುಳಿದ ವರ್ಗವನ್ನು ಗುರುತಿಸುವಂಥ ಸಂದರ್ಭದಲ್ಲಿ it is not for the subjective satisfaction. ನಿಮ್ಮ ಭಾವನೆಗಳನ್ನು, ನಿಮ್ಮ ಉದ್ವೇಗವನ್ನು ನಿಮ್ಮ ಬದ್ಧತೆಗಳನ್ನು ನಿಮ್ಮ ತೀಟೆಯನ್ನು, ನಿಮ್ಮ ತೆವಲುಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಈ ರೀತಿ ತಿದ್ದುಪಡಿ ತರಲು ಸಾಧ್ಯವಿಲ್ಲ. ನಿಮ್ಮ ತೆವಲು ತೀರಿಸಿಕೊಳ್ಳುವುದಕ್ಕೆ ನೀವು ಈ ಕಾನೂನನ್ನು ತರಲಿಕ್ಕೆ ಸಾಧ್ಯವಿಲ್ಲ. That is why I have already read the relevant para 55. ನೀವು

ಹಾಗೇನಾದರೂ ನಿಮ್ಮ ತೀಟೆ ತೀರಿಸಿಕೊಳ್ಳುವುದಕ್ಕಾಗಿ ನಿಮ್ಮ ತೆವಲು ತೀರಿಸಿಕೊಳ್ಳುವುದಕ್ಕೆ ಯಾವುದಾದರೂ ಒಂದು ಗುಂಪನ್ನು ಸ್ಯಾಟಿಸೆಫೈ ಮಾಡಲಿಕ್ಕೆ or for your subjective satisfaction ನೀವು ಈ ತೀರ್ಮಾನವನ್ನು ತೆಗೆದುಕೊಂಡರೆ its a fraud ಯಾವ ಉಚ್ಛನ್ಯಾಯಾಲಯ ಏನನ್ನು ಮಾಡಬಾರದು ಎಂದು ಹೇಳಿದೆಯೋ ಈ ಸರ್ಕಾರ ಅದನ್ನೇ ಮಾಡುತ್ತದೆ. ಹಳ್ಳಿಯ ಕಡೆ ಒಂದು ಗಾದೆ ಹೇಳುತ್ತಾರೆ. ಹೇಳುವುದಕ್ಕಾಗುವುದಿಲ್ಲ ಏನು ಮಾಡುವುದು? ಸದನ ಆದ್ದರಿಂದ ಹೇಳುವುದಕ್ಕಾಗುವುದಿಲ್ಲ. ಹಳ್ಳಿಯ ಕಡೆ ಒರಟು ಭಾಷೆ ಅದು. ನಾನು ಏನು ಮಾಡಬೇಡ ಎಂದು ಹೇಳುತ್ತೀಯೋ ಬಡ್ಡಿ ನೀ ಅದೇ ಮಾಡುತ್ತೀಯಲ್ಲ ಎನ್ನುತ್ತಾನೆ ನಮ್ಮಪ್ಪ ಸುಪ್ರೀಂ ಕೋರ್ಟ್‌ನವರು ಕುಳಿತುಕೊಂಡು ಇದನ್ನು ಮಾಡಬೇಡ್ರಯ್ಯ ನೀವು, ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ನೀವು ಅದನ್ನೇ ಮಾಡುತ್ತೇವೆ ಎಂದು ದೊಂಬರಾಟ ಆಡುತ್ತಲೇ ಇದ್ದೀರಿ. ಮೀಸಲಾತಿ 50 ಕ್ಕೆ ಮೀರಬೇಡಿ ಎಂದು ಅವರು ನಿರ್ದೇಶನ ಕೊಡುತ್ತಾರೆ. ನೀವು ಹೇಳಿ ಸ್ವಾಮಿ ವಕೀಲರಾಗಿ. ನೀವಾದರೂ ಬುದ್ಧಿ ಹೇಳಿ. ಲಾ ಡಿಪಾರ್ಟ್‌ಮೆಂಟ್‌ನವರು ಬುದ್ಧಿ ಹೇಳುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನೀವಾದರೂ ಬುದ್ಧಿ ಹೇಳಿ ಈ ಸರ್ಕಾರಕ್ಕೆ. ನೀವು 50 ನ್ನು ಮೀರಬೇಡಿ ಎಂದು ನಿರ್ದಿಷ್ಟವಾದಂಥ ನಿರ್ದೇಶನ ಕೊಡುತ್ತಾರೆ. ಇವರು ಒಂದು ದಿನ 63 ಮಾಡುತ್ತಾರೆ. ಒಂದು ದಿನ 73 ಮಾಡುತ್ತಾರೆ. ಒಂದು ದಿನ 80 ಮಾಡುತ್ತಾರೆ. ಇವತ್ತು ಎಷ್ಟು ಮಾಡಿದ್ದಾರೆ ಎಂದರೆ 73 ಮಾಡಿದ್ದಾರಂತೆ. ನಾಳೆಗೆ ಎಷ್ಟು ಮಾಡುತ್ತಾರೋ ನನಗೆ ಗೊತ್ತಿಲ್ಲ. ನಿಮ್ಮ ಈ ಯಾವ ಅಂಕಿಗಳೂ ನಿಲ್ಲುವುದಿಲ್ಲ. ಕೊನೆಗೆ ನಿಲ್ಲುವುದು ಸುಪ್ರಿಂ ಕೋರ್ಟಿನ ನಿರ್ದೇಶನ ಒಂದೇ. ನಾನು ಆಗಲೇ ಹೇಳಿದ್ದೇನೆ, ಅದನ್ನು ಮೀರಿ ನಾವ್ಯಾರು ಒಂದು ಇಂಚು ಆ ಕಡೆ ಈ ಕಡೆ ಹೋಗಲಿಕ್ಕೆ ಸಾಧ್ಯವಿಲ್ಲ. ಇದು ಒಂದು. ಇನ್ನು ಎರಡನೆಯದು ಉಚ್ಛನ್ಯಾಯಾಲಯದವರು ಮಾಡಬೇಡಿ ಎಂದು ಹೇಳಿದ ಮತ್ತೊಂದು ಕೆಲಸವನ್ನು ನೀವು ಮಾಡುತ್ತಿರುವುದು ಯಾವುದು ಎಂದರೆ subjective satisfaction ಗಾಗಿ ನೀವು ಹಿಂದುಳಿದ ವರ್ಗವನ್ನು ಗುರುತಿಸುವುದಕ್ಕೆ ಹೋಗಬೇಡಿ. ಯಾವುದಾರೂ ಗುಂಪನ್ನು ಸಮಾಧಾನಮಾಡುವುದಕ್ಕೆ ನೀವು ಗುರುತಿಸುವುದಕ್ಕೆ ಹೋಗಬೇಡಿ ಎಂದು ಅವರು ಹೇಳಿದರೆ ನೀವು ಒಂದೊಂದು ವರ್ಗದವರೂ ಮೆರವಣಿಗೆ ತಂದಾಗಲೂ ಸಹಾ ಒಂದು ಆಜ್ಞೆಯನ್ನು ಹೊರಡಿಸುತ್ತಿದ್ದೀರಿ.

**1.30. ಪಿ.ಎಂ**

ಶ್ರೀ ಕಾಗೋಡು ತಿಮ್ಮಪ್ಪ :- ಆಗ ಅಧ್ಯಕ್ಷರು ಹೇಳಿದರು, ಒಂದು ವರ್ಗಕ್ಕೆ ಒಂದು ಸಹಾಯವನ್ನು ಒಂದು ಸಾರಿ ಕೊಟ್ಟಾದ ಮೇಲೆ ಅದನ್ನು ವಾಪಸ್ ತೆಗೆದುಕೊಳ್ಳುವುದು ಅಷ್ಟು ಸುಲಭವಲ್ಲ ಎಂದು ಅವರು ಪ್ರಾರಂಭದಲ್ಲಿ ಹೇಳಿದರು. ಈಗ ಹಾವನೂರ್ ವರದಿ ಆಯೋಗದ ಶಿಫಾರಸ್‌ನ್ನು ಜಾರಿಗೆ ತಂದಂಥ ಸಂದರ್ಭದಲ್ಲಿ ಒಕ್ಕಲಿಗರ ಸಮಾಜ ಕೂಡ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿತ್ತು. ಅದು ವೆಂಕಟಸ್ವಾಮಿ ಆಯೋಗದಲ್ಲಿ ಕೈಬಿಟ್ಟುಹೋಗಿತ್ತು, ಮತ್ತು ಚಿನ್ನಪ್ಪರೆಡ್ಡಿ ಆಯೋಗದಲ್ಲಿ ಕೈಬಿಟ್ಟು ಹೋಗಿತ್ತು. ಈಗ ಒಂದು ವೇಳೆ ನಾವು ಒಂದು ಸಾರಿ ಒಂದು ವರ್ಗ, ಒಂದು ಸಾಮಾಜಿಕ ನ್ಯಾಯವನ್ನು ಪಡೆಂಥ ಸಂದರ್ಭದಲ್ಲಿ ಮತ್ತೆ ಅದನ್ನು ತಪ್ಪಿಸಿದರೆ ಆ

ವರ್ಗದಿಂದ ಬರತಕ್ಕಂಥ ಪ್ರತಿಕ್ರಿಯೆ ಇರುವುದಿಲ್ಲವೇ? ಅಂಥ ಸಂದರ್ಭದಲ್ಲಿ ಮಾನ್ಯ ರಾಮಯ್ಯನವರು ಏನು ಹೇಳುತ್ತಾರೆ?

ಶ್ರೀ ಆರ್ ದಯಾನಂದರಾವ್ :- ರಾಮಯ್ಯನವರು ಬೇಡ ಎಂದರೆ ಬೇಡ.

*ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೇ, ನಾನು ಒಂದು ಜಾತಿಯಲ್ಲಿ ಹುಟ್ಟಿದ್ದೇನೆ. But it is not by application ನಾನು ಅರ್ಜಿ ಹಾಕಿಕೊಂಡಿರಲಿಲ್ಲ. ನನಗೆ ನಾಗರತ್ನಮ್ಮನವರು ಈ ಮಾತನ್ನು ಹೇಳಿದ್ದರು. ಇಂಥ ಜಾತಿಯಲ್ಲಿ ಹುಟ್ಟಬೇಕು ಎಂದು ನಾನು ಅರ್ಜಿ ಹಾಕಿ ಕೊಂಡಿರಲಿಲ್ಲ. ಹುಟ್ಟು ಆಕಸ್ಮಿಕ. ಆದ್ದರಿಂದ ನಾನೂ ಒಂದು ಜಾತಿಯಲ್ಲಿ ಹುಟ್ಟಿದ್ದೇನೆ. ವೆಂಕಟಸ್ವಾಮಿ ಆಯೋಗದಲ್ಲಿ ಏನಾಗಿತ್ತು, ಹವನೂರ್ ಆಯೋಗದಲ್ಲಿ ಏನಾಗಿತ್ತು, ನನಗೆ ಗೊತ್ತಿದೆ. ಈ ಮೀಸಲಾತಿಯ ತುಪ್ಪವನ್ನು ತುಟಿಗೆ ಸವರಿ, ಮೂಗಿಗೆ ಸವರಿ ಯಾವ ಜಾತಿಯವರನ್ನು ನೀವು ಉದ್ಧಾರ ಮಾಡುವುದಕ್ಕೆ, ನಾನು ಕೂಡ ಉದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ನನ್ನ ನಂಬಿಕೆ. ನಿಮ್ಮ ಪ್ರಶ್ನೆಗೆ ನಾನು ಉತ್ತರವನ್ನು ಕೊಡುತ್ತೇನೆ, ಸಿದ್ಧನಿದ್ದೇನೆ. ಒಂದು ಸಾರಿ ಯಾವುದಾದರೂ ವರ್ಗಕ್ಕೆ ಕೊಟ್ಟಂಥ ಸವಲತ್ತನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದುದು ನಾನಲ್ಲ, ನಿಮ್ಮ ಮುಖ್ಯಮಂತ್ರಿಗಳು ಹೇಳಿದರು,. ಅದಕ್ಕೆ ನಾನು ಉತ್ತರ ಕೊಡುತ್ತಿರುವುದು. ಕೊಟ್ಟಂಥ ಸವಲತ್ತುಗಳನ್ನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದು ರಾಜಕೀಯವಾಗಿ. ಆದರೆ ನಿಮ್ಮ ರಾಜಕೀಯ ತೆವಲನ್ನು ತೀರಿಸಿಕೊಳ್ಳುವುದಕ್ಕೆ, ಈ ರಾಷ್ಟ್ರದ ಉಚ್ಚನ್ಯಾಯಾಲಯದ ತೀರ್ಪನ್ನು ನೀವು ವಯಲೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರಾಷ್ಟ್ರದ ಯಾವುದೇ ವ್ಯಕ್ತಿ, ಯಾವುದೇ ಸರ್ಕಾರ, ಯಾವುದೇ ವ್ಯಕ್ತಿ, ಯಾವುದೇ ಅಥಾರಿಟಿ ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನು ಮೀರಿ ನಡೆದುಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ಈ ಮಾತನ್ನು ನಿಮಗೆ ಹೇಳುತ್ತಿದ್ದೇನೆ. ನೀವು ಸವಲತ್ತು ಕಿತ್ತುಕೊಳ್ಳುತ್ತೀರೋ ಕೊಡುತ್ತೀರೋ ನನಗೆ ಅದರ ಬಗ್ಗೆ ಸಂಬಂಧವಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ :- ಮಾನ್ಯ ಅಧ್ಯಕ್ಷರೇ, ಈಗಾಗಲೇ 1986 ನೇ ಇಸವಿಯಲ್ಲಿ ಮತ್ತು ಅದಕ್ಕೆ ಹಿಂದೆ 50 ಪರ್‌ಸೆಂಟ್‌ಗಿಂತ ಹೆಚ್ಚಿನ ಸವಲತ್ತನ್ನು ಹಿಂದುಳಿದ ವರ್ಗದವರಾದ ನಾವು ಅನುಭವಿಸುತ್ತಿದ್ದೇವೆ. ಅದು ಯಾವುದು ಕಾನ್‌ಸ್ಟಿಟ್ಯೂಷನ್‌ಗೆ ವಿರೋಧ ಇರಲಿಲ್ಲವೋ ನಾವು ಈಗ ಅದನ್ನು ಅನುಭವಿಸುತ್ತಿದ್ದೇವೆ. ಏಕೆಂದರೆ ಆಗ ಅನುಭವಿಸುವುದಕ್ಕೆ ಸಾಧ್ಯವುಂಟು. ಇನ್ನು ಮುಂದೆ ಏಕೆ ಸಾಧ್ಯವಿಲ್ಲ? ಈಗಾಗಲೇ ತಮಿಳುನಾಡಿನವರು ತೋರಿಸಿದ್ದಾರಲ್ಲ ಮಾಡುವುದಕ್ಕೆ ಸಾಧ್ಯ ಉಂಟು ಎಂದು. ನಾವು ಪ್ರಯತ್ನ ಮಾಡಿದಿದ್ದರೆ ನಾವೆಲ್ಲ ಪಾಪಗಾರರಾಗುತ್ತೇವೆ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೇ, 1986ರಲ್ಲಿ ಮೀಸಲಾತಿ ಪದ್ಧತಿಯನ್ನು ಆಡಳಿತಾತ್ಮಕ ಆಜ್ಞೆಯ ರೂಪದಲ್ಲಿ ಅಂದು ಇದ್ದಂಥ ಸರ್ಕಾರ ಕಾರ್ಯರೂಪಕ್ಕೆ ತಂದಾಗ ಸನ್ಮಾನ್ಯ ನಮ್ಮ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನ್ಯಾಯಾಲಯದ ನಿರ್ದೇಶನ ಇರಲಿಲ್ಲ. ಅಷ್ಟೇ ನನ್ನ ಉತ್ತರ ಅವರಿಗೆ. ಇನ್ನು ಯಾವುದನ್ನು ನ್ಯಾಯಾಲಯ ಮಾಡಬಾರದು ಎಂದು ಹೇಳುತ್ತಿದೆಯೋ

ಅದನ್ನೇ ಮಾಡಲಿಕ್ಕೆ ಈ ಸರ್ಕಾರ ಹೊರಟಿರುವುದರಿಂದ ಇವರ ಉದ್ದೇಶ ಸಾಧನೆ ಸಫಲವಾಗುವುದಿಲ್ಲ. ಅದನ್ನು ನಾನು ಹೇಳುವುದಕ್ಕೆ ಇಷ್ಟಪಟ್ಟಿರುವುದು ಯಾವ ಉದ್ದೇಶವನ್ನು ಇಟ್ಟುಕೊಂಡು ನಾವು ತರುತ್ತಿದ್ದೀವೆ. ಎಂದು ಹೇಳುತ್ತಾರೋ ಆ ಉದ್ದೇಶವೂ ಕೂಡ malfide ಇವರು ಹೇಳುವ ಉದ್ದೇಶದಲ್ಲಿ ಪ್ರಾಮಾಣಿಕತೆ ಇಲ್ಲ. ಅದು ಇದ್ದಾಗ್ಯೂ ಕೂಡ ಪ್ರಾಮಾಣಿಕವಾಗಿ ಇವರು ಹಿಂದುಳಿದ ವರ್ಗದ ಕಲ್ಯಾಣಕ್ಕಾಗಿ ತರುತ್ತಿದ್ದರೂ ಕೂಡ ಈ ನಿರ್ದೇಶನದ ದೆಸೆಯಿಂದಾಗಿ, ಈ ನಿರ್ದೇಶನದ ನಿರ್ಬಂಧದಿಂದಾಗಿ ಇದನ್ನು ತರುವುದಕ್ಕೆ ಸಾಧ್ಯತೆ ಇಲ್ಲ ಆದ್ದರಿಂದ ಮತ್ತೆ ಬಂಗಾರಪ್ಪನವರ ಮಾತನ್ನು ಒಪ್ಪಬೇಕಾಗುತ್ತದೆ. ಈ ವಿಧೇಯಕವನ್ನು ಪಾಸು ಮಾಡಿಕೊಳ್ಳುವುದರಿಂದ ನಿಮ್ಮ ರಾಜಕೀಯ ಉದ್ದೇಶ ಕೂಡ ಸಾಧನೆಯಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮೊದಲನೇಬಾರಿಗೆ ಆರ್ಟಿಕಲ್ 15(4) 16(4) ರ ಪ್ರಕಾರ ಹರಿಜನ ಗಿರಿಜನರಿಗೆ ಮಾತ್ರ ಮಿಾಸಲು ಮಾಡುವುದಕ್ಕೆ ಅವಕಾಶ ಇತ್ತು. ತದನಂತರ ಆ ಎರಡೂ ಕಲಂಗಳಿಗೆ ಒಂದು ತಿದ್ದುಪಡಿ ತಂದು other backward classes ಎನ್ನುವುದನ್ನು ಸೇರಿಸಿದರು. ಅದೂ ಕೂಡ ತಮಗೆ ಗೊತ್ತಿದೆ. ಸುಪ್ರಿಂ ಕೋರ್ಟ್‌ವರೆಗೆ ಹೋಗಿ ಹಿಂದುಳಿದವರಿಗೆ ಮಿಾಸಲಾತಿ ಮಿಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳಿದಾಗ ರಾಜ್ಯಾಂಗಕ್ಕೆ ತಿದ್ದಪಡಿ ಮಾಡಿರತಕ್ಕಂಥದ್ದು ಆದ್ದರಿಂದ ಒಂದು ವೇಳೆ ಸುಪ್ರೀಂ ಕೋರ್ಟಿನ ತೀರ್ಮಾನವನ್ನು over come ಮಾಡುವ ದೃಷ್ಟಿಯಿಂದ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡತಕ್ಕಂಥ ಸನ್ನಿವೇಶ ಬಂದರೆ ಆಗ ತಮ್ಮ ಅಭಿಪ್ರಾಯವನ್ನು ಏನು ಹೇಳುತ್ತೀರಿ?

ಶ್ರೀ ವೈ.ಕೆ. ರಾಮಯ್ಯ : ಮಾನ್ಯಅಧ್ಯಕ್ಷರೇ, ನಿಮಗೆ ಗೊತ್ತಿದೆ. ಕೋರ್ಟಿನಲ್ಲಿ ವಾದ ಮಾಡುವಾಗ ಡೈವರ್ಟ್ ಆದರೆ ಏನು ಕಷ್ಟವಾಗುತ್ತದೆ ಎಂದು . ನಾನು ಮತ್ತೊಂದು ವಿಷಯ ಪ್ರಸ್ತಾಪ ಮಾಡಿಬಿಟ್ಟು ಅಲ್ಲಿಗೆ ಬರುತ್ತೇನೆ. ಈ ವಿಶೇಷ ಅಧಿವೇಶನವನ್ನು ಕರೆದಿರುವಂಥ ಪ್ರಾಮಾಣಿಕತೆಯ ಬಗ್ಗೆಯೇ ನಾನು ನಿಮ್ಮನ್ನು ಪ್ರಶ್ನೆ ಮಾಡುವುದರಲ್ಲೇ ಇದ್ದೇನೆ ಇನ್ನು. ಈ ರಾಜ್ಯದ ಹಿಂದುಳಿದವರ ಕಲ್ಯಾಣಕ್ಕಾಗಿ ವಿಧೇಯಕವನ್ನು ತಂದಿದ್ದೇವೆ ಎನ್ನುವುದು ರಾಜ್ಯ ಸರ್ಕಾರದವರ ಪ್ರತಿಪಾದನೆ.

ಅದಕ್ಕೆ ಅಭಿನಂದಿಸುತ್ತೇನೆ. ಆದರೆ ಹಿಂದುಳಿದವರಿಗೆ ಮಿಾಸಲಾತಿಯನ್ನು ತಂದು ಅವರ ಕಲ್ಯಾಣವನ್ನು ಮಾಡುವುದಕ್ಕೆ ವಿಧೇಯಕದ ಅವಶ್ಯಕತೆ ಇತ್ತೆ? ಬೇಕಾದರೆ ಇದರ ಬಗ್ಗೆ ನಿಮ್ಮ ಕಾನೂನು ಇಲಾಖೆಯವರಿಗೆ ನೋಟ್‌ನ್ನು ಕಳಿಸಿಕೊಡಿ. ಇದರ ಬಗ್ಗೆ ಸುಪ್ರೀಮ್ ಕೋರ್ಟಿನವರು ಏನು ಹೇಳಿದ್ದಾರೆಂಬುದನ್ನು ಓದಿದ್ದೀರ? "Authorities who can make the reservation under Article 16(4)" ವಿಧೇಯಕ ಏಕೆ ಬೇಕು? ಓಟಿಗಾಗಿ ವಿಧೇಯಕ ಬೇಕೆ? ಅಧ್ಯಕ್ಷರೆ, ಇವರಿಗೆ ಬುದ್ದಿ ಹೇಳುವುದಿಲ್ಲವೆ? Why can't you advise the Government properly? This Law Department, your so called bureaucrats, what they are doing . The provision for the reservation in favour of the backward classes cannot only be made by

Legislature but can also be made by the executive in respect of the Centre, State and by local authorities and other authorities like statutory authorities. " This is again 55, pages 296-366. Has the bureaucracy become part of the ruling party to dance to their tunes? ಎಷ್ಟು ಜನರ ಕಣ್ಣಿಗೆ ಮಣ್ಣನ್ನು ಎರಚುವ ಪ್ರಯತ್ನ ಮಾಡುತ್ತೀರಿ? ಈ ವಿಧೇಯಕವನ್ನು ಇಲ್ಲಿ ತಂದು ನಾವು ಹಿಂದುಳಿದ ಜನಗಳ ಕಲ್ಯಾಣವನ್ನು ಮಾಡುತ್ತೇವೆ ಎನ್ನತಕ್ಕ ನಾಟಕ, ನಾಟಕದ ಪರದೆ, ತಾಳ ಮದ್ದಳೆಗಳ ಅವಶ್ಯಕತೆ ಇತ್ತೆ? A mere executive order could have served the purpose. ಒಂದು ಆಡಳಿತಾತ್ಮಕವಾದ ಆಜ್ಞೆಯನ್ನು ತಂದಿದ್ದರೆ ಈ ರಾಜ್ಯದಲ್ಲಿರತಕ್ಕ ಹಿಂದುಳಿದ ವರ್ಗಗಳ ಕಲ್ಯಾಣವನ್ನು ಮಾಡುವುದಕ್ಕೆ ನಿಮಗೆ ಸಾಧ್ಯವಿತ್ತು, ಅದನ್ನು ಮಾಡುವುದನ್ನು ಬಿಟ್ಟು ಈ ವಿಶೇಷ ಅಧಿವೇಶನವನ್ನು ಕರೆದು ಹಿಂದುಳಿದ ವರ್ಗದವರ ಕಲ್ಯಾಣವನ್ನು ಮಾಡುತ್ತೇವೆಂದು ಹೇಳಿದರೆ ಯಾರೂ ಅದನ್ನು ನಂಬಲು ಸಿದ್ಧರಾಗಿಲ್ಲ.

Sri M. Mallikarjuna Kharge :- Isn't the Executive Order struck down?

Sri Y.K. Ramaiah :- No. Not at all. Give me the instance.

ಅಂಥದ್ದು ಯಾವುದಾದೂ ಇದ್ದರೆ ಕೊಡಲಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ನನಗೆ ತಿಳಿದಿರುವ ಮಟ್ಟಿಗೆ ಅಂಥದ್ದು ಯಾವುದೂ ಇಲ್ಲ. ಈ ಒಂದು ಸವಲತ್ತನ್ನು ಎಗ್ಸಿಕಿಟೀವ್ ಅರ್ಡ್‌ರ್ ಮೂಲಕ ತಂದಿರತಕ್ಕದ್ದು ಮತ್ತು ಅದು ತಿರಸ್ಕೃತವಾಗಿರತಕ್ಕದ್ದು ಯಾವುದೂ ಇಲ್ಲ ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುವುದೇನೆಂದರೆ, 1986ನೇ ಇಸವಿಯಲ್ಲಿ ಎಗ್ಸಿಕಿಟೀವ್ ಅರ್ಡ್‌ರ್ ಮೂಲಕ ರಾಮಕೃಷ್ಣ ಹೆಗಡೆ ಯವರು ಏನು ಆಜ್ಞೆಯನ್ನು ತಂದಿದ್ದರೋ ಅದು ಸ್ಟ್ರುಕ್‌ದೌನ್ ಆಗಲಿಲ್ಲ, ಅದು ತಿರಸ್ಕತವಾಗಲಿಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ :- ಹಿಂದೆ ಇರತಕ್ಕ ಎಲ್ಲವುಗಳು ಸಹ ಎಗ್ಸಿಕಿಟೀವ್ ಆರ್ಡ್‌ರ್‌ಗಳೆ. ಹಾವನೂನು ವರದಿ, 1986ರದ್ದು ಎಲ್ಲವು ಸಹ ಎಗ್ಸಿಕಿಟೀವ್ ಅರ್ಡ್‌ರ್‌ದ್ದೆ. ನಾವೀಗೆ ಏನು ತಂದಿದ್ದೇವೆ ಅದೊಂದನ್ನು ಬಿಟ್ಟು ಉಳಿದಿರತಕ್ಕದ್ದೆಲ್ಲದ್ದು ಸಹ ಎಗ್ಸಿಕಿಟೀವ್ ಅರ್ಡ್‌ರ್‌ದ್ದೆ. ಸುಪ್ರೀಂ ಕೋರ್ಟ್‌ನವರು ಮೀಸಲಾತಿಯನ್ನು 50 ಪರ್‌ಸೆಂಟ್‌ಗಿಂತ ಕಡಿಮೆ ಮೆಂಟೇನ್ ಮಾಡಿ ಎಂದು ಹೇಳಿದಮೇಲೆ ಈ ಲೆಜಿಸ್‌ಲೇಷನ್ ಬಿಟ್ಟು ಬೇರೆ ದಾರಿ ಯಾವುದು ಇದೆ?

* ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ಸುಪ್ರೀಂ ಕೋರ್ಟ್‌ನವರು ಇವ್ಯಾವುದನ್ನು ಪ್ರಸ್ತಾಪ ಮಾಡಿಲ್ಲ. ಸುಪ್ರೀಂ ಕೋರ್ಟಿನವರು ಎರಡೇ ಎರಡು ವಿಷಯಗಳಲ್ಲಿ ನಿರ್ಬಂಧನ ಮಾಡಿದ್ದಾರೆ. ಒಂದನೆಯದು ಐವತ್ತು ಪರ್‌ಸೆಂಟ್ ಮೀಸಲಾತಿಯನ್ನು ಮೀರಬೇಡಿ. ಮತ್ತೊಂದು ಮೀಸಲಾತಿಯನ್ನು ಗುರುತಿಸತಕ್ಕ ಸಮಯದಲ್ಲಿ ಒಂದೊಂದು ಜಾತಿಯ ಮೆರವಣಿಗೆ ಬಂದಾಗಲೂ ಸಹ ಅವರ ಒತ್ತಡಕ್ಕೆ

ಮಣಿಯಬಾರದು ವೈಜ್ಞಾನಿಕವಾದ ಅಂಕಿಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ಆಧಾರವಾಗಿಟ್ಟುಕೊಂಡು ಜಾತಿಗಳನ್ನು ಗುರುತಿಸಬೇಕು, ಅದನ್ನು ಬಿಟ್ಟು ಯಾವುದೇ ಒಂದು ಜಾತಿಯನ್ನು, ವರ್ಗದವರನ್ನು ತೃಪ್ತಿಪಡಿಸುವ ಕೆಲಸವನ್ನು ಮಾಡಬಾರದೆಂದು ಅವರು ಎರಡೇ ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ ಆಡಳಿತಾತ್ಮಕವಾದ ಆಜ್ಞೆಯ ಆಧಾರದ ಮೇಲೆ ಮಾಡಿದಂಥ ಮೀಸಲಾತಿಯನ್ನು ಈ ರಾಷ್ಟ್ರದ ಯಾವುದೇ ನ್ಯಾಯಾಲಯ ತಿರಸ್ಕರಿಸಿದೆ ಎನ್ನತಕ್ಕದ್ದು ನನ್ನ ಗಮನಕ್ಕೆ ಬಂದಿಲ್ಲ. ಅಂಥಾದ್ದು ಇದ್ದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ನ್ಯಾಯಾಲಯದ ಈ ಎರಡು ನಿರ್ದೇಶನಗಳನ್ನು ನಿಕೃಷ್ಟವಾಗಿ ಕಂಡು ಈ ಸರ್ಕಾರ ತನ್ನ ರಾಜಕೀಯ ಉದ್ದೇಶವನ್ನು ಸಾಧನೆ ಮಾಡಿಕೊಳ್ಳುವುದಕ್ಕೆ ಹೊರಟಿರುವುದು ಕೂಡ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ಏಕೆಂದರೆ ಮುಖ್ಯಮಂತ್ರಿಗಳು ಎಲ್ಲಿ ಹೋದರೋ ಗೊತ್ತಿಲ್ಲ. One who tries to please all, pleases none, ಎಲ್ಲರನ್ನೂ ತೃಪ್ತಿಗೊಳಿಸಲು ಹೋಗುವವರಿಗೆ ಅವರು ವ್ಯಕ್ತಿಯಾಗಲಿ, ಸರ್ಕಾರವಾಗಲಿ ಯಾರನ್ನೂ ಕೂಡ ತೃಪ್ತಿಗೊಳಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಒಂದು ಸಣ್ಣ ಕಥೆ ಇದೆ. ತಮಗೆ ಜ್ಞಾಪಕವಿರಬಹುದು. ಆ ಕಥೆಯ ಶೀರ್ಷಿಕೆಯೇ One who tries to please all, pleases none. ಒಬ್ಬ ಮುದುಕ, ಒಬ್ಬ ಹುಡುಗ ಒಂದು ಬಡಕಲು ಕತ್ತೆಯನ್ನು ಹೊಡೆದುಕೊಂಡು ದಾರಿಯಲ್ಲಿ ಹೋಗುತ್ತಿದ್ದರು ಯಾರೋ ಒಬ್ಬ ದಾರಿಯಲ್ಲಿ ಸಿಕ್ಕಿದ. ಆತ ಚಿಕ್ಕ ಮಗನನ್ನು ಇಷ್ಟೊಂದು ಗೋಳು ಹುಯಿಸಿಕೊಂಡು ನಡೆಸಿಕೊಂಡು ಹೋಗುತ್ತಿದ್ದೀಯಲ್ಲಾ, ಆತನನ್ನು ಕತ್ತೆ ಮೇಲೆ ಕೂರಿಸು ಎಂದು ಹೇಳಿದ. ಹುಡುಗನನ್ನು ಕತ್ತೆ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದಾಗ ಸ್ವಲ್ಪ ದೂರ ಕ್ರಮಿಸಿದ ಬಳಿಕ ಇನ್ನೊಬ್ಬದಾರಿಯಲ್ಲಿ ಸಿಕ್ಕಿ ಕತ್ತೆ ಮೇಲೆ ಕುಳಿತ ಹುಡುಗನಿಗೆ ಹೇಳಿದ ಏನೋ ಧಾಂಡಿಗ, ನಿನಗೇನು ಬಂದಿದೆ ರೋಗ, ನೀನಿನ್ನೂ ಚಿಕ್ಕ ವಯಸ್ಸಿನವನು, ನಡೆಯಬಹುದು, ಪಾಪ ಆ ಮುದುಕ ನಡೆದುಕೊಂಡು ಬರುತ್ತಿದ್ದಾನೆ. ಆತನನ್ನು ಕತ್ತೆ ಮೇಲೆ ಕೂರಿಸು ಎಂದು ಹೇಳಿದ ಹುಡುಗ 'ಆಗಲಿ' ಎಂದು ಮುದುಕನನ್ನು ಕತ್ತೆ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದ. ಇನ್ನೂ ಸ್ವಲ್ಪ ದೂರ ಹೋದ ಬಳಿಕ ಮತ್ತೊಬ್ಬ ದಾರಿಯಲ್ಲಿ ಎದುರಾಗಿ ಆತನೆಂದ ಏನ್ರಯ್ಯಾ, ನೀವು ಮನುಷ್ಯರೇ? ಈ ಮೂಕಪ್ರಾಣಿ ಮೇಲೆ ನಿಮಗೆ ಕಿಂಚಿತ್ತೂ ದಯೆ ಬೇಡವೇ? ಆ ಕತ್ತೆ ಬಡಕಲಾಗಿದೆ, ಇನ್ನೇನೋ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಅದರ ಮೇಲೆ ಕುಳಿತುಕೊಂಡು ಹೋಗುತ್ತಿದ್ದೀರಲ್ಲಾ, ಎಂದಾಗ ಇನ್ನೇನು ಮಾಡಬೇಕು?ಎಂದರು. ಆಗ ಆತ ಹೇಳಿದ ನಿಮಗೇನಾದರೂ ಪ್ರಾಣಿ ಮೇಲೆ ದಯೆ ಇದ್ದರೆ ಪ್ರಾಣಿ ದಯಾ ಸಂಘದವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರಂತೆ ಆ ಕತ್ತೆಯನ್ನು ನೀವು ಹೊತ್ತು ಕೊಂಡು ಹೋಗಿ ಎಂದ. ಸರಿ ಎಂದು ಇಬ್ಬರು ಸೇರಿ ಕತ್ತೆಯನ್ನು ಎತ್ತಿಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಹೋಗುವವರೆಲ್ಲರೂ ನಗುವುದಕ್ಕೆ ಶುರುಮಾಡಿದರು ಇವರೆಂತಹ ದಡ್ಡರು, ಅವಿವೇಕಿಗಳು ಎಂದರು. ದಾರಿಯಲ್ಲಿ ಮೊದಲನೆಯವನು ಸಿಕ್ಕಾಗ ಕತ್ತೆ ಮೇಲೆ ಹುಡುಗನನ್ನು ಕುರಿಸು ಎಂದ, ಎರಡನೆಯವನು ಮುದುಕನನ್ನು ಕತ್ತೆ ಮೇಲೆ ಕೂರಿಸು ಎಂದ, ಮೂರನೆಯವನು ಕತ್ತೆಯನ್ನು ಹೊತ್ತುಕೊಂಡು ಹೋಗುವಂತೆ ಹೇಳಿದ ಹೀಗೆ ಕತ್ತೆಯನ್ನು ಹೊತ್ತುಕೊಂಡಿದ್ದರೂ ಜನರು ನಗುತ್ತಿದ್ದಾರಲ್ಲ ಎಂದು ಅವರಿಗೆ ಸಿಟ್ಟು ಬಂದು ಪಕ್ಕದಲ್ಲಿ

ಹರಿಯುತ್ತಿದ್ದ ನದಿಗೆ ಕತ್ತೆಯನ್ನು ತೆಗೆದುಕೊಂಡು ಹೋಗಿ ರಪ್ಪನೆ ಬಿಸಾಕಿದರು. That is why the title of that poem. "One who tries to please all, pleases none." ಕೊನೆಗೆ ಎಲ್ಲರಮಾತನ್ನು ಕೇಳಿ ಯಾರನ್ನೂ ಮೆಚ್ಚಿಸುವುದಕ್ಕಾಗುದೆ ಕತ್ತೆಯನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಬಿಸಾಡಿದರು. ಸನ್ಮಾನ್ಯ ಸಚಿವರೆ, ಇವೊತ್ತು ನಿಮಗೆ ಸವಾಲನ್ನು ಹಾಕುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಪರಿಸ್ಥಿತಿಯೂ ಅದೇ ಆಗಿದೆ. ಈಗ ನಾನೊಂದು ಕಥೆ ಹೇಳಿದನಲ್ಲಾ, ಅದನ್ನು ಕೇಳಿಸಿಕೊಳ್ಳಲಿಲ್ಲವೇ? ಎಲ್ಲರನ್ನೂ ತೃಪ್ತಿ ಪಡಿಸಲು ಹೋಗಿ, ಯಾರನ್ನೂ ತೃಪ್ತಿಪಡಿಸದೆ ಕೊನೆಗೆ ಹಳ್ಳಕ್ಕೆ ಬೀಳುವಂತ ಪರಿಸ್ಥಿತಿಗೆ ನೀವು ಬಂದಿದ್ದೀರಿ. ನೀವು ಒಕ್ಕಲಿಗರನ್ನು ತೃಪ್ತಿಪಡಿಸಲು ಹೋಗುತ್ತೀರಿ, ಲಿಂಗಾಯತರು ಮೇಲೆ ಬೀಳುತ್ತಾರೆ, ಲಿಂಗಾಯಿತರಿಗೆ ತೃಪ್ತಿಪಡಿಸಲು ಹೊರಟಾಗ ಯಾದವರು ಮೇಲೆ ಬೀಳುತ್ತಾರೆ, ಅವರನ್ನೂ ತೃಪ್ತಿಪಡಿಸಲು ಹೊರಟು ಕೊನೆಗೆ ಎಲ್ಲರನ್ನೂ ತೆಗೆದುಕೊಂಡು ಹೋಗಿ ಹಳ್ಳಕ್ಕೆ ಹಾಕುತ್ತೀರಿ. ಈ ಪರಿಸ್ಥಿತಿ ಬಹುಶಃ ಎಲ್ಲಾ ರಾಜಕೀಯ ಪಕ್ಷದವರಿಗೂ ಬಂದಿದೆ. ನಾನು ನಿಮ್ಮ ಬಗ್ಗೆ ದೋಷಾರೋಪಣೆ ಮಾಡುತ್ತಿಲ್ಲ, ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇದಕ್ಕೆ ಕಾರಣ ನೀವೊಬ್ಬರೇ ಅಲ್ಲ. ಇಂತಹ ಒಂದು ಕೆಟ್ಟ ವ್ಯವಸ್ಥೆಗೆ ನಮ್ಮೆಲ್ಲರದೂ ದೇಣಿಗೆ ಇದೆ.may be a difference of degree. All of us bureaucrats, political party and even our voters all of us have contributed for this system, whether it is a bad system or good system - may be a difference of degree. ಆದುದರಿಂದ ನಾವೇ ಸೃಷ್ಟಿಸಿಕೊಂಡಂಥ ವ್ಯವಸ್ಥೆ ಇದೆಯೆಲ್ಲಾ, ಇದರಲ್ಲಿ ಕೆಲಸ ಮಾಡುವಂಥ ಸರ್ಕಾರಕ್ಕೆ ವಿಧಿ ಇಲ್ಲದೆ ಇಂತಹ ಅವಿವೇಕದ ನಡವಳಿಕೆಯನ್ನು, ಬುದ್ಧಿ ಇಲ್ಲದ ತೀರ್ಮಾನಗಳನ್ನು ಮತ್ತು ಪ್ರಾಮಾಣಿಕತೆಗೆ ಬರ ಇರುವಂಥ ನಡವಳಿಕೆಗಳನ್ನು ನಡೆದುಕೊಳ್ಳುವುದು ಅನಿವಾರ್ಯವಾಗಿದೆ. ನೀವು ಈ ಅನಿವಾರ್ಯತೆಯಿಂದ ಹೊರ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಈ ಕಥೆಯನ್ನು ಏಕೆ ಹೇಳಿದೆನೆಂದರೆ, ಮೊದಲನೆಯದು, ಈ ರಾಷ್ಟ್ರದ ಅತ್ಯಂತ ಉಚ್ಚನ್ಯಾಯಾಲಯಕ್ಕೆ ನೀವು ಅಪಚಾರವೆಸಗಿದ್ದು ಒಂದು ಅಪಚಾರವೆಸಗಿ ಹಳ್ಳಿಕಡೆ ಒಂದು ಮಾತು ಹೇಳುತ್ತಾರೆ ಜಾತಿ ಕೆಟ್ಟರೆ ಸುಖ ಪಡಬೇಕು ಎಂದು. ಅದೂ ಸಹ ಇಲ್ಲ. ನಿಮ್ಮ ರಾಜಕೀಯ ಉದ್ದೇಶ ಸಾಧನೆಯಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಜಡ್ಜ್‌ಮೆಂಟ್ ಓದಿಕೊಂಡಿದ್ದೀರಲ್ಲಾ. Page No. 491. ಇದು ಸಾವಂತ್ರವರ ಪ್ರಕರಣಕ್ಕೆ ಸಂಬಂಧಿಸಿದ ಜಡ್ಜ್‌ಮೆಂಟ್‌ನಲ್ಲಿದೆ. ಇದನ್ನು ಸ್ವಲ್ಪ ಓದಿದರೆ ತಮಗೆ ಗೊತ್ತಾಗುತ್ತದೆ.

"....But at the same time such reservations made either under Art. 16 (a) or under Art. 16(1) and (4) cannot be extended to the totality of 100%. As to what extent the proportion of reservations will be so excessive as to render it bad must depend upon it adequacy of representations in a given case.

Therefore, the decision of fixing the percentage or reservation only up to the maximum of 50% are unsustainable. The percentage of reservation at the maximum of 50% is neither based on scientific data nor on any established and agreed formula. Infact, Art. 16(4) itself does not limit the power of the Government in making the reservation to any maximum percentage; but it depends upon the quantum of adequate representation required in the services."

ಶ್ರೀ ಕಾಗೋಡು ತಿಮ್ಮಪ್ಪ :- ಇದು Supreme Court 1993 on Page 491, Para 366.

ಶ್ರೀ ವೈ. ಕೆ. ರಾಮಯ್ಯ :- ಸೇಮ್ ಜಡ್ಜ್‌ಮೆಂಟ್, ನನ್ನ ವಾದವು ಅದೇ,

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲೇ ಇದೆ, ಅವರೇ ಹೇಳಿದ್ದಾರಲ್ಲಾ ...

ಪ್ರೊ. ಎಂ.ಡಿ. ನಂಜುಂಡಸ್ವಾಮಿ : -ಅದು ಸರಿ, ನಿನ್ನೆ 80 ಪರ್ಸೆಂಟ್ ಇತ್ತು. ಇವತ್ತು 73 ಪರ್ಸೆಂಟ್ ಆಯಿತು. ಈ ರೀತಿ ಏಕೆ ಆಯಿತು.

ಶ್ರೀ ವೈ.ಕೆ.ರಾಮಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಶ್ರೀ ಕಾಗೋಡು ತಿಮ್ಮಪ್ಪನವರು ವಕೀಲರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನನಗೆ ಗೊತ್ತು ನನಗಿಂತ ಮೊದಲಿನಿಂದ ಅವರು ರಾಜಕೀಯದಲ್ಲಿರುವುದರಿಂದ ಕಾನೂನನ್ನು ಗಂಭೀರವಾಗಿ ಓದುವುದನ್ನು citation ಮಾಡಿ ನೋಡುವುದನ್ನು ನಿಲ್ಲಿಸಿ, ನನಗಿಂತ ಬಹಳ ವರ್ಷಗಳಾಗಿದೆ. ನಾನು 10-12 ವರ್ಷಗಳಾಗಿದೆ. ನೀವು ನನಗಿಂತ ಹಿಂದೆ ನಿಲ್ಲಿಸಿದ್ದೀರಿ. ಗಂಭೀರವಾಗಿ ಪ್ರಾಕ್ಟೀಸ್ ಮಾಡಿದ್ದೀರೋ, ಇಲ್ಲವೋ ನನಗೆ ಗೊತ್ತಿಲ್ಲ. ನಾನಂತೂ ಹೊಟ್ಟೆಪಾಡಿಗಾಗಿ ಮಾಡುತ್ತಿದ್ದೇನೆ. ಆದುದರಿಂದ ನಾನು ಹೇಳುತ್ತಿರುವುದು ಅದೇ ವಾದವನ್ನು ಆರ್ಟಿಕಲ್ 16 ಅನ್ನು ಅಧಾರವಾಗಿಟ್ಟುಕೊಂಡು ಮತ್ತೆ ನಾನು ಹೇಳುತ್ತಿದ್ದೇನೆ. ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯಕ್ಕೂ ಕೂಡ ಸಂವಿದಾನದ ಚೌಕಟ್ಟನ್ನು ಹೊರತು ಪಡಿಸಿ ತೀರ್ಮಾನ ಕೊಡುವುದಕ್ಕೆ ಸಾಧ್ಯವಿಲ್ಲ. ಹೌದು, ನಾನು ಅದನ್ನೇ ವಾದ ಮಾಡುತ್ತಿದ್ದೇನೆ. ವಿಷಯ ಪೂರ್ತಿ ಹಿಡಿತದಲ್ಲಿದೆ. ಅದರ ಬಗ್ಗೆ ನೀವು ಯೋಚನೆ ಮಾಡಬೇಡಿ. ತಾವು ಅಧಿವೇಶನ ಕರೆದ ಮೇಲೆ ನಾನು ಕಷ್ಟಪಟ್ಟು ಬಂದಿದ್ದೇನೆ. ಈ ರಾಷ್ಟ್ರದ ಸರ್ವೋಚ್ಚ ನ್ಯಾಲಯಕ್ಕೂ ಕೂಡ ಸಂವಿಧಾನದ ಚೌಕಟ್ಟನ್ನು ಹೊರತು ಪಡಿಸಿ, ಅದರ ವಿಧಿ ವಿಧಾನಗಳನ್ನು ಹೊರತು ಪಡಿಸಿ ಕಾನೂನನ್ನು ಜಾರಿಗೊಳಿಸುವುದಕ್ಕೆ ಸಾದ್ಯವಿಲ್ಲ, ತೀರ್ಪನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ :- ವಕೀಲರ ವಾದ ಏನೆಂದು ಅರ್ಥವಾಗುತ್ತಿಲ್ಲ. ಈಗ ವಾಡಿಕೆಯಂತೆ ಹಿಂದುಳಿದ ವರ್ಗಕ್ಕೆ 50 ಪರ್ಸೆಂಟ್‌ಗಿಂತ ಹೆಚ್ಚಿಗೆ ಪ್ರಯೋಜನವನ್ನು ನಾವು

ಹಿಂದಿನಿಂದ ಪಡೆಯುತ್ತಿದ್ದೇವೆ. ಭಾರತ ದೇಶದ ಸರ್ಕಾರ ಯಾವ ಕಾನೂನಿನ ಚೌಕಟ್ಟಿನೊಳಗೆ ಈ ಶಾಸನ ಮಾಡುತ್ತಿರುವಾಗ ಈ ವಾದ ವಿವಾದ ಏನೆಂದು ನಮಗೆ ಗೊತ್ತಾಗುವುದಿಲ್ಲ. ನಮಗೆ ಸಿಕ್ಕಂಥ ಪ್ರಯೋಜನವನ್ನು ನಾವು ಪಡೆದಿದ್ದೇವೆ, ಪಡೆಯುತ್ತಾ ಇದ್ದೇವೆ. ಇಲ್ಲ ಹೀಗೆ ವಾದ ವಿವಾದಗಳು ನಡೆಯುತ್ತಿದೆ.

ಉಪಾಧ್ಯಕ್ಷರು :-ಮಾನ್ಯ ವೈ ಕೆ.ರಾಮಯ್ಯನವರು ಮಾತನಾಡುತ್ತಾ ಸರ್ವೋಚ್ಚ ನ್ಯಾಯಾಲಯದ ಆದೇಶ ಮೀರಿ, ಆದರ ಚೌಕಟ್ಟನ್ನು ಮೀರಿ ಯಾವ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ, ಎಂಬ ವಾದವನ್ನು ಮುಂದಿಡುತ್ತಾರೆ. ಈಗ ಅದರ citation ಪ್ರಕಾರ ಎಂದರೆ ತಾವು ಹೇಳುವ ಪ್ರಕಾರ ಮಾನ್ಯ ನಂಜುಂಡಸ್ವಾಮಿಯವರು ನಿನ್ನೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ಪ್ರಜಾಪ್ರಭುತ್ವದಲ್ಲಿ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ....

ಶ್ರೀ ಆರ್. ದಯಾನಂದ ರಾವ್ :-ಪಾರ್ಲಿಮೆಂಟ್ ಇರುವುದು ಏಕೆ? ಹೊಸ ಅಮೆಂಡ್‌ಮೆಂಟ್ ತಂದರೆ ಆಯಿತು.

ಉಪಾಧ್ಯಕ್ಷರು :- ತಾವು ಕನ್‌ಕ್ಲೂಷನಗೆ ಬಂದರಲ್ಲಾ, ಕಾನೂನಿನ ಚೌಕಟ್ಟನ್ನು ಮೀರಿ ನಾವು ರಾಜ್ಯಾಂಗದ ತಿದ್ದುಪಡಿಯನ್ನು ಮಾಡಿದ ಹೊರತು ಯಾವುದನ್ನು ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕ ವಸ್ತು ಸ್ಥಿತಿಗೆ ಬಂದಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಉಪಾಧ್ಯಕ್ಷರು, ಇಷ್ಟು ಒಪ್ಪಿಕೊಂಡ ಮೇಲೆ ನನ್ನದು ಜವಾಬ್ದಾರಿ ಸ್ವಲ್ಪ ಕಡಿಮೆಯಾಯಿತು. ಸನ್ಮಾನ್ಯ ಶಿವಣ್ಣನವರಿಗೆ ಒಂದೇ ಉತ್ತರ, ಈ ರಾಜ್ಯದಲ್ಲಿ ಯಾರಿಗೆ ಎಷ್ಟು ಮೀಸಲಾತಿಯನ್ನು ಕೊಡಬೇಕು ಎನ್ನುವುದರ ಬಗ್ಗೆ ನಾನು ಚರ್ಚೆಗೆ ಬಂದೇ ಇಲ್ಲ. ಯಾರಿಗೆ ಎಷ್ಟು ಬೇಕಾದರೂ ಕೊಡಬಹುದು. ಏಕೆಂದರೆ, ನಾನು ವೈಯಕ್ತಿಕವಾಗಿ ಮೀಸಲಾತಿ ಕೊಡುವುದರಿಂದ ಯಾರಿಗೂ ಉಪಕಾರ ಮಾಡಿದಂತಾಗುವುದಿಲ್ಲವೆಂದು ನಂಬಿಕೊಂಡಿರುವವನು. ಆದುದರಿಂದ ಯಾರಿಗೆ ಎಷ್ಟು ಬೇಕಾದರೂ ಕೊಡಬಹುದು ನಾನು ಹೇಳುವುದು ಅದಲ್ಲ, ನಾನು ಈ ನ್ಯಾಯಾಲಯದ ಜಡ್ಜ್‌ಮೆಂಟ್ ಓದಿದ ಮೇಲೆ ಹೇಳಬೇಕಾಗಿ ಬಂತು. ಆರ್ಟಿಕಲ್ 16ರಲ್ಲಿ ಏನು ಹೇಳಿದೆಯೋ ಅದನ್ನು ಆಧರಿಸಿಯೇ ಸರ್ವೋಚ್ಚ ನ್ಯಾಯಾಲಯ ಡೈರೆಕ್ಷನ್ ಕೊಟ್ಟಿರುವುದು ಯಾವ ನಿಯಮಾವಳಿಗಳನ್ನು ಯಾವ ವಿಧಿವಿಧಾನಗಳನ್ನು ಸಂವಿಧಾನದಲ್ಲಿ ಅಳಪಡಿಸಿಯೋ, ಅದೇ ವಿಧಿ ವಿಧಾನಗಳನ್ನು ಅನುಸರಿಸಿ ಸರ್ವೋಚ್ಚ ನ್ಯಾಯಾಲಯ ಕಾರ್ಯಾಂಗಕ್ಕೆ ನಿರ್ದೇಶನ ಕೊಟ್ಟಿರುವುದು. ನಾನು ಏಕೆ ಇಷ್ಟು ಪ್ರತಿಪಾದನೆ ಮಾಡಿದೆ ಎಂದರೆ, ಆಗಲೇ ಒಂದು ಗಾದೆ ಹೇಳಿದೆ, ಜಾತಿ ಕೆಟ್ಟರೂ ಸುಖ ಪಡಬೇಕು ಎಂದು. ರಾಜಕೀಯ ಉದ್ದೇಶಕ್ಕಾದರೂ ನೀವು ತಂದಿದ್ದೀರಿ ಎಂದು ಇಟ್ಟುಕೊಳ್ಳೋಣ. ಅದು ಎಲ್ಲಾ ರಾಜಕೀಯ ಪಕ್ಷಗಳಿಗೂ compulsion ಎನ್ನುವುದನ್ನು ಕೂಡ ನಾನು ಒಪ್ಪಿಕೊಂಡಿದ್ದೇನೆ. ಸನ್ಮಾನ್ಯ ಮಂತ್ರಿಯವರೆ, ಅದೂಕೂಡ ಆಗುವುದಿಲ್ಲ, ಈ ಉದ್ದೇಶ ಕೂಡ ಸಾಧನೆ ಆಗುವುದಿಲ್ಲ. ಒಂದನೇ ಕಾರಣ, ನೀವು ಈ ವಿದೇಯಕವನ್ನು ಪಾಸ್ ಮಾಡಿಕೊಳ್ಳುತ್ತೀರಿ, ನನಗೆ ಗೊತ್ತು. ಏಕೆಂದರೆ ಅವರೆಲ್ಲಾ ಹೋಗಿದ್ದಾರೆ, ಇಲ್ಲಿ ನಾವಿಬ್ಬರೂ ಕುಳಿತುಕೊಂಡಿದ್ದೇವೆ. ನಾವು ಹೌದು ಎಂದರು ಆಗುತ್ತದೆ, ಇಲ್ಲಾ ಎಂದರೂ ಆಗುತ್ತದೆ, ಅದು

ನನಗೆ ಗೊತ್ತು. ಹಾಗೆ ಮಾಡುವುದರಿಂದ ಈ ರಾಜ್ಯದ ಜನರಿಗೆ ನಾವು ಮಾಡಿದ್ದೇವೆ ಎನ್ನುವಂತಹ ನಾಟಕದಲ್ಲಿ ನೀವು ಸಫಲರಾಗಬಹುದೇ ಹೊರತು ಅವರಿಗೆ ನಿಜವಾಗಲೂ ಸಫಲತೆಯನ್ನು ಕೊಡುವುದಕ್ಕೆ ಸವಲತ್ತನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅದನ್ನೇ ಸನ್ಮಾನ್ಯ ಶ್ರೀ ಬಂಗಾರಪ್ಪನವರು ಹೇಳಿದ್ದು, ಈ ವಿಧೇಯಕವನ್ನು ನೀವು ಮಸೂದೆಯನ್ನಾಗಿ ಮಾಡುವುದರ ಮೂಲಕ ಪಾಸ್ ಮಾಡಿಸಿಕೊಳ್ಳುವುದರ ಮೂಲಕ ನೀವು ಪಾರ್ಲಿಮೆಂಟಿನ ವಿಶೇಷ ಅಧಿವೇಶನ ಕರೆಯಿಸಿ ಇದನ್ನು ಅಪ್ರೊವಲ್ ತೆಗೆದುಕೊಳ್ಳುತ್ತೀರಾ? ನಿಮ್ಮ ಕೈಯಲ್ಲಿ ಆಗುತ್ತದೆಯೇ? ಆದಾದಮೇಲೆ ಇದಕ್ಕೆ ರಾಷ್ಟ್ರಾಧ್ಯಕ್ಷರ ಅಪ್ಪಣೆ ಆಗಬೇಕು, ಅದಕ್ಕಿಂತ ಮೊದಲು ಮೇಲ್ಮನೆ ಅಪ್ಪಣೆ ಆಗಬೇಕು. ಆದುದರಿಂದ ಈ ಒಂದು ವಿಧೇಯಕವನ್ನು ಮಂಜೂರು ಮಾಡಿ, ಈ ಸದನದಿಂದ ಹೊರಗೆ ಕಳುಹಿಸಿದರೂ ಕೂಡ ನಿಮಗೆ ಪ್ರಾಮಾಣಿಕವಾದಂತಹ ಬದ್ಧತೆ ಇದ್ದರೂ ಕೂಡ ಉದ್ದೇಶ ಸಾಧನೆಯಾಗುವುದಿಲ್ಲ. ಉದ್ದೇಶ ಸಾಧನೆಯಾಗುವುದಿಲ್ಲ ಎಂದು ನಿಮಗೆ ಗೊತ್ತಿದ್ದರೂ ಕೂಡ ಮತ್ತೇ ನಾನು ಒತ್ತಿ ಹೇಳಬೇಕಾಗುತ್ತದೆ, ಇದನ್ನು ರಾಜಕೀಯ ಉದ್ದೇಶಕ್ಕಾಗಿ ನೀವು ತಂದಿದ್ದೀರಿ.

ಶ್ರೀಮತಿ ಮೋಟಮ್ಮ :- ಮಾನ್ಯ ಉಪಾಧ್ಯಕ್ಷರೆ, ಉದ್ದೇಶ ಈಡೇರುವುದಿಲ್ಲ ಎನ್ನುವ ಒಂದು ಕಾರಣಕ್ಕೆ ಈಗ ಆಗಿರುವ ತಪ್ಪನ್ನು ಸರಿ ಮಾಡುವುದಕ್ಕಾಗಲಿ, ಅನ್ಯಾಯವನ್ನು ಸರಿ ಮಾಡುವುದಕ್ಕಾಗಲಿ ಮಾಡದೇ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಮಾಡಿದರೆ ನಾಳೆಯಾದರೂ ಇದರ ಸಹಾಯವಾಗಬೇಕು ಅಲ್ಲವೇ.

ಶ್ರೀ ವೈ.ಕೆ. ರಾಮಯ್ಯ :- ಈ ಅಧಿವೇಶನ ನಿರರ್ಥಕ ಎಂದು ಹೇಳಿದಮೇಲೆ ಇನ್ನು ಈ ರಾಜ್ಯದಲ್ಲಿ ಈ ಮೀಸಲಾತಿ ಪದ್ಧತಿಯನ್ನು ತಂದು ನಮಗೆ ಮತ ಕೊಡುವ ಜನರನ್ನು ಮಂಕುಗೊಳಿಸುವ ಅಥವಾ ಮಾಯಾಜಾಲದಲ್ಲಿ ತೇಲಿಸಿದ ಅನೇಕ ನಿದರ್ಶನಗಳನ್ನು ನಾವು ನಿಮ್ಮ ಗಮನಕ್ಕೆ ತರಬೇಕಾಗುತ್ತದೆ. ಈ ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಡಬೇಕು ಎನ್ನುವಂತಹ ಪ್ರಪ್ರಥಮ ಪ್ರಯತ್ನ ನಡೆದಿದ್ದು ಶ್ರೀಮಾನ್ ದೇವರಾಜ್ ಅರಸುರವರ ಕಾಲದಲ್ಲಿ. ಅದಕ್ಕಿಂತ ಹಿಂದೆಯೂ ಕೂಡ ಇತ್ತು. ಆದರೆ ಅದು ವ್ಯವಸ್ಥಿತವಾಗಿ ಇರಲಿಲ್ಲ. ಅದು ಒಂದು ನೀತಿ ನಿಯಮಗಳ ಚೌಕಟ್ಟಿನಲ್ಲಿ ಇರಲಿಲ್ಲ. ದೇವರಾಜ್‌ಅರಸ್ ಅವರು ಇದ್ದ ಪಕ್ಷದಲ್ಲಿ ನಾನು ಯಾವತ್ತೂ ಇದ್ದವನಲ್ಲ. ಹಾಗೆ ನೋಡಿದರೆ ಈ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯನ್ನು ತಂದು ಜೈಲಿಗೆ ಕಳುಹಿಸುವುದಕ್ಕೆ ಅವರೂ ಒಬ್ಬರು ಕಾರಣರು ಎಂದು ನನಗೆ ಬಹಳ ಸಿಟ್ಟು ಇತ್ತು. ಆ ವಿಷಯ ಈಗ ಬೇಡ ಆದರೆ ಈ ವಿಷಯದಲ್ಲಿ ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಈ ರಾಜ್ಯದಲ್ಲಿ ಇದ್ದಂತಹ ಹಿಂದುಳಿದ ವರ್ಗಕ್ಕೆ ಧ್ವನಿ ಕೊಟ್ಟವರು. ಈ ರಾಜ್ಯದ ಹಿಂದುಳಿದ ವರ್ಗಗಳ ಸಂಘಟನೆಯ ಪ್ರಥಮ ವ್ಯಕ್ತಿ, ಎನ್ನುವುದರ ಬಗ್ಗೆ ಗೌರವ ಇದ್ದರೂ ಕೂಡ ತುರ್ತುಪರಿಸ್ಥಿತಿಯನ್ನು ಹೇರಿ ಇಂದಿರಾಗಾಂಧಿಯವರ ತಾಳಕ್ಕೆ ಮದ್ದಳೆ ಹೊಡೆದು ನಮ್ಮನ್ನೆಲ್ಲಾ ಜೈಲಿಗೆ ಕಳುಹಿಸಿದರಲ್ಲ ಎಂದು ಒಂದು ಕಡೆ ಸಿಟ್ಟು ಇದ್ದರೂ ಕೂಡ ಈ ರಾಜ್ಯದ ಹಿಂದುಳಿದವರಿಗೆ ಸಂಘಟನೆ ಮಾಡುವುದಕ್ಕೆ, ಅವರಿಗೆ ಸವಲತ್ತು ಕೊಡುವುದಕ್ಕೆ ಪ್ರಯತ್ನ ಪಟ್ಟಂತಹ ವ್ಯಕ್ತಿ ಎನ್ನುವುದರ ಬಗ್ಗೆ ನನಗೆ ಗೌರವ ಇದೆ. ಅವರು ಹಾವನೂರ ಕಮಿಷನ್‌ನ್ನು ರಚನೆ ಮಾಡಿದರು. ಅವರು ವರದಿ

ಕೊಟ್ಟರು. ಈ ಹಾವನೂರ್ ಅವರ ವರದಿಯನ್ನು ಆಧರಿಸಿ ಸರ್ಕಾರ ಆಜ್ಞೆ ಹೊರಡಿಸಿತು. ಮಾನ್ಯ ತಿಮ್ಮಪ್ಪನವರು ಹೇಳಿದರು, ಅದರಲ್ಲಿ ಒಕ್ಕಲಿಗರನ್ನು ಹಿಂದುಳಿದವರು ಎಂದು ಸೇರಿಸಿದರು, ಲಿಂಗಾಯಿತರನ್ನು ಮುಂದುವರೆದವರು ಎಂದು ಸೇರಿಸಿದ್ದರು ಎಂದು ನನ್ನನ್ನೂ ಆ ಜಾತಿಯ ವಿಷವರ್ತುಲಕ್ಕೆ ಎಳೆಯುವ ಪ್ರಯತ್ನವನ್ನು ಅವರು ಮಾಡಿದರು. ನಾನು ಒಂದು ಜಾತಿಯಲ್ಲಿ ಹುಟ್ಟಿದ್ದೇನೆ, ಆ ಕಾಲಂನಲ್ಲಿ ನಾನು ಇಂತಹ ಜಾತಿ ಎಂದು ಬರೆಯಬೇಕಾಗುತ್ತದೆ, ವಿಧಿ ಇಲ್ಲ. ನಾನು ಹೇಳಿದ್ದೇನಲ್ಲ. We have created such a situation, the system. We are helpless. But, that itself is not everything for me. ಅದನ್ನು ಬಿಟ್ಟು ನನಗೆ ಬೇರೆ ಇದೆ ಹೇಳಿಕೊಳ್ಳುವುದಕ್ಕೆ, ಅದು ಒಂದರ ಮೇಲೆ ಬದುಕುವುದಾಗಲಿ, ಅದರ ಒಂದರ ಮೇಲೆ ರಾಜಕೀಯ ಮಾಡುವುದಾಗಲಿ, ಅದು ಒಂದರ ಮೇಲೆ ಪ್ರತಿಭೆ ತೋರುವುದಾಗಲಿ ಅವಶ್ಯಕತೆ ಇಲ್ಲ ಒಕ್ಕಲಿಗರನ್ನು ಮುಂದುವರೆದ ಜಾತಿ ಎಂದು ಸೇರಿಸಲಿಲ್ಲವೆಂದು ಹೇಳಿ ಈ ರಾಜ್ಯದ ವೀರಶೈವರ ಜನಾಂಗದವರ ಆಕ್ರೋಶ ಅವತ್ತು ಇತ್ತು. ಇದು ನಿಜವಾದಂತಹ ಪರಿಸ್ಥಿತಿ. ಹೌದಾ?

ಶ್ರೀ ಕಾಗೋಡು ತಿಮ್ಮಪ್ಪ :- ನೀವು ಹೇಳಿ.

ಶ್ರೀ ವೈ.ಕೆ. ರಾಮಯ್ಯ :- ನಾನು ಹೇಳುತ್ತೇನೆ, ಅದಕ್ಕೆ ತಾವೂ ಧ್ವನಿಗೂಡಿಸುತ್ತೀರಿ ಇಲ್ಲವೇ ಎಂದು ಹೇಳಿ?

ಉಪಾಧ್ಯಕ್ಷರು :- ಅವರು ಉತ್ತರ ಕೊಡುವಾಗ ಹೇಳುತ್ತಾರೆ, ತಾವು ಈಗ ಮುಂದುವರೆಸಿ.

**2.00 ಪಿ.ಎಂ**

ಶ್ರೀ ವೈ.ಕೆ. ರಾಮಯ್ಯ : ಅದನ್ನು ಸರಿ ಮಾಡುವುದಕ್ಕೆ ಹಾವನೂರ್ ಅವರ ಆಯೋಗದ ವರದಿ ದೃಷ್ಟಿಯಿಂದ ಅದು ಯಾವ ಜಾತಿ ಹಿಂದೆ ಇತ್ತೋ ಮುಂದೆ ಇತ್ತೋ ನನಗೆ ಗೊತ್ತಿಲ್ಲ. ಇದ್ದುದರಲ್ಲಿ ಸ್ವಲ್ಪ ವೈಜ್ಞಾನಿಕವಾಗಿ ಎಲ್ಲವೂ ಸರಿಯಾಗಿ ಇತ್ತು. ಇವತ್ತು ಏನಾಗಿದೆ ಇಷ್ಟು ಅವ್ಯವಸ್ಥೆಯಿಂದ ಕೂಡಿದ ವರದಿಯಾಗಿರಲಿಲ್ಲ. ಆ ವರದಿಯನ್ನು ಮತ್ತೆ ಇದೇ ಕಾರಣಕ್ಕಾಗಿ ಮತ್ತೆ ಕತ್ತೆಯನ್ನು ತೆಗೆದುಕೊಂಡು ಹೋಗಿ ಹಳ್ಳಕ್ಕೆ ಹಾಕಿದರು. ಯಾವುದು ಸುಪ್ರೀಂ ಕೋರ್ಟಿನ ಮೋಸ ಅಂತ ಕರೆಯುತ್ತಾರೋ ಆ ಮೋಸದ ಕೃತ್ಯವನ್ನು ಅವತ್ತು ಇದ್ದಂಥ ಸರ್ಕಾರ ಮಾಡಿತು. ಅದು ಯಾರಾದಾದರೂ ಆಗಲೀ ನಮ್ಮದಿತ್ತೋ ನಿಮ್ಮದಿತ್ತೋ, ಇನ್ನೊಬ್ಬರದಿತ್ತೋ, ಏನು ಮಾಡತೆಂದರೆ ಯಾವುದೋ ಒಂದು ವರ್ಗವನ್ನು ತೃಪ್ತಿಪಡಿಸುವುದಕ್ಕಾಗಿ ಚೆನ್ನಾಗಿ ಇದ್ದಂಥ ಆ ವರದಿಯನ್ನು ಮೂಲೆಗೆ ಬಿಸಾಕಿ, ವೆಂಕಟಸ್ವಾಮಿ ಆಯೋಗ ರಚನೆಯಾಯಿತು, ವೆಂಕಟಸ್ವಾಮಿ ಆಯೋಗ ರಚನೆಯಾದ ಮೇಲೆ ಅದರ ವರದಿ ಕೂಡ ಬಂತು. ಅದರ ವರದಿಯ ಅನುಷ್ಠಾನವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ನೇತೃತ್ವದ ಅವತ್ತಿನ ಜನತಾಪಕ್ಷದ ಸರ್ಕಾರ ಕಾರ್ಯರೂಪಕ್ಕೆ ತಂದಿತು. ಮತ್ತೆ ನಾನು ನಿಮಗೆ ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ವಿ.ಪಿ.ಸಿಂಗ್ ರವರು ಈ ರಾಷ್ಟ್ರದಲ್ಲಿ ಮಂಡಲ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲಿಕ್ಕೆ ಮಾಡಿದಂತಹ ಪ್ರಯತ್ನಕ್ಕೆ ಈ ರಾಷ್ಟ್ರದ ಹಿತಾಸಕ್ತಿಗಳು ಯಾವರೀತಿ ಅಡ್ಡಿಯನ್ನುಂಟು ಮಾಡಿದವು, ಏನು ಬೆಂಕಿಯನ್ನು ಇಟ್ಟವೋ ಯಾವ ಅತಂಕವನ್ನು ಒಡ್ಡಿದವೋ ವೆಂಕಟಸ್ವಾಮಿ ಆಯೋಗದ ವರದಿಯ ಅನುಷ್ಠಾನದ ಬಗ್ಗೆಯೂ

ಅಷ್ಟೇ ಬೆಂಕಿ ಹತ್ತಿಕೊಂಡಿತು ಈ ರಾಜ್ಯದಲ್ಲಿ. ಅವರ ವಿರುದ್ಧವೂ ಹಿತಾಸಕ್ತಿಗಳು ಕೆಲಸವನ್ನು ಪ್ರಾರಂಭ ಮಾಡಿದವು. ನಾನು ಒಪ್ಪಿಕೊಳ್ಳುತ್ತೇನೆ. ಇದು ಮಂಡ್ಯದಲ್ಲಿ ಶುರುವಾಯಿತು ಆ ವರದಿಯಲ್ಲಿ ಒಕ್ಕಲಿಗರನ್ನು ಮುಂದುವರಿದ ಜಾತಿಗೆ ಸೇರಿಸಿದ್ದರು, ಇದು ಪ್ರಮುಖವಾದಂತ ಕಾರಣ. ನಮ್ಮ ಕೈಯಲ್ಲಿ ಅದನ್ನು ತಡೆದುಕೊಳ್ಳುವುದಕ್ಕೆ ಆಗಲಿಲ್ಲ, ನೀವು ಕಬ್ಬನ್‌ಪಾರ್ಕಿಗೆ ಮೆರವಣಿಗೆ ಬರುವುದಕ್ಕೆ ತೀರ್ಮಾನ ತೆಗೆದುಕೊಂಡಿರಿ. ನಾವು ಎಲ್ಲ ಆದಮೇಲೆ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡೆವು. we have also committed the same fraud. ಇದು ದೈವವಶಾತ್ ಇಲ್ಲಿ ಇಟ್ಟುಕೊಂಡಿದೆ ಆವೊತ್ತು ನೀವು ಮಂತ್ರಿಯಾಗಿದ್ದಿರಿ ಎಂದು ಕೇಳಬಹುದೆಂದು ಅದೃಷ್ಟವಶಾತ್ ನಾನು ಆಗ ಮಂತ್ರಿಯಾಗಿರಲಿಲ್ಲ ಆದ್ದರಿಂದ ಈ ವಾದಕ್ಕೆ ನಾನು ಸಿಕ್ಕಿಹಾಕಿಕೊಳ್ಳುವುದಿಲ್ಲ. ವ್ಯವಸ್ಥೆಯ ಒಂದು ಭಾಗವಾದರೂ ಕೂಡ ಆ ವಾದಕ್ಕೆ ನಾನು ಸಿಕ್ಕಿಕೊಳ್ಳಲಿಲ್ಲ. ಅವತ್ತು ಮುಖ್ಯಮಂತ್ರಿಗಳು ಬರೆದಂಥ ಕಾಗದದ ಪ್ರತಿಯನ್ನು ನನ್ನ ಹತ್ತಿರ ಇಟ್ಟುಕೊಂಡಿದ್ದೇನೆ. ನಾನು ಒಕ್ಕಲಿಗನಾಗೋ, ವೀರಶೈವನಾಗೋ ಅಥವಾ ಹಿಂದುಳಿದವನಾಗಿಯೋ ಆ ದಿನ ಮುಖ್ಯಮಂತ್ರಿಗಳಿಗೆ ಕಾಗದ ಬರೆದೆ. ಈ ಸತ್ಯವನ್ನು ಮುಚ್ಚಿಡಲಿಕ್ಕೆ ನಾನು ಸಿದ್ಧನಿಲ್ಲ. ಸ್ವಾಮಿ ಈ ಆಯೋಗದ ರಚನೆಯಿಂದ ಇದರ ಅನುಷ್ಠಾನದಿಂದ ಅತೀ ಹೆಚ್ಚಿನ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತದೆ, ಆದ್ದರಿಂದ ಇದನ್ನು ಬದಲಾವಣೆ ಮಾಡಿ ಎಂದು ಪಾಪ, ಆ ವೆಂಕಟಸ್ವಾಮಿಯವರ ಹೆಸರನ್ನೇ ಯಾರೂ ಕೇಳಿರಲಿಲ್ಲ. ನನಗೆ ಬಹಳ ನೋವಾಗುತ್ತದೆ. ಇನ್ನು ಮುಂದೆ ನೀವ್ಯಾರೂ ಆಯೋಗದ ಅಧ್ಯಕ್ಷರಾಗುವುದಕ್ಕ ದಯಮಾಡಿ ಒಪ್ಪಿಕೊಳ್ಳಬೇಡಿ. ನಿಮ್ಮ ಹೆಸರಷ್ಟೇ ಗೋಡೆಯ ಮೇಲೆ ಬರುವುದಿಲ್ಲ, ನಿಮ್ಮ ಮನೆಯವರೆಲ್ಲರ ಹೆಸರುಗಳೆಲ್ಲ ಗೋಡೆಯ ಮೇಲೆ ಬರುತ್ತದೆ. ದಯಮಾಡಿ ನಾನು ಕೈಮುಗಿಯುತ್ತೇನೆ. ಯಾರಾದರೂ ಈ ಜ್ಯುಡಿಷಿಯಲ್ ಡಿಪಾರ್ಟ್‌ಮೆಂಟ್‌ನವರು ಯಾವ ಅಯೋಗಕ್ಕೂ ಅಧ್ಯಕ್ಷರಾಗುವುದಕ್ಕೆ ಒಪ್ಪಿಕೊಳ್ಳಬೇಡಿ, ಆ ವೆಂಕಟಸ್ವಾಮಿ ಆಯೋಗದ ಸಮಯದಲ್ಲಿ ಪಾಪ ಅವರೊಬ್ಬರು ನ್ಯಾಯಾಧೀಶರಾಗಿದ್ದರು. ಅವರು ಒಳ್ಳೆಯದನ್ನು ಮಾಡಿದ್ದಾರೋ ಕೆಟ್ಟದನ್ನು ಮಾಡಿದ್ದಾರೋ ನನಗೆ ಅವರ ಸಂಪರ್ಕ ಇಲ್ಲ. ಅವರ ಹೆಸರನ್ನು ತೆಗೆದು ಈ ರಾಜ್ಯದಲ್ಲಿ ನಡೆದಂಥ ಪ್ರತಿರೋಧ, ಪಾಪ ಅವರೇನು ಮಾಡುತ್ತಾರೆ. ಅವರು ಕೊಟ್ಟಂತಹ ವರದಿಯನ್ನು ನ್ಯಾಯವಾಗಿ ಇಂಪ್ಲಿಮೆಂಟ್ ಮಾಡಬೇಕಾಗಿದ್ದುದು ಕಾರ್ಯಾಂಗದ ಜವಾಬ್ದಾರಿ. ಅದನ್ನು ಬಿಟ್ಟು ವೆಂಕಟಸ್ವಾಮಿಯವರ ಹೆಸರನ್ನಷ್ಟೇ ಗೋಡೆ ಮೇಲೆ ಬರೆಯಲಿಲ್ಲ, ನಾನು ಅತ್ಯಂತ ನೋವಿನಿಂದ ಇದನ್ನು ಹೇಳುತ್ತಿದ್ದೇನೆ, ಅತ್ಯಂತ ಅಶ್ಲೀಲ ಪದಗಳಿಂದ ಅವರನ್ನು ಹೀಯಾಳಿಸಿದರು. ಅಷ್ಟೆಲ್ಲಾ ಮಾಡಿ ಕೊನೆಗೂ ಕೂಡ ಒತ್ತಡವನ್ನು ತಡೆದುಕೊಳ್ಳಲಾರದೆ, ಆ ಕತ್ತೆಯನ್ನೂ ಹೊತ್ತುಕೊಂಡುಹೋಗಿ ಹಳ್ಳಕ್ಕೆ ಹಾಕಿದರು. ಅದಾದಮೇಲೆ 1986ನೇ ಇಸವಿಯಲ್ಲಿ ಆಡಳಿತಾತ್ಮಕವಾದ ಆಜ್ಞೆಯನ್ನು ತಂದು ಈ ರಾಜ್ಯದಲ್ಲಿ ಹಿಂದುಳಿದವರ್ಗದವರಿಗೆ ಮೀಸಲಾತಿಯನ್ನು ನಿರ್ಧಾರ ಮಾಡುವಂತಹ ಪದ್ಧತಿಯನ್ನು ಕಾರ್ಯರೂಪಕ್ಕೆ ತಂದರು ಆ ವ್ಯವಸ್ಥೆ ಜಾರಿಯಲ್ಲಿದ್ದಂಥ ಸಂದರ್ಭದಲ್ಲಿ ಅದನ್ನೂ ಕೂಡ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದರು. ತಮಗೆ ಅದರ ಅಂದಿಡೆ. ಆಗ ಆ 1986 ರ ಸರ್ಕಾರಿ ಅಜ್ಞೆಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದರು. ತಮಗೆ ಅದರ ಅರಿವಿದೆ. ಆಗ ಆ 1986 ರ ಸರ್ಕಾರಿ

ಆಜ್ಞೆಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದಂಥ ಸಂದರ್ಭದಲ್ಲಿ ಆಗ ಉಚ್ಚನ್ಯಾಯಾಲಯ ಯಾವ ನಿರ್ದೇಶನವನ್ನು ಈ ಸರ್ಕಾರಕ್ಕೆ ಕೊಟ್ಟಿತೋ ಆ ನಿರ್ದೇಶನವನ್ನು ಆಧರಿಸಿ ಚಿನ್ನಪ್ಪರೆಡ್ಡಿ ಆಯೋಗ ರಚನೆಯಾಯಿತು. It is again at the instance of the Supreme Court that the Chinappa Reddy Commission was constituted. ಚಿನ್ನಪ್ಪ ರೆಡ್ಡಿ ಆಯೋಗ ವರದಿಯನ್ನು ಕೊಟ್ಟಿತು. ಚಿನ್ನಪ್ಪ ರೆಡ್ಡಿ ಆಯೋಗ ಯಾವಾಗ ವರದಿ ಕೊಟ್ಟಿತು, ಆ ತಾರೀಖು ನನಗೆ ಸಿಕ್ಕುತ್ತಿಲ್ಲ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಚಿನ್ನಪ್ಪರೆಡ್ಡಿ ಆಯೋಗ ತನ್ನ ವರದಿಯನ್ನು ಯಾವಾಗ ಕೊಟ್ಟಿತು ಎಂದು.

ಉಪಾಧ್ಯಕ್ಷರುಃ- ತಾವು ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ? ಏಕೆಂದರೆ ಇನ್ನೂ ಮಾತನಾಡುವವರು ಇದ್ದಾರೆ. ತಾವು ಇನ್ನೂ ಮಾತನಾಡುವುದು ಇದ್ದರೆ ಆಮೇಲೆ ಮಾತನಾಡಿ. ಈಗ ಸದನ ಮುಂದೂಡಿ ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರಲಿದೆ.

(ಸಭೆಯು ಪುನಃ ಮಧ್ಯಾಹ್ನ 3.30ಕ್ಕೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು (ಶ್ರೀ ವಿ.ಎಸ್.ಕೌಜಲಗಿ) ಅವರು ಪೀಠವನ್ನಲಂಕರಿಸಿದ್ದರು.)

*ಶ್ರೀ ವೈ.ಕೆ.ರಾಮಯ್ಯಃ- ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ವಿಷಯಗಳನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ವಾದಕ್ಕಾಗಿ ವಾದ ಮಾಡಲಿಕ್ಕೆ ನಾನು ಇಲ್ಲಿ ನಿಂತಿಲ್ಲ. ವಾದವನ್ನು ಮಾಡುವುದರಿಂದ ಎರಡೂ ಕಡೆಯಿಂದ ಸತ್ಯದ ಶೋಧನೆ ಆಗುತ್ತದೆಯೋ ಏನೋ ಎಂಬ ಆಸೆಯನ್ನು ಇಟ್ಟುಕೊಂಡು ವಾದ ಮಾಡುತ್ತಿದ್ದೇನೆ. ಮಾತನಾಡುವ ಚಟದಿಂದಲೂ ನಾನು ವಾದ ಮಾಡುತ್ತಿಲ್ಲ. ಸುಮಾರು 18 ವರ್ಷಗಲ ಕಾಲ ಹೊಟ್ಟೆಪಾಡಿಗೆ ಮಾತನಾಡಿಕೊಂಡೇ ಬಂದಂತ ನನಗೆ ಮಾತನಾಡಬೇಕೆಂಬ ಚಟ ಕೂಡ ಇಲ್ಲ. ಕಂಠ ಶೋಷನೆ ಮಾಡಿಕೊಳ್ಳುವುದಕ್ಕೆ ಮನಸ್ಸು ಇಲ್ಲದಿದ್ದರೂ ನನ್ನ ಒಳ ಧ್ವನಿಯ ಯಾವುದೋ ಒಂದು ಮೂಲೆಯಲ್ಲಿ ಈಗಲೂ ನಂಬಿಕೆ ಪ್ರೇರಣೆಯಾಗುತ್ತಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಯಾಗಿರುವಂತ ಸಂದರ್ಭದಲ್ಲಿ, ಅವರೇ ಹಿಂದುಳಿದವರಾಗಿ ಅದಕ್ಕಿಂತ ಹೆಚ್ಚಾಗಿ ಅವರು ನಡೆದು ಬಂದ ದಾರಿ ವೈಯಕ್ತಿಕವಾಗಿ ಗೊತ್ತಿಲ್ಲದಿದ್ದರೂ ಸ್ಥೂಲವಾಗಿ ತಿಳಿದಿರುವುದರಿಂದ, ಈಗಲಾದರೂ ಕೂಡ ಈ ಸರ್ಕಾರಕ್ಕೆ ವಿವೇಕ ಹೊಳೆಯುತ್ತದೋ ಏನೋ now the wisdom will prevail ಎನ್ನುವಂಥ ಆಸೆಯ ಎಳೆಯನ್ನು ಹಿಡಿದುಕೊಂಡು ಈ ವಾದವನ್ನು ನಾನು ಮುಂದುವರಿಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ಸವಲತ್ತನ್ನು ಒದಗಿಸುವಂಥ ಅನೇಕ ಪ್ರಯತ್ನಗಳನ್ನು ಪ್ರಸ್ತಾವನೆ ಮಾಡಿ ವೆಂಕಟಸ್ವಾಮಿ ಆಯೋಗದ ವರದಿಯನ್ನು ಅನುಷ್ಠಾನ ಮಾಡಿದಂಥ ಸಂದರ್ಭದಲ್ಲಿ ಆದಂಥ ಘಟನೆ, ಅದಕ್ಕೆ ಈ ರಾಜ್ಯದ ಹಿತಾಸಕ್ತಿಗಳು ತಂದಂಥ ಅಡ್ಡಿ ಅದನ್ನು ಪ್ರಸ್ತಾವ ಮಾಡಿದಮೇಲೆ 1986ರಲ್ಲಿ ರಾಜ್ಯ ಸರ್ಕಾರ ಆಡಳಿತಾತ್ಮಕವಾದ ಆಜ್ಞೆ ಮುಖಾಂತರ ಹಿಂದುಳಿದ ವರ್ಗಗಳಿಗೆ ಸವಲತ್ತನ್ನು ಒದಗಿಸುವಂಥ ಕ್ರಮ, ಆ ಕ್ರಮವನ್ನು ಪ್ರಶ್ನಿಸಿ ಉಚ್ಛ ನ್ಯಾಯಾಲಯಕ್ಕೆ ಒಂದು ವ್ಯಾಜ್ಯ ಹೋದದ್ದು, ಆ ವ್ಯಾಜ್ಯದಲ್ಲಿ ಅಥವಾ ಒಂದು

ಲಿಟಿಗೇಷನ್‌ನಲ್ಲಿ ನ್ಯಾಯಾಲಯ ಆಯೋಗವನ್ನು ರಚಿಸಲಿಕ್ಕೆ ನಿರ್ಧಾರ ಮಾಡಿದ್ದು ಅಥವಾ ನಿರ್ದೇಶನ ಕೊಟ್ಟಿದ್ದು, ಆ ನಿರ್ದೇಶನವನ್ನು ಅನುಸರಿಸಿ ಚಿನ್ನಪ್ಪರೆಡ್ಡಿ ಆಯೋಗದ ರಚನೆ. ಚಿನ್ನಪ್ಪರೆಡ್ಡಿ ಆಯೋಗದ ರಚನೆ ಆಗುವವರೆಗೆ ನಾನು ಪ್ರಸ್ತಾಪವನ್ನು ಮಾಡಿದ್ದೆ. ಈ ಆಯೋಗ ವರದಿ ಕೊಟ್ಟ ತಾರೀಖನ್ನು ತಿಳಿಸಿದ್ದಕ್ಕಾಗಿ ಮಾನ್ಯ ಮಂತ್ರಿಗಳಿಗೆ ನಾನು ವಂದನೆಗಳನ್ನು ಅರ್ಪಿಸುತ್ತೇನೆ. ನನಗೆ ಇಸವಿ ಮಾತ್ರ ಗೊತ್ತಿತ್ತು. 7-4-1990ರಲ್ಲಿ ಈ ವರದಿಯನ್ನು ಕೊಟ್ಟಿತು. ಅಂದರೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿ ನಾಲ್ಕು ಪೂರ್ಣ ವರ್ಷಗಳು ಕಳೆದುಹೋಗಿವೆ, ಇದು 5ನೇ ವರ್ಷ. ಕಳೆದ ವಿಧಾನಸಭೆಯ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಪ್ರಣಾಳಿಕೆಯಲ್ಲಿ ಮುದ್ರಣವಾಗಿದೆ. ಈ ರಾಜ್ಯದ ಜನತೆಗೆ ಘೋಷಣೆಯಾಗಿದೆ. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ನಾವು ಅನುಷ್ಠಾನ ಮಾಡುತ್ತೇವೆಂದು . ಇದು ಘೋಷಣೆಯಾಗಿದೆ, ಮುದ್ರಣವಾಗಿದೆ, ಬದ್ಧತೆ ಇದೆ. ಈ ವರದಿಯನ್ನು ಕೊಟ್ಟು 4 ವರ್ಷಗಳು ತುಂಬಿ 5ನೇ ವರ್ಷಕ್ಕೆ ನಾವು ಕಾಲಿಟ್ಟಿದ್ದೇವೆ. ಸನ್ಮಾನ್ಯ ಮುಖ್ಯ ಮಂತ್ರಿಗಳು, ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಇದರ ಬಗ್ಗೆ ಯಾವ ಪ್ರಯತ್ನಗಳೂ ನಡೆಯಲಿಲ್ಲ. ತಮಾಷೆಗೆ ಕೆಲವರು ಹೊರಗಡೆ ಹೇಳುತ್ತಿದ್ದರು, ವೀರೇಂದ್ರಪಾಟೀಲರೇನೋ ಮುಂದುವರೆದ ವರ್ಗಕ್ಕೆ ಸೇರಿದವರಾದ್ದರಿಂದ ಅದರ ಅನುಷ್ಠಾನದ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ ಎಂದು. ಅವರನ್ನು ಕ್ಷಮಿಸಿಬಿಡೋಣ. ಅದಾದಮೇಲೆ ಶ್ರೀಮಾನ್ ಬಂಗಾರಪ್ಪನವರು ಬಂದರು. ಅದಕ್ಕೇ ನಾನು ಮುಖ್ಯಮಂತ್ರಿಗಳಿಗೆ ಬೆಳಿಗ್ಗೆ ಹೇಳಿದೆ, ನಾನು ಹೇಳುತ್ತೇನೆ, ನೀವು ಏತಕ್ಕೆ ಕಷ್ಟ ತೆಗೆದುಕೊಳ್ಳುತ್ತೀರಿ ಎಂದು. ಶ್ರೀಮಾನ್ ಬಂಗಾರಪ್ಪನವರು ಹಿಂದುಳಿದ ವರ್ಗದ ನೇತಾರರು, ಅದರ ವಕ್ತಾರರು ಎಂದು ನಾವೆಲ್ಲ ಭಾವಿಸಿಕೊಂಡಿದ್ದೇವೆ. ಆದರೆ ಅವರ ಆಡಳಿತದ ಸಮಯದಲ್ಲಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನ ಮಾಡುವಂಥ ಪ್ರಯತ್ನವೇ ಆಗಲಿಲ್ಲ. ಅದಾದಮೇಲೆ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದುಕೊಂಡಮೇಲೆ ಅವರಿಗೆ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ, ಅವರಿಗೆ ನಾನು ಕಾಗದ ಬರೆದೆ. ಅವರ ಬದುಕಿನ ಹಿನ್ನೆಲೆ ಸ್ವಲ್ಪ ಗೊತ್ತಿದ್ದ ನನಗೆ ಹಿಂದುಳಿದವರಿಗೆ, ತುಳಿತಕ್ಕೆ ಒಳಗಾದವರಿಗೆ, ಬದುಕಿನಲ್ಲಿ ನೋವನ್ನು ಕಂಡಂಥವರಿಗೆ ಸ್ವಲ್ಪಮಟ್ಟಿಗಾದರೂ ನೆಮ್ಮದಿ ಸಿಗಬಹುದು ಎಂಬ ಆಸೆ ಇಟ್ಟುಕೊಂಡಿದ್ದೇನೆ. ಆದರೆ ಆ ನನ್ನ ನಂಬಿಕೆ ಇವತ್ತು ಹುಸಿಯಾಗಿದೆ ಎಂದು ನೋವಿನಿಂದ ಹೇಳಬೇಕಾಗಿದೆ. 1994 ಏಪ್ರಿಲ್ 7ರಂದು ಕೊಟ್ಟಂಥ ವರದಿ ಈ ನಾಲ್ಕು ವರ್ಷಗಳಾದರೂ ಕೂಡ ಅನುಷ್ಠಾನಕ್ಕೆ ಬರಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಮೇಲೆ ಆ ಸ್ಥಾನದಲ್ಲಿ ನಿಂತು ಅತ್ಯಂತ ದೃಢವಾಗಿ, ಸ್ಪಷ್ಟವಾಗಿ, ನಿಖರವಾಗಿ ಹೇಳಿದರು ನಾನು ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತಂದೇ ತರುತ್ತೇನೆ at the cost of his seat ಎಂದು. ಆವತ್ತು ನಾನು ಇಲ್ಲಿ ಕುಳಿತುಕೊಂಡು ಗೊಣಗಿದೆ, ನಿಮ್ಮ ಕೈಯಲ್ಲಿ ಇದು ಸಾಧ್ಯವಿಲ್ಲ ಎಂದು. ಅದು ರೆಕಾರ್ಡ್ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ, ಅವರಷ್ಟೆಲ್ಲ ದಿದ್ದರೂ ನನಗೂ ಈ ಕರ್ನಾಟಕ ರಾಜ್ಯದ ರಾಜಕೀಯ ಸ್ವಲ್ಪ ಗೊತ್ತಿದೆ. ಇವತ್ತಿಗೂ ಇವರ ಕೈಯಲ್ಲಿ ಅದು ಸಾಧ್ಯವಿಲ್ಲ. ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯನ್ನು ಯಥಾವತ್ತಾಗಿ

ಜಾರಿಗೆ ತರುವುದಕ್ಕೆ ನೀವು ಒಪ್ಪಿಕೊಳ್ಳುತ್ತೀರಾ ಎಂದು ಮಂತ್ರಿಗಳು ನನಗೆ ಪ್ರಶ್ನೆ ಕೇಳಿದರು. ಸ್ವಲ್ಪ ತಡೆದುಕೊಂಡಿದ್ದರೆ ಸಾಕಾಗಿತ್ತು ನಾನು ಅಲ್ಲಿಗೆ ಬರುವವರೆಗೆ. ನಾನು ಈ ಸರ್ಕಾರಕ್ಕೆ ದೀರ್ಘದಂಢ ನಮಸ್ಕಾರ ಹೊಡೆದು ಕೇಳಿಕೊಳ್ಳುತ್ತೇನೆ. ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತಂದು ದಯಮಾಡಿ ಚುನಾವಣೆಗೆ ಬನ್ನಿ, ನಿಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಿದಂತಾಗುತ್ತದೆ. ರಾಜ್ಯದ ಜನತೆಗೆ ಅನುಕೂಲವಾಗುತ್ತದೆ, ಒಳ್ಳೆಯದಾಗುತ್ತದೆ. ಇದನ್ನು ಒಪ್ಪಿಕೊಳ್ಳುವುದಾದರೆ ನಾನು ನನ್ನ ವಾದವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಇಲ್ಲವೆಂದರೆ ನನ್ನ ವಾದವನ್ನು ಮುಂದುವರಿಸಿಕೊಂಡು ಹೋಗುತ್ತೇನೆ. ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತಂದಂತಹ ರೀತಿ, ರಿವಾಜು ಅದನ್ನು ನಾನು ಈಗ ಹೇಳುವುದಕ್ಕೆ ಹೊರಟ್ಟಿದ್ದೇನೆ. ನನ್ನ ವಾದವೇ ಅದು. ತಂದಂತಹ ರೀತಿ ರಿವಾಜು ಇದೆಯಲ್ಲ ಅನುಸರಿಸಿದ ಕ್ರಮಗಳು ಇದೆಯಲ್ಲ, ದಿನನಿತ್ಯ ಬದಲಾದ ನಿಲುವು ಇದೆಯಲ್ಲ ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೆ. 1990ರಲ್ಲಿ ವರದಿ ಬಂದಿದೆ. ಇವರು ಅನುಷ್ಠಾನಕ್ಕೆ ತರುವಂತಹ ಪ್ರಯತ್ನ ಆದದ್ದು, ಆ ಸಂದರ್ಭದಲ್ಲಿ ಏನು ಪರಿಸ್ಥಿತಿ ಇತ್ತು, ಎಂದರೆ ದಿನಾಂಕ 11.6.92ರ ಸುಪ್ರೀಂಕೋರ್ಟ್ ಆಜ್ಞೆಯಲ್ಲಿ ಮತ್ತೊಂದು ಪ್ರಮುಖವಾದ ಅಂಶವಿತ್ತು. ಅದೇನೆಂದರೆ, ಇನ್ನು ಮುಂದೆ ಈ ರಾಷ್ಟ್ರದಲ್ಲಿ ಹಿಂದುಳಿದವರ್ಗಗಳನ್ನು ಗುರುತಿಸುವ ಬಗ್ಗೆ ಏನು ಮಾಡಬೇಕು? ನಾನು ಬೆಳಿಗ್ಗೆ ಎರಡು ವಿಚಾರಗಳನ್ನು ಹೇಳಿದ್ದೇನೆ. ಈಗ ಇನ್ನೊಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. 'Government of India,-State administration,:- Union Territories shall be' the word used is 'shall be' I wish to emphasis 'within four months from today constitute a Permanent Body', ಈ ರಾಜ್ಯದ ಅತ್ಯುನ್ನತ ನ್ಯಾಯಲಯ ಹೇಳುತ್ತದೆ 4ತಿಂಗಳೊಳಗಾಗಿ ಕೇಂದ್ರ ಸರ್ಕಾರ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದ ಆಡಳಿತಕ್ಕೆ ಒಳಪಟ್ಟಿರುವ ರಾಜ್ಯಗಳು 4ತಿಂಗಳೊಳಗಾಗಿ ಖಾಯಂ ಆಯೋಗವನ್ನು ನೇಮಿಸಬೇಕು, ನೇಮಿಸಿ ಹಿಂದುಳಿದ ವರ್ಗದವರನ್ನ ಗುರುತಿಸುವ ಕೆಲಸವನ್ನು ಅದಕ್ಕೆ ಬಿಡಬೇಕು. identification of backward classes should be identified by this commission... ಅಲ್ಲಿಯವರೆಗೆ ನೀವೇನು ಮಾಡಬೇಕು? ಖಾಯಂ ಆಯೋಗವನ್ನು ವರದಿ ಕೊಡುವವರೆಗೆ ನೀವೇನು ಮಾಡಬೇಕು ಎನ್ನುವ ಬಗ್ಗೆ ಅವರು ಸುಮ್ಮನಿಲ್ಲ. ಅದಕ್ಕೂ ಕೂಡ ನಿಮಗೆ ಅಪ್ಪಣೆ ಕೊಟ್ಟಿದ್ದಾರೆ. This direction shall not however apply to the State where reservation in favour of the backward classes is already in operation. They continue to operate them... ಯಾವ ರಾಜ್ಯದಲ್ಲಿ ಈಗಾಗಲೇ ಒಂದು ಮೀಸಲಾತಿ ಪದ್ಧತಿಯನ್ನು ಜಾರಿಗೆ ತರಲಾಗಿದೆಯೋ, ಅನುಷ್ಠಾನದಲ್ಲಿದೆಯೋ ಆ ರಾಜ್ಯಗಳು ಅದೇ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬಹುದು ಎಂದು ಹೇಳಲಾಗಿದೆ. ಈ ತೀರ್ಪು ಹೊರಬಿದ್ದ ತಾರೀಖು 11-6-1992 ಅಂದರೆ ಆವತ್ತು ನಮ್ಮಲ್ಲಿ ಜಾರಿಯಲ್ಲಿದ್ದ ಪದ್ಧತಿ 1986ರ ಆಡಳಿತಾತ್ಮಕವಾದ ಆಜ್ಞೆ. ಈ ಸರ್ಕಾರಕ್ಕೆ ಇದ್ದದ್ದು ಒಂದೇ ಒಂದು ಮಾರ್ಗ, ನ್ಯಾಯವಾದ ಮಾರ್ಗ ಎಲ್ಲರೂ

ಮೆಚ್ಚುವಂತಹ ಮಾರ್ಗ, ಯಾರು ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲದ ಮಾರ್ಗ ಇದ್ದದ್ದು ಏನೆಂದರೆ, ಖಾಯಂ ಆಯೋಗವನ್ನು ರಚನೆ ಮಾಡಿ 1986ರ ಆಜ್ಞೆಯ ಪ್ರಕಾರ ಮೀಸಲಾತಿ ಪದ್ಧತಿಯನ್ನು ಮುಂದುವರಿಸಬೇಕಾದ್ದು ಅದು ಒಂದೇ ಒಂದು ಮಾರ್ಗ ಇದ್ದದ್ದು. ಬೇರೆ ಅನ್ಯ ಮಾರ್ಗವೇ ಇಲ್ಲ. ಅದನ್ನು ಇವರು ಮಾಡಲಿಲ್ಲ. ಮತ್ತೆ ಏನು ಮಾಡಿದ್ದಾರೆ? ಇವರು ಮಾಡಿದ್ದುದ್ದೇ ಬೇರೆ. ಇವರದೇ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದೆ, within that stipulated period the Central Government has appointed the Commission under K.N.Prasad. ಕೆ.ಎನ್.ಪ್ರಸಾದ್ ಕಮಿಷನ್ ವರದಿ ತರಿಸಿಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುವಂತಹ ವಿಧಿ ವಿಧಾನಗಳನ್ನು ನಮ್ಮ ಹೆಗಡೆಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದೊಂದು ನಾಟಕ ನಡೆಯಿತು. ಯಾರೋ ಒಬ್ಬರನ್ನು ಕರೆದುಕೊಂಡು ಹೋಗಿ ಸೀತಾರಾಮ್ ಕೇಸರಿಯವರಿಗೆ ಹೂವಿನ ಹಾರ ಹಾಕಿ ನೋಡಿ ಸ್ವಾಮಿ ಅನುಷ್ಠಾನಕ್ಕೆ ತಂದಿದ್ದೇವೆ ಅಂದರು. ಏನಾದರೂ ಆಗಲಿ ಅಷ್ಟರಮಟ್ಟಿಗಾದರೂ ಮಾಡಿದರೂ 1992ನೇ ಇಸವಿಯಲ್ಲಿ ಬಂದಂತಹ ನಿರ್ದೇಶನವನ್ನು ಪಾಲಿಸುವುದಕ್ಕೆ ಈ ರಾಜ್ಯಸರ್ಕಾರಕ್ಕೆ ಇದ್ದಂತಹ ಅಡ್ಡಿ ಏನು? ಆದರಲ್ಲಿ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಹೇಳಿರುವಂತಹ ಮಾತನ್ನು ಇವರು ಅನುಸರಿಸುವುದಕ್ಕೆ ಇದ್ದಂತಹ ಅಡ್ಡಿಯೇನು? ಇತ್ತೀಚೆಗೆ ನಾವು ಒಂದನ್ನು ಕಾಣುತ್ತಿದ್ದೇವೆ. ನಾವು ಯಾವ ಯಾವ ವಾದವನ್ನು, ಯಾವ ಪ್ರಶ್ನೆಯನ್ನು ನೇರವಾಗಿ ಕೇಳುತ್ತೇವೆ ಅದಕ್ಕೆ ಉತ್ತರವೇ ಬರುವುದಿಲ್ಲ. ಅದನ್ನು ಬಿಟ್ಟು ಬಂಗಾರಪ್ಪನವರು ಎಲ್ಲೋ ಭಾಷಣ ಮಾಡಿದ್ದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇದಕ್ಕಾದರು ನೇರವಾಗಿ ಉತ್ತರ ಕೊಡಲಿಯೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶೆಟ್ಟರ ಅಂಗಡಿಗೆ ಹೋಗಿ ಈರುಳ್ಳಿ ಇದಿಯಾ ಅಂದರೆ ಬೆಳ್ಳುಳ್ಳಿ ಇದೆ ತೆಗೆದುಕೊಂಡು ಹೋಗಿ ಅಂದಹಾಗೆ ಆಯಿತು. ಬೆಳ್ಳುಳ್ಳಿ ತೆಗೆದುಕೊಂಡು ಹೋಗಿ ಎಂದು ಹೇಳುವುದು ಬೇಡ. ಈರುಳ್ಳಿ ಇದೆಯೋ ಇಲ್ಲವೋ ಅಷ್ಟು ಹೇಳಿದರೆ ಸಾಕು. ಹಾಗೆಂದರೆ ಅರ್ಥವೇನು? ನಮ್ಮ ಪ್ರಶ್ನೆಗಳಿಗೆ ಸರ್ಕಾರದಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸುತ್ತೇವೆ. 1992 ರಲ್ಲಿ ನೀವು ನಡೆಯಬೇಕಾದ ದಾರಿ, ನೀವು ಅನುಸರಿಸಬೇಕಾದ ಮಾರ್ಗ, ಅಳವಡಿಸಬೇಕಾದ ಪದ್ಧತಿ ಬಗ್ಗೆ ಉಚ್ಚನ್ಯಾಯಾಲಯ ಸ್ಪಷ್ಟವಾದ ಮಾರ್ಗದರ್ಶನ ನೀಡಿದ್ದರೂ ಕೂಡ ಅದನ್ನು ನೀವು ಏಕೆ ಅನುಸರಿಸಲಿಲ್ಲ? ನಿಮಗೆ ಯಾವುದಾದರೂ ಅಡ್ಡಿ ಇತ್ತೇ? ಮತ್ತೆ ಏನು ಮಾಡಿದ್ದೀರಿ? ರುಜುತ್ವದ ಮಾರ್ಗವನ್ನು ಬಿಟ್ಟು, ನ್ಯಾಯವಾದ ಮಾರ್ಗವನ್ನು ಇವರು ಮಾಡಿದಂತಹ ಕೆಲಸವೆಂದರೆ, ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಿದ್ದೇವೆಂದು ಜನಗಳಿಗೆ ಮೋಸ ಮಾಡುವುದಕ್ಕೆ ಸರ್ಕಾರಿ ಆಜ್ಞೆಗಳನ್ನು ಇತ್ತೀಚೆಗೆ ಹೊರಡಿಸುವಂತಹ ಪ್ರಯತ್ನ ಮಾಡಿದರು. 1986ರಲ್ಲಿ ಇದ್ದದ್ದು ಒಟ್ಟಾರೆ ಮೀಸಲಾತಿ ಶೇಕಡ 86. ಇವರು ದಿನಾಂಕ 20-4-94ರಲ್ಲಿ ಸರ್ಕಾರಿ ಆಜ್ಞೆ ಹೊರಡಿಸಿ ಶೇಕಡ 73 ಮೀಸಲಾತಿಯನ್ನು ನಿಗದಿ ಮಾಡಿದ್ದರು. ಅದು ಒಂದು ಆಜ್ಞೆಯಾಯಿತು. ಅದು ಆದಮೇಲೆ ದಿನಾಂಕ 25-7-94ರಲ್ಲಿ ಮತ್ತೊಂದು ಸರ್ಕಾರಿ ಆಜ್ಞೆ ಹೊರಟಿತು. ನಾನು ಅದನ್ನೆ ಬೆಳಗ್ಗೆ ಹೇಳಿದ್ದೆ. ಈ ಆಜ್ಞೆ ಏಕೆ ಹೊರಟಿತು. ಅಂದರೆ, ಈ ರಾಜ್ಯದ ಬಲಿಷ್ಠ ಪ್ರಬಲವಾದ ಒಂದು ಕೋಮಿನವರು ಮೆರವಣಿಗೆ ತೆಗೆದ

ದಿವಸ ಅದು ಆಯಿತು. ಮುಖ್ಯಮಂತ್ರಿಗಳು ಸಭೆಯಲ್ಲಿದ್ದರೆ ಕೇಳುತ್ತಿದ್ದೆ, ಆ ಮೆರವಣಿಗೆ ಬಂದಮೇಲೆ ನಿಮ್ಮ ಹೆಡ್‌ಮಾಸ್ಟರ್ ದೆಹಲಿಯಲ್ಲಿದ್ದ ಮಾದೇಗೌಡರನ್ನು ಕರೆಯಿಸಿ ಏನು ಹೇಳಿದರು ಎಂದು ನನಗೆ ಗೊತ್ತಿದೆ. ಸಮಾಜ ಕಲ್ಯಾಣ ಸಚಿವರಿಗೆ ಗೊತ್ತಿದ್ದರೆ ಸರಿ. 25-7-94ರಲ್ಲಿ ಆಜ್ಞೆ ಹೊರಡಿಸಿ ಮೀಸಲಾತಿಯನ್ನು 80ಕ್ಕೆ ಏರಿಸಿದ ಮೇಲೆ ರಾಷ್ಟ್ರದ ಪ್ರಧಾನಮಂತ್ರಿಗಳನ್ನು ಲೋಕಸಭಾ ಸದಸ್ಯರಾದ ಮಾದೇಗೌಡರನ್ನು ಮತ್ತು ಮುಖ್ಯಮಂತ್ರಿಗಳನ್ನು ಕರೆಯಸಿ ಛೀಮಾರಿ ಹಾಕಿದ ಮೇಲೆ ಮತ್ತೊಂದು ಆಜ್ಞೆ ಹೊರಟಿತು. ರಾಜಕಾರಣ ಮಾಡಬೇಕು ಸರಿ, ಜನ ಕಲ್ಯಾಣ ಮಾಡುತ್ತೇವೆನ್ನುವ ನೆಪದಲ್ಲಿ ಜನಗಳಿಗೆ ಮೋಸಮಾಡುವುದು ಬೇಡ. ಯಾವ ವರ್ಗದ ಜನರ ಆಕ್ರೋಶವನ್ನು ಶಮನ ಮಾಡಲಿಕ್ಕೆ ಈ ಸರ್ಕಾರ ಶೇಕಡ 80ರಷ್ಟು ಮೀಸಲಾತಿ ಮಾಡಿ ಸರ್ಕಾರಿ ಆಜ್ಞೆ ಹೊರಡಿಸಿತೋ ಅದೇ ಸರ್ಕಾರದ ವಕೀಲರು ಉಚ್ಛನ್ಯಾಯಾಲಯದಲ್ಲಿ ಅಂಡರ್‌ಟೇಕ್ ಮಾಡಿಕೊಳ್ಳುತ್ತಾರೆ. we don't implement this ಎಂದು There must be some limit to cheat. This I am telling you with lot of pains in my heart. ಏಕೆ ನಾಚಿಕೆಯಾಗುವುದಿಲ್ಲವೆ ನಿಮಗೆ? ಇಲ್ಲಿ ಒಕ್ಕಲಿಗರ ಮೆರವಣಿಗೆ ಬರುತ್ತದೆಂದು 80 ಭಾಗ ಮೀಸಲಾತಿಗೆ ಏರಿಸಿದ್ದೇವೆ ನಿಮ್ಮನ್ನು ಆಕಾಶಕ್ಕೆ ಕಳುಹಿಸಿದ್ದೇವೆಂದು ಆಜ್ಞೆ ಹೊರಡಿಸಿ ಅದಕ್ಕೆ ಕೋರ್ಟ್‌ವರು ಸ್ಟೇ ಕೊಟ್ಟಿದ್ದಾರೆ? ನಿಮ್ಮದು ಪ್ರಾಮಾಣಿಕತೆ ಇದ್ದಿದ್ದರೆ you could have allowed your Government Advocate to argue this and took a decision, whatever it may be.......

ಅದಕ್ಕಿಂತ ಮೊದಲೇ, ಯಾರದೋ ಕೈಲಿ ಇವರೇ ಅರ್ಜಿ ಹಾಕಿಸಿದರೋ ಏನೋ ಅದೂ ಕೂಡ ನನಗೆ ಗೊತ್ತಿಲ್ಲ. ಅದನ್ನು ನಾನು ಹೇಳುವುದಿಲ್ಲ, ಅದು ನನಗೆ ಗೊತ್ತಿಲ್ಲದೇ ಇರುವ ವಿಷಯ ಯಾರೋ ಹಾಕಿದರು ಎಂದು ಇಟ್ಟುಕೊಳ್ಳೋಣ. ಈ ಸರ್ಕಾರಿ ಆಜ್ಞೆಯನ್ನು ಪ್ರಶ್ನಿಸಿ, ನ್ಯಾಯಾಲಯದಲ್ಲಿ ಅರ್ಜಿ ಹಾಕಿದರೆ, ನಿಮ್ಮ ಸರ್ಕಾರಿ ವಕೀಲರ ಮುಖಾಂತರ ನೀವು ಅಂಡರ್‌ಟೇಕ್ ಮಾಡಿಸುತ್ತೀರಿ, ನಾವು ಇದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ ಎಂದು. ನಾನು ಇದನ್ನು ಏನೆಂದು ಕರೆಯಲಿ. ಯಾವ ಜನಗಳ ಆಕ್ರೋಶವನ್ನು ದಮನ ಮಾಡುವುದಕ್ಕೆ ಶಮನ ಮಾಡುವುದಕ್ಕೆ 80 ಭಾಗಕ್ಕೆ ಹೆಚ್ಚಿಸಿ ಸರ್ಕಾರಿ ಆಜ್ಞೆಯನ್ನು ಹೊರಡಿಸಿದರೋ, ಆ ವರ್ಗದ ಜನರಿಗೆ ಮಾಡಿದಂಥ ಮೋಸದ ಕೃತ್ಯ ಇದು. ಇದನ್ನು ವಿಧಿ ಇಲ್ಲದೆ ನಾನು ಹೇಳಬೇಕಾಗಿದೆ. ಇದು 1994ನೇ ಜುಲೈ ತಿಂಗಳಲ್ಲಿ ನಡೆದಂಥ ಸರ್ಕಾರಿ ಆಜ್ಞೆಯ ಹಿನ್ನೆಲೆ, ಮುನ್ನೆಲೆ ಮತ್ತು ಅದರ ಪರಿಣಾಮ. ಮೊನ್ನೆ, 17-9-94ರ ಸಾಯಂಕಾಲ ಈ ಸರ್ಕಾರದ ಪ್ರಾಮಾಣಿಕತೆ ಎಷ್ಟು ಎಂಬುದು ಹೊರಬಿದ್ದಿದೆ. ಆದರೆ, ಅದನ್ನು ಮುಚ್ಚಿಟ್ಟಿದ್ದಾರೆ, ಪತ್ರಿಕೆಯವರ ಕೈಗೆ ಸಿಕ್ಕಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇವರು 17ನೇ ತಾರೀಖು ಒಂದು ಸರ್ಕಾರಿ ಆಜ್ಞೆ ಹೊರಡಿಸಿದ್ದಾರೆ. ಈ ಸರ್ಕಾರಿ ಆಜ್ಞೆ, ಹಿಂದೆಯೂ, ಈ ರಾಜ್ಯದ ಯಾವುದೇ ಪಕ್ಷದ, ಯಾವುದೇ ಸರ್ಕಾರ ಮಾಡದೇ ಇರುವಂಥ ದ್ರೋಹವನ್ನು, ಅನ್ಯಾಯವನ್ನು ಹಿಂದುಳಿದ ವರ್ಗಕ್ಕೆ ಮಾಡಿದ್ದಾರೆ. ಕೃಷ್ಣಪ್ಪನವರೇ, ಅದರ ಕಾಪಿ ತರಿಸಿಕೊಂಡು ನೋಡಿ. ನಾನು ಕೂಡ ನಿಮ್ಮ ಹಾಗೆ ರಾಜ್ಯಮಂತ್ರಿಯಾಗಿದ್ದವನು. ಏಕೆಂದರೆ,

Sri. A. K. Krishnappa : Still we are a party to whatever decision the Government has taken..

* ಶ್ರೀ ವೈ.ಕೆ.ರಾಮಯ್ಯ :- ಈ ಘಳಿಗೆಯವರೆಗೆ, ನಾನು ನಂಜುಂಡಸ್ವಾಮಿಯವರು ತಿಳಿದುಕೊಂಡಿದ್ದೆವು, 80 ರಿಂದ 73ಕ್ಕೆ ಇಳಿಸಿದ್ದಾರೆ ಎಂದು. ಅದು ಸುಳ್ಳು, 50ಕ್ಕೆಇಳಿಸಿದ್ದಾರೆ ಎಂದು ಅದು ಸುಳ್ಳು, 50ಕ್ಕೆ ಇಳಿಸಿದ್ದಾರೆ. ಇವರು ಹಿಂದುಳಿದವರ್ಗವರಿಗೆ ಅನುಕೂಲ ಮಾಡುತ್ತಾರೆ. ನಾನು ಹೇಳುತ್ತೇನೆ, ನೀವೇನೂ ಯೋಚನೆ ಮಾಡಬೇಡಿ. ನಾನು ಸಿದ್ಧತೆ ಮಾಡಿಕೊಂಡು ಬಂದಿದ್ದೇನೆ. ನೀವು ಯಾವತ್ತು ಅಧಿವೇಶನ ಕರೆಯುತ್ತೇವೆಂದು ಹೇಳಿದರೋ, ಅವತ್ತೇ ಎಲ್ಲಾ ಕಡತಗಳನ್ನೂ ತೆಗೆದುಕೊಂಡೆ . ಒಂದು ಖೂನಿ ಕೇಸ್‌ಗೆ ನಾನು ಎಷ್ಟು ತಯಾರಿ ಮಾಡಿಕೊಂಡಿದ್ದೆನೋ ಅಷ್ಟೇ ಮಾಡಿಕೊಂಡು ಬಂದಿದ್ದೇನೆ. 17-9-94ರ ಸರ್ಕಾರಿ ಆಜ್ಞೆಯ ಒಟ್ಟಾರೆ ಸಾರಾಂಶ ಇಷ್ಟೆ. 1986 ಆಜ್ಞೆಯಲ್ಲಿ 68 ಮೀಸಲಾತಿ ಇತ್ತು. ಏಪ್ರಿಲ್ 1994ರಲ್ಲಿ 73 ಇತ್ತು, ಜೂಲೈ 1994ರಲ್ಲಿ 80 ಇತ್ತು, 17-9-94ರಲ್ಲಿ 50ಕ್ಕೆ ಬಂತು. ಇದು ಈ ರಾಜ್ಯದ ಹಿಂದುಳಿದ ವರ್ಗವರಿಗೆ, ಈ ಸರ್ಕಾರ ಕೊಟ್ಟಿರುವಂಥ ಕೊಡುಗೆ. ಯಾರು ಯಾರಿಗೆ ಎಷ್ಟೆಷ್ಟು ಕೊಡುಗೆ ಕೊಟ್ಟಿದ್ದಾರೆಂಬುದನ್ನೂ ಹೇಳಿಬಿಡುತ್ತೇನೆ. ಎ ಕೆಟಗರಿ, ಇದಕ್ಕಿಂತ ಮುಂಚೆ 73ಕ್ಕೆ ಆಮೇಲೆ ಬರುತ್ತೇನೆ. ಅವರು ಎಷ್ಟು ಬರೆಯುತ್ತಾರೋ ಬರೆಯಲಿ ಅಥವಾ ಬಿಡಲಿ. ಈ ರಾಜ್ಯದ ಜನತೆಗೆ ಹೇಳಬೇಕಾಗುದುದ್ದು ನನ್ನ ಕರ್ತವ್ಯ ನಾನು ಹೇಳುತ್ತೇನೆ. ಕೆಟಗಿರಿ (1) 4 ಪರ್ಸೆಂಟ್, ಈ 4 ಪರ್ಸೆಂಟ್‌ಗೆ 86 ಪ್ರಮುಖ ಜಾತಿಗಳು ಉಪ ಜಾತಿಗಳು ಅಂಕಿಅಂಶ ಹಾಕುವುದಕ್ಕಾಗುವುದಿಲ್ಲ. ಏಕೆಂದರೆ, ಇದು ನನಗೆ ಈಗ ಸಿಕ್ಕಿತು. ಈಗ ತಂದುಕೊಟ್ಟು ಉಪಕಾರ ಮಾಡಿದರು. ಇದರಲ್ಲಿರುವ 86 ಪ್ರಮುಖ ಜಾತಿಗಳಲ್ಲಿ ಚೋಟಾ, ಮೋಟಾ ಸೇರಿ ನೂರಾರು ಇವೆ. ಇದಕ್ಕೆ 4 ಪರ್ಸೆಂಟ್. ಕೆಟಗರಿ 2(ಎ) ಇದರಲ್ಲಿ ಅಗಸ, ದೋಬಿ ಇತ್ಯಾದಿ ಎಷ್ಟು ಸಾವಿರ ಇದೆಯೆಂದು ನೋಡುತ್ತೇನೆ. ಇದರಲ್ಲಿ 101 ಪ್ರಮುಖ ಜಾತಿಗಳು ಉಪಜಾತಿಗಳು ಸುಮಾರು ಒಂದು ಸಾವಿರ ಇರಬಹುದು. ಇದಕ್ಕೆ 15 ಪರ್ಸೆಂಟ್. ಕೆಟಗರಿ 3(ಎ) 4 ಪರ್ಸೆಂಟ್. ಒಕ್ಕಲಿಗರು, ಕೊಡಗರು, ಬಣಜಿಗರು ಮತ್ತು ಇನ್ನೂ ಯಾವುದೋ 15-20 ಜಾತಿಗಳು. ಇವರಿಗೆ 4 ಪರ್ಸೆಂಟ್. 8 ಪರ್ಸೆಂಟ್ ಕೊಟ್ಟಿದ್ದೇವೆಂದು ಇಲ್ಲಿ ಆಜ್ಞೆ ಮಾಡಿದರು. ಸುಪ್ರೀಂ ಕೋರ್ಟ್‌ನಲ್ಲಿ ಇಂಪ್ಲಿಮೆಂಟ್ ಮಾಡುವುದಿಲ್ಲವೆಂದು ಅಂಡರ್‌ಟೇಕ್ ಮಾಡಿಸಿದರು. 1986ರ ಮೀಸಲಾತಿಯನ್ನೇ ಕೊಡುತ್ತೇವೆಂದು ಇಲ್ಲಿ ಭಾಷಣ ಮಾಡಿದರು. ಈಗ 4 ಪರ್ಸೆಂಟ್‌ಗೆ ಇಳಿಸಿದ್ದಾರೆ. ಯಾರ ಮೆರವಣಿಗೆಗೆ ಹೆದರಿ 80 ಭಾಗ ಮಾಡಿದರೋ, ಯಾರ ಮೆರವಣಿಗೆಗೆ ಹೆದರಿ ಶೇಕಡ 8 ಮಾಡಿದರೋ ಆ ಕೆಟಗರಿಗೆ ಇವತ್ತು 4 ಪರ್ಸೆಂಟ್. ನಾಳೆಗೆ ಏನಾಗುತ್ತದೆಯೋ ಅಥವಾ ಇವತ್ತು ಸಂಜೆಗೆ ಏನಾಗುತ್ತದೆಯೇ ನನಗೆ ಗೊತ್ತಿಲ್ಲ. ಕೆಟಗರಿ 3(ಬಿ) ವೀರಶೈವ ಲಿಂಗಾಯತ್ ಲಿಂಗಾಯತ್ ಸಬ್‌ಗ್ರೂಪ್ಸ್ ಎಲ್ಲಾ ಸೇರಿ ಮರಾಠ, ಕ್ರಿಶ್ಚಿಯನ್, ಜೈನರು ಇತ್ಯಾದಿ ಇವರಿಗೆ ಹತ್ತಾರು ಜಾತಿಗಳನ್ನು ಸೇರಿಸಿ, 5 ಪರ್ಸೆಂಟ್. ಒಟ್ಟಾರೆ, 17ನೇ ತಾರೀಖು ಸಾಯಂಕಾಲ ಕರ್ನಾಟಕ ಸರ್ಕಾರ ಆಜ್ಞೆಯನ್ನು ಹೊರಡಿಸಿ, 1986ರ ಆಜ್ಞೆಯ ಪ್ರಕಾರ ಈ ರಾಜ್ಯದಲ್ಲಿ ಶೇಕಡ 68 ಮೀಸಲಾತಿ ಇತ್ತೋ ಅದನ್ನು 50ಕ್ಕೆ ಇಳಿಸಿ, ಅಷ್ಟರಮಟ್ಟಿಗೆ ಈ ಕರ್ನಾಟಕ ರಾಜ್ಯದ ಹಿಂದುಳಿದವರ್ಗದವರ ಕಲ್ಯಾಣವನ್ನು ಸಾಧನೆ ಮಾಡಿ,

ಈ ಸರ್ಕಾರದವರು ಆಜ್ಞೆಯನ್ನು ಹೊರಡಿಸಿದ್ದಾರೆ. ಅದಕ್ಕೆ ನಾನು ಈ ಮಾತನ್ನು ಹೇಳಿದ್ದುದು. ಇತ್ತೀಚಿನ ದಿನಗಳಲ್ಲಿ ಯಾವುದೇ ಸರ್ಕಾರ, ರಾಜ್ಯದ ಹಿಂದುಳಿದ ವರ್ಗಕ್ಕೆ ಮಾಡದೇ ಇದ್ದಷ್ಟು ಅತ್ಯಂತ ದ್ರೋಹವನ್ನು ಈ ಸರ್ಕಾರ ಮಾಡಿದೆ ಎಂದು ವಿಧಿ ಇಲ್ಲದೆ ಹೇಳಬೇಕಾಗಿದೆ. ಈಗ್ಗೆ ಎರಡು ಗಂಟೆ ಹಿಂದೆ ಇದು ಇರಲಿಲ್ಲ. 80 ರ ವಿಧೇಯಕವನ್ನು ನಮ್ಮ ಮುಂದೆ ತಂದಿದ್ದಾರೆಂದು ನಾವು ತಿಳಿದುಕೊಂಡಿದೆವು. ಬೆಳಗ್ಗೆ ಇಲ್ಲಿಗೆ ಬಂದಿದ್ದಾಗ 80 ಇತ್ತು, ಮಾನ್ಯ ಬಂಗಾರಪ್ಪನವರು ಭಾಷಣ ಮಾಡುವಾಗಲೂ 80 ಇತ್ತು. ನಾನು ಭಾಷಣ ಮಾಡುವುದಕ್ಕೆ ಶುರು ಮಾಡಿದಮೇಲೆ 73ಕ್ಕೆ ಇಳಿಯಿತು. ಇನ್ನು ಮುಗಿಯುವ ಹೊತ್ತಿಗೆ ಎಷ್ಟಕ್ಕೆ ಇಳಿಯುತ್ತದೆಯೋ ಗೊತ್ತಿಲ್ಲ. ಇವತ್ತು ಸಾಯಂಕಾಲ ಬೇರೆ ಯಾರಾದರೂ ಮೆರವಣಿಗೆಯನ್ನೋ, ಪ್ರತಿಭಟನೆಯನ್ನೋ, ಒತ್ತಡವನ್ನೋ ತಂದರೆ, ಅಥವಾ ಮೇಲ್ಗಡೆಯಿಂದ ಫೋನ್ ಬಂದರೆ, ಎಷ್ಟಕ್ಕೆ ಏರುತ್ತದೆಯೋ ಅದೂ ಕೂಡ ನನಗೆ ಗೊತ್ತಿಲ್ಲ. ಅಂದರೆ ಇವತ್ತಿಗೆ ಸರ್ಕಾರದ ಪರಿಸ್ಥಿತಿ ಹೀಗಿದೆ. ಈ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಈ ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ ಇರುವಂಥ ಮೀಸಲಾತಿ 50 ಭಾಗ ಮಾತ್ರ. ಬಹುಶಃ ನನಗನಿಸುತ್ತದೆ. ಇನ್ನು ಮುಂದೆ ಇವರು ಖಾಯಂ ಆಯೋಗ ಮಾಡಿ, ಆದರಿಂದ ವರದಿ ತರಿಸಿಕೊಂಡು, ಆ ವರದಿಯ ಅನುಷ್ಠಾನ ಮಾಡುವವರೆಗೂ ಈ 50 ಭಾಗದ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮಗಳೇ ಮುಂದುವರಿಯಬೇಕಾಗುತ್ತದೆ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ., ಈ ಪರ್ಸೆಂಟೇಜ್ ಅಥವಾ ಶೇಕಡಾವಾರನ್ನು ಗುರುತಿಸುವಂಥ ಸಂದರ್ಭದಲ್ಲಿ, ಗುರುತಿಸುವಂಥ ಶಕ್ತಿ, ವ್ಯಕ್ತಿ, ಸರ್ಕಾರ ಅಥವಾ ಪದಾಧಿಕಾರ ಅನುಸರಿಬೇಕಾದುದು ಏನನ್ನು, ಯಾವ ಮಾನದಂಡವನ್ನು ಬಳಸುತ್ತಾರೆ ಎನ್ನುವುದರ ಬಗ್ಗೆ ಮತ್ತೆ ನನಗೆ ಅನುಮಾನ ಬಂದಿದೆ. ಕಾನೂನು ಇಲಾಖೆಯವರು ಇವರಿಗೆ ಏನಾದರೂ ಹೇಳುತ್ತಾರೋ ಅದೇ ಜಡ್ಜ್‌ಮೆಂಟಿನಲ್ಲಿ ಹೇಳಿದ್ದಾರೆ. ಇಂದಿರಾಸಾಹಿ ಕೇಸ್‌ನಲ್ಲಿ ಹೇಳಿದ್ದಾರೆ. ಇಲ್ಲವೋ. ಸುಪ್ರೀಂಕೋರ್ಟ್‌ನವರು, ಒಂದು ಮಾನದಂಡವನ್ನು ಅನುಸರಿಬೇಕೆಂದು ಹೇಳಿದ್ದಾರೆ. ಯಾವುದು ಮಾನದಂಡ ಎಂದರೆ, provision of Article 4 conceived in the interest of certain sections of the society should be balanced against guarantee of the equality enshrined in clause 16(4) which is a guarantee held out to every citizen and to the entire society, ಒಂದು ವರ್ಗದ ಜನಗಳ ಕಲ್ಯಾಣ ಸಾಧನೆ ಮಾಡುವಂಥ, ನಿಮ್ಮ ಕಟಿಬದ್ಧವಾದಂಥ ನಿರ್ಧಾರವನ್ನು ತೆಗೆದುಕೊಳ್ಳುವಾಗ, ನೀವು ಯಾವ ನಿಯಮವನ್ನು ಅನುಸರಿಸಬೇಕು, ಯಾವ ಮಾನದಂಡವನ್ನು ಅನುಸರಿಸಬೇಕೆಂಬುದನ್ನು ಸರ್ವೋಚ್ಚ ನ್ಯಾಯಾಲಯದವರೇ ಹೇಳುತ್ತಾರೆ. ಒಂದು ವರ್ಗದ ಜನರ ಹಿತವನ್ನು ರಕ್ಷಣೆ ಮಾಡುವಂಥ ಸಂದರ್ಭದಲ್ಲಿ, ಮತ್ತೊಂದು ವರ್ಗಧ ಜನರ ಹಿತವನ್ನು ನಾಶ ಮಾಡುವಂಥ ಕೆಲಸವನ್ನ ಮಾಡಬೇಡಿ. It is true that certain section of people who are downtrodden, those who are less fortune, give them some facilities but at the same time safeguard everygroup also; every category also, every community also. That is what the

Manadhanda, that is what the norms, that is what the guidlines the Supreme Court has given.

**4.00 ಪಿ.ಎಂ**

ಅಧ್ಯಕ್ಷರು :- ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ವೈ.ಕೆ.ರಾಮಯ್ಯ :- ಅನಾವಶ್ಯಕವಾಗಿ ನಾನುಹೇಳುತ್ತಿಲ್ಲ.

ಅಧ್ಯಕ್ಷರು :- ಪ್ರಸ್ತಾವನೆಯನ್ನು ಮುಗಿಸಿ.

ಶ್ರೀ ವೈ.ಕೆ.ರಾಮಯ್ಯ :- ಆದಷ್ಟು ಬೇಗ ಮುಗಿಸುತ್ತೇನೆ. ನಾನು ಏನು ಮಾಡಲಿ? ಎಲ್ಲವೂ ಹೇಳುವಂಥಾವೇ ಇವೆ. ಕಂಠ ಶೋಷಣೆ ಮಾಡಲಿಕ್ಕೆ ನನಗೂ ಇಷ್ಟವಿಲ್ಲ. ಅವರಿಗೆ ಈಗಲಾದರೂ, ಈ ಹಂತದಲ್ಲಾದರೂ let wisdom prevail on this Government. ಎಲ್ಲೋ ಮೂಲೆಯಲ್ಲಿ ನನಗೆ ಒಂದು ತುಡಿತ, ಈಗಾಲಾದರೂ ಈ ಸರ್ಕಾರಕ್ಕೆ ಈ ವಿವೇಚನೆ ಬರುತ್ತದೆಯೇ ಎಂದು. ಸನ್ಮಾನ್ಯ ವೀರಪ್ಪಮೊಯಿಲಿಯವರು ಅಧಿಕಾರಕ್ಕೆ ಬಂದ ಮೇಲೆ ಅವರ ವೀರಾವೇಶದ ಹೇಳಿಕೆಗಳು ಸದನದ ಒಳಗೆ ಮತ್ತು ಹೊರಗೆ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೊಳಿಸುತ್ತೇನೆಂದು ಏನು ಭಾಷಣಗಳನ್ನು ಮಾಡಿದರೋ, ಅದನ್ನು ಮಾಡಲಿಕ್ಕೆ ಅವರಿಂದ ಆಗಲಿಲ್ಲ, ಆಗುವುದೂ ಇಲ್ಲ. ಇದು ಚಿನ್ನಪ್ಪರೆಡ್ಡಿ ವರದಿ ಅನುಷ್ಠಾನ ಅಲ್ಲ. ಇದುವರೆಗೆ ನಾನು ಪ್ರಸ್ತಾವನೆ ಮಾಡಿದಂಥ ತಮ್ಮ ಗಮನಕ್ಕೆ ತಂದಂಥ ವಿಷಯಗಳನ್ನು ಪರಿಶೀಲನೆ ಮಾಡಿದರೆ ತಾವು ಒಪ್ಪಿಕೊಳ್ಳುತ್ತೀರಿ, ಇದು ಚಿನ್ನಪ್ಪರೆಡ್ಡಿ, ಆಯೋಗದ ವರದಿಯ ಅನುಷ್ಠಾನ ಅಲ್ಲ, ವೀರಪ್ಪಮೊಯಿಲಿಯವರ ವಿಪರೀತ ಬುದ್ಧಿಯ ವಿಕೃತ ಸ್ವರೂಪದ ಅನುಷ್ಠಾನ ಎಂದು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

1986 ರ ಆಜ್ಞೆಯ ವಿಷಯದಲ್ಲಿ ನಾನು ಒಂದು ದಶಕದಿಂದ ಆ ಕಡೆ ಕುಳಿತುಕೊಂಡು ವೀರಪ್ಪಮೊಯಿಲಿಯವರ ಭಾಷಣವನ್ನು ಕೇಳಿದ್ದೇನೆ. ಅವರು ಅದರ ಬಗ್ಗೆ ಅಡಿರುವಂಥ ಮಾತು, ತೆಗೆದುಕೊಂಡಿರತಕ್ಕಂಥ ನಿಲುವಿನ ಅರಿವು ನನಗಿದೆ. ಹಳ್ಳಿಯ ಕಡೆ ಒಂದು ಗಾದೆ ಇದೆ, "ಹಳೆಯ ಗಂಡನ ಪಾದವೇ ಗತಿ" ಎನ್ನುವ ಹಾಗೆ ಯಾವ ಸರ್ಕಾರಿ ಆಜ್ಞೆಯನ್ನು ವಾಚಾಮಗೋಚರವಾಗಿ ಇವರು ವಿರೋಧ ಮಾಡಿದ್ದರೋ, ಯಾವ ಸರ್ಕಾರಿ ಆಜ್ಞೆಯನ್ನು ನಿಕೃಷ್ಟವಾಗಿ ಕಂಡಿದ್ದರೋ ಹಾಗೆಯೇ ಹಿಂದಿನ ಸರ್ಕಾರಗಳಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಮತ್ತು ಬೊಮ್ಮಾಯಿಯವರ ಬಗ್ಗೆ ವ್ಯಾಖ್ಯಾನಗಳನ್ನು ಮಾಡಿ ಇವರುಗಳಿಗೆ ಹಿಂದುಳಿದ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವಂಥ ಇಚ್ಛಾಶಕ್ತಿ ಇಲ್ಲ, ಮತ್ತು they didn't have political will to protect the interests of backward classes in the State; that extent Sri Moily has argued on the 1986 order. 1986ರ ಆರ್ಡ್‌ರನಲ್ಲಿ ಹಿಂದುಳಿದ ವರ್ಗಗಳಿಗೆ ಕೊಟ್ಟಿದ್ದಂಥ ಸವಲತ್ತು ಶೇಕಡಾ 68. ಸನ್ಮಾನ್ಯ ಸಚಿವರೆ, ನೀವು ಮೊನ್ನೆ ತೆಗೆದುಕೊಂಡಿರುವಂಥ ತೀರ್ಮಾನದಲ್ಲಿ ಈ ರಾಜ್ಯದ ಹಿಂದುಳಿದ ವರ್ಗದವರಿಗೆ

ಕೊಟ್ಟಿರತಕ್ಕಂಥ ಸವಲತ್ತು ಶೇಕಡಾ 50 ಭಾಗ ಮಾತ್ರ. You have reduced from 68% to 50%. Now the people of Karnataka and the so called elites of Karnataka has to decide as to who is the protector and who is the champion of backward classes in Karnataka State. ನಾನು ಅದಕ್ಕೇ ಈ ಮಾತನ್ನು ಹೇಳಿದ್ದು, ಇದು ಚಿನ್ನಪ್ಪರೆಡ್ಡಿ ಆಯೋಗದ ವರದಿ ಅನುಷ್ಠಾನ ಅಲ್ಲ. ಶ್ರೀಮಾನ್ ವೀರಪ್ಪಮೊಯಿಲಿಯವರ ವಿಪರೀತ ಬುದ್ದಿಯ ವಿಕೃತ ಸ್ವರೂಪದ ಅನುಷ್ಠಾನ. ಇದು ಶೂನ್ಯ ಸಂಪಾದನೆಗಿಂತಲೂ ಕಡಿಮೆ. ಇವತ್ತು ಸಂಪಾದನೆ ಮೂಡಿರುವುದು ಒಂದು ದೊಡ್ಡ ಸೊನ್ನೆ. ಬಡವರ ಉದ್ಧಾರ ಮಾಡುತ್ತೇವೆಂದು ಹೇಳಿ ಕೊನೆಯ ಪಕ್ಷ 80 ಪರ್‌ಸೆಂಟ್ ಆದರೂ ಮಾಡಿದ್ದಿದ್ದರೆ ನಾವು ನಿಮಗೆ ಧನ್ಯವಾದಗಳನ್ನಾದರೂ ಅರ್ಪಿಸುತ್ತಿದ್ದೆವು. 68 ಪರ್‌ಸೆಂಟ್ ಇದ್ದುದನ್ನು ಕಡಿಮೆ ಮಾಡಿ ಈಗ 50 ಪರ್‌ಸೆಂಟ್‌ಗೆ ಇಳಿಸಿ ಈ ರಾಜ್ಯದ ಹಿಂದುಳಿದ ಜನತೆಗೆ ಅತ್ಯಂತ ದೊಡ್ಡ ದ್ರೋಹ ಮಾಡುವಂಥ ಪರಿಸ್ಥಿತಿಯನ್ನು ನೀವು ಸೃಷ್ಟಿ ಮಾಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ :- ಅದನ್ನು ಸರಿಯಾಗಿ ಓದಿರಿ. That G.O/ has been issued only for the purpose of admissions to medical and engineering colleges and that too in pursuance of the Supreme Court decision.

ಶ್ರೀ ವೈ.ಕೆ. ರಾಮಯ್ಯ :- ನೀವು ಕೊಟ್ಟಂಥ ಆಜ್ಞೆಯನ್ನು ನಾನು ಆತುರಾತುರವಾಗಿ ಓದಿಕೊಂಡೆ. ಬೇರೆ 80 ರದು, 73 ರದು, 68 ರದು ಎಲ್ಲಾ ಆಜ್ಞೆಯಲ್ಲೂ ಅದೇ ಪರ್ಪಸ್ಸೇ. I am quite competent for this argument other G.Os are also issued on those lines ಮತ್ತೆ ಸುಮ್ಮನೆ ನೀವು ವ್ಯರ್ಥ ಪ್ರಯತ್ನವನ್ನು ಏಕೆ ಮಾಡುತ್ತೀರಾ? ಯಾವ ಉದ್ದೇಶಕ್ಕಾಗಿ ಎರಡನೇ ಆಜ್ಞೆಯನ್ನು ಹೊರಡಿಸಿದ್ದೀರೋ ಅದೇ ರೀತಿ ಹಿಂದೆ ಹೊರಡಿಸಿದ್ದಂಥ ಎಲ್ಲಾ ಆಜ್ಞೆಗಳು ಅದೇ ಉದ್ದೇಶದಿಂದ ಕೂಡಿದ್ದವು. ಸಾಕೇ ಉತ್ತರ?

ಶ್ರೀ ಕಾಗೋಡು ತಿಮ್ಮಪ್ಪ :- ಜಾಂಡೀಸ್ ಕಣ್ಣಿಗೆ ಹಾಗೆಯೇ ಕಾಣುವುದು.

ಶ್ರೀ ವೈ.ಕೆ. ರಾಮಯ್ಯ :- ಯಾರಾದರೂ ಹೇಳುವ ಹಾಗಿದ್ದರೆ ಜೋರಾಗಿ ಹೇಳಿ ಅದನ್ನು ಪೇಪರ್‌ನವರು ಬರೆಯಲಿ. ನಾನು ಮಾಡುವಂಥ ಪ್ರತಿಪಾದನೆಗಳು, ನಾನು ಹೇಳುತ್ತಿರುವಂಥ ಮಾತುಗಳು ಜಾಂಡೀಸ್ ಕಣ್ಣಿನಿಂದ ಆಡುವಂಥ ಮಾತುಗಳು, ಸತ್ಯಕ್ಕೆ ದೂರವಾದಂಥ ಮಾತುಗಳು ಎಂದು ಯಾರಾದರೂ ಹೇಳುವುದಾದರೆ,...

ಪ್ರೊ : ಎಂ.ಡಿ. ನಂಜುಂಡಸ್ವಾಮಿ :- ಮಾನ್ಯ ರಾಮಯ್ಯನವರೆ, ಅವರು ಹೇಳುತ್ತಿರುವುದು, 1986 ಆರ್ಡ್‌ರ್ ಕೂಡ ಅಡ್-ಹಾಕ್ ಆರ್ಡ್‌ರ ಎಂದು 1986 ಆರ್ಡ್‌ರ್ ಕೂಡ ತಾತ್ಕಾಲಿಕ ಎಂತಲೇ ಮಾಡಿದ್ದುದು.

ಶ್ರೀ ಕಾಗೋಡು ತಿಮ್ಮಪ್ಪ :- ಮೂರು ವರ್ಷಗಳಾದ ಮೇಲೆ ಪ್ರತಿ 6 ತಿಂಗಳಿಗೆ ಒಂದು ಸಾರಿ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಶ್ರೀ ಕರಿಯಣ್ಣ :- ಇದುವರೆಗೆ ಭಾಷಣವನ್ನು ಕೇಳಿದೆವು. ಬ್ಯಾಕ್‌ವರ್ಡ್ ಕ್ಲಾಸ್‌ಗೆ ಏನು ಮಾಡಬೇಕು ಎಂಬುದನ್ನು ಹೇಳಲೇ ಇಲ್ಲವೆ? ಯಾರು ಬ್ಯಾಕ್‌ವರ್ಡ್ ಎಂದು ಹೇಳುವುದಿಲ್ಲ, ಯಾರಿಗೆ ಏನು ಕೊಡಬೇಕೆಂದು ಹೇಳುವುದಿಲ್ಲ, ಅವರು ಏನು ಹೇಳುತ್ತಿದ್ದರೋ ಒಂದೂ ಗೊತ್ತಾಗುತ್ತಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಏನು ಸವಲತ್ತು ಸಿಗಬೇಕು? ಬ್ಯಾಕ್ ವರ್ಡ್ ಕ್ಲಾಸಸ್ ಎಂದರೆ ಏನು? ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಅನ್ಯಾಯ ಮಾಡಿದ್ದೀರಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ಬ್ಯಾಕ್‌ವರ್ಡ್ ಕ್ಲಾಸ್ ನವದಲ್ಲಿ ಇನ್ನೊಂದು ಸೈಡನ್ನು ಮರೆಯಬಾರದು ಎಂದು ಹೇಳುತ್ತಾರೆ. ಇವರು ಬ್ಯಾಕ್ ವಡ್ ಕ್ಲಾಸ್ ಪರವಾಗಿ ಮಾತನಾಡುತ್ತಾರೋ, ಬೇರೆಯವರ ಪರವಾಗಿ ಮಾತನಾಡುತ್ತಾರೋ? ಅಥವಾ ಸರ್ಕಾರಕ್ಕೆ ಒಳ್ಳೆಯ ಒಂದು ಸಜೆಷನ್ ಕೊಡುತ್ತಾರೋ ಅಥವಾ ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಹೇಳುತ್ತಾರೋ? ಏನೂ ಗೊತ್ತಾಗುತ್ತಿಲ್ಲ. 3 ಗಂಟೆಯಿಂದ ಭಾಷಣ ಕೇಳುತ್ತಲೇ ಇದ್ದೇವೆ. ಅದು ಯಾವಾಗ ಮುಗಿಯುತ್ತದೆಯೋ ನಮಗೆ ಅರ್ಥವೂ ಆಗುತ್ತಿಲ್ಲ.

ಶ್ರೀ ವೈ.ಕೆ.ರಾಮಯ್ಯ : ಭಾಷಣ ಕೇಳುವವರ ಮಟ್ಟಕ್ಕೆ ಹೇಳಿದರೆ ಭಾಷಣ ಅರ್ಥವಾಗುತ್ತದೆ. ಅದು ನನ್ನ ತಪ್ಪಲ್ಲ. ಅವರ ಮಟ್ಟಕ್ಕೆ ನನಗೆ ಬುದ್ದಿ ಬೆಳೆದಿಲ್ಲ. ನಾನು ಪ್ರಲಾಪ ಮಾಡುತ್ತಿದ್ದೇನೆ, ನಾನು ಹೇಳುವುದಿದ್ದರೆ ಅಧ್ಯಕ್ಷರಿಗೆ ಹೇಳುತ್ತೇನೆ. ನಾನು ಹೇಳುವುದಿಷ್ಟೇ, ನನ್ನ ಬುದ್ಧಿಯ ಮಟ್ಟ ಕರಿಯಣ್ಣನವರ ಬುದ್ಧಿಯ ಮಟ್ಟಕ್ಕೆ ಏರಿಲ್ಲ. ನನ್ನ ಅಬಿಪ್ರಾಯ ಇಷ್ಟೇ ಓದುವಂಥ ವ್ಯಕ್ತಿಗೆ,...

ಶ್ರೀ ಕರಿಯಣ್ಣ :- ಹೌದು ನಾನು ರಾಮಯ್ಯನವರ ಮಟ್ಟಕ್ಕೆ ಬೆಳೆಯಲಿಲ್ಲ ಅವರು ಏನು ಹೇಳುತ್ತಾರೆ ಎನ್ನತಕ್ಕಂಥಾದ್ದು ನಾಳೆ ಬೆಳಗ್ಗೆ ಪತ್ರಿಕೆಯಲ್ಲೇ ನೋಡಲಿ. ಪತ್ರಿಕೆಯವರಿಗೂ ಏನು ಬರೆಯಬೇಕೆಂದು ಅರ್ಥವಾಗಲಿಲ್ಲ. ಆ ಪರಿಸ್ಥಿತಿ ಅವರ ಭಾಷಣದಲ್ಲಿ ಆಗಿಹೋಗಿದೆ.

ಶ್ರೀ ವೈ.ಕೆ.ರಾಮಯ್ಯ :- ಪತ್ರಿಯವರ ಬುದ್ದಿ ಬಗ್ಗೆ ನೀವು ಏನು ಅನುಮಾನ ಮಾಡಿಕೊಳ್ಳಬೇಡಿ. ಅವರಿಗೆ ಗೊತ್ತಿದೆ, ಅವರು ಬರೆಯುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ವೆಂಕಟಸ್ವಾಮಿ ವರದಿಯನ್ನು ಜಾರಿಗೆ ಕೊಡಿಸಬೇಕೆಂದು ಬಲವಾಗಿ ಪ್ರತಿಪಾದನೆ ಮಾಡುವಂಥ ಸಂದರ್ಭದಲ್ಲೂ ಕೂಡ ನೀವು ನಿಮ್ಮ ಉದ್ವೇಗವನ್ನು ಎತ್ತಲಿಲ್ಲ.ಯಾರೋ ಪ್ರಭ ಕೋಮಿನವರು ಮೆರವಣಿಗೆ ಬಂದಿದ್ದಕ್ಕೆ ಆಜ್ಞೆ ಹೊರಡಿಸಿಬಿಟ್ಟರಿ ಎಂದು ತಾವು ಹೇಳಿದ್ದೀರಿ. ಅವಾಗಲೂ ನಿಮ್ಮ ವಿರೋಧದ ಧ್ವನಿ ಎತ್ತಲಿಲ್ಲ. ಇವೆಲ್ಲಾ ಆದ ಮೇಲೆ ಧ್ವನಿ ಎತ್ತಿದರೆ ಏನು ಪ್ರಯೋಜನ?

ಶ್ರೀ ಕೆ.ಸೋಮಪ್ಪ ಸುವರ್ಣ :- ಇದರಲ್ಲಿ ದ್ವಂದ್ವ ಅರ್ಥ ಬರುತ್ತಿದೆ. ಒಂದು ಸಾರಿ ಹಿಂದುಳಿದ ವರ್ಗಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತಾರೆ, ಮುಂದುವರಿದವರಿಗೆ ತೊಂದರೆ ಮಾಡಬಾರದೆಂದು ಇನ್ನೊಂದು ಸಾರಿ ಹೇಳುತ್ತಾರೆ, ಹಿಂದುಳಿದವರಿಗೆ ಲಾಭವಾಗಬೇಕು. ಆದರೆ ಹಿಂದುಳಿದ ವರ್ಗದವರಿಗೆ ತೊಂದರೆಯಾಗಬಾರದು ಇದು ಯಾವ ನ್ಯಾಯ?

ಶ್ರೀ ಜಿ. ರಾಜೂಗೌಡ :- ಮೀಸಲಾತಿ ಬಗ್ಗೆ ತಮ್ಮ ದೃಢ ನಿಲುವು ಏನು ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಿ. ನೇರವಾಗಿ ಉತ್ತರ ಕೊಡಿ.

ಶ್ರೀ ವೈ.ಕೆ. ರಾಮಯ್ಯ :- ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಮಾತು ಕೊಟ್ಟಿದ್ದೀರೋ ಅದರ ಪ್ರಕಾರ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೆ ತಂದು ದಯಮಾಡಿ ಚುನಾವಣೆಗೆ ಬನ್ನಿ.

ಶ್ರೀ ಕಾಗೋಡು ತಿಮ್ಮಪ್ಪ :- ನೀವು ಅದರ ಪರವಾಗಿ ಇದ್ದೀರೋ?

ಶ್ರೀ ವೈ.ಕೆ.ರಾಮಯ್ಯ :- ಹೌದು.

ಶ್ರೀ ಎ.ಕೃಷ್ಣಪ್ಪ :- ಮಾನ್ಯ ರಾಮಯ್ಯನವರು ಮೊದಲು ಸರ್ಕಾರದಲ್ಲಿ ಇದ್ದರು. ವೆಂಕಟಸ್ವಾಮಿ ಆಯೋಗದ ವರದಿಯನ್ನು ತಾವು ಏನು ಮಾಡಿದಿರಿ? ಯಥಾಸ್ಥಿತಿ ಜಾರಿಗೆ ತಂದಿರೋ? ಜಾರಿಯೇ ಮಾಡಲಿಲ್ಲ.

ಶ್ರೀ ಜಿ.ರಾಜೂಗೌಡ :- ಆಗ ಬಹಳ ಪ್ರತಿಭಟನೆ ಮಾಡಿ ಬಸ್‌ಗಳಿಗೆಲ್ಲಾ ಕಲ್ಲು ಹೊಡೆದರಲ್ಲಾ, 20ದಿವಸ ಮಂಡ್ಯ, ಮೈಸೂರು ಕಡೆ ಪ್ರಯಾಣ ಮಾಡುವುದಕ್ಕಾಗಲಿಲ್ಲ. ಅವತ್ತು ತಾವು ಏಕೆ ಸುಮ್ಮನೆ ಆದಿರಿ?

ಶ್ರೀ ಎ.ಕೃಷ್ಣಪ್ಪ :- ಇದರ ಬಗ್ಗೆ ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಪ್ರತಿಬಟನೆ ನಡೆಯಿತು. ಚಿಕನಾಯಕನ ಹಳ್ಳಿಯಲ್ಲೂ ಪ್ರತಿಭಟನೆ ನಡೆಯಿತು. ಅವತ್ತು ತಾವು ಏನು ಹೇಳಿದಿರಿ? ಅವತ್ತು ತಮ್ಮ ಪ್ರತಿಕ್ರಿಯೆ ಇರಲಿಲ್ಲ.

* ಶ್ರೀ ವೈ.ಕೆ.ರಾಮಯ್ಯ :- ಸನ್ಮಾನ್ಯ ಶ್ರೀ ರಾಜುಗೌಡರು, ಶ್ರೀ ಕೃಷ್ಣಪ್ಪನವರು ಮತ್ತು ಸಚಿವರು ವೆಂಕಟಸ್ವಾಮಿ ಆಯೋಗದ ವರದಿ ಬಂದ ಸಂದರ್ಭದಲ್ಲಿ ನೀವೂ ಸರ್ಕಾರದಲ್ಲಿದ್ದರಲ್ಲ ಏನು ಮಾಡಿದಿರಿ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಅತ್ಯಂತ ವಿನಯದಿಂದ ಅವರ ಜ್ಞಾಪಕಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಆ ಸಂದರ್ಭದಲ್ಲಿ ನಾನು ಸಚಿವನಾಗಿರಲಿಲ್ಲ, ಆಡಳಿತ ಪಕ್ಷದ ಸದಸ್ಯನಾಗಿದ್ದೆ. ಎರಡನೆಯದು, ಚಿನ್ನಪ್ಪರೆಡ್ಡಿ ಆಯೋಗದ ವರದಿ ಬಗ್ಗೆ ಸರ್ಕಾರದ ಏನು ಮಾಡಬೇಕೆಂಬ ಬಗ್ಗೆ ನನಗೊಂದು ಕೆಟ್ಟ ಚಟ ಇದೆ, ಎಲ್ಲವನ್ನೂ ಕಟ್ಟಿಟ್ಟುಕೊಂಡಿದ್ದೇನೆ, ಇದರ ನಾಲ್ಕೈದು ಪೇಜಿದೆ, ಮಂತ್ರಿಗಳಿಗೆ ಬೇಕಾದರೆ ಕೊಡುತ್ತೇನೆ. ಅವರು ಓದಿಕೊಳ್ಳಬಹುದು. ಆದ್ದರಿಂದ ನಾನು ಪ್ರತಿಪಾದನೆ ಮಾಡುವಂತಹ ತತ್ವ ಎಂದು ನಾನು ದೊಡ್ಡ ಮಾತು ಹೇಳುವುದಿಲ್ಲ. ನಾನು ನಂಬಿಕೊಂಡಿರುವುದಕ್ಕೆ ವಿರೋಧವಾಗಿ ನನ್ನ ಸರ್ಕಾರವಲ್ಲ, ನನ್ನ ಹೆತ್ತ ತಂದೆಯೇ ಬಂದು ಹೇಳಿದರೂ ಕೇಳುವವನಲ್ಲ ನಾನು, ಬೇಕಾದರೆ ವೆಂಕಟಸ್ವಾಮಿ ಅಯೋಗದ ಬಗ್ಗೆ ಮುಖ್ಯಮಂತ್ರಿಗಳಿಗೆ ಏನು ಕಾಗದ ಬರೆದಿದ್ದೇನೆ ಎಂದು ಕೊಡುತ್ತೇನೆ, ಓದಿಕೊಳ್ಳಿ. ಅಧ್ಯಕ್ಷರೇ, ನನ್ನ ಭಾಷಣ ಪ್ರಕೃತವೇ ಅಪ್ರಕೃತವೇ ಅದು ಕಂಠಶೋಷಣೆಯೇ ಇಲ್ಲವೇ ಎಂಬ ಬಗ್ಗೆ ಪತ್ರಿಕೆಯವರಿಗೂ ಗೊತ್ತಿಲ್ಲ ಎಂದು ನಮ್ಮ ಸ್ನೇಹಿತರು ಹೇಳುತ್ತಾರೆ, ಬಹುಶ : ಕರ್ನಾಟಕದ ಪತ್ರಿಕಾರಂಗ ಅಷ್ಟೊಂದು ದಿವಾಳಿತನಕ್ಕೆ ಇಳಿದಿಲ್ಲವೆಂದು ನನ್ನ ಭಾವನೆ. ಏನು ಮಾಡಬೇಕೆಂದು ಹೇಳುತ್ತಿಲ್ಲ, ಏನು ಮಾಡಬೇಕು ಹೇಳಿ ಅಂತಾರೆ, ಏನು ಮಾಡಬೇಕೆಂದು ನಾನು ಕೇಳುವುದಿಲ್ಲ. ನೀವು ಏನು ಹೇಳಿದ್ದೀರೋ ಅದನ್ನು ಮಾಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. 1990 ನೇ ಇಸವಿಯಲ್ಲಿ

ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದೀರಿ. ಅದನ್ನು ಅನುಷ್ಠಾನಕ್ಕೆ ತರುತ್ತೇವೆಂದು ನಿಮ್ಮ ಮುಖ್ಯ ಮಂತ್ರಿಗಳು ಈ ರಾಜ್ಯದ ಹೊರಗೆ ಒಳಗೆ ವೀರಾವೇಷದಿಂದ ಭಾಷಣ ಮಾಡಿದ್ದಾರೆ. ದಯಮಾಡಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತನ್ನಿ. ಇನ್ನು ಇವರು ಮೀಸಲಾತಿ ಪರವಾಗಿದ್ದಾರೋ ಅಥವಾ ವಿರೋಧವಾಗಿದ್ದಾರೋ ಎಂದು ನನಗೆ ಗೊತ್ತಾಗುವುದಿಲ್ಲವೆಂದು ಪಾಪ ಕರಿಯಣ್ಣನವರಿಗೆ ಗೊಂದಲಕ್ಕಿಟ್ಟುಕೊಂಡಿದೆ. ಬೆಳಗಿನಿಂದ ನೀವೇನು ಹೇಳುತ್ತೀದಿರೆಂದು ಅವರು ತಿಳಿದುಕೊಂಡಿದ್ದಾರೋ ಇಲ್ಲವೋ ಗೊತ್ತಾಗಲಿಲ್ಲ. ಮೀಸಲಾತಿ ಪರವಾಗೂ ಇದ್ದೇನೆ. ನಾನು ವಿರೋಧವಾಗಿಯೂ ಇದ್ದೇನೆ. ಯಾವಾಗ ನೀವು ಒಂದು ವರ್ಗದ ಜನರ ಹಿತ ಕಾಪಾಡಲಿಕ್ಕೆ ಮೀಸಲಾತಿ ಮಾಡುತ್ತೀರೋ ಅದೇ ಸಂದರ್ಭದಲ್ಲಿ ಬೇರೆ ವರ್ಗದ ಹಿತ ಕಾಪಾಡುವ ಜವಾಬ್ದಾರಿಯೂ ನಿಮಗಿದೆ. ಆ ಚಿಂತನೆ ನಿಮಗಿರಬೇಕಾಗುತ್ತದೆ.

ಉಪಾಧ್ಯಕ್ಷರು :- ಅಂದರೆ ರಾಮಯ್ಯನವರು ಏಕಕಾಲಕ್ಕೆ ಪೂರ್ವಕ್ಕೂ ಪಶ್ಚಿಮಕ್ಕೂ ಒಂದೇ ಸಲ ನಡೆಯುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ :- ನೀವಾದರೂ ಸ್ವಲ್ಪ ಅರ್ಥಮಾಡಿಕೊಳ್ಳಿ. ಹಿಂದುಳಿದ ವರ್ಗದವರಿಗೆ ಮೀಸಲಾತಿ ಕೊಟ್ಟಿದ್ದುದು 1983ರಲ್ಲಿ 68. ಅದಕ್ಕೆ ನಾನು ಪರವಾಗಿದ್ದೇನೆ. ಮೊನ್ನೆ ನಿಮ್ಮ ಸರ್ಕಾರದವರು ಆಜ್ಞೆ ಹೊರಡಿಸಿ ಆ ಮೀಸಲಾತಿಯನ್ನು 50ಕ್ಕೆ ಇಳಿಸಿದ್ದಾರೆ. ಅದಕ್ಕೆ ನಾನು ವಿರೋಧವಾಗಿದ್ದೇನೆ.

ಶ್ರೀ ಕರಿಯಣ್ಣ: - ಇಷ್ಟುಹೊತ್ತಿನವರೆಗೂ ಅವರು ಏನು ಹೇಳಿದರು? ಸುಪ್ರೀಮ್‌ಕೋರ್ಟ್ ಆಜ್ಞೆ ಪ್ರಕಾರ 50 ಪರ್ಸೆಂಟ್ ಬಂದಿದೆ ಎಂದು ಅವರಿಗೆ ಗೊತ್ತಿದೆ. ಅದನ್ನು ಮೀರಿ ಹೋಗುವುದಕ್ಕೆ ಸರ್ಕಾರಕ್ಕೂ ಬರುವುದಿಲ್ಲವೆಂಬುದು ಅವರು ನ್ಯಾಯವಾದಿಗಳಿದ್ದಾರೆ, ಅವರಿಗೆ ಗೊತ್ತಿದೆ. 68ರಿಂದ 50ಕ್ಕೆ ಇಳಿಸಿದ್ದೀರಿ, ನಿಮ್ಮ ಸರ್ಕಾರ, ನೀವು ವಿರುದ್ಧವಾಗಿದ್ದೀರಿ ಎಂದರೆ, ನಾವು ಸುಪ್ರೀಮ್‌ಕೋರ್ಟ್‌ನ ತೀರ್ಮಾನ ಪಾಲನೆ ಮಾಡಬೇಕಾಗಿದೆ, ಈಗ ಮುಂದೆ ಏನು ಮಾಡಬೇಕೆನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಅವರು ನ್ಯಾಯವಾದಿಗಳಿದ್ದಾರೆ, ಇವರೇ ಹೀಗೆ ಹೇಳಿದರೆ ನಾವು ಏನು ಹೇಳೋಣ.

ಶ್ರೀ ವೈ.ಕೆ.ರಾಮಯ್ಯ:- ಸುಪ್ರೀಂಕೋರ್ಟಿನವರು 50 ಭಾಗದ ಮೀಸಲಾತಿಯನ್ನು ನಿರ್ಧಾರ ಮಾಡಿದ್ದುದು ಮೊನ್ನೆ ಸಾಯಂಕಾಲ ಅಲ್ಲ, ಸನ್ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. 50ಕ್ಕೆ ಸೀಮಿತಗೊಳಿಸಬೇಕೆಂದು ನ್ಯಾಯಾಲಯದ ಆಜ್ಞೆ ಹೊರಟಿದ್ದುದು 17-9-94 ಸಂಜೆ ಅಲ್ಲ, 16-11-92ರಲ್ಲಿ. ನಾನು ಇನ್ನಾವ ಭಾಷೆಯಲ್ಲಿ ಹೇಳಲಿ, ನನಗೆ ಬರುವುದು ಎರಡು ಭಾಷೆ ಇಂಗ್ಲೀಷೊಂದು, ಕನ್ನಡ ಒಂದು. ಆದ್ದರಿಂದ ಅಧ್ಯಕ್ಷರೇ, ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುವುದರಲ್ಲಿ. ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈಗಲೂ ಇವರಿಗಿದ್ದ ಒಂದೇ ಒಂದು ರುಜುತ್ವದ ಮಾರ್ಗ ಏನೆಂದರೆ, ಕರಿಯಣ್ಣನವರು ಏನಾದರೂ ಹೇಳಲಿ, ಈ ರಾಷ್ಟ್ರದ ಉಚ್ಚನ್ಯಾಯಾಲಯದ ನಿರ್ದೇಶನ ಏನಿದೆಯೋ ಅದರ ಪ್ರಕಾರ ಯಾವ ಮೀಸಲಾತಿ ಪದ್ಧತಿ ನಮ್ಮಲ್ಲಿ ಹಾಲಿ ಇದೆಯೋ ಅದನ್ನು ಮುಂದುವರೆಸಿ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಹೇಳುವುದು ರೆಕಾರ್ಡಿನಲ್ಲಿರಲಿ. Let it be on record. ನೀವು 11ನೇ ತಾರೀಖು ಹೇಳಿದಿರಲ್ಲ ಅವತ್ತು ಸುಪ್ರೀಮ್‌ಕೋರ್ಟಿನಲ್ಲಿ ಮಧ್ಯಂತರ ತಡೆಯಾಜ್ಞೆ ಇತ್ತು. ಅದರ ವಿಚಾರದಲ್ಲಿ ಅವರು ತೀರ್ಮಾನ ಹೇಳಿದ್ದರೆ ಅದು ಎಸ್‌ಸಿ ಎಸ್‌ಟಿ ಮಿಸಲಾತಿಯೂ ಸೇರಿಕೊಂಡು ಒಟ್ಟು 50ಕ್ಕಿಂತ ಜಾಸ್ತಿ ಇರಬಾರದು ಎಂದು ತೀರ್ಮಾನ ಮಾಡಿದಕಾರಣಕ್ಕಾಗಿ ತತ್ಕಾಲಿಕವಾಗಿ ಇವತ್ತು ಮಕ್ಕಳಿಗೆ ಪ್ರವೇಶ ಕೊಡಬೇಕಾಗಿದೆ, ಆ ಉದ್ದೇಶದಿಂದ ಮಾಡಿರುವುದು.

ಶ್ರೀ ವೈ.ಕೆ.ರಾಮಯ್ಯ:- ನಾನು ಮತ್ತೆ ಅದನ್ನೇ ಹೇಳಬೇಕಾಗುತ್ತದೆ. ಈ ನಿರ್ದೇಶನ ಮೊನ್ನೆ ಕೊಡಲಿಲ್ಲ. ಈ ನಿರ್ದೇಶನ ಕೊಟ್ಟಿದ್ದುದು 11-6-91ರಲ್ಲಿ, ಅವತ್ತು ಏಕೆ ನಿಮ್ಮ ಸರ್ಕಾರ ಆಜ್ಞೆ ಪರಿಪಾಲನೆ ಮಾಡಲಿಲ್ಲ? ಅವತ್ತೇ ನೀವು 50 ಪರ್ಸೆಂಟ್ ಮಾಡಬಹುದಿತ್ತಲ್ಲ, ನಿನ್ನೆ ದಿನ ಏಕೆ ಮಾಡಿದಿರಿ? ನಾನು ಆಗಲೇ ಹೇಳಿದ್ದೇನೆ, ಆಡಳಿತದ ಚುಕ್ಕಾಣಿ ಹಿಡಿದುಕೊಂಡು ರಾಜಕೀಯ ಮಾಡಬೇಕೆಂಬ ಆಸೆ ಇಟ್ಟುಕೊಂಡಿರುವಾಗ we have to do so many things much against our conscience. That is what you are doing now. I know.

ಆದ್ದರಿಂದ ಈ ಸರ್ಕಾರಕ್ಕೆ ನನ್ನ ಪ್ರಾರ್ಥನೆ ಇಷ್ಟೆ. ಉಚ್ಚ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿಟ್ಟುಕೊಂಡು, ಇರುವಂತಹ ಪದ್ಧತಿಯನ್ನು ಮುಂದುವರೆಸಿ. ನ್ಯಾಯಾಲಯದ ನಿರ್ದೇಶನದ ಪ್ರಕಾರ ಈಗಾಗಲೇ ಖಾಯಂ ಆಯೋಗವನ್ನು ರಚನೆ ಮಾಡಿದ್ದನ್ನೂ ಅವರು ಏಕೋ ವಾಪಸ್ ತೆಗೆದುಕೊಂಡಿದ್ದಾರೆ, ಅದು ಏಕೆ ಎಂದು ನನಗೆ ಗೊತ್ತಾಗುತ್ತಿಲ್ಲ. ಖಾಯಂ ಆಯೋಗ ರಚಿಸಿ ಅದರ ಮೂಲಕ ಹಿಂದುಳಿದವರ್ಗದವರನ್ನು ಗುರ್ತಿಸಿ ಅವರಿಗೆ ಸವಲತ್ತು ಒದಗಿಸಿಕೊಡುವುದೊಂದೇ ರುಜುತ್ವದ ಮಾರ್ಗ. ಅದೊಂದೇ ನ್ಯಾಯವಾದ ಮಾರ್ಗ. ಅದನ್ನು ಅನುಸರಿಸಬೇಕೆಂದು ಸರ್ಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅರ್ಥವಾಯಿತೇ? ಅಧ್ಯಕ್ಷರೆ, ಅದನ್ನು ಮಾಡದಿದ್ದರೆ ಇಷ್ಟುಹೊತ್ತಿನವರೆಗೂ ನಾನು ಹೇಳಿದೆನಲ್ಲ ಈ ಸರ್ಕಾರದ ನಡವಳಿಕೆ, ಇದರಿಂದ ನನಗೆ ಮತ್ತು ರಾಜ್ಯದ ಜನತೆಗೆ ಆಡಳಿತ ಮಾಡುವಂಥವರು ಜನರನ್ನು ಮೆಚ್ಚಿಸುವ ಮೂಲಕ ವೋಟನ್ನು ಪಡೆಯಲಿಕ್ಕೆ ಎಂತಹ ಕೀಳುಮಟ್ಟಕ್ಕೆ ಬೇಕಾದರೂ ಇಳಿಯಬಲ್ಲರು, ಎಂತಹ ಕಪಟನಾಟಕ ಬೇಕಾದರೂ ಆಡಬಲ್ಲರೂ ಎಂತಹ ಮಾಯಾಜಾಲದಲ್ಲಾದರೂ ಜನರಿಗೆ ಮೋಸ ಮಾಡಬಲ್ಲರು, ಜೊತೆಗೆ ಸವಲತ್ತುಗಳ ಆಸೆಯ ಮತ್ತೇರಿಸಿ ವೋಟಿನ ಬೇಟೆ ಆಡಬಲ್ಲರು ಎಂದು ವಿಧಿಯಿಲ್ಲದೆ ನಾವು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ:- ಎಲ್ಲಾ ಪಕ್ಷದವರ ಉದ್ದೇಶವೂ ಅದೇ ಅಲ್ಲವೇ ರಾಮಯ್ಯನವರೇ? ಜನರಿಗೆ ಒಳ್ಳೆಯ ಕೆಲಸ ಮಾಡಬೇಕು, ಜನರಿಂದ ಮತ್ತೆ ವೋಟ್‌ಗಳಿಸಿ ಗೆದ್ದುಬರಬೇಕು ಅನ್ನುವುದು. ಅದರಲ್ಲಿ ನಾವು ಬೇರೆ ನೀವು ಬೇರೆ ಆಗಿರುವುದಿಲ್ಲವಲ್ಲ.

ಶ್ರೀ ವೈ.ಕೆ.ರಾಮಯ್ಯ:- ಬೆಳಿಗ್ಗೆ ನಾನು ಆ ಮಾತು ಹೇಳಿದ್ದೇನೆ. ಎಲ್ಲಾ ಪಕ್ಷದವರೂ ಈ ವಿಷಯದಲ್ಲಿ ಸ್ಪರ್ಧೆಯಲ್ಲಿದ್ದೇವೆ ಎಂದು. ನಾನು ಒಂದೊಂದು ಊರಿನಲ್ಲಿ ಒಂದೊಂದು ತರಹ ಭಾಷಣೆ ಮಾಡುವ ರೂಢಿ ಇಟ್ಟುಕೊಂಡಿಲ್ಲ ತಿಮ್ಮಪ್ಪನವರೇ.

ಶ್ರೀ ಕಾಗೋಡು ತಿಮ್ಮಪ್ಪ:- ಮಾಡಲೇಬೇಕಾಗುತ್ತದೆ. ಏಕೆಂದರೆ, ಚಿನ್ನಪ್ಪರೆಡ್ಡಿ ವರದಿ ಜಾರಿಗೆ ತಂದಿದ್ದರೆ ಒಕ್ಕಲಿಗರನ್ನು ಸೇರಿಸುವುದಕ್ಕಾಗುತ್ತಿರಲಿಲ್ಲ. ನೀವು ಒಕ್ಕಲಿಗರನ್ನು ಸೇರಿಸಿದ್ದು ತಪ್ಪು ಎಂದು ಕುಣಿಗಲ್‌ನಲ್ಲಿ ಭಾಷಣ ಮಾಡಬೇಕಲ್ಲ ?

ಶ್ರೀ ವೈ.ಕೆ. ರಾಮಯ್ಯ:- ತಪ್ಪೋ, ಒಳ್ಳೆಯದೋ ನೀವು ತನ್ನಿ ಸ್ವಾಮಿ, ಕುಣಿಗಲ್‌ನಲ್ಲಿ ನನ್ನ ಹಿತ ಕಾಪಾಡಿಕೊಳ್ಳುವ ಶಕ್ತಿ ನನಗಿದೆ. ನಿಮಗೆ ಮೊದಲು ಆ ಇಚ್ಛಾಶಕ್ತಿ ಇದೆಯಾ ಹೇಳಿ? I am prepared to sacrifice my Membership for the next term. ನಾನು ತ್ಯಾಗಕ್ಕೆ, ಸೋಲಿಗೆ ಸಿದ್ಧವಾಗಿದ್ದೇನೆ. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಥಾವತ್ತಾಗಿ ಕಾರ್ಯಾಚರಣೆಗೆ ತರುವಂತಹ ರಾಜಕೀಯ ಇಚ್ಛಾ ಶಕ್ತಿ ನಿಮಗೆ ಇದ್ದರೆ ಅದನ್ನು ಪ್ರದರ್ಶನ ಮಾಡಿ ನೋಡೋಣ. ನೀವು ಇದನ್ನು ಯಥಾವತ್ತಾಗಿ ಜಾರಿಗೆ ತರುವುದಾದರೆ ಈ ಚುನಾವಣೆಗೆ ನಾನು ಸ್ಪರ್ಧೆ ಮಾಡುವುದಿಲ್ಲ. ಕಮ್ ಫಾರ್ವಡ್. ಈ ಸವಾಲಿಗೆ ಬನ್ನಿ. ಯಥಾವತ್ತಾಗಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಕಾರ್ಯ-ರೂಪಕ್ಕೆ ತಂದು ಈ ರಾಜ್ಯದಲ್ಲಿ ಚುನಾವಣೆ ನಡೆಸುವುದಾದರೆ ಈ ಚುನಾವಣೆ ನನಗೆ ಬೇಕಾಗಿಲ್ಲ.

ಶ್ರೀ ಕರಿಯಣ್ಣ:- ಚುನಾವಣೆಗೆ ನಿಲ್ಲುವುದೇ ಇಲ್ಲ ಅದರಲ್ಲಿ......

(ಗೊಂದಲ)

ಶ್ರೀ ವೈ.ಕೆ.ರಾಮಯ್ಯ:- ಇಷ್ಟು ಲಘುವಾಗಿ ಅದರಲ್ಲೂ ನಮ್ಮ ಕರಿಯಣ್ಣನವರು ಹೇಳಬಾರದಿತ್ತು. ಬೇರೆ ಯಾರಾದರೂ ಮಾತನಾಡಿದರೆ ಅದು ಬೇರೆ.

ಶ್ರೀ ಕಾಗೋಡು ತಿಮ್ಮಪ್ಪ:- ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಹೊರತು ಪಡಿಸಿ ಸೇರಿಸಿರತಕ್ಕಂತಹ ಜಾತಿಗಳನ್ನು ಸೇರಿಸಿದ್ದುದು ತಪ್ಪು ಎಂದು ಹೇಳಿ ನೋಡೋಣ.

ಶ್ರೀ ವೈ.ಕೆ.ರಾಮಯ್ಯ:- ನಾನು ಹೇಳುತ್ತಿದ್ದೇನಲ್ಲ. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಯಾವ ಜಾತಿಯನ್ನಾದರೂ ಸೇರಿಸಿ ಇಲ್ಲವೇ ಬಿಡಿ ಒಕ್ಕಲಿಗರನ್ನು ಬಿಟ್ಟೇ ತನ್ನಿ. ಅದನ್ನು ಮಾಡಿ, ಮಾಡುತ್ತೀರಾ? ಮಾತಿಗೂ ಕೃತಿಗೂ ಬಹಳ ದೂರ ಇದೆ. ಚಿನ್ನಪ್ಪ ರೆಡ್ಡಿಯವರ ವರದಿಯಲ್ಲಿ ಒಕ್ಕಲಿಗರನ್ನು ಬಿಟ್ಟೇ ಅನುಷ್ಠಾನಕ್ಕೆ ತನ್ನಿ. ನನ್ನ ಒಪ್ಪಿಗೆ ಇದೆ. ಮಾಡುತ್ತೀರಾ ಹೇಳಿ. ಇದಕ್ಕಿಂತ ಇನ್ನೇನು ಹೇಳಲಿ. ಸಂಪೂರ್ಣವಾಗಿ ಒಕ್ಕಲಿಗರನ್ನು ಚಿನ್ನಪ್ಪರೆಡ್ಡಿ ಆಯೋಗದ ವರದಿಯಿಂದ ಸವಲತ್ತಿನಿಂದ ವಂಚಿತರಾಗೇ ಮಾಡಿ. ಮಾಡಿ ಚುನಾವಣೆಗೆ ಬನ್ನಿ ನೋಡೋಣ.

(ಗೊಂದಲ)

ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಸ್ವಲ್ಪ ಹೇಳಬೇಕಾಗುತ್ತದೆ. ನಾನು ವ್ಯಂಗ್ಯವಾಗಿ ಮಾತನಾಡಲಿಕ್ಕೆ ಆಲಸ್ಯದಿಂದ ಬದುಕಲಿಕ್ಕೆ ಇಷ್ಟಪಡುವುದಿಲ್ಲ. ನಾನು ಯಾವಾಗಲೂ ಯಾರು ಮಾತನಾಡುವಾಗಲೂ ಯಾವತ್ತೂ ಈ ಸದನದಲ್ಲಿ ಲಘುವಾಗಿ ಮಾತನಾಡುವ ಅಭ್ಯಾಸವಿಟ್ಟುಕೊಂಡಿಲ್ಲ. ಅವರು ಮಾತನಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರುಃ ಸಭೆಯನ್ನು ಸ್ವಲ್ಪ ನಗಿಸುವುದಕ್ಕೆ ಹಾಗೆ ಹೇಳಿದ್ದಾರೆ, ಬೇರೆ ಏನೂ ಇಲ್ಲ. ದುರುದ್ದೇಶವೇನೂ ಇಲ್ಲವೆಂದು ನನ್ನ ಅನಿಸಿಕೆ.

ಶ್ರೀ ವೈ.ಕೆ. ರಾಮಯ್ಯಃ – ನನ್ನ ಮಾತನ್ನು ಕೊನೆ ಮಾಡುವುದಕ್ಕೆ ಮೊದಲು ಒಂದು ಮಾತನ್ನು ಹೇಳುತ್ತೇನೆ. ಈ ಸದನದ ಮುಂದೆ ಈ ವಿಧೇಯಕವನ್ನು ಏನು ತಂದಿದ್ದೀರೋ ಈ ವಿಧೇಯಕಕ್ಕೆ ಪ್ರೇರಣೆ ಏನು? ಹಿಂದುಳಿದ ವರ್ಗದವರ ಜನರ ಕಲ್ಯಾಣದ ಪ್ರೇರಣೆಯೇ ಇಲ್ಲ. ಇದಕ್ಕೆ ಪ್ರೇರಣೆ ನಿಮ್ಮ ವಿಧೇಯಕದಲ್ಲಿಯೇ ಇದೆ. ನಾನು ಕಂಠ ಶೋಷಣೆ ಮಾಡಿಕೊಳ್ಳುತ್ತಿದ್ದೇನೆಯೇ? ಪ್ರಸ್ತುತ ತಮಿಳುನಾಡು ಮತ್ತು ಇತರ ರಾಜ್ಯಗಳು ಸಂಬಂಧಿಸಿದ ರಾಜ್ಯಗಳ ವಿವಿಧ ವರ್ಗಗಳ ಜನಸಂಖ್ಯೆ ಆಧಾರದ ಮೇಲೆ 50ಕ್ಕಿಂತ ಹೆಚ್ಚಿನ ಮೀಸಲಾತಿ ಉಪಭಂಧ ಎಕ್ಸ್‌ಟ್ರಾ, ಇದು ಈ ವಿಧೇಯಕದ ಉದ್ದೇಶ ಮತ್ತು ಕುರಿತ ಜ್ಞಾಪಕ ಪತ್ರ. ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲೇ ಇದೆ. ಈ ರಾಜ್ಯದ ಹಿಂದುಳಿದ ವರ್ಗಗಳ ಹಿತರಕ್ಷಣೆಯ ಪ್ರೇರಣೆ ತಮಿಳುನಾಡಿನ ಮುಂದಿನ ವರ್ಗದ ಜಾತಿಯ ಮುಖ್ಯ ಮಂತ್ರಿಗಳಿಂದ ಈ ರಾಜ್ಯದ ಹಿಂದುಳಿದ ವರ್ಗದ ಮುಖ್ಯ ಮಂತ್ರಿಗಳಿಗೆ ಬರಬೇಕಾಗಿ ಬಂತು. ಈ ಒಂದು ವಿಧೇಯಕವನ್ನು ಈ ಸದನದ ಮುಂದೆ ತರಲಿಕ್ಕೆ ಪ್ರೇರಣೆ ಈ ರಾಜ್ಯದ ಹಿಂದುಳಿದ ವರ್ಗಗಳ ಹಿತಾಸಕ್ತಿಯ ರಕ್ಷಣೆಯ ಪ್ರೇರಣೆ ಅಲ್ಲ. ತಮಿಳುನಾಡಿನಲ್ಲಿದ್ದಂತಹ ಒಬ್ಬ ಹೆಣ್ಣುಮಗಳು, ತಮಿಳುನಾಡಿನ ಮುಂದುವರಿದ ಜಾತಿಗೆ ಸೇರಿದಂತಹ ಹೆಣ್ಣುಮಗಳು ಮುಖ್ಯ ಮಂತ್ರಿಯ ತೀರ್ಮಾನದ ಪ್ರೇರಣೆ ಈ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಕ್ಕೆ ಸೇರಿದ ಮುಖ್ಯ ಮಂತ್ರಿಗಳಿಗೆ ಆಗಬೇಕಾದಂತಹ ದುರ್ಗತಿಗೆ ಬಂತು......

ಶ್ರೀ ಕೆ.ಸೋಮಪ್ಪ ಸುವರ್ಣಃ- ಮುಂದುವರಿದ ಸಮಾಜದವರು ಎಷ್ಟೋ ಜನರು ಹಿಂದುಳಿದವರಿಗಾಗಿ ಪ್ರಾಣಾರ್ಪಣೆ ಮಾಡಿದ್ದಾರೆ. ಅವರನ್ನು ನಾವು ಕೆಟ್ಟವರೆಂದು ಎಂದೂ ಭಾವಿಸುವುದಿಲ್ಲ. ಮುಂದುವರಿದ ಸಮಾಜದವರೇ ಮಹಾತ್ಮಾಗಾಂಧಿಯವರು ಹಿಂದುಳಿದ ವರ್ಗಕ್ಕಾಗಿ ಬಹಳಷ್ಟು ದುಡಿದಿದ್ದಾರೆ. ಹೆಂಗಸಾದರೇನು? ಶ್ರೀಮತಿ ಇಂದಿರಗಾಂಧಿಯಂತವರು ಹಿಂದುಳಿದ ಸಮಾಜಕ್ಕೆ ಏನೆಲ್ಲ ಮಾಡಲಿಲ್ಲ.

**4-30. ಪಿ. ಎಂ**

ಶ್ರೀ ವೈ.ಕೆ. ರಾಮಯ್ಯಃ- ನಾನು ಆ ಮಾತನ್ನೇ ಪ್ರತಿಪಾದನೆ ಮಾಡುತ್ತಿರುವುದು. ಮುಂದುವರಿದ ವರ್ಗಕ್ಕೆ ಸೇರಿದಂಥ ಶ್ರೀಮತಿ ಜಯಲಲಿತಾ ಅವರಿಗೆ ಪ್ರೇರಣೆ ಹಿಂದುಳಿದ ವರ್ಗದವರ ಹಿತರಕ್ಷಣೆಯಿಂದ ಅವರು ತಂದರು. ಆದರೆ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಕ್ಕೆ ಸೇರಿದಂಥ ಮುಖ್ಯಮಂತ್ರಿಗಳಿಗೆ ಆ ಮುಂದುವರಿದ ಜಾತಿಯ ಮುಖ್ಯಮಂತ್ರಿಗಳ ತೀರ್ಮಾನ ಪ್ರೇರಣೆಯಾಯಿತು ಎನ್ನುವ ಮಾತನ್ನು ಹೇಳಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿದಾನ ಹಾಗೂ ನಡವಳಿಕೆಯ ನಿಯಮ 114 ರ ಮೇರೆಗೆ ದಿನಾಂಕ : 19ನೇ ಸೆಪ್ಟೆಂಬರ್ 1994 ರಂದು ಈ ಕೆಳಕಂಡ ವಿಧೇಯಕಗಳು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಯಿತೆಂದು ತಿಳಿಸಿರುತ್ತಾರೆ.

(1) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ವಿಧೇಯಕ 1994

(2) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕ, 1994

(ಮೀಸಲಾತಿ ವಿಧೇಯಕದ ಮೇಲಿನ ಚರ್ಚೆ ಮುಂದುವರಿದುದು)

*ಶ್ರೀ ಕರಿಯಣ್ಣ : (ಹೊಳೆಹೊನ್ನೂರು) : ಮಾನ್ಯ ಉಪಾಧ್ಯಕ್ಷರೇ, ಇವತ್ತು ನಮ್ಮ ಸದನದ ನಾಯಕರು ಹಾಗೂ ನಮ್ಮ ಮುಖ್ಯಮಂತ್ರಿಗಳು ಒಂದು ಚರಿತ್ರಾರ್ಹವಾದಂಥ ಏನು ಹಿಂದುಳಿದ ವರ್ಗದವರು ಹಾಗೂ ಹರಿಜನ ಗಿರಿಜನರಿಗೆ ಮೀಸಲಾತಿ ಇದೆಯೋ ಅದನ್ನು ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ವಿಶೇಷವಾದ ಸಭೆಯನ್ನು ಕರೆದು ಅವರ ಅನುಮೋದನೆಗಾಗಿ ತಂದಿರತಕ್ಕಂಥದ್ದು ತುಂಬಾ ಸಂತೋಷದ ವಿಚಾರ. ಇದು ಎಲ್ಲರೂ ಮೆಚ್ಚತಕ್ಕಂಥದ್ದು. ಇವತ್ತು ಈ ಕಡೆ ವಿರೋಧ-ಪಕ್ಷದವರು ಜಾಸ್ತಿ ಇಲ್ಲ. ಸನ್ಮಾನ್ಯ ರಾಮಯ್ಯನವರು ಮಾತ್ರ ಒಬ್ಬರು ಮಾತನಾಡಿದರು. ಆದರೆ ಸನ್ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ನಂತರದಲ್ಲಿ ಅವರು ವಿಧಾನಸಭೆಯಲ್ಲಿದ್ದಾಗ ನಿಮಗೆ ತಾಕತ್ ಇದ್ದರೆ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೆ ತನ್ನಿ, ಹಿಂದುಳಿದವರಿಗೆ ಸವಲತ್ತನ್ನು ಕೊಡಿ ಎಂದು ಪ್ರಶ್ನೆಮಾಡಿದರು. ಅದನ್ನು ಅವರು ನನಗೆ ಈ ಕುರ್ಚಿ ಹೋದರೂ ಚಿಂತೆ ಇಲ್ಲ, ಇದನ್ನು ಜಾರಿಗೆ ತಂದು ನಿಮಗೆ ತೋರಿಸುತ್ತೇನೆ ಎಂದು ಹೇಳಿ ಅದೇ ರೀತಿ ಯಲ್ಲಿ ಜಾರಿಗೆ ತರತಕ್ಕಂಥ ಒಂದು ಕ್ರಮವನ್ನು ಅ ದು ಅವತ್ತು ಕೈಗೊಂಡರು. ಆದರೆ ಯಾವುದೇ ವಿರೋಧ ಪಕ್ಷದವರು ಸಹಿತ ಹೇಳಿದ ಮಾತಿನಂತೆ ಮುಖ್ಯಮಂತ್ರಿಗಳು ನಡೆದುಕೊಂಡರು ಎಂದು ಹೇಳತಕ್ಕಂಥ ಒಂದು ಸೌಜನ್ಯವನ್ನೂ ಇಚ್ಚೆಯನ್ನು ವ್ಯಕ್ತಪಡಿಸಲಿಲ್ಲ. ಆದರೆ ಮಾನ್ಯ ರಾಮಯ್ಯನವರಿಗೂ ಗೊತ್ತಿದೆ, ಅನೇಕರಿಗೂ ಗೊತ್ತಿದೆ. ಕಾನೂನಿನ ತೊಡಕಿನಲ್ಲಿ ಅನೇಕರು ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನ್ಯಾಯಾಲಯಕ್ಕೂ ಸಹಿತ ಹೋಗುವಂಥ ಪರಿಸ್ಥಿತಿ ಬರುತ್ತದೆ. ಅಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ನ್ಯಾಯಾಲಯಕ್ಕೆ ಹೋದಾಗ ಏನು 50 ಪರ್‌ಸೆಂಟ್‌ಗೆ ನಿಗದಿ ಮಾಡಬೇಕು ಎಂದು ಬಂತೋ ಅದನ್ನೇ ದೊಡ್ಡ ಅಪರಾಧ ಮಾಡಿಬಿಟ್ಟಿದ್ದಾರೋ ಏನೋ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು ಕೊಟ್ಟಿದ್ದನ್ನು ವೀರಪ್ಪಮೊಯಿಲಿ ಸರ್ಕಾರ ಕಿತ್ತುಕೊಂಡೇ ಬಿಟ್ಟಿತ್ತೇನೊ ಎನ್ನುವ ರೀತಿಯ ಭಾಷಣವನ್ನು ಇವತ್ತು ಕೇಳಿದರೆ, ಏನಪ್ಪ ತಿಳಿವಳಿಕೆ ಇರತಕ್ಕಂಥವರು, ಕಾನೂನಿನ ಮಾಹಿತಿ ಇರತಕ್ಕಂಥವರೂ ಸಹಿತ ಈ ರೀತಿ ಮಾತನಾಡುತ್ತಾರಲ್ಲ ಎಂದು ನನ್ನ ಮನಸ್ಸಿಗೆ ನೋವಾಯಿತು. ಈ ಹಿಂದುಳಿದವರ ಬಗ್ಗೆ ನಾವು ಯೋಚನೆ ಮಾಡುವುದಾದರೆ, ಸ್ವಾತಂತ್ರ್ಯ ಬಂದನಂತರದಲ್ಲಿ ಯಾವ ಜನಾಂಗದವರಿಗೆ ಸವಲತ್ತು ಸಿಕ್ಕಿರಲಿಲ್ಲವೋ ಅದಕ್ಕಾಗಿ ಈ ಸರ್ಕಾರದ ವ್ಯವಸ್ಥೆಯಾಗಿ ಆ ಜನಗಳಿಗಾಗಿ ಹೋರಾಟ ಮಾಡಿಕೊಂಡು ಇವತ್ತಿನವರೆಗೂ ಬಂದು ಅನೇಕ ಕಾನೂನಿನ ಬದಲಾವಣೆಗಳು ಸಹಿತ ಆಗಿರುವುದು ಈ ಸದನದ ರಿಕಾರ್ಡ್‌ನಲ್ಲಿ ಉಳಿದಿದೆ. ಅದು ವೆಂಕಟಸ್ವಾಮಿ ಆಯೋಗ ಇರಬಹುದು ಹಾವನೂರ್ ಆಯೋಗ ಇರಬಹುದು, ಚಿನ್ನಪ್ಪರೆಡ್ಡಿ ಆಯೋಗ ಇರಬಹುದು. ಇದಲ್ಲದೆ, ನಿಮಗೆ ಹಿಂದುಳಿದ ವರ್ಗದವರ ಬಗ್ಗೆ ಕಳಕಳಿ ಇಲ್ಲ, ನಿಮ್ಮ ಸರ್ಕಾರಕ್ಕೆ ಕಳಕಳಿ ಇಲ್ಲ, ನೀವು ರಾಜಕೀಯಕ್ಕಾಗಿ ಇದನ್ನು ಮಾಡುತ್ತಿದ್ದೀರಿ ಎನ್ನುವ ವಿಚಾರವನ್ನು ಹೇಳಿ. ಇನ್ನೊಂದು ರೀತಿಯಲ್ಲಿ ವಿ. ಪಿ. ಸಿಂಗ್‌ರವರು

ಮೆಂಡಲ್ ವರದಿಯನ್ನು ಜಾರಿಗೆ ತರುವುದಕ್ಕೆ ರಾಷ್ಟ್ರಮಟ್ಟದಲ್ಲಿ ಬಹಳ ಪ್ರಯತ್ನಪಟ್ಟರು ಎಂದು ಹೇಳುತ್ತಾರೆ. ಹಾಗಿದ್ದಮೇಲೆ ಇಲ್ಲಿ ಹಿಂದುಳಿದವರ ಬಗ್ಗೆ ಈ ಸರ್ಕಾರ ಕಳಕಳಿಯಿಂದ 73 ಪರ್‌ಸೆಂಟ್‌ನ್ನು ಕೊಡಬೇಕು ಎನ್ನುವ ಒಂದು ನಿಯಮವನ್ನು ಪಾಸ್ ಮಾಡುತ್ತಿರ ಬೇಕಾದರೆ ಇಂಥ ಸಂದರ್ಭದಲ್ಲಿ ಈ ಕಾಂಗ್ರೆಸ್ ಸರ್ಕಾರದವರು, ಅಥವಾ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಹಿಂದುಳಿದವರ್ಗದವರ ಬಗ್ಗೆ ಕಳಕಳಿ ಇದೆ ಎನ್ನುವ ಒಂದು ಮಾತನ್ನೂ ಸಹಿತ ಅವರು ಹೇಳುವ ಒಂದು ಸೌಜನ್ಯ ಕೂಡ ತೋರಲಿಲ್ಲ. ಇವತ್ತು ಮುಖ್ಯ ಮಂತ್ರಿಗಳು ಒಂದು ವರ್ಗದ ಜನಗಳನ್ನು ವಿರುದ್ಧ ಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಒಕ್ಕಲಿಗರಾಗಲಿ, ಲಿಂಗಾಯಿತರಾಗಲಿ ಅಥವಾ ಈ ರಾಜ್ಯದ ಇತರೆ ಹಿಂದುಳಿದ ವರ್ಗದವರಾಗಲಿ ಇವರು ರೈತಾಪಿ ಕುಟುಂಬದಿಂದ ಬಂದಿರತಕ್ಕಂಥ ಜನಗಳು. ಇವರೆಲ್ಲರೂ ಸಹಿತ ಹಿಂದುಳಿದಿರುವವರು ಮತ್ತು ಏನೊಂದು ಸರ್ಕಾರಿ ಸವಲತ್ತುಗಳು ಇದೆಯೋ ಆ ಸವಲತ್ತುಗಳಿಂದ ವಂಚಿತರಾಗಿರತಕ್ಕಂಥ ಜನರು. ಅದು ವಿದ್ಯಾಭ್ಯಾಸ ಇರಬಹುದು, ನೌಕರಿ ಇರಬಹುದು, ಅಥವಾ ಮೆಡಿಕಲ್‌ನಲ್ಲಿ ಓದುವುದು ಇರಬಹುದು, ಇಂಜಿನಿಯರಿಂಗ್ ಓದುವುದು ಇರಬಹುದು, ಇದರ ಸವಲತ್ತಿನಿಂದ ವಂಚಿತರಾಗಿರತಕ್ಕಂಥ ಜನ, ಇವರಿಗೆ ಆ ಒಂದು ಸವಲತ್ತನ್ನು ಕೊಟ್ಟು ಮುಂದುವರಿದ ಜನಾಂಗದವರ ಹತ್ತಿರಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವ ಒಂದು ಸದುದ್ದೇಶ ಇಟ್ಟುಕೊಂಡು ನಾಳೆ ದಿವಸ ಎಂಥ ಚಳುವಳಿ ಬಂದರೂ ಸಹಿತ ನಾವು ಗಟ್ಟಿಯಿಂದ ಎದುರಿಸುತ್ತೇವೆ ಎಂದು ಹೇಳಿ ಇದನ್ನು ಜಾರಿಗೆ ತಂದರು. ಅಂದರೆ ಏನು, ಕಾನೂನಿನ ತೊಡಕಿನಿಂದ ಇವತ್ತು 50 ಪರ್‌ಸೆಂಟ್‌ಗೆ ನಿಂತಿದೆ ಅದು ಅಲ್ಲೇ ನಿಲ್ಲುವುದಿಲ್ಲ. ತಮಿಳುನಾಡಿನ ಸರ್ಕಾರದಲ್ಲಿ ಯಾವ ರೀತಿಯಾಗಿ ಎಲ್ಲರೂ ಒಮ್ಮತದಿಂದ ಒಂದು ಕಾನೂನನ್ನು ಮಾಡಿದರೋ ಅದಕ್ಕೆ ತಮ್ಮ ಸಹಕಾರ ಸಿಗುತ್ತದೆ ಎಂದು ಹೇಳಿ ಮುಖ್ಯಮಂತ್ರಿಗಳು ವಿರೋಧ ಪಕ್ಷದವರ ಸಭೆ ಕರೆದರೂ ಅವರು ಬರಲಿಲ್ಲ. ಇದರ ಅರ್ಥ ಏನು ಹೇಳುತ್ತದೆ? ವಿರೋಧ ಪಕ್ಷದವರಿಗೆ ಹಿಂದುಳಿದವರ ಬಗ್ಗೆ ಕಳಕಳಿ ಇಲ್ಲ. ಸುಮ್ಮನೆ ಕಣ್ಣೊರೆಸತಕ್ಕಂಥ ತಂತ್ರ, ಅಷ್ಟೇ ವಿನಹ ಅವರು ಸುಮ್ಮನೆ ಭಾಷಣ ಮಾಡಿ ಇನ್ನೊಂದು ಪಕ್ಷದವರನ್ನು ಬಯ್ಯುವುದು, ಇದನ್ನು ಯಾರು ಜಾರಿಗೆ ತರುತ್ತಾರೋ ಅವರಿಗೆ ಬಯ್ದು , ಮುಂದಿನ ಚುನಾವಣೆಯಲ್ಲಿ ನಮಗೆ ಹಿಂದುಳಿದ ವರ್ಗದವರ ಬಗ್ಗೆ ಬಹಳ ಕಳಕಳಿ ಇತ್ತು ಎನ್ನುವುದನ್ನು ವ್ಯಕ್ತಪಡಿಸುವುದಕ್ಕಾಗಿ ಇವತ್ತು ಅವರು ಆ ಭಾಷಣಕ್ಕಾಗಿ ಇಳಿದಿದ್ದಾರೆಯೋ ವಿನಹ ನಿಜವಾಗಿಯೂ ಸಹಿತ ಹಿಂದುಳಿದ ವರ್ಗದವರ ಬಗ್ಗೆ ಬಗ್ಗೆ ಕಳಕಳಿ ಇದ್ದಿದ್ದರೆ ಇವತ್ತು ಈ ಸದನದಲ್ಲಿ ಆ ಜನರು ಹಾಜರಿ ಇರುತ್ತಿದ್ದರು ಎನ್ನುವುದು ನನ್ನ ಭಾವನೆ, ಹರಿಜನ ಗಿರಿಜನರಿಗೆ ಮೀಸಲಾತಿಯನ್ನು ಕೊಟ್ಟಿದ್ದೀರಿ. ಕೆಲವರು ಮಾತನಾಡುತ್ತಾರೆ, ಮೀಸಲಾತಿ ಕೊಟ್ಟ ತಕ್ಷಣದಲ್ಲಿ ಆಡಳಿತದಲ್ಲಿ ಬಹಳ ಹಿಂದುಳಿದು ಬಿಡುತ್ತದೆ ಅಥವಾ ಎಫಿಷಿಯೆನ್ಸಿ ಕಡಿಮೆಯಾಗಿಬಿಡುತ್ತದೆ ಎಂದು. ನಮ್ಮಲ್ಲಿ ಈಗ ಮೀಸಲಾತಿಯಿಂದ ಚುನಾವಣೆಯಲ್ಲಿ ಗೆದ್ದುಬಂದಂಥ ಮಂತ್ರಿಗಳಾದಂಥ ಸನ್ಮಾನ್ಯ ಬಸವಲಿಗಂಪ್ಪನವರು ಈ ಸದನದಲ್ಲಿ ಕ್ರಾಂತಿಯನ್ನು ಮಾಡಿ ಹೋಗಿರತಕ್ಕಂಥ ವ್ಯಕ್ತಿಯಾಗಿದ್ದಾರೆ. ಮತ್ತೊಬ್ಬರು ಇದ್ದಾರೆ. ಈ ಸದನದಲ್ಲಿ ನಮ್ಮ ರಂಗನಾಥ್‌ರವರು ಯಾರೊಬ್ಬರಿಗೆ ಕಡಿಮೆ ಇದ್ದಾರೆ, ಅವರು ಮಂತ್ರಿಯಾಗಿದ್ದಾರೆ. ಅವರೆಲ್ಲರೂ ಮೀಸಲಾತಿಯಿಂದ ಬಂದವರಲ್ಲವೇ? ಅವರು ಮೀಸಲಾತಿಯಿಂದ

ಬಂದಿರುವವರಾದರೆ ಹಾಗಿದ್ದ ಮೇಲೆ ಎಫಿಸಿಯೆನ್ಸಿ ಎಲ್ಲಿಗೆ ಹೋಗುತ್ತದೆ? ಇದರ ಅರ್ಥ ಏನೆಂದರೆ, ಮುಂದುವರಿದ ಜನಾಂಗದವರು ಈ ಹಿಂದುಳಿದ ಜನಾಂಗದವರನ್ನು ಮತ್ತಷ್ಟು ಕೆಳಗಡೆ ಇಟ್ಟುಕೊಂಡು ನಾವು ಆಡಳಿತವನ್ನು ಮಾಡಬೇಕು, ಈ ಮೀಸಲಾತಿಯನ್ನು ಯಾರಿಗೆ ಸಿಗಬೇಕೋ ಅವರಿಗೆ ಸಿಗಬಾರದು ಎನ್ನುವ ಕುತಂತ್ರವನ್ನು ಹೊಂದಿರತಕ್ಕಂಥವರು. ಏನೋ ನಮ್ಮ ವಿರೋಧಪಕ್ಷದವರು ಆ ಕುತಂತ್ರಕ್ಕೆ ಸೇರಿಕೊಂಡು ಇಟ್ಟಿದ್ದಾರೋ ಏನೋ ಎನ್ನುವ ಅನುಮಾನ ನನಗೆ ಬರುತ್ತದೆ. ಮಾನ್ಯ ರಾಮಯ್ಯನವರು ಒಂದು ಆ ಶಬ್ದವನ್ನು ಉಪಯೋಗಿಸಬಾರದಾಗಿತ್ತೋ ಏನೊ? ಅತೀ ಬುದ್ಧಿಯ ವಿರೂಪ ಮುಖ್ಯಮಂತ್ರಿಗಳು ಇವರು, ವಿರೂಪವಾದ ಮೀಸಲಾತಿಯನ್ನು ತರತಕ್ಕಂಥ ಒಂದು ಕುತಂತ್ರವನ್ನು ಮಾಡಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದರು ನಾವು ಹೇಳುತ್ತೇವೆ. ನಮ್ಮ ಮುಖ್ಯ ಮಂತ್ರಿಗಳು ಅತೀ ಹಿಂದುಳಿದ ಕೋಮಿಗೆ ಸೇರಿದ್ದು ಅವರ ಕೋಮಿನವರ ಸಂಖ್ಯೆ ಈ ರಾಜ್ಯದಲ್ಲಿ ಕಡಿಮೆ ಇದ್ದರೂ ಸಹಿತ ಬಹಳ ಧೈರ್ಯದಿಂದ ಇಡೀ ಎಲ್ಲಾ ಹಿಂದುಳಿದ ವರ್ಗದವರಿಗೆ ಇದರ ಸವಲತ್ತು ಸಿಗಬೇಕು ಎಂದು ಮೀಸಲಾತಿಯ ಸವಲತ್ತಿನ ಬಗ್ಗೆ 73 ಪರ್‌ಸೆಂಟ್‌ಗೆ ತರತಕ್ಕಂಥ ಗಟ್ಟಿ ಧೈರ್ಯ ಯಾವ ಮುಖ್ಯಮಂತ್ರಿಯೂ ಮಾಡಿಲ್ಲ. ಆ ಒಂದು ಕೀರ್ತಿ ಸನ್ಮಾನ್ಯ ವೀರಪ್ಪಮೊಯಿಲಿಯವರಿಗೆ ಹೋಗಬೇಕು. ಆದ್ದರಿಂದ ಅವರನ್ನು ಈ ಸಂದರ್ಭದಲ್ಲಿ ಹೊಗಳಬೇಕಾಗುತ್ತದೆ ಎಂದು ಈ ಸದನದಲ್ಲಿ ಘಂಟಾಘೋಷವಾಗಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಇದರ ಬಗ್ಗೆ ಏನಾದರೂ ಕಳಕಳಿ ಇದ್ದಿದ್ದರೆ ವೀರಪ್ಪಮೊಯಿಲಿಯವರು 73 ಪರ್‌ಸೆಂಟ್ ತರುತ್ತಿದ್ದಾರೆ, ನಿಜವಾಗಿಯೂ ಸಹಿತ ಈ ರಾಜ್ಯಕ್ಕೆ ಗೌರವ ಬರತಕ್ಕಂಥದ್ದು, ಈ ರಾಜ್ಯದಲ್ಲಿರತಕ್ಕಂಥ ಹರಿಜನರು, ಗಿರಿಜನರು ಮತ್ತು ಹಿಂದುಳಿದ ವರ್ಗದವರಿಗೆ ಇದರಿಂದ ಅನುಕೂಲವಾಗುತ್ತದೆ ಎನ್ನುವ ಕಳಕಳಿ ಇದ್ದಿದ್ದರೆ ಇವತ್ತು ಎಲ್ಲಾ ವಿರೋಧ ಪಕ್ಷದವರೂ ಸಹಿತ ಈ ಸದನದಲ್ಲಿ ಕುಳಿತುಕೊಂಡು ವೀರಪ್ಪಮೊಯಿಲಿಯವರಿಗೆ ಬೆನ್ನು ತಟ್ಟಬೇಕಾಗಿತ್ತು. ಆದರೆ ಏಕೊ ಏನೊ, ಸನ್ಮಾನ್ಯ ರಾಮಯ್ಯನವರು ಸಹಿತ ಒಬ್ಬ ಹಿಂದುಳಿದ ವರ್ಗದವರಾಗಿ ಮುಖ್ಯ ಮಂತ್ರಿಗಳನ್ನು ಅಷ್ಟು ಕಠೋರವಾಗಿ ಟೀಕೆ ಮಾಡುತ್ತಾರೆಂದರೆ ಅದು ಸೌಜನ್ಯಕ್ಕೆ ಒಳ್ಳೆಯದಲ್ಲ ಎನ್ನುವುದು ನನ್ನ ಅಭಿಪ್ರಾಯ ಈಗ ಹರಿಜನ ಗಿರಿಜನರಿಗೆ ಇನ್ನು ಒಂದು ಪರ್ಸೆಂಟನ್ನು ಹೆಚ್ಚಿಗೆ ಇಡಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ನಾನು ಏತಕ್ಕೆ ಜಾಸ್ತಿ ಕೇಳುತ್ತೇನೆ ೦ದು ನಮ್ಮ ವಿಶ್ವನಾಥ್‌ರವರಿಗೆ ಹೇಳುತ್ತೇನೆ. ನಮ್ಮ ಜನಸಂಖ್ಯೆ ಬಗ್ಗೆ ನಂಜುಂಡಸ್ವಾಮಿಯವರು ಪತ್ರಿಕಾ ಹೇಳಿಕೆಯನ್ನು ಸಹಿತ ಕೊಟ್ಟಿದ್ದಾರೆ. ನಮ್ಮಲ್ಲಿ ಜನಸಂಖ್ಯೆ ಜಾಸ್ತಿ ಇದೆ, ಆರ್ಥಿಕವಾಗಿ ಹಿಂದುಳಿದವರಾಗಿದ್ದೇವೆ, ಅದರ ಜೊತೆಗೆ ಬಹಳಷ್ಟು ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ತೆಗೆದುಕೊಂಡರೆ ಶೇಕಡ 25ರಷ್ಟು ಬರುತ್ತದೆ. ಈ ಶೇಕಡ 25ರಲ್ಲಿ ನೀವು ಎಲ್ಲ ಕಡೆ ಮೀಸಲಾತಿ ಕೊಟ್ಟು, ಈಗ ಗ್ರಾಮ ಪಂಚಾಯಿತಿ ಚುನಾವಣೆಯಾಗಿದೆ. ಇದರಲ್ಲಿ ಶೇಕಡ ಒಂದರಷ್ಟು ಏರಿಸಿದರೆ ಚೆನ್ನಾಗಿತ್ತು. ಅದನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನಿಸಬೇಕೆಂದು ನಾನು ಈ ಸಂದರ್ಭಧಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಛೇರ್ಮನ್ :- ತಾವು ಹೇಳಿದ್ದು ಸರಿ, ಇದು ಪತ್ರಿಕೆಗಳಲ್ಲಿ ಬಂದಿದೆ. ಅವರ ಜನಸಂಖ್ಯೆ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ.

* ಶ್ರೀ ಕರಿಯಣ್ಣ : -ಮತ್ತೊಂದು ವಿಚಾರವೇನೆಂದರೆ, ಮಾನ್ಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಹಿಂದುಳಿದ ವರ್ಗದವರ ಪರವಾಗಿ ಹೋರಾಟ ಮಾಡಿ ಸಮಾಜವಾದಿ ಪಕ್ಷದಿಂದ ಬಂದಂಥವರು. ಹಿಂದುಳಿದ ವರ್ಗದವರಿಗೆ ಏನೇನು ಅನ್ಯಾಯವಾಗಿದೆಯೆಂಬುದನ್ನು ಅವರ ನಾಲಿಗೆ ತುದಿ ಮೇಲೆಯೇ ಇದೆ. ಅದನ್ನವರು ಎರಡು ಗಂಟೆಗಳ ಕಾಲ ಹೇಳಿದರೂ ಸಾಲದು, ಅಷ್ಟು ಚೆನ್ನಾಗಿ ತಿಳಿದುಕೊಂಡಿದ್ದಾರೆ ಅದು ಜಮೀನಿನ ವಿಚಾರವಿರಬಹುದು, ನೌಕರಿ ವಿಚಾರವಿರಬಹುದು, ವಿದ್ಯಾಭ್ಯಾಸದ ವಿಚಾರವಿರಬಹುದು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಏನು ಸೌಲಭ್ಯ ಸಿಕ್ಕಿದೆ ಎನ್ನುವ ವಿಚಾರವೂ ಇರಬಹುದು. ಈ ಎಲ್ಲಾ ವಿಚಾರಗಳಲ್ಲೂ ನಮಗಿಂತಲೂ ಹೆಚ್ಚು ತಿಳಿದುಕೊಂಡಿರುವವರು ನಮ್ಮ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದಾರೆ. ಅವರಿಗೆ ನಾನು ಒಂದು ವಿಷಯ ಜ್ಞಾಪಿಸುತ್ತೇನೆ. ಪರಿಶಿಷ್ಟ ಪಂಗಡವೇನಿದೆ, ಇದರಲ್ಲಿ ಎರಡು ವಿಭಾಗ ಮಾಡಬೇಕಾಗಿತ್ತೆನ್ನುವುದು ನನ್ನ ವಿನಂತಿ. ಶೇಕಡ 5 ರಷ್ಟು ಏನು ಮೀಸಲಾತಿ ಇಟ್ಟಿದ್ದಾರೆ, ಅದರಲ್ಲಿ 3:1, 2:1 ಮಾಡಿದ್ದರೆ ಅನುಕೂಲವಾಗುತ್ತಿತ್ತು. ಯಾರಿಗೆ ಅನುಕೂಲವಾಗುತ್ತಿದೆಂಬುದು ಅವರಿಗೆ ಗೊತ್ತಿದೆ. ಕುಂದಾಪುರದಲ್ಲಿ ಒಂದು ಕೊರಗರ ಸಭೆಗೆ ನಾನು ಮತ್ತು ಅವರು ಹೋಗಿದ್ದೆವು. ಕೊರಗರೆಂದರೆ ತಮಗೆ ಗೊತ್ತಿರುವಂತೆ ಎಂಜಲು ಎಲೆಯಲ್ಲಿರುವುದನ್ನು ತಿನ್ನುವವರು, ಕಾಡಿನಲ್ಲಿ ವಾಸಿಸುವಂಥವರು, ಮನುಷ್ಯರನ್ನು ಕಂಡರೆ ಅವರು ಹೊರಗೆ ಬರುವುದಿಲ್ಲ, ಅವರ ಜೀವನ ಅಷ್ಟೊಂದು ಕಷ್ಟಕರವಾಗಿದೆ. ಕಾಡಿನಲ್ಲಿ ವಾಸಿಸುವ, ಗುಡ್ಡಗಾಡುಗಳಲ್ಲಿ ವಾಸಿಸುವಂಥವರನ್ನು ನಾವು ಪರಿಗಣಿಸಬೇಕಾಗುತ್ತದೆ. ಅವರನ್ನು ತಾವು ನೋಡಿದ್ದೀರಿ. ಅವರ ಜನಾಂಗದಲ್ಲಿ ಬಿ.ಎ. ಓದಿದಂಥ ಒಬ್ಬರನ್ನು ಸನ್ಮಾನಮಾಡಿದರು. ಆತ ಏನೂ ಕೇಳಲಿಲ್ಲ. ''ನೀವು ನನ್ನನ್ನು ಸನ್ಮಾನ ಮಾಡಬೇಡಿ, ಬದಲಾಗಿ ದಯಮಾಡಿ ನನಗೊಂದು ನೌಕರಿ ಕೊಡಿಸಿ, ನನ್ನ ಜೀವನವನ್ನು ಹಸನುಗೊಳಿಸಿಕೊಳ್ಳುತ್ತೇನೆ. '' ಎಂದು ಕೇಳಿದ ಅದೇ ರೀತಿ ಒಬ್ಬ ಹೆಣ್ಣು ಮಗಳು ಎಸ್,.ಎಸ್.ಎಲ್.ಸಿ. ಪಾಸ್ ಮಾಡಿದಳು. ಅವರಲ್ಲಿ ಆಕೆಯೇ ದೊಡ್ಡ ವಿದ್ಯಾವಂತೆ. ಆಕೆಗೂ ಸನ್ಮಾನ್ಯ ಮಾಡಿದರು. ಅದೇ ರೀತಿ ಹಕ್ಕಿಪಿಕ್ಕಿ ಜನಾಂಗದವರು. ಇವರು ಒಂದು ಕಡೆ ನಿಲ್ಲುವುದಿಲ್ಲ. ಅಲೆಮಾರಿಗಳಂತೆ ಅಲೆದುಕೊಂಡು ಹೋಗುತ್ತಿರುತ್ತಾರೆ. ಅವರು ಎಲ್ಲಿ ನಿಲ್ಲುತ್ತಾರೋ ಅದೇ ಊರು ಅಲ್ಲೇ ಅವರ ಬಿಡಾರ. ಅವರನ್ನು ಊರಿನಲ್ಲಿರುವ ಟ್ರೈಬಲ್ ಪೀಪಲ್ ಜೊತೆ ಸೇರಿಸಿದರೆ ಇವರಿಗೆ ವಿದ್ಯಾಭ್ಯಾಸದ ಸೌಲಭ್ಯ ಹೇಗೆ ಕೊಡುತ್ತೀರಿ? ನೌಕರಿ ಸೌಲಭ್ಯ ಹೇಗೆ ಒದಗಿಸಿಕೊಡುತ್ತೀರಿ? ಮತ್ತೆ ಕಾಡುಕುರುಬರು ಇದ್ದಾರೆ ಇವರು ಕಾಡು ಕುರುಬರೇ ಹೊರತು ಊರು ಕುರುಬರಲ್ಲ. ಕಾಡು ಕುರುಬರು ನಿಜವಾಗಿಯೂ ಎಲ್ಲಿದ್ದಾರೆಂಬುದನ್ನು ಗುರ್ತಿಸಬೇಕು. ಅವರು ಕಾಡಿನಲ್ಲಿ ವಾಸವಾಗಿರುತ್ತಾರೆ. ಈ ಮೂರು ಮತ್ತು ಇನ್ನು ಅನೇಕ ಜಾತಿಗಳು ಕಾಡಿನಲ್ಲಿ ವಾಸವಾಗಿರುವಂಥ ಟ್ರೈಬಲ್ ಪೀಪಲ್ ಸಹ ಇದ್ದಾರೆ. ಇವರಿಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ಪ್ರತ್ಯೇಕವಾಗಿ ಶೇಕಡ 2ರಷ್ಟು ಮೀಸಲಾತಿ ಇಟ್ಟು ಉದ್ಯೋಗ ಸಿಗುವುದಕ್ಕೆ ಅನುಕೂಲ ಕಲ್ಪಿಸಿಕೊಡಬೇಕು. ಕಳೆದ ಸಾರಿಯ ಚುನಾವಣೆಯಲ್ಲಿ ನಮ್ಮ ಕ್ಷೇತ್ರದಲ್ಲಿ ಹಕ್ಕಿಪಿಕ್ಕಿ ಜನಾಂಗಕ್ಕೆ ಸೇರಿದ ಒಬ್ಬ ಆರಿಸಿ ಬಂದ, ಆತ ಉಪಾಧ್ಯಕ್ಷನಾಗಿದ್ದ ಎರಡನೇ ಭಾರಿ ಹಕ್ಕಿಪಿಕ್ಕಿ ಜನಾಂಗದವರು ಆರಿಸಿ ಬರುವುದಕ್ಕಾಗಲಿಲ್ಲ. ಬೇರೆ ಪರಿಶಿಷ್ಟ ಪಂಗಡಕ್ಕೆ

ಸೇರಿದವರು ಅದಕ್ಕೆ ಸೇರಿಕೊಂಡಿದ್ದರಿಂದ ಈ ಜನ್ಮದಲ್ಲಿ ನಾವು ಮತ್ತೆ ಆರಿಸಿ ಬರುವುದಿಲ್ಲವೆನ್ನುವ ಪರಿಸ್ಥಿತಿ ಹಕ್ಕಿಪಿಕ್ಕಿ ಜನಾಂಗದವರಿಗೆ ಬಂದಿದೆ. ಅವರಿಗೆ ರಾಜಕೀಯವಾದ ಶಕ್ತಿ, ವಿದ್ಯಾಭ್ಯಾಸದ ಶಕ್ತಿ ಮತ್ತು ಉದ್ಯೋಗದ ಶಕ್ತಿ ಕೊಡಬೇಕಾದರೆ ಅವರಿಗಾಗಿ ಪ್ರತ್ಯೇಕವಾದ ಮೀಸಲಾತಿ ಸೃಷ್ಟಿಗೊಳಿಸುವುದು ಯೋಗ್ಯ. ಈಗ ತಾವು ಶೇಕಡ 23ರಷ್ಟು ಇಟ್ಟಿದ್ದೀರಿ. ನಮ್ಮ ಜನಸಂಖ್ಯೆ ಶೇಕಡ 25 ರಷ್ಟಿದೆ. ದಯವಿಟ್ಟು ದಯವಿಟ್ಟು ಶೇಕಡ 25ರಷ್ಟು ಏರಿಸಿ ಅದರಲ್ಲಿ ಶೇಕಡ 2ರಷ್ಟು ಟ್ರೈಬಲ್ ಪೀಪಲ್‌ಗೆ ಕೊಡಿ. ಇರುವ ಪರಿಸ್ಥಿತಿಯನ್ನು ತಾವು ಚೆನ್ನಾಗಿ ಅರ್ಥ ಮಾಡಿಕೊಂಡಿರುವವರಾಗಿದ್ದೀರೆಂದು ನಾನು ವಿಶೇಷವಾಗಿ ವಿನಂತಿಸಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಇವೊತ್ತು ಮೀಸಲಾತಿ ಬಗ್ಗೆ ಏತಕ್ಕೆ ಚರ್ಚೆ ನಡೆಯುತ್ತಿದೆ? ಇದಕ್ಕೂ ಸಹ ನಮ್ಮ ನಾಯಕರಾದ ಮತ್ತು ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯಿಲಿಯವರನ್ನು ನಾವು ಹೊಗಳಬೇಕಾಗುತ್ತದೆ. ಅವರಿಗೆ ನೀವು ಒಳ್ಳೆಯದು ಮಾಡಿದ್ದೀರೆಂದು ಹೇಳಬೇಕಾಗುತ್ತದೆ. ಇವತ್ತು ನಾವು ಅದರ ಬಗ್ಗೆ ಏಕೆ ಜೋರಾಗಿ ಕೇಳುತ್ತೇವೆಂದರೆ, ಇವತ್ತು ಏನು ಮೆಡಿಕಲ್, ಇಂಜಿನಿಯರಿಂಗ್, ತಾಂತ್ರಿಕ ಕಾಲೇಜುಗಳಿವೆ ಇವುಗಳನ್ನೆಲ್ಲ ಸರ್ಕಾರ ವಾಪಸ್ ತೆಗೆದುಕೊಳ್ಳಬೇಕು. ಖಾಸಗಿಯವರಿಗೆ ಬಿಡಬಾರದು. ಇವತ್ತು ಖಾಸಗಿಯವರು ಮುಖ್ಯಮಂತ್ರಿಗಳ ಕುರ್ಚಿಯನ್ನೇ ಅಲುಗಾಡಿಸತಕ್ಕ ಲಾಬಿಯನ್ನು ಮಾಡಿದರು. ಎಲ್ಲಾ ಮಠಾಧಿಪಗಳು ಸೇರಿಕೊಂಡು ಮುಖ್ಯಮಂತ್ರಿಗಳು ಹೆದರಿಸಬೇಕೆಂದು ಮಾಡಿದರು. ಇಂಜಿನಿಯರಿಂಗ್, ಮೆಡಿಕಲ್, ಡೆಂಟಲ್ ಕಾಲೇಜುಗಳ ಅಧ್ಯಕ್ಷರುಗಳೂ ಸೇರಿ ಮುಖ್ಯಮಂತ್ರಿಗಳನ್ನು ಕುರ್ಚಿಯಿಂದ ಇಳಿಸತಕ್ಕ ವ್ಯವಸ್ಥೆ ಮಾಡಿದರು. ಆದರೂ ಸಹ ಮುಖ್ಯ ಮಂತ್ರಿಗಳು ಹೆದರದೆ ಇದರ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಂಡು ಇವತ್ತು 50 ಪರ್‌ಸೆಂಟ್ ಉಚಿತ ಸೀಟು ಉಳಿದ 50 ಪರ್‌ಸೆಂಟ್ ಡೊನೇಷನ್ ಸೀಟು ಕೊಡತಕ್ಕದನ್ನು ಮಾಡಿದರು. ರಾಜ್ಯದ ಮಕ್ಕಳಿಗೆ ಹೆಚ್ಚಿನ ಸವಲತ್ತು ಸಿಗಬೇಕೆಂದು ಅವರು ಈ ರೀತಿ ಮಾಡಿದಾಗ ನಮ್ಮ ರಾಜ್ಯದ ಮಕ್ಕಳಿಗೆ ಮೆಡಿಕಲ್, ಇಂಜಿನಿಯರಿಂಗ್, ಡೆಂಟಲ್, ಡಿಪ್ಲೊಮೊ, ನರ್ಸಿಂಗ್ ಕಾಲೇಜುಗಳಲ್ಲಿ ಸೀಟು ಸಿಗುತ್ತದೆ ಎನ್ನತಕ್ಕ ಆಸೆಯು ಹಿಂದುಳಿದವರಲ್ಲಿ ಮೂಡಿದೆ. ಆದುದರಿಂದ ಈ ಮೀಸಲಾತಿಯ ಬಗ್ಗೆ ಹೆಚ್ಚಿನ ಕಾಳಜಿ, ಆಸಕ್ತಿ ಎಲ್ಲಾ ಜನರಲ್ಲೂ ಸಹ ಮಾಡಿದೆ. ಅಂಥ ವ್ಯವಸ್ಥೆಯನ್ನು ಮಾಡಿದ್ದು ನಮ್ಮ ಸರ್ಕಾರ. ನಮ್ಮ ಸರ್ಕಾರವನ್ನು ನಡೆಸುತ್ತಿರತಕ್ಕಂಥ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರಿಗೆ ಸೌಜನ್ಯಕ್ಕಾದರು ವಿರೋಧ ಪಕ್ಷದವರು ಒಳ್ಳೆಯ ಮಾತನ್ನು ಹೇಳಬೇಕಾಗಿತ್ತು, ಇವತ್ತು ಈ ಒಂದು ಅಧಿವೇಶನವು ಚರಿತ್ರೆಯಲ್ಲಿ ಬರೆದಿರತಕ್ಕ ಅಧಿವೇಶನವಾಗುತ್ತದೆ. ಈ ಒಂದು ವಿಶೇಷವಾದ ಅಧಿವೇಶನವನ್ನು ಕರೆದು ಹಿಂದುಳಿದವರಿಗೆ 73 ಪರ್‌ಸೆಂಟ್ ಮೀಸಲಾತಿಯನ್ನು ಸೃಷ್ಟಿ ಮಾಡುವ ಬಗ್ಗೆ ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಗಾಗಿ ಕಳಿಸಿ ಅಲ್ಲಿ ಕಾನೂನನ್ನು ಮಾಡತಕ್ಕ ವ್ಯವಸ್ಥೆಯನ್ನು ಕೈಗೊಂಡಿರುವವರು ಯಾರಾದರು ಇದ್ದರೆ ಅದು ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಂಥ ಕಾಲದಲ್ಲಿ ಮಾನ್ಯ ವೀರಪ್ಪಮೊಯಿಲಿಯವರ ನಾಯಕತ್ವದ ಸರ್ಕಾರ ಎನ್ನತಕ್ಕದ್ದು ಚರಿತ್ರೆಯಲ್ಲಿ ಉಳಿಯತಕ್ಕಂಥ ಒಂದು ಇತಿಹಾಸವನ್ನು ಸೃಷ್ಟಿ ಮಾಡಿದ್ದಾರೆ ಎನ್ನತಕ್ಕದನ್ನು ಈ ಸಂದರ್ಭದಲ್ಲಿ ಹೇಳಿ, ಈ ಮೀಸಲಾತಿಯ ವಿಚಾರದಲ್ಲಿ ವಿಶೇಷವಾದ ಸಭೆಯನ್ನು ಕರೆದು ಮೀಸಲಾತಿಯ ಬಗ್ಗೆ ಇಟ್ಟಿರತಕ್ಕ

ಕಾನೂನನ್ನು ನಾನು ಸಂಪೂರ್ಣವಾಗಿ ಬೆಂಬಲವನ್ನು ವ್ಯಕ್ತಪಡಿಸಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀಮತಿ ಮೋಟಮ್ಮ (ಮೂಡಿಗೆರೆ) :- ಸನ್ಮಾನ್ಯ ಉಪಾಧ್ಯಕ್ಷರೆ, ಈ ವಿಶೇಷವಾದ ಅಧಿವೇಶನದಲ್ಲಿ ಏನು ಮೀಸಲಾತಿಯ ಬಗ್ಗೆ ವಿಧೇಯಕವನ್ನು ಮಂಡಿಸಿದ್ದಾರೆ ಅದನ್ನು ಹೆಮ್ಮೆಯಿಂದ ಸ್ವಾಗತಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಹಲವಾರು ನುರಿತ ನಾಯಕರು, ರಾಜಕಾರಣಿಗಳೆನಿಸಿಕೊಂಡವರು ಈ ವಿಧೇಯಕದ ಬಗ್ಗೆ ಮಾತನಾಡಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಆದರಿಂದ ನನಗೆ ಸ್ವಲ್ಪ ಆಶ್ಚರ್ಯವೋ ಆಯಿತು. ಏಕೆಂದರೆ ಈ ಹಿಂದೆ ಹಾವನೂರು ವರದಿಯನ್ನು ದಿವಂಗತ ದೇವರಾಜ್‌ಅರಸುರವರು ಜಾರಿಗೊಳಿಸಿದಾಗ ಆಯೋಗದ ಎಲ್ಲಾ ಶಿಫಾರಸ್ಸುಗಳನ್ನು ಚಾಚೂ ತಪ್ಪದಂತೆ ಜಾರಿಗೊಳಿಸಲು ಸಾಧ್ಯವಾಗಲಿಲ್ಲ.

(ಶ್ರೀ ಅಂಜನಮೂರ್ತಿಯವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಆದರೂ ಸಹ ಅವರು ಏನು ಹಿಂದುಳಿದವರಿಗೆ ಮತ್ತು ಸಾಮಾನ್ಯ ವರ್ಗದವರಿಗೆ ನ್ಯಾಯವನ್ನು ಕೊಡಬೇಕಾಗಿತ್ತೊ, ಅದನ್ನು ಆಯೋಗದಿಂದ ಒದಗಿಸಲು ಪ್ರಯತ್ನ ಮಾಡಿದರು ಆದರೆ. ತದನಂತರ ಬಂದ ಸರ್ಕಾರದವರು ವೆಂಕಟಸ್ವಾಮಿ ಆಯೋಗದ ವರದಿಯನ್ನು ಜಾರಿಗೊಳಿಸುವ ಬಗ್ಗೆ ಬಹಳ ಮಾತನಾಡಿದರು. ಆದರೆ ಅವರು ಅದನ್ನು ಜಾರಿಗೊಳಿಸಲಿಲ್ಲ. ಅವರಿಗೆ ಅದನ್ನು ಜಾರಿ ಗೊಳಿಸಲು ಮನಸ್ಸೇ ಇರಲಿಲ್ಲ. ಬಹಳಷ್ಟು ಜನರು ಅದರ ವಿರುದ್ಧವಾಗಿ ಮಾತನಾಡಿದ್ದಾರೆ. ನಮ್ಮ ಮಾಜಿ ನಾಯಕರಾದ ಮತ್ತು ಹಾಲಿ ಕೆಪಿಸಿ ಅಧ್ಯಕ್ಷರಾಗಿರುವ ಬಂಗಾರಪ್ಪನವರು ಇದರ ಬಗ್ಗೆ ಹೆಚ್‌ಎನ್. ನಂಜೇಗೌಡರ ಜೊತೆ ಹಲವಾರು ವೇದಿಕೆಗಳಲ್ಲಿ ವೆಂಕಟಸ್ವಾಮಿ ಆಯೋಗದ ಬಗ್ಗೆ ಟೀಕೆ ಮಾಡಿದ್ದಾರೆ. ಅದು ಜಾರಿಗೆ ಬರಬಾರದು ಎಂದು ಮಾತನಾಡಿದ್ದಾರೆ. ಆದರೆ ಈಗ ಹಿಂದುಳಿದವರ ಬಗ್ಗೆ ಬಹಳ ಕಳಕಳಿಯನ್ನು ಇಟ್ಟುಕೊಂಡಿದ್ದೇನೆ ಎನ್ನತಕ್ಕ ದೃಷ್ಟಿಯಿಂದ ಈ ಒಂದು ವಿಧೇಯದಲ್ಲಿ ಬಹಳ ತಪ್ಪುಗಳಾಗಿದೆ, ಅದನ್ನು ಸರಿಪಡಿಸಲು ಹೋಗಿ ಮತ್ತೂ ತಪ್ಪುಗಳನ್ನು ಮಾಡುತ್ತಿದ್ದಾರೆ, ಇದರಿಂದ ಯಾರಿಗೂ ನ್ಯಾಯ ಸಿಗುವುದಿಲ್ಲ. ಇದು ಯಾವ ಪುರುಷಾರ್ಥಕ್ಕಾಗಿ ಎನ್ನತಕ್ಕ ರೀತಿಯಲ್ಲಿ ಮಾತನಾಡಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಆದರೆ ಒಂದು ಪ್ರಶ್ನೆಯನ್ನು ಅವರಿಗೆ ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ನಮ್ಮ ಸರ್ಕಾರದವರು ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ತರುತ್ತೇವೆಂದು ಜನರಿಗೆ ಶ್ವಾಸನೆಯನ್ನು ಕೊಟ್ಟಿದ್ದರು, ಅದನ್ನು ಈಡೇರಿಸುತ್ತೇವೆಂದು ಜನರ ಮುಂದೆ ಹೇಳಿದ್ದರು, ಅದರಂತೆ ಇವತ್ತು ನಮ್ಮ ಸರ್ಕಾರ ಅದನ್ನು ಜಾರಿಗೊಳಿಸಿದ್ದಾರೆ. ಅಂತಹ ಅವಕಾಶ ಅವರಿಗೂ ಸಿಕ್ಕಿತು. ಅವರ ಕಾಲಾವಧಿಯಲ್ಲಿ ಈ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೊಳಿಸಿ ಏನು ತಪ್ಪಾಗಿದೆ ಎಂದು ಹೇಳುತ್ತಾರೆ, ಅವರು ಅದನ್ನು ಹಿಂದುಳಿದ ವರ್ಗದ ನಾಯಕರಾಗಿ, ಸರಿಯಾಗಿ ನ್ಯಾಯ ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದರೆ ನಾವು ನಿಜವಾಗಿ ಅವರ ಬಗ್ಗೆ ಹೆಮ್ಮೆ ಪಡುತ್ತಿದ್ದೆವು. ಆದರೆ ಅವರ ಕಾಲದಲ್ಲಿ ಅದು ಆಗಲಿಲ್ಲ. ಅದು ಸರಿಯೊ, ತಪ್ಪೊ? ನಮ್ಮ ಸರ್ಕಾರದಲ್ಲಿ ತದನಂತರ

ಬಂದ ಮಾನ್ಯ ವೀರಪ್ಪಮೊಯಿಲಿಯವರು ನಾಯಕರಾಗಿ ಇವತ್ತು ಈ ವಿಧೇಯಕವನ್ನು ಜಾರಿಗೆ ತಂದರು. ಈಗ ಅದರ ಬಗ್ಗೆ ಶ್ರೀ ಬಂಗಾರಪ್ಪನವರು ಮಾನ್ಯ ಮಾಜಿ ನಾಯಕರು ಎಂದು ಹೇಳಿದರೆ ತಪ್ಪಾಗಲಾರದು, ಮತ್ತು ಅವರು ಹಳೆಯ ರಾಜಕಾರಿಣಿಗಳು ಆಗಿರುವರು. ಹಾಗಾಗಿ ಟೀಕೆ ಮಾಡುವುದು ಸರಿಯಲ್ಲವೆಂದು ನನಗನಿಸಿತು, ಮತ್ತು ಅದರಲ್ಲಿ ಅರ್ಥವಿಲ್ಲವೆಂದು ಅನಿಸಿತು. ಹಾಗೆ ಏನೇ ಇರಲಿ, ಸಣ್ಣ ಪುಟ್ಟ ತಪ್ಪುಗಳು ಆಗಿದ್ದರೂ ಸಹ ಹಿಂದುಳಿದ ವರ್ಗದ ನಾಯಕರಾಗಿ ಈ ರೀತಿ ಹಿಂದುಳಿದವರಿಗೆ ಮತ್ತು ದೇಶದ ಯಾವ ಭಾಗದಲ್ಲೂ ಸಹ ಇವತ್ತು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅವರ ಜನಸಂಖ್ಯೆಯ ಆಧಾರವಾಗಿ ಮೀಸಲಾತಿಯನ್ನು ಒದಗಿಸಿಕೊಡಲಿಲ್ಲ. ಆದರೆ ಈ ಸರ್ಕಾರ ಇವತ್ತು ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡು ದಿಟ್ಟತನದಿಂದ ಶೇ.23 ರಿಜರ್ವೇಷನ್ ಕೊಟ್ಟಾಗ ಅದನ್ನು ಅಪ್ರಿಷಿಯೇಟ್ ಮಾಡಿ ಈ ವಿಧೇಯಕದಲ್ಲಿ ಯಾವ ಸಣ್ಣ ಪುಟ್ಟ ಲೋಪದೋಷಗಳು ಆಗಿದೆ, ಅದನ್ನು ಸರಿ ಮಾಡಿ ಹಿಂದುಳಿದ ವರ್ಗದವರಿಗೆ ನ್ಯಾಯ ಕೊಡಬೇಕೆಂದು ಅವರು ಸಲಹೆ ಕೊಟ್ಟಿದ್ದರೆ, ಅವರನ್ನು ನಾವು ಬಹಳ ಮೆಚ್ಚುತ್ತಿದ್ದೆವು. ಹಾಗೆ ಹಿರಿಯರಾದಂಥ ಮಾನ್ಯ ವೈ.ಕೆ. ರಾಮಯ್ಯನವರು ಸುಮಾರು ಎರಡು ಗಂಟೆಗಳ ಭಾಷಣ ಮಾಡಿದರು. ನಾವು ರಾಜಕಾರಣದಲ್ಲಿ ಬಹಳ ಕಿರಿಯರು. ಆದರೆ ಅವರ ವಾದವಿವಾದಗಳನ್ನು ಇಲ್ಲಿ ನಾವು ಕೇಳಿದ್ದೇವೆ. ಪೂರ್ಣವಾಗಿ ಕೇಳದಿದ್ದರೂ 75 ಪರ್ಸೆಂಟ್ ಅವರು ಹೇಳಿದ್ದನ್ನೆಲ್ಲಾ ನಾನು ಮಾತನಾಡಬೇಕೆಂದು ಕೇಳಿಸಿಕೊಂಡೆ. ಆದರೆ ಅವರೂ ಸಹ ಅವರ ನಿರ್ದಿಷ್ಟವಾದ ನಿಲುವನ್ನು ಸರಿಯಾಗಿ ಹೇಳಲಿಲ್ಲವೆಂದು ನನಗನಿಸುತ್ತದೆ. ತಪ್ಪುಗಳು ಆಗುತ್ತದೆ. ಆದರೆ ತಪ್ಪುಗಳನ್ನೇ ಎತ್ತಿ ತೋರಿಸುವುದೇ ಮುಖ್ಯವಲ್ಲ. ಆದರೆ ಈ ತಪ್ಪುಗಳನ್ನು ಹೇಗೆ ಸರಿಪಡಿಸಬಹುದು, ಇದು ನಮ್ಮ ನಿಲುವು, ಈ ರೀತಿ ನಿರ್ಧಾರಕ್ಕೆ ಬನ್ನಿ, ಇದರಿಂದ ನಾವು ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವೆಂದು ನೀವು ಈ ಸಭೆಯಲ್ಲಿ ಸಹಾಯ ಮತ್ತು ಸಲಹೆ ಮಾಡಿದರೆ ಅದು ಎಲ್ಲರಿಗೂ ಉಪಯುಕ್ತವಾಗುತ್ತದೆ. ಆದರೆ ಗಂಟಗಟ್ಟಲೆ ಟೀಕೆ ಮಾಡಿದರೆ ಏನು ಪ್ರಯೋಜನವಾಗಲಾರದು. ಏಕೆಂದರೆ ಏನೊ ಆಗಿ ಹೋಗಿರುವುದನ್ನು ಮತ್ತೆ ಮರುಕಳಿಸಿದರೆ ಅಥವಾ ಮೆಲುಕು ಹಾಕಿದರೆ ಅದರಿಂದ ಏನು ಪ್ರಯೋಜನ. ನಾನು ಹೇಳುವುದು ಅವರ ಮನಸ್ಸಿಗೆ ಸರಿಕಾಣುತ್ತಿಲ್ಲವೆನೊ. ಆದರೆ ಇಲ್ಲಿ ಕೊಂಡಾಗ ನನ್ನ ಮನಸ್ಸಿಗೆ ಅನ್ನಿಸಿದ್ದನ್ನು ಹೇಳುತ್ತೇನೆ. ಏಕೆ ಇಷ್ಟು ಹೊತ್ತು ಮಾತನಾಡುವ ಬದಲಾಗಿ ಈ ಸಭೆಯನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳಬೇಕು, ಜನರಿಗೆ ಸಹಾಯ ಮಾಡಬೇಕು ಎಂದು ಹೇಳಿದರೆ, ನಿಮ್ಮ ಜೊತೆ ನಾವು ಇದ್ದೇವೆ, ನೀವು ಹಿಂದುಳಿದ ವರ್ಗದವರಿಗೆ ಒಳ್ಳೆಯ ಕೆಲಸ ಮಾಡಿದ್ದೀರಿ, ಈ ರೀತಿ ಮಾಡಿ, ಈ ರೀತಿ ಮಾಡಿದರೆ ಸರಿಯಾಗಿ ಆಗುತ್ತದೆ ಎನ್ನುವಂಥ ಒಂದು ದೃಢ ನಿಲುವನ್ನು ಹೇಳಬೇಕಾಗುತ್ತದೆ ಎಂದು ನನಗೆ ಅನಿಸಿತು.

ಶ್ರೀ ವೈ.ಕೆ.ರಾಮಯ್ಯ:- ಅಧ್ಯಕ್ಷರೆ, ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಆಡಳಿತ ಪಕ್ಷದ ಜೊತೆಯಲ್ಲಿ ಕೈ ಜೋಡಿಸುವುದಕ್ಕಲ್ಲಾ, ನನ್ನನ್ನು ಜನರು ಕಳುಹಿಸಿರುವುದು.

*ಶ್ರೀಮತಿ ಮೋಟಮ್ಮ:- ಒಳ್ಳೆಯ ಕೆಲಸಕ್ಕೆ ಕಳುಹಿಸಿರುವುದು, ಕೆಟ್ಟ ಕೆಲಸಕ್ಕಲ್ಲ. ಒಳ್ಳೆಯ ಕೆಲಸಗಳಿಗೆ ನೀವು ಬೆನ್ನು ತಟ್ಟಲೇಬೇಕು. ನಾವು ಶಾಸಕರ ದಿನಾಚರಣೆಯಂದು ವಿರೋಧಪಕ್ಷದವರು

ಕುಳಿತುಕೊಂಡು ಏನು ಮಾಡಿದರು ಎಂದರೆ ವಿರೋಧ ಮಾಡಿದರು ಎಂದು ಹಾಡಿದೆವು. ಅದು ಆಗಬಾರದು ಎಂದು ನಾನು ಹೇಳಿದ ಮಾತು ಅಷ್ಟೇ ಈಗ ಸಾಕಷ್ಟು ಸಾರಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಬಗ್ಗೆ ದೆಹಲಿ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಸೇರಿ ನಮ್ಮ ಸಂವಿಧಾನದಲ್ಲಿ ಅಂದಿನ ಜನಸಂಖ್ಯೆಗೆ ತಕ್ಕಹಾಗೆ ಏನು ಮೀಸಲಾತಿ ಕೊಟ್ಟಿದ್ದೀರಿ ಅದು ಸಾಲದು ಇವತ್ತು ನಮ್ಮ ಜನಸಂಖ್ಯೆ ಹೆಚ್ಚಾಗಿದೆ. ಅದು ಅಲ್ಲದೆ, ಸಾಕಷ್ಟು ಬೇರೆ ಬೇರೆ ವರ್ಗದವರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಜಾತಿಯೊಳಗೆ ಸೇರಿಸಿ ಇನ್ನಷ್ಟು ನಿಜವಾದ ಅರ್ಹ ಪರಿಶಿಷ್ಟ ವರ್ಗದವರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿ ನಮ್ಮ ಕೋಟಾವನ್ನು ಜಾಸ್ತಿ ಮಾಡಬೇಕೆಂದು ಹೇಳಿ ನಾವು ಸಾಕಷ್ಟು ಬೇಡಿಕೆಯನ್ನು ಇಟ್ಟಿದ್ದೇವೆ. ರಾಷ್ಟ್ರ ಮಟ್ಟದಲ್ಲಿ ನಮ್ಮ ರಾಜ್ಯ ಒಂದೇ ಅಲ್ಲ ಬೇರೆ ಕಡೆಗಳಲ್ಲೂ ಸಹ ಈ ರೀತಿ ಮಾಡಿದ್ದಾರೆ. ಈಗ ಅಲ್ಪಸ್ವಲ್ಪ ಅದರಲ್ಲಿ ಜನರ ಕಳಕಳಿ ಮತ್ತು ಮನವಿ ಕೇಳಿದರೆ ಮೊದಲನೆಯದಾಗಿ ನಮ್ಮ ಕರ್ನಾಟಕ ಸರ್ಕಾರ ಎಂದರೆ ತಪ್ಪಾಗಲಾರದು. ಆ ದೃಷ್ಟಿಯಲ್ಲಿ ನಾನು ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಈ ವಿಧೇಯಕವನ್ನು ತರುವುದಕ್ಕೆ ಬೆಂಬಲ ನೀಡಿದ ಮಂತ್ರಿಮಂಡಲವನ್ನು ನಾನು ಅಭಿನಂದಿಸುತ್ತೇನೆ. ಇದು ಇಡೀ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಮಾದರಿಯಾಗಬೇಕು. ಎಲ್ಲರೂ ಈ ಒಂದು ಮಾದರಿಯನ್ನು ಅನುಸರಿಸಬೇಕಾಗುತ್ತದೆ. ಏಕೆಂದರೆ, ಮದ್ರಾಸ್‌ನಲ್ಲಿ ಕೇವಲ 14 ಪರ್ಸೆಂಟ್ ಜಾಸ್ತಿ ಮಾಡಿದ್ದಾರೆ ಎನ್ನುವ ಮಾತನ್ನು ನಾನು ಕೇಳಿದೆ. ಆದರೆ ಇವತ್ತು ನಾನು ಸುಮ್ಮನೆ ಪೇಪರ್ ಓದಬೇಕಾದರೆ, ರಾಮ್ ವಿಲಾಸ್ ಪಾಸ್ವಾನ್‌ರವರ ' ಯಾವುದೇ ಒಂದು ಮೀಸಲಾತಿ ನೀತಿಯನ್ನು ತಯಾರು ಮಾಡುವುದಕ್ಕೆ ಅಥವಾ ಸಿದ್ಧಪಡಿಸಲಿಕ್ಕೆ ಆಯಾಯ ರಾಜ್ಯದವರಿಗೆ ಸ್ವಾತಂತ್ರ್ಯ ಕೊಡಬೇಕು, ಅಧಿಕಾರ ಕೊಡಬೇಕು ಎಂದು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದೇ ರಾಜ್ಯದ ಸರ್ಕಾರದವರು ಕಳಕಳಿ ಇದ್ದು, ಯಾವ ಹಿಂದುಳಿದ ವರ್ಗದವರಿಗೆ ಸಹಾಯ ಮಾಡಬೇಕು, ಪರಿಶಿಷ್ಟ ಜಾತಿ, ವರ್ಗದವರಿಗೆ ಸಹಾಯ ಮಾಡಬೇಕು ಎಂದು ಹೇಳಿ ಮನಸ್ಸು ಮಾಡುತ್ತಾರೆ ಅಂತಹ ಒಂದು ಸರ್ಕಾರಕ್ಕೆ ಮುಕ್ತವಾದಂತಹ ದಾರಿಯನ್ನು ಮಾಡಿಕೊಟ್ಟರೆ, ಒಳ್ಳೆಯ ರೀತಿಯಲ್ಲಿ, ನಾವು ಈಗ ಏನು 73 ಪರ್ಸೆಂಟ್ ಮಾಡುತ್ತೇವೆಂದು ಹೊರಟ್ಟಿದ್ದೇವೆ ಅದಕ್ಕೆ ಅವಕಾಶ ಆಗುತ್ತದೆ ಮತ್ತು ಜನರಿಗೆ ಸಹಾಯವಾಗುತ್ತದೆ. ಅದು ಬಿಟ್ಟು ಅದರ ವಿರುದ್ಧ ಯಾರೋ ಒಬ್ಬರು ಕೋರ್ಟಿಗೆ ಹೋಗುವುದು, ಅದಕ್ಕೆ ತಡೆಯಾಜ್ಞೆ ಬರುವುದು. ಈ ರೀತಿಯಾದರೆ ಜನರಿಗೆ ಸಹಾಯ ತಲುಪಬೇಕಾದರೆ ಬಹಳಷ್ಟು ತಡವಾಗುವುದರಿಂದ ಇದರಿಂದ ಏನೂ ಅನುಕೂಲವಾಗಲಾರದು. ಮತ್ತು ಇನ್ನೊಂದು ಮಾತನ್ನು ಹಲವಾರು ಜನ ಹೇಳಿದರು, ಇದು ಒಂದು ರಾಜಕೀಯ ನಾಟಕ, ಸ್ಟಂಟ್, ಚುನಾವಣೆ ಹತ್ತಿರ ಬಂತು ಅದಕ್ಕೆ ನಾವು ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿ ವರ್ಗದವರಿಗೆ ಹೆಚ್ಚು ರಿಸರ್ವೇಷನ್ ಮಾಡಿದ್ದೇವೆ ಎಂದು ಹೇಳಿ ಓಟಿನ ಬೇಟೆ ಆಗುವುದಕ್ಕೆ ಈ ಕೆಲಸ ಮಾಡಿದ್ದಾರೆಂದು ಹೇಳಿದರು. ಯಾವ ಸರ್ಕಾರ ಇದ್ದರೂ ಕೂಡ ಯಾವುದೇ ವಿಧೇಯಕವನ್ನು ತಂದರೂ ಕೂಡ ಅದನ್ನು ಜನರ ಪರವಾಗಿ ತಂದಾಗ ಈ ರೀತಿ ಅವರ ವಿರೋಧಿಗಳು ಮಾತನಾಡುವುದು ಸಹಜ. ಆದರೆ ನಿಜವಾಗಲೂ ಅವರಿಗೆ ಕಳಕಳಿ ಇದ್ದರೆ ಇಂಥಾದ್ದನ್ನು ಎಲ್ಲರೂ ಸಪೋರ್ಟ್

ಮಾಡಬೇಕಾಗುತ್ತದೆ. ಮತ್ತೆ ಕೆಲವರು ಹೇಳಿದರು. ಈಗ ನೀವೇನೋ 73 ಪರ್ಸೆಂಟ್ ರಿಸರ್ವೇಷನ್ ತರುವುದಕ್ಕೆ ಪ್ರಯತ್ನ ಮಾಡಿ ವಿಶೇಷ ಅಧಿವೇಶನ ಕರೆದು ಈ ವಿಧೇಯಕವನ್ನು ಮಂಡಿಸಿದ್ದೀರಿ, ಅದನ್ನು ಚುನಾವಣೆಗೆ ಮೊದಲೆ ಜಾರಿಗೊಳಿಸುವುದಕ್ಕೆ ಸಾಧ್ಯವೇ? ಮತ್ತು ಪಾರ್ಲಿಮೆಂಟ್‌ನ ವಿಶೇಷ ಸಭೆ ಕರೆದು ಇದನ್ನು ಮಂಜೂರಾತಿ ಕೊಡುತ್ತಾರೆಯೇ ಎಂದು ಕೇಳಿದರು. ಇದು ನಾಳೆಯೇ ಆಗಬೇಕು ಎಂದು ಅಲ್ಲ. ಯಾರಾದರೂ ಒಬ್ಬ ವ್ಯಕ್ತಿ ಒಂದು ಗಿಡ ಹಾಕಿದರೆ ಅದರ ಫಲ ತಾನೇ ತಿನ್ನಬೇಕು ಎಂದು ಹಾಕುವುದಿಲ್ಲ, ಅದರ ಫಲ ತತ್‌ಕ್ಷಣ ಸಿಗುತ್ತದೆ ಎಂದು ನೆಡುವುದಿಲ್ಲ. ಅದರ ಫಲ ಅವರಿಗೆ ಸಿಗಬಹುದು ಅಥವಾ ನಂತರ ಬಂದ ಅವರ ಮುಂದಿನ ಪೀಳಿಗೆಗೆ ಸಿಗುಬಹುದು. ಹಾಗೆ ನಾವು ಇವತ್ತು ಮಾಡಿದರೂ ಸಹ ಡಿಸೆಂಬರ್‌ನಲ್ಲಿ ಸೇರುವ ಪಾರ್ಲಿಮೆಂಟ್ ಅಧಿವೇಶನದಲ್ಲಿ ಈ ವಿಧೇಯಕವನ್ನು ಒಪ್ಪಿಕೊಳ್ಳಬಹುದು. ಇದರಿಂದ ಜನರಿಗೆ ಸಹಾಯ ಆಗಬಹುದು. ಅದನ್ನು ಬಿಟ್ಟು ಇದು ಒಂದು ರಾಜಕೀಯ ಸ್ಟಂಟ್ ಎಂದು ಕರೆಯುವುದರಲ್ಲಿ ಅರ್ಥವೇ ಇಲ್ಲ. ಇದು ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಎಂದು ಒಂದು ಗಾದೆ ರೀತಿ ಎಂದು ಹೇಳಿದರೆ ತಪ್ಪಾಗಲಾರದೆಂದು ನನಗೆ ಅನಿಸುತ್ತದೆ. ಯಾರ್ಯಾರು ಈ ವಿಧೇಯಕವನ್ನು ವಿರೋಧ ಮಾಡಿ ಮಾತನಾಡಿದ್ದಾರೆ ಮತ್ತು ಅದರಲ್ಲಿ ಹುರುಳಿಲ್ಲ ಹಾಗೂ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಕಲಸು ಮೇಲೋಗರ ಮಾಡಿದ್ದಾರೆ ಎಂದು ಟೀಕೆ ಮಾಡಿದ್ದಾರೆ ಅವರಿಗೆ ನಾನು ಕೇಳಿಕೊಳ್ಳುತ್ತೇನೆ, ನಿಜವಾಗಲೂ ಅವರಿಗೆ ಸಹೃದಯ ಇದ್ದರೆ, ಇದನ್ನು ಸರಿ ಮಾಡಿ, ಜನರಿಗೆ ನಾವು ಸಾಮಾಜಿಕ ನ್ಯಾಯ ಒದಗಿಸಬೇಕು ಎನ್ನುವ ದೃಷ್ಟಿಯಿಂದ ಅವರು ಸಹಕರಿಸಬೇಕಾಗುತ್ತದೆ, ಮುಂದೆ ಬರಬೇಕಾಗುತ್ತದೆ. ಕೊನೇಪಕ್ಷ ಅದನ್ನು ಜನರಾದರೂ ಪ್ರಶಂಸೆ ಮಾಡುತ್ತಾರೆ. ಆದರೆ ಮಾಡಿರುವ ಕೆಲಸಕ್ಕೆ ಸರಿ ಇಲ್ಲ ಎಂದು ಹೇಳಿ, ನಾವೇ ಸರಿ, ಇವರು ಸರಿ ಇಲ್ಲ ಎಂದು ಹೇಳಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇಷ್ಟನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಒಂದು ವಿಧೇಯಕಕ್ಕೆ ಎಲ್ಲರೂ ಒಪ್ಪಿಗೆ ಕೊಟ್ಟು ಒಮ್ಮತದಿಂದ ನಾವು ಈ ವಿಧೇಯಕವನ್ನು ಪಾಸ್ ಮಾಡಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ): ಮಾನ್ಯ ಉಪಾಧ್ಯಕ್ಷರೆ, ಇವತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಮೀಸಲಾತಿಯ ವಿಧೇಯಕವನ್ನು ತಂದು ಈ ಸದನದಲ್ಲಿ ಅದನ್ನು ಚರ್ಚೆ ಮಾಡಿ ಅದರ ಒಳಿತು ಕೆಡುಕುಗಳಿಗೆ ಬೇಕಾದಂತಹ ವಿಚಾರಗಳನ್ನು ಪ್ರತಿಯೊಬ್ಬರು ಹೇಳತಕ್ಕಂಥ ಒಂದು ಅವಕಾಶ ಮಾಡಿಕೊಟ್ಟು, ಇವತ್ತು ಮತ್ತು ನಾಳೆ ವಿಶೇಷ ಅಧಿವೇಶನ ಕರೆದು ಈ ವಿಧೇಯಕವನ್ನು ಮಂಡಿಸಿದ್ದಾರೆ. ಇದಕ್ಕಾಗಿ ನಿಜವಾಗಿಯೂ ನಾವು ನಮ್ಮ ಮುಖ್ಯಮಂತ್ರಿಗಳನ್ನು ಮತ್ತು ನಮ್ಮ ಸರ್ಕಾರವನ್ನು ಖಂಡಿತವಾಗಿಯೂ ಮೆಚ್ಚಬೇಕು. ಒಳ್ಳೆಯದನ್ನು ಯಾರು ಮಾಡಿದರೂ ಏನು ಮಾಡಿದರೂ ಅದಕ್ಕೆ ನಾವು ನಮ್ಮ ಮೆಚ್ಚುಗೆಯನ್ನು ಕೊಡಬೇಕು. ಅದನ್ನು ಕೊಡದಿದ್ದರೆ ಒಂದುಕಡೆ ಶಾಸ್ತ್ರದಲ್ಲಿ ಹೇಳುವ ಪ್ರಕಾರ ಒಳ್ಳೆಯದನ್ನು ಮಾಡಿದಂಥ ಕೆಲಸಗಳನ್ನು, ಅಭಿವೃದ್ಧಿ ಕೆಲಸಗಳನ್ನು, ಜನರಿಗೆ ಬೇಕಾದಂತಹ ಕೆಲಸಗಳನ್ನು, ಬಡವರಿಗೆ ಬೇಕಾದಂಥ ಉಪಕಾರಗಳನ್ನು ಅದೇ ರೀತಿಯಲ್ಲಿ ಪರಿಶಿಷ್ಟವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಬೇಕಾದಂಥ

ಉಪಕಾರವನ್ನು ಮಾಡಿದಂಥ ಜನರನ್ನು ಒಳ್ಳೆಯದು ಎಂದು ಹೇಳದೆ ಅನಾವಶ್ಯಕವಾಗಿ ಟೀಕೆ ಮಾಡಿದರೆ ಅದಕ್ಕಿಂತ ದೊಡ್ಡ ಪಾಪ, ಅದಕ್ಕಿಂತ ದೊಡ್ಡ ದೋಷ ಬೇರೆ ಇಲ್ಲ. ಇದನ್ನು ಸರಿಯಾಗಿ ಎಣಿಸಿದರೆ ಇದು ನಿಜಕ್ಕೂ ನಿಜವಾದಂಥ ಮಾತು. ಒಂದು ಕಡೆ ನಾವು ಒಳ್ಳೆಯದನ್ನು ಮಾಡಬೇಕೆಂದು ಚರ್ಚೆ ಮಾಡುವುದು, ಅಭಿವೃದ್ಧಿ ಮಾಡಬೇಕು ಎಂದು ಪತ್ರಿಕೆಗಳಲ್ಲಿ, ಸಭೆಗಳಲ್ಲಿ, ಸದನದಲ್ಲಿ ಬೇಕಾದ ಹಾಗೆ ನಾವು ಮಾತನಾಡುವುದು. ಆ ಅಭಿವೃದ್ಧಿಗಳನ್ನೆಲ್ಲಾ ನಾವು ಮಾತನಾಡುತ್ತಾ ಬಂದಾಗ, ಆ ಅಭಿವೃದ್ಧಿಗಳನ್ನೆಲ್ಲಾ ಜನರಿಗೆ ಕೊಟ್ಟಾಗ ಬಡವರಿಗೆ, ಪರಿಶಿಷ್ಟವರ್ಗದವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಅದನ್ನು ಮುಟ್ಟಿಸಿದಾಗ, ಬೇರೆ ರೂಪದಲ್ಲಿ ಅದನ್ನು ಟೀಕೆ ಮಾಡುವುದು. ಒಂದುಕಡೆ ಅಭಿವೃದ್ಧಿ ಮಾಡಬೇಕು ಎಂದು ಹೇಳುವುದು, ಅದನ್ನು ಮಾಡಿದರೆ ಮತ್ತೊಂದು ಕಡೆಯಲ್ಲಿ ನೀವು ಮಾಡಿದ್ದು ಸರಿಯಲ್ಲ ಎಂದು ಹೇಳುವುದು. ಅಥವಾ ಹೊಟ್ಟೆಕಿಚ್ಚಿಗಾಗಿಯೋ ಏನೋ ಇದು ಮಾಡಿದ್ದು ಸರಿಯಲ್ಲ ಎಂಬ ಭಾವನೆ ನಾವು ಇವತ್ತು ಕಾಣುತ್ತಿದ್ದೇವೆ. ನಾವು ಪತ್ರಿಕೆಗಳನ್ನು ಓದುತ್ತಿದ್ದೇವೆ, ಭಾಷಣಗಳನ್ನು ಕೇಳುತ್ತಿದ್ದೇವೆ, ಆದ್ದರಿಂದ ಇಂತಹ ಒಂದು ಉತ್ತಮವಾದಂಥ ವಿಧೇಯಕ ಬಂದಾಗ ನಿಜವಾಗಿಯೂ ವಿರೋಧ ಪಕ್ಷದ ಸದಸ್ಯರು ಇಲ್ಲದಿರುವಂತಹದ್ದು ಬಹಳ ಆಶ್ಚರ್ಯಕರ. ಏಕೆಂದರೆ ಚರ್ಚೆ ಮಾಡುವಂಥದ್ದನ್ನು ಚರ್ಚೆ ಮಾಡಬೇಕು. ನಮ್ಮ ಅಭಿಪ್ರಾಯಗಳನ್ನು, ಹಿತವಚನಗಳನ್ನು ಕೊಡಬೇಕು. ಸದನವನ್ನು ವಿಶೇಷವಾಗಿ ಕರೆದಿರುವಾಗ, ಇಂತಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿರುವಾಗ ಅದರ ಲಾಭವನ್ನು ಪಡೆಯದೆ ಇದಕ್ಕೆ ಬಾರದೆ ಉಳಿದಂತಹ ವಿಚಾರ ಬಹಳ ಖೇಧಕರವಾದ ವಿಚಾರವೆಂದು ನಾನು ಭಾವಿಸುತ್ತೇನೆ. ಎದುರುಪಕ್ಷದವರು ವಿರೋಧ ಪಕ್ಷದ ನಾಯಕರುಗಳನ್ನು ಕರೆಯಿಸಿ ಮಾತನಾಡುವುದಿಲ್ಲ ಎಂದು ಹೇಳುತ್ತಾ ಇದ್ದರು. ನಾನು ತಿಳಿದಹಾಗೆ ಅನೇಕ ಬಾರಿ ಕರೆಸಿದ್ದು ಉಂಟು, ಅನೇಕ ಬಾರಿ ಮಾತನ್ನಾಡಿಸಿದ್ದುಂಟು. ಇದಕ್ಕೆ ಕೂಡ ವಿರೋಧ ಪಕ್ಷದ ನಾಯಕರುಗಳು ಬರಬೇಕು, ಈ ವಿಧೇಕಯದ ಬಗ್ಗೆ ನಾವು ಚರ್ಚೆಯನ್ನು ಮಾಡಬೇಕು ಎಂದು ಹೇಳಿದಾಗ ಎಲ್ಲರೂ ಅದನ್ನು ವಿರೋಧಿಸಿ ಅದಕ್ಕೆ ಹೋಗಲಿಲ್ಲ. ಕಡೆಗೆ ವಿರೋಧಪಕ್ಷದ ನಾಯಕರು ಕಾಗದ ಬರೆದು ಎರಡು ದಿವಸದ ನಂತರ ನೀವು ಮಾಡುವುದಾದರೆ ನಾವು ಬರುತ್ತೇವೆಂದರು. ಅದೇ ರೀತಿಯಲ್ಲಿ ಎರಡು ದಿವಸದ ನಂತರ ಸಭೆ ಕರೆದಾಗ್ಯೂ ಅವರು ಬರಲಿಲ್ಲ. ಇದರ ಅರ್ಥ ಏನೋ ತಾವೇ ಆಲೋಚನೆ ಮಾಡಿ, ವಿರೋಧಪಕ್ಷವೆಂದು ಹೇಳುವಾಗ ನಿಜವಾದಂತಹ ಒಂದು ಚಾಟಿ ಏಟು ಕೊಟ್ಟು ಒಳ್ಳೆಯ ವಿಚಾರಗಳನ್ನು ಹೇಳಿ ಮಥನ ಮಾಡಿ ಒಳ್ಳೊಳ್ಳೆಯ ವಿಚಾರಗಳನ್ನು ಸರ್ಕಾರದ ಮುಂದೆ ಇಡುವುದು ಅವರ ಧರ್ಮ. ಆದ್ದರಿಂದ ಇಲ್ಲಿ ವಿರೋಧ ಪಕ್ಷದ ನಾಯಕರುಗಳನ್ನು ಕರೆಯುವುದಿಲ್ಲ ಎಂದು ಹೇಳತಕ್ಕಂತದ್ದು ಕೂಡ ಹಾಸ್ಯಸ್ಪದ ಎಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಇವತ್ತು ನಾವು ಎಷ್ಟೋ ಆಯೋಗಗಳನ್ನು ಕಂಡಿದ್ದೇವೆ. ಹಾವನೂರ್ ಆಯೋಗ ಆಯಿತು, ಇದು ಬಹಳ ದೊಡ್ಡ ಆಯೋಗವೆಂದು ಜನ ಹೇಳುತ್ತಿದ್ದರು. ಇದು ಬಡವರಿಗೆ ಬಹಳ ಹತ್ತಿರವಾದ ಆಯೋಗ. ಅದರಲ್ಲಿ ಒಕ್ಕಲಿಗರು ಅದೇ ರೀತಿಯಲ್ಲಿ ಲಿಂಗಾಯತರು ಎಲ್ಲರೂ ಸೇರಲ್ಪಟ್ಟಿದ್ದರು. ಇನ್ನಿತರ ಪರಿಶಿಷ್ಟವರ್ಗದವರಿಗೆ ಇನ್ನಿತರರಿಗೂ ಅದರಲ್ಲಿ ಅವಕಾಶವಿತ್ತು. ಆದರೆ ಅದರ ಅನುಷ್ಠಾನ ಆಗಲಿಲ್ಲ. ಅದೇ

ರೀತಿಯಲ್ಲಿ ಚಿನ್ನಪ್ಪರೆಡ್ಡಿ ಆಯೋಗವನ್ನು ತಂದದ್ದು ಯಾರು? 86ನೇ ಇಸವಿಯಲ್ಲಿ ಅದನ್ನು ರಚನೆ ಮಾಡಿ, ವರದಿ ಬಂದ ಮೂರು ವರ್ಷದವರೆಗೂ ಅದನ್ನು ಅವರು ಏಕೆ ಜಾರಿ ಮಾಡಲಿಲ್ಲ. ಇವತ್ತು ನಮ್ಮ ಮುಖ್ಯಮಂತ್ರಿಗಳಾದಂತ ವೀರಪ್ಪಮೊಯಿಲಿಯವರ ಮೇಲೆ ನೀವು ಇದನ್ನು ಜಾರಿ ಮಾಡಬೇಕು, ಕೂಡಲೇ ಮಾಡಬೇಕು ಎಂದು ಹೇಳುತ್ತಾ ಬಂದದಲ್ಲದೆ ಅವರು ಮೂರು ವರ್ಷ ಏಕೆ ಮಾಡಲಿಲ್ಲ. ಅವರ ತಪ್ಪನ್ನು ಅವರು ಗ್ರಹಿಸಿಕೊಳ್ಳಬೇಕು, ಯಾರೇ ಆಗಲೀ, ಚಿನ್ನಪ್ಪರೆಡ್ಡಿ ಆಯೋಗವನ್ನು ರಚನೆ ಮಾಡಿದ್ದಾರೆ. ಚಿನ್ನಪ್ಪರೆಡ್ಡಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಮೂರು ವರ್ಷಗಳಕಾಲ ಅವರ ಸರ್ಕಾರ ಇದ್ದರೂ ಕೂಡ ಅವರು ಅದನ್ನು ಯಾವುದೇ ಒಂದು ರೂಪಕ್ಕೆ ತಂದು ಏಕೆ ಮಂಜೂರು ಮಾಡಿಸಿಕೊಳ್ಳಲಿಲ್ಲ. ಇವತ್ತು ವೀರಪ್ಪಮೊಯಿಲಿಯವರು ವೀರಾವೇಶದಿಂದ ಇದರ ಬಗ್ಗೆ ಹೇಳಿದುದ್ದು ಹೌದು, ಚಿನ್ನಪ್ಪರೆಡ್ಡಿ ಆಯೋಗ ಅಥವಾ ಇನ್ನಿತರ ಆಯೋಗ ಶೇಕಡ 73ರಿಂದ ಶೇಕಡ 80ರ ವರೆಗೂ ಮಾಡಬೇಕು ಎಂದು ಹೇಳುವಂಥ ಕಳಕಳಿಯನ್ನು ಅವರು ತೋರಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ನಾವು ಅದನ್ನು ವಿರೋಧಿಸಲಿಕ್ಕೆ ಆಗದೆ ಇರುವಂಥ ಪರಿಸ್ಥಿತಿ ನಮಗೆ ಬಂದಿರಬಹುದು. ಆದ್ದರಿಂದ ಶ್ರೀಯುತ ವೀರಪ್ಪಮೊಯಿಲಿಯವರು ಶೇಕಡಾ 63ರ ವರೆಗೂ ಈ ಮೀಸಲಾತಿಯನ್ನು ತಂದದ್ದನ್ನು ನಾವು ಕಾಣುತ್ತಿದ್ದೇವೆ ಆದ್ದರಿಂದ ಈ ಚಿನ್ನಪ್ಪರೆಡ್ಡಿಯ ಒಂದು ವರದಿಯನ್ನು ಜಾರಿಗೊಳಿಸುತ್ತೇವೆಂದು ವೀರಾವೇಶದಿಂದ ಹೇಳಿದ ವೀರಪ್ಪಮೊಯಿಲಿಯವರೆ ಇವತ್ತು ಆ ವಿಧೇಯಕವನ್ನು ತಂದು ಆ ರೀತಿಯಲ್ಲಿ ಮುಂದೆ ತರಲಿಕ್ಕೆ ಸಾಧ್ಯವಾಯಿತು ಎಂದು ಹೇಳುವಾಗ ಆ ಆಯೋಗವನ್ನು ರಚನೆ ಮಾಡಿದಂಥ ಮೂರು ವರ್ಷಗಳವರೆಗೆ ಅಧಿಕಾರದಲ್ಲಿ ಇದ್ದಂತಹ ಜನರಿಗೆ ಇವತ್ತು ಅದರ ಬಗ್ಗೆ ಮಾತನಾಡುವಂಥ ವಿಶೇಷವಾದಂಥ ಶಕ್ತಿ ಇಲ್ಲ ಎಂದು ನಾನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

**5.00 ಪಿ.ಎಂ**

ಅದು ಅಲ್ಲದೆ ಚಿನ್ನಪ್ಪರೆಡ್ಡಿಯವರ ಆಯೋಗದಲ್ಲಿ ಕೆಲವು ಹೆಚ್ಚು ಕಡಿಮೆ ಇರಬಹುದು. ಅಲ್ಲಿ ಒಕ್ಕಲಿಗರಿಗೆ ಅವಕಾಶ ಇಲ್ಲದೆ ಇರಬಹುದು, ಅದೇ ರೀತಿಯಲ್ಲಿ ಲಿಂಗಾಯಿತ ಸಮುದಾಯಕ್ಕೆ ಅವಕಾಶ ಇಲ್ಲದಿರಬಹುದು. ಅದರೂ ಕೂಡ ಒಂದು ರೀತಿಯಲ್ಲಿ ಅವರು ಅದನ್ನು ಮಾಡಿದ್ದಾರೆ. ಇವತ್ತು ಸರ್ವೋಚ್ಛ ನ್ಯಾಯಾಲಯ ಕೂಡ 1986ರ ರೀತಿಯಲ್ಲಿ ನೀವು ಮುಂದೆ ಹೋಗಬೇಕೆಂದು ಹೇಳತಕ್ಕ ರೀತಿಯಲ್ಲಿ ಆದೇಶ ಕೊಟ್ಟರೂ ಇವತ್ತು ಈ ವಿದೇಯಕಕ್ಕೆ ಬಹಳ ಮಹತ್ವ ಇದೆ. ಕೆಲವೊಮ್ಮೆ ನಮ್ಮ ವಿರೋಧಪಕ್ಷದವರು 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ'' ಎಂದು ಚಿಕ್ಕ ಚಿಕ್ಕ ವಿಷಯಗಳನ್ನು ತೆಗೆದುಕೊಂಡು ದೊಡ್ಡದು ಮಾಡಿ ಬ್ರಹ್ಮಾಸ್ತ್ರ ಬಿಟ್ಟ ಹಾಗೆ ಮಾತನಾಡುವುದು. ನಿಜವಾಗಿ ಆ ವಿಷಯಗಳಿಗೆ ಯಾವ ಶಕ್ತಿ ಇರುವುದಿಲ್ಲ. ಈಗ ವಿರೋಧ ಪಕ್ಷದವರು ಯಾರೂ ಇಲ್ಲ. ಸ್ವಲ್ಪ ಉದ್ದವಾಗಿ, ದೀರ್ಘವಾಗಿ ಮಾತನಾಡಿದ್ದುದು ರಾಮಯ್ಯನವರು ಮಾತ್ರ ಮತ್ತೆ ನಾಳೆ ಇರಬಹುದೇನೋ. ಆದುದರಿಂದ ಅನಾವಶ್ಯಕವಾಗಿ ಚಿಕ್ಕ ವಿಷಯದ ಮೇಲೆ ಬ್ರಹ್ಮಾಸ್ತ್ರ ಬಿಡುವುದರಲ್ಲಿ ಅರ್ಥವಿಲ್ಲ. ಇನ್ನು ವೀರಪ್ಪ ಮೊಯಿಲಿಯವರು ಒಳ್ಳೆಯ ಮನಸ್ಸಿನಿಂದ ಇಷ್ಟೆಲ್ಲ ಒಂದು ಶಕ್ತಿಯುತವಾದ ಕೆಲಸ ಮಾಡುತ್ತಾ ಬರುವಾಗ, ಅವರು ಘೋಷಣೆ ಮಾಡುತ್ತಾರೆ

ಯಾವುದನ್ನೂ ಮಾಡುವುದಿಲ್ಲವೆಂಬ ಮಾತನ್ನು ಪದೇ ಪದೇ ಹೇಳುತ್ತಿದ್ದಾರೆ. ಆದರೆ ನಾನು ಹೇಳುತ್ತೇನೆ, ನನ್ನ ನೆನಪಿನಲ್ಲಿ ಅವರು ಘೋಷಣೆ ಮಾಡಿದ್ದನ್ನು ಯಾವುದೂ ಮಾಡದೆ ಇದ್ದುದು ಎರಡು ವರ್ಷಗಳಲ್ಲಿ ನಾನು ಕಾಣಲಿಲ್ಲ. ಸತ್ಯವನ್ನು ಸತ್ಯವೆಂದೇ ಹೇಳಬೇಕು. ಅವರು ಹೇಳಿದರು, ಕನ್ನಡ ಪ್ರಾಧಿಕಾರಕ್ಕೆ ನಾವು ಅಸೆಂಬ್ಲಿಯಲ್ಲಿ ವಿಧೇಯಕವನ್ನು ತಂದು ಶಾಸನಬದ್ಧ ಅಧಿಕಾರ ಕೊಡುತ್ತೇವೆ ಎಂದು ಎರಡು ವರ್ಷದಲ್ಲಿ ಅದನ್ನು ಮಾಡಿದಂಥ ಜನರಿಗೆ ಮಾಡಲಿಕ್ಕೆ ಆಗಲಿಲ್ಲ. ಆದರೆ ವೀರಪ್ಪ ಮೊಯಿಲಿಯವರು ಈಗ ಮಾಡಿದರು. ಅವರು ಒಮ್ಮೆ ಹೇಳಿದ್ದರು, ನಾನು ಕೊಂಕಣಿ ಅಕಾಡೆಮಿ ಮಾಡುತ್ತೇನೆ, ತುಳು ಅಕಾಡಮಿ ಮಾಡುತ್ತೇನೆ, ಅದೇ ರೀತಿಯಲ್ಲಿ ಕೊಡವ ಅಕಾಡೆಮಿ ಮಾಡುತ್ತೇನೆ ಎಂದು. ಅದನ್ನು ಅವರು ಮಾಡಿಯೆಬಿಟ್ಟರು. ಬರೀ ಬಾಯಲ್ಲಿ ಹೇಳಿದ್ದಲ್ಲ. ಅದೇ ರೀತಿಯಲ್ಲಿ ಬಯಲು ಸೀಮೆಯ ನಿಗಮ ಮಾಡುತ್ತೇನೆಂದು ಹೇಳಿದ್ದರು. ಆ ವಿಚಾರ ಕೂಡ ಮೊನ್ನೆ ನಮ್ಮ ಸದನದಲ್ಲಿ ಬಂದಿದೆ. ಅವರು ಏನೆಲ್ಲ ಹೇಳಿದ್ದಾರೆ ಅದನ್ನು ಸ್ವಲ್ಪ ಹಿಂದೆಮುಂದೆ ಮಾಡಿ ತೋರಿಸಿದ್ದು ನಮ್ಮ ಕಣ್ಮುಂದೆ ಉಂಟು. ಹಾಗಿರುವಾಗ ವೀರಾವೇಶದಿಂದ ಹೇಳುತ್ತಾರೆಂದು ಹೇಳತಕ್ಕ ಮಾತು ಸಲ್ಲದು. ಬಹುಶಃ ನಾನು ಗ್ರಹಿಸುತ್ತೇನೆ, ಅವರು ಕಡಲು ಬದಿಯ ಒಬ್ಬ ವ್ಯಕ್ತಿಯಾದರಿಂದ ವೀರಪ್ಪ ಮೊಯಿಲಿಯವರು ದಕ್ಷಿಣ ಕನ್ನಡದ ಕರಾವಳಿಯ ಆ ಕಡಲಿನ ಅಲೆಗಳನ್ನು ನೋಡಿ ಅಲೆಗಳ ಸೆಳೆತಗಳನ್ನು ಕಂಡು ಉಪ್ಪುನೀರಿನ ಘಾಟಿಯಲ್ಲಿ ಅವರು ಅಳವಾಗಿ ಬೆಳೆದದ್ದರಿಂದ ಆ ಉಪ್ಪುನೀರಿನ ಘಾಟಿಯಲ್ಲಿ ಬೆಳೆದಂತಹ ವೀರಪ್ಪ ಮೊಯಿಲಿಯವರ ಹತ್ತಿರ ಎಲ್ಲರಿಗೂ ಏನೋ ಒಂದು ಘಾಟು. ಏನಾದರೂ ಅವರನ್ನು ಟೀಕೆ ಮಾಡುವ, ಏನಾದರೂ ಅದರನ್ನು ದೂರುವಂತಹ ವಿಷಯ ಇದ್ದರೆ ದೂರಬಹುದು, ಅದಕ್ಕೆ ಯಾರ ಅಡ್ಡಿಯೂ ಇಲ್ಲ. ಆದರೆ ಎಲ್ಲವನ್ನು ಘೋಷಣೆ ಮಾಡುತ್ತಾರೆ, ಅವರು ಏನೂ ಮಾಡುವುದಿಲ್ಲವೆಂದು ಹೇಳುವ ವಿಚಾರ ನಿಜಕ್ಕೂ ಸರಿಯಾದ ಮಾತಲ್ಲ. ನಾನು ಬೇಕಾದರೆ ಸಮಯ ಇದ್ದರೆ ಎಷ್ಟೋ ನಿದರ್ಶನಗಳನ್ನು ಹೇಳಬಹುದು. ಆದರೆ ಇವತ್ತು ಇಲ್ಲಿರುವುದು ಮೀಸಲಾತಿ ವಿಧೇಯಕ, ಅದರ ಮೇಲೆ ಮಾತನಾಡುತ್ತಿದ್ದೇನೆ. ಆದುದರಿಂದ ಇವತ್ತು ಮಾನ್ಯ ವಿರೋಧ ಪಕ್ಷದ ಸದಸ್ಯರು ಬರಬೇಕಾಗಿತ್ತು. ಅವರ ಮನಸ್ಸಿನ ವಿಚಾರಗಳನ್ನು ಹೇಳಬೇಕಾಗಿತ್ತು. ಟೀಕೆ ಮಾಡುವುದಾದರೆ ಟೀಕೆ ಮಾಡಬೇಕಾಗಿತ್ತು. ಟಿಪ್ಪಣಿ ಮಾಡುವುದಾದರೆ ಟಿಪ್ಪಣಿ ಮಾಡಬೇಕಾಗಿತ್ತು. ಒಳ್ಳೆಯ ವಿಚಾರ ಹೇಳುವುದು ಇದ್ದರೆ ಅದನ್ನು ಹೇಳಬೇಕಾಗಿತ್ತು. ಯಾವುದನ್ನೂ ಹೇಳದೆ ನಾವು ಹೊರಗೆ ಕುಳಿತು ಕೊಳ್ಳುತ್ತೇವೆಂದು ಹೇಳತಕ್ಕ ನೀತಿ ಉಂಟು ಇದು ಇಂಥ ಒಂದು ಶಾಸನವನ್ನು ರಚನೆ ಮಾಡತಕ್ಕ ಸದನದಲ್ಲಿ ಎಳ್ಳಷ್ಟೂ ಸರಿಯಾದುದಲ್ಲವೆಂದು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಅಭಿವೃದ್ಧಿ ಕೆಲಸ ಮಾಡಿದರೂ ತೆಗೆಳುವುದು, ಮಾಡದಿದ್ದರೂ ತೆಗಳುವುದು ಇದರ ಅರ್ಥ ನನಗೆ ಆಗುವುದಿಲ್ಲ. ಇವತ್ತು ಅಭಿವೃದ್ಧಿ ಎಷ್ಟು ಆಯಿತು, ಅವತ್ತು ಮಲೆನಾಡು ಅಭಿವೃದ್ಧಿ ಯೋಜನೆ ಎಂದು ಒಂದನ್ನು ಮಾಡಿ ಹಾಕಿದ್ದರು. ಅದಕ್ಕೆ ಹಣ ಕೊಟ್ಟಿರಲಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ಮೇಲೆ ಒಂದು ಕೋಟಿ 8 ಲಕ್ಷ ರೂಪಾಯಿಗಳನ್ನು ಮಲೆನಾಡಿನಲ್ಲಿರತಕ್ಕ ಪ್ರತಿಯೊಬ್ಬ ಶಾಸಕರಿಗೂ ಕೊಟ್ಟು ಇವತ್ತು ಆದ ಅಭಿವೃದ್ಧಿ ಕೆಲಸಗಳನ್ನು ತಾವು ನೋಡಬೇಕು. ನನ್ನ ಕ್ಷೇತ್ರದಲ್ಲಿ ಒಂದು ಕೋಟಿ 8 ಲಕ್ಷ ರೂಪಾಯಿಗಳ ಕೆಲಸ ಆಯಿತು,

ಜನರು ಸಂತೋಷದಿಂದ ಕುಣಿಯುತ್ತಿದ್ದಾರೆ. ಮಾರ್ಗ ಇಲ್ಲದಿದ್ದಲ್ಲಿ ಮಾರ್ಗ ಆಯಿತು. ಡಾಮರ್ ಇಲ್ಲದಿದ್ದಲ್ಲಿ ಡಾಮರ್ ಆಯಿತು, ಕೊಳವೆ ಬಾವಿ ಇಲ್ಲದಲ್ಲಿ ಕೊಳವೆ ಬಾವಿ ಆಯಿತು, ನೀರಾವರಿ ಯೋಜನೆ ಇಲ್ಲದಲ್ಲಿ ನೀರಾವರಿ ಯೋಜನೆ ಆಯಿತು. ಅದೇ ರೀತಿಯಲ್ಲಿ ನಳ ನೀರಾವರಿ ಯೋಜನೆ ಆಯಿತು. ಅದೇ ರೀತಿಯಲ್ಲಿ ಕಿರು ನೀರಾವರಿ ಯೋಜನೆ ಆಯಿತು. ನನ್ನ ಕ್ಷೇತ್ರದಲ್ಲಿ ಕಿರು ನೀರಾವರಿ ಯೋಜನೆ ಇರಲಿಲ್ಲ. 7 ಕಿರು ನೀರಾವರಿ ಯೋಜನೆಗಳು ಒಂದೇ ವರ್ಷದಲ್ಲಿ ಮಾಡುವುದಕ್ಕೆ ಅವಕಾಶವಾಯಿತು. ಕಾರಣ ದುಡ್ಡು. ನಮ್ಮ ಶ್ರೀಮತಿ ಮೋಟಮ್ಮನವರು ಮಲೆನಾಡು ಅಭಿವೃದ್ಧಿ ಯೋಜನೆಯ ಅಧ್ಯಕ್ಷರು. ಒಳ್ಳೆಯ ರೀತಿಯಲ್ಲಿ ಹಣ ಬಿಡುಗಡೆ ಮಾಡಿದರು ಪ್ರತಿಯೊಂದು ಕಡೆಗೆ ಹಣ ಬಿಡುಗಡೆ ಮಾಡಿದ್ದರಿಂದ ಇವತ್ತು ಅಬಿವೃದ್ಧಿ ಕೆಲಸಗಳು ಆದವು. ಅದು ಯಾರಿಗೆ? ಊರಿಗೆ ಜನರಿಗೆ, ಒಬ್ಬೊಬ್ಬರಿಗೆ ಅಲ್ಲ ಇವತ್ತು ಇಂಥ ಒಳ್ಳೆಯ ಕೆಲಸಗಳು ಆಗುತ್ತಾ ಉಂಟು. ಇದನ್ನು ಯಾರೂ ಏಕೆ ಹೇಳುವುದಿಲ್ಲ? ಎದುರು ಪಕ್ಷವಾದರೂ ಟೀಕೆ ಮಾಡಬೇಕು. ಟಿಪ್ಪಣಿ ಮಾಡಬೇಕು, ಬುದ್ಧಿವಾದ ಹೇಳಬೇಕು. ಒಳ್ಳೆಯದನ್ನು ಒಳ್ಳೆಯದೆಂದು ಹೇಳಬೇಕು. ಒಳ್ಳೆಯದು ಮಾಡಿದ್ದನ್ನು ಒಳ್ಳೆಯದೆಂದು ಸ್ವಲ್ಪವಾದರೂ ಹೇಳಬೇಕು. ಯಾವುದೂ ಮಾಡಲಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ನಾನು ಉದಾಹರಣೆ ಕೊಡುತ್ತೇನೆ, ಒಂದು ಕೋಟಿ 8 ಲಕ್ಷ ರೂಪಾಯಿಗಳನ್ನು ಒಬ್ಬೊಬ್ಬ ಶಾಸಕರಿಗೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಮಲೆನಾಡು ವಿಭಾಗದಲ್ಲಿರತಕ್ಕ ಎಲ್ಲಾ ಶಾಸಕರಿಗೂ ಹಣ ಸಿಕ್ಕಿದೆ. 1994-95ರಲ್ಲಿ ಹಣ ಬಿಡುಗಡೆ ಆದರೆ ಸಾಧಾರಣ ಒಮ್ಮೆಗೆ ಎಲ್ಲಾ ಕೆಲಸಗಳು ಪೂರ್ತಿ ಯಾಗುವ ಪರಿಸ್ಥಿತಿ ಉಂಟು. ಆದುದರಿಂದ ಇವತ್ತು ವೀರಪ್ಪ ಮೊಯಿಲಿಯವರು ತಂದಿರತಕ್ಕ ವಿಧೇಯಕ ನಿಜವಾಗಿಯೂ ಇದು ಬರೀ ಪರಿಶಿಷ್ಟ ವರ್ಗ ಅಥವಾ ಪರಿಶಿಷ್ಟ ಜಾತಿಗೆ ಉಪಕಾರ ಹೆಚ್ಚಾಗಿ ಮಾಡಿದ್ದು ಎಂದು ಅಲ್ಲ. ಮುಸಲ್ಮಾನರಿಗೆ ಅಲ್ಪಸಂಖ್ಯಾತರಿಗೆ ಅದ್ಭುತವಾದ ಅವಕಾಶ ಇದರಲ್ಲಿ ಉಂಟು. ಎರಡು ದಾಮಾಶಾ ಇದ್ದುದ್ದು ಆರು ದಾಮಾಶಾ ಆಗಿದೆ. ಶ್ರೀಮಾನ್ ವೀರಪ್ಪಮೊಯಿಲಿಯವರು ಅಲ್ಪಸಂಖ್ಯಾಂತರ ಛಾಂಪಿಯನ್ ಎಂದು ನಾನು ಹೇಳುತ್ತೇನೆ. ಎರಡು ದಾಮಾಶಾ ಇದ್ದದ್ದು ಆರು ದಾಮಾಷಾ ಮಾಡಿದ್ದಾರೆ. ಯಾರೂ ಇಷ್ಟವರೆಗೆ ಮಾಡಲಿಲ್ಲ. ಮಾಡಿದ್ದರೆ ಹೇಳಲಿ ಯಾರಾದರೂ. ಆದ್ದರಿಂದ ಅಲ್ಪಸಂಖ್ಯಾತ ವರ್ಗದ ಜನರಿಗೂ, ಮುಸ್ಲಿಂ ಬಂಧುಗಳಿಗೂ ಉಪಕಾರ ಮಾಡಬೇಕೆಂದು ಇರಾದೆ ನಮ್ಮ ಸರ್ಕಾರಕ್ಕೆ ನಮ್ಮ ಮುಖ್ಯಮಂತ್ರಿಗಳಿಗೆ ಉಂಟು. ಇದನ್ನು ಅವರು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಈಗ ನಾವು ಬರೀ ಆಡಳಿತ ಪಕ್ಷದವರಾಗಿ ಆಡಳಿತ ಪಕ್ಷದ ವಿಚಾರಗಳನ್ನು ಹೊಗಳುತ್ತೇವೆ ಎಂದು ಅಲ್ಲ. ಹೊಗಳುವುದನ್ನು ಹೋಗಲೇಬೇಕು. ಮತ್ತೆ ಯಾರು ಹೊಗಳಲೇಬೇಕು? ವಿರೋಧಪಕ್ಷದವರು ನಮ್ಮನ್ನು ಟೀಕೆಯೇ ಮಾಡುವಂತಾದರೆ ವಿರೋಧಪಕ್ಷದವರಿಗೆ ಒಳ್ಳೆಯದನ್ನು ಹೇಳುವುದಕ್ಕೆ ತಿಳಿಯುವುದಿಲ್ಲ ಎಂದಾದರೆ ನಾವು ಇದ್ದುದನ್ನಾದರೂ ಇದ್ದ ಹಾಗೆ ಹೇಳಬೇಕಲ್ಲ. ಅದು ಹೊಗಳಿಕೆ ಅಲ್ಲ. ಮಾಡಿರತಕ್ಕಂಥ ಸತ್ಯವನ್ನು ಹೇಳುವಂಥ ವಿಷಯ. ಆದ್ದರಿಂದ ಬೆಕ್ಕಿಗೆ ಆಟ, ಇಲಿಗೆ ಪ್ರಾಣಸಂಕಟ ಎಂದು ಹೇಳುವಹಾಗೆ ನಾವು ಇಷ್ಟೆಲ್ಲಾ ಕೆಲಸಮಾಡುವಾಗ ಅವರು ಆಟ ಆಡುತ್ತಿದ್ದಾರೆ. ಟೀಕೆ ಟಿಪ್ಪಣಿ ಮಾಡುತ್ತಿದ್ದಾರೆ. ತಮಾಷೆ ಮಾಡುತ್ತಿದ್ದಾರೆ. ಆದರೆ ನಾವು ಪೀಕಲಾಟದಲ್ಲಿ ಸಿಕ್ಕಿದರೂ ಕೂಡ ನಮ್ಮ ಕೆಲಸವನ್ನು

ನಾವು ಸರಾಗವಾಗಿ ಮಾಡುತ್ತಿದ್ದೇವೆ. ಆದ್ದರಿಂದ ಇವತ್ತು ಈ ಮೀಸಲಾತಿಯಲ್ಲಿ ದೊಡ್ಡವರಿಗೆ ಅನ್ಯಾಯ ಆಗಬಾರದು ಹಿಂದುಳಿದವರ್ಗದವರಿಗೆ ಒಳಿತಾಗಬೇಕು ಎಂದು ಹೇಳಿದರೆ ಮುಂದುವರೆದವರಿಗೆ ಸ್ವಲ್ಪ ತೊಂದರೆ ಆದರೂ ಅದನ್ನು ಸಹಿಸಿಕೊಳ್ಳಬೇಕಾಗುತ್ತದೆ. ಆದರೆ ಬಹಳ ಹಿಂದುಳಿದಿರತಕ್ಕ, ದಾಮಾಶಾ 70 ಪರ್ಸೆಂಟ್ ಇರತಕ್ಕ ಜನರಿಗೆ, ಅವರು ಪಾತಾಳ ಮುಟ್ಟಿರುವವರು, ಅವರನ್ನು ಕೇಳುವವರಿಲ್ಲ. ಅವರನ್ನು ತಮಾಷೆ ಮಾಡತಕ್ಕಂಥ ಜನ, ಅವರನ್ನು ಒಡೆಯತಕ್ಕಂಥ ಜನ, ಅವರನ್ನು ಜೀತ ಪದ್ಧತಿಯಲ್ಲಿ ಇಟ್ಟುಕೊಳ್ಳತಕ್ಕಂಥ ಜನ ತುಂಬಿರತಕ್ಕ ಈ ಕಾಲದಲ್ಲಿ 100 ಕ್ಕೆ 70 ದಾಮಾಶಾ ಇರತಕ್ಕ ಬಡವರಿಗೆ ಹಿಂದುಳಿದವರಿಗೆ, ಪಾತಾಳ ಮುಟ್ಟಿರತಕ್ಕ ಜನರಿಗೆ ಒಂದು ಉಪಕಾರ ಮಾಡತಕ್ಕುದ್ದು ಜಾಸ್ತಿಯಾಯಿತು. ಆದ್ದರಿಂದ ಮುಂದುವರೆದವರಿಗೆ ಅನ್ಯಾಯ ಆಗಬಾರದು, ಹಿಂದುಳಿದವರಿಗೆ ಒಳ್ಳೆಯದಾಗಬೇಕು ಎಂದು ಹೇಳಿದರೆ ಹಾವೂ ಸಾಯಬಾರದು, ಕೋಲು ಮುರಿಯಬಾರದು ಎಂದು ಹೇಳತಕ್ಕ ಈ ರೀತಿ ಸರಿಯಲ್ಲ. ಒಂದು ವೇಳೆ ಮುಂದುವರೆದವರಿಗೆ ಸ್ವಲ್ಪ ಹೆಚ್ಚುಕಡಿಮೆ ಆದರೂ ಅವರ ಪರ್ಸೆಂಟೇಜ್ ಬಹಳ ಕಡಿಮೆ ಇದೆ. ಆದರೆ ಹಿಂದುಳಿದವರು ಬಹಳ ಕಷ್ಟದಲ್ಲಿರತಕ್ಕ ಜನ, ಪಾತಾಳಕ್ಕೆ ತಳ್ಳಲ್ಪಟ್ಟಿರತಕ್ಕ ಜನ, ಜೀತ ಪದ್ಧತಿಯಲ್ಲಿರತಕ್ಕ ಜನ, ದಲಿತರು, ಪರಿಶಿಷ್ಟ ವರ್ಗದವರು ಅದೇ ರೀತಿ ಅಲ್ಪಸಂಖ್ಯಾಂತರು ಮುಸ್ಲಿಂ ಬಂಧುಗಳು ಇನ್ನಿತರ ಜನರು ಬಹಳ ಕಷ್ಟದಲ್ಲಿರತಕ್ಕ ಸಮಯದಲ್ಲಿ ಅವರಿಗೆ ಏನೆಲ್ಲಾ ಉಪಕಾರ ಮಾಡಬೇಕೋ ಅದನ್ನು ಹಿಂದುಮುಂದೆ ನೋಡದೆ ಮಾಡುವ ವ್ಯವಸ್ಥೆಯಾಗಬೇಕು. ಆದ್ದರಿಂದ ಮೀಸಲಾತಿ ವಿಚಾರದ ಬಗ್ಗೆ ಇಡೀ ನಮ್ಮ ದೇಶದಲ್ಲಿ ಇವತ್ತು ಅನೇಕ ಆಯೋಗಗಳನ್ನು ಮಾಡಿರಬಹುದು. ಕೇಂದ್ರದಲ್ಲಿ ಆಯೋಗವನ್ನು ಪಾಸ್ ಮಾಡಿದುದ್ದು ಯಾರು? ನರಸಿಂಹರಾಯರು- ನಮ್ಮ ಪ್ರಧಾನಿಗಳು. ಇಡೀ ದೇಶದಲ್ಲಿ ಯಾರೂ ಮಾಡಲಿಕ್ಕೆ ಆಗಲಿಲ್ಲ. ಆದರೆ ಪ್ರಧಾನಿಗಳು ಕೇಂದ್ರದಲ್ಲಿ ಮಾಡಿದರು. ಇದನ್ನು ಏತಕ್ಕೆ ನಾವು ಮೆಚ್ಚಿಕೊಳ್ಳುವುದಿಲ್ಲ? ಒಳ್ಳೆಯದನ್ನು ಮಾಡಿದಾಗ ಒಳ್ಳೆಯದು ಮಾಡಿದರು ಎಂದು ಹೇಳಬೇಕಲ್ಲ. ಆದ್ದರಿಂದ ಇವತ್ತು ಇಂಥ ಒಂದು ವಿಧೇಯಕವನ್ನು ತಂದು ತಮಿಳುನಾಡಿನಲ್ಲಿ ಒಬ್ಬ ಮಹಿಳೆ ಮುಖ್ಯಮಂತ್ರಿಯಾಗಿ 69 ಪರ್ಸೆಂಟ್ ತಂದರು ಎಂಬ ಮಾತು ಇದ್ದರೂ ಕೂಡ ಇವತ್ತು ವೀರಪ್ಪ ಮೊಯಿಲಿಯವರು ಈ ವಿಧೇಯಕವನ್ನು ತಂದು ಇದನ್ನು ಮುಂದುವರೆಸಿಕೊಂಡರೆ ಇದಕ್ಕಿಂತಲೂ ಮುಂದೆ ಹೋಗತಕ್ಕ ಪರಿಸ್ಥಿತಿ ಅವರ ಕೈಯಲ್ಲಿ ಉಂಟು. 73 ಅಲ್ಲ 80ವರೆಗೆ ಕೊಡುವ ವ್ಯವಸ್ಥೆ ಇಲ್ಲಿದ್ದರೂ ಬೇರೆಬೇರೆ ತೊಡಕುಗಳಿಂದ ಅದು ಹಿಂದೆ ಬೀಳಲಿಕ್ಕೆ ಸಾಧ್ಯವಾಗಿದೆ. ಇವತ್ತು ಈ ಮೀಸಲಾತಿ ವಿಧೇಯಕ ಇಡೀ ದೇಶದಲ್ಲಿ ಒಂದು ಮಾದರಿ ವಿಧೇಯಕವಾಗಿ ಬಡಜನರಿಗೆ ಪರಿಶಿಷ್ಟ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ 100ಕ್ಕೆ 75-80 ದಾಮಾಶಾ ಇರತಕ್ಕ ಜನರಿಗೆ ಉಪಕಾರ ಸಿಗತಕ್ಕ ಒಂದು ವ್ಯವಸ್ದೆ ಈ ವಿಧೇಯಕದಿಂದ ಆಗುತ್ತದೆ ಆಗಬೇಕು ಎಂಬ ಬಾವನೆ. ಶ್ರೀಮತಿ ಮೋಟಮ್ಮನವರು ಒಂದು ಮಾತು ಹೇಳಿದರು. ಇವತ್ತು ನಾವು ಬೀಜ ಹಾಕಿದರೆ ಅದು ಫಲ ಕೊಡತಕ್ಕದ್ದು ಬಹಳ ಸಮಯದ ನಂತರ. ಇವತ್ತು ನಾವು ತೆಂಗಿನ ಕಲ್ಪವೃಕ್ಷವನ್ನು ನೆಡುತ್ತೇವೆ. 5 ವರ್ಷದ ವರೆಗೆ ಅದು ಫಲ ಬಿಡುವುದಿಲ್ಲ. 5 ವರ್ಷದ ನಂತರ ಫಲ ಕೊಡುವುದಕ್ಕೆ ಶುರು ಮಾಡಿದರೆ ಗೊಂಚಲು ಗೊಂಚಲಾಗಿ ಕಲ್ಪವೃಕ್ಷದಲ್ಲಿ ಫಲ ಬಿಡುತ್ತದೆ. ಒಂದು ಕಲ್ಪವೃಕ್ಷ 100 ವರ್ಷಗಳವರಿಗೆ ಕಾಯಿಗಳನ್ನು ಕೊಡುತ್ತದೆ. ಆದ್ದರಿಂದ

ನಮಗೇ ಇದು ಸಿಗಬೇಕೆಂದು ಅಲ್ಲ. ಅವರು ಹೇಳಿದಂಥ ಮಾತು ಸರಿ. ಇನ್ನು ಮುಂದೆ ಬರತಕ್ಕ ಜನರಿಗೆ ಅದಕ್ಕಿಂತ ನಂತರ ಬರತಕ್ಕ ಜನರಿಗೆ ಯಾರಿಗೇ ಆಗಲೀ ಇದು ಉಪಕಾರ ಸಿಗತಕ್ಕ ಒಂದು ವ್ಯವಸ್ಥೆಯ ವಿಚಾರ ಎಂದು ಅವರು ಹೇಳಿದರು. ಅದನ್ನು ನಾನೂ ಸಹ ಮೆಚ್ಚಿಕೊಂಡು ಈ ವಿಧೇಯಕವನ್ನು ಬಹಳ ಸಂತೋಷದಿಂದ ಸ್ವಾಗತ ಮಾಡಿ ಈ ವಿಧೇಯಕವನ್ನು ಅನುಮೋದನೆ ಮಾಡಿ ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವೈ.ಕೆ. ಸೋಮಪ್ಪ ಸುವರ್ಣ :- (ಮುಲ್ಕಿ) ಮಾನ್ಯ ಉಪಾಧ್ಯಕ್ಷರೇ, ಈ ವಿಶೇಷ ಅಧಿವೇಶನದಲ್ಲಿ ಹಿಂದುಳಿದ ವರ್ಗಗಳ ಅಭ್ಯುದಯದ ಚಿಂತನೆಯನ್ನು ಮಾಡಿ ಸರ್ಕಾರ ಯಾವ ವಿಧೇಯಕವನ್ನು ತಂದಿದೆಯೋ ಅದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತಾ ಈ ಹಿಂದುಳಿದ ವರ್ಗದ ಭಾಗ್ಯಜ್ಯೋತಿಯಾಗಿ ಇದು ನಮ್ಮ ಮುಂದಿದೆ. ಹಿಂದುಳಿದ ವರ್ಗಗಳು ಶತಮಾನಗಳಿಂದ ಬಹಳ ತೊಂದರೆಗಳನ್ನು ಅನುಭವಿಸಿದೆ. ಮನುಧರ್ಮ ಶಾಸ್ತ್ರದ ಆಧಾರದಲ್ಲಿ ಶೂದ್ರ ಸಮಾಜವು ಮುಂದುವರಿದ ಸಮಾಜದವರಿಂದ ತುಳಿಯಲ್ಪಟ್ಟು ಬಹಳಷ್ಟು ಕಷ್ಟಕಾರ್ಪಣ್ಯದ ಜೀವನವನ್ನು ನಡೆಸಿ ಆ ಪದ್ಧತಿ ಇಂಗ್ಲೀಷರ ಕಾಲದಲ್ಲಿಯೂ ಸಹ ಮುಂದುವರಿದು ಆ ಸಮಾಜ ಹಿಂದುಳಿದ ವರ್ಗವಾಗಿಯೇ ಉಳಿದು ಬಾಕಿ ಸಮಾಜದವರ ಮಟ್ಟಕ್ಕೆ ಏರಲಿಕ್ಕೆ ಇಷ್ಟರವರೆಗೆ ಅಸಾಧ್ಯವಾಯಿತು ಎಂಬುದು ನಾವೆಲ್ಲ ಅನುಭವಿಸುತ್ತಿರುವ ಮತ್ತು ಕಾಣುತ್ತಿರುವ ದೃಶ್ಯವಾಗಿದೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಘಟನೆಯನ್ನು ತಯಾರಿಸುತ್ತಿರುವಾಗ ಹಿಂದುಳಿದ ವರ್ಗಗಳಿಗೂ ಅವರ ವಿದ್ಯೆಗನುಗುಣವಾಗಿ ಸರ್ಕಾರಿ ಉದ್ಯೋಗದಲ್ಲಿ ಸವಲತ್ತುಗಳನ್ನು ಕೊಡಬೇಕೆಂಬ ಸಂವಿಧಾನದ ಪರಿಚ್ಛೇದದಲ್ಲಿ ಸೇರಿಸಲ್ಪಟ್ಟಿದ್ದು ಬಹಶಃ ಆ ಘಟನೆ ಪೂರ್ಣಗೊಂಡಾಗ ಡಾಃ ಅಂಬೇಡ್ಕರ್ ಈ ಸೂಚನೆಯನ್ನು ತಂದು ಅಲ್ಲಿ ಪರಿಚ್ಛೇದವನ್ನು ಸೇರಿಸಿ, ಹಿಂದುಳಿದ ವರ್ಗದವರು ಇಂದು ನಾವು ಯಾವ ಅನುಕೂಲತೆಯನ್ನು ಕೇಳುತ್ತೇವೆಯೋ ಆ ಅನುಕೂಲತೆ, ಅಂದಿನಿಂದ ದೊರಕುವಂತಾಯಿತು. ಆದರೆ ಕಾಕ ಕಾಲೇಲ್ಕರರವರ ನೇತೃತ್ವದಲ್ಲಿ ಮಾಡಲ್ಪಟ್ಟ ಹಿಂದುಳಿದ ವರ್ಗಗಳ ಆಯೋಗ ಕೇಂದ್ರ ಸರ್ಕಾರದ್ದು ಮಂಡಲ್‌ರವರ ಆಯೋಗಗಳ ವರದಿಗಳು ಎಷ್ಟರಮಟ್ಟಿಗೆ ಅನುಷ್ಠಾನಗೊಳಿಸಲ್ಪಟ್ಟಿವೆ ಅಥವಾ ಸ್ಥಾಪಿತ ಹಿತಾಸಕ್ತಿಗಳಿಂದ ಈ ವರದಿಯನ್ನು ಅನುಷ್ಠಾನಗೊಳಿಸಲಿಕ್ಕೆ ಏನೆಲ್ಲ ತೊಂದರೆಗಳು ಆಗಿವೆ ಎಂಬುದನ್ನು ನಾವು ಚರಿತ್ರೆಯ ಪುಟಗಳಿಂದ ತಿಳಿಯಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಹಿಂದುಳಿದ ಜನರು ದೇವಸ್ಥಾನಗಳ ಏಳು ಬಾಗಲಿಗಳ ಹೊರಗೆ ನಿಂತು ಮೇಲ್ವರ್ಗದ ಬಾಗಿಲನ್ನು ಮುಟ್ಟಲಿಕ್ಕೆ ಆಗದೆ, ಮೇಲ್ವರ್ಗದ ಜನರನ್ನು ಮುಟ್ಟಿಸಿಕೊಂಡರೆ ಇವರು ಅಸ್ಪೃಶ್ಯರು ಎಂದು ಭಾವಿಸಿಕೊಂಡಂಥ ಈ ಜನರು ಸ್ವಾತಂತ್ರ್ಯದ ಬಳಿಕ ಸ್ವಲ್ಪ ತಲೆಯನ್ನು ಮೇಲೆತ್ತುವ ಸಂದರ್ಭ ಸಿಕ್ಕಿದ್ದರೆ ನಮ್ಮ ಪೂಜ್ಯ ಮಹಾತ್ಮ ಗಾಂಧೀಜಿಯವರು ತಮ್ಮ 18 ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹಿಂದುಳಿದ ವರ್ಗಗಳಿಗೆ ಯೋಗ್ಯ ಸ್ಥಾನವನ್ನು ಕಲ್ಪಿಸಿದ ಒಂದು ಒಳ್ಳೆಯ ಮಾರ್ಗದಿಂದ ನಮ್ಮ ಸರ್ಕಾರವು ಈ ಬಗ್ಗೆ ಹಲವಾರು ಚಿಂತನೆಗಳನ್ನು ಮಾಡಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯವರಾದ ನಾವು ಮದ್ರಾಸ್ ಸಂಸ್ಥಾನದ ಆ ರಾಜ್ಯದಲ್ಲಿ ಸೇರಿದವರಾಗಿದ್ದೆವು. ಹಿಂದುಳಿದ ವರ್ಗಗಳಿಗೆ ಕ್ರಾಂತಿಕಾರಕ ಆಂದೋಲನವನ್ನು ಮಾಡಿದವರು ತಮಿಳುನಾಡಿನಲ್ಲಿ ಈ ವಿ. ರಾಮಸ್ವಾಮಿ

ನಾಯ್ಕರ್‌ರವರು. ಅದರ ಪ್ರಭಾವ, ಆ ರಾಜ್ಯದ ಆಡಳಿತದಲ್ಲಿ ಇದ್ದಂತಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಾಕಷ್ಟು ಆಗಿ ಹಿಂದುಳಿದ ವರ್ಗಗಳಲ್ಲಿ ಸ್ವಲ್ಪ ಜಾಗ್ರತೆಯಾಗುವಂತಹ ಒಂದು ಸಂದರ್ಭವನ್ನು ನಾವೆಲ್ಲ ಕಂಡಿದ್ದೇವೆ. ಏನೇ ಇರಲಿ, ಸ್ವಾತಂತ್ರ್ಯ ಸಿಕ್ಕಿದ ನಂತರ ಈ ಕರ್ನಾಟಕ ರಾಜ್ಯ ಆದ ನಂತರ ನಮ್ಮ ದಿವಂಗತ ದೇವರಾಜ ಅರಸ್‌ರವರು ಈ ವರ್ಗಗಳ ನೇತಾರರಾಗಿ ಹಿಂದುಳಿದ ವರ್ಗಗಳಿದೆ ಬಹಳಷ್ಟು ಸಹಾಯವನ್ನು ಮಾಡಿದರು. ಅವರು ಹಿಂದುಳಿದ ವರ್ಗಗಳಿಗೆ ಬಹಳಷ್ಟು ಸಹಾಯವನ್ನು ಮಾಡಿದರು. ಅವರು ಹಿಂದುಳಿದ ವರ್ಗಕ್ಕೆ ಸೇರಿದವರಾಗದಿದ್ದರೂ ಸಹ ಅದರ ಕಳಕಳಿ ಈ ನತದೃಷ್ಟ ಸಮಾಜವನ್ನು ಹೇಗಾದರೂ ಮುನ್ನಡೆಸಲಿಕ್ಕೆ ಒಂದು ಶಕ್ತಿಯನ್ನು ಕೊಡಬೇಕೆಂದು ಹೇಳಿ ಸಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಈ ಒಂದು ಶಕ್ತಿಯಾಗಿ ಹಿಂದುಳಿದ ಸಮಾಜಕ್ಕೆ ನಾವೆಲ್ಲ ಇಂದು ಪೂಜಿಸುವಂತಹ ದೇವರ ಸ್ವರೂಪಿಯಾಗಿ ದೇವರಾಜ ಅರಸ್‌ರವರು ಹೊಸ ಶಕ್ತಿಯನ್ನು ಕೊಟ್ಟ ಬಳಿಕ, ಬಹುಶಃ ಹಾವನೂರರ ವರದಿ ಅದು ಹಿಂದುಳಿದ ವರ್ಗಗಳಿಗೆ ಒಂದು ಬೈಬಲ್ ಆಗಿತ್ತು. ಅದೊಂದು ಗೀತೆಯಾಗಿತ್ತು. ಅದು ಹೊಸ ಶಕ್ತಿಯನ್ನು ಕೊಟ್ಟು ಈ ಸಮಾಜ ಎಚ್ಚೆತ್ತು ಮುಂದುವರೆಯುವಂತಹ ಒಂದು ಸಂದರ್ಭ ಸಿಕ್ಕಿತ್ತು. ರಾಜಕೀಯವಾಗಿ ಬಹಳಷ್ಟು ಶಕ್ತಿ ಅನೇಕ ಹಿಂದುಳಿದ ವರ್ಗದವರು ಶಾಸಕರಾಗಿ ಮುಂದೆ ಬರುವಂತಹ ಸಂದರ್ಭ ಬಂದಿದ್ದರೆ ಅದು ಹಾವನೂರ್‌ರವರ ವರದಿಯಿಂದ ಬಂದಿದೆ. ಅದು ಸಹ ಕೋರ್ಟ್‌ಗೆ ಹೋಗಿ ಅದರಲ್ಲಿ ತತ್ವವನ್ನು ಅನುಷ್ಠಾನಗೊಳಿಸಲಿಕ್ಕೆ ಅಸಾಧ್ಯವಾದಂತಹ ಸಂದರ್ಭದಲ್ಲಿ ಇನ್ನೊಂದು ವರದಿ ಬಂತು. ವೆಂಕಟಸ್ವಾಮಿಯವರ ವರದಿ, ಆ ವರದಿ ಕಾಪಾಟಿನಿಂದ ಹೊರಗೆ ಬಾರದಂತಹ ಪ್ರಮೇಯ ಮತ್ತು ಅಂತಹ ವಾತಾವರಣ ಉಂಟಾಗಿ ಆದರ ಪ್ರಯೋಜನ ಸಿಗಲಿಲ್ಲ. ಅನಂತರ ಬಂದಥಾದ್ದು ಈ ಚಿನ್ನಪ್ಪರೆಡ್ಡಿಯವರ ವರದಿ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರು ಬಹಳ ಜಾಗ್ರತೆಯಿಂದ ಹಲವಾರು ಕಡೆಗೆ ಸಂದರ್ಶನ ಮಾಡಿ ಬಹುಶಃ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಪ್ರತಿಯೊಂದು ಅಂಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಆಧಾರದಲ್ಲಿ ಪಾಸಾದ ವಿದ್ಯಾರ್ಥಿಗಳ ಅಂಕಿಅಂಶಗಳ ಮೇಲೆ ಈವೊಂದು ಉತ್ತಮವಾದ ವರದಿಯನ್ನು ಕೊಟ್ಟಿದ್ದಾರೆ. ನಾವೆಲ್ಲ ಬಹಳ ಆಸೆಯಿಂದ ಇದ್ದೆವು. 1990 ರಲ್ಲಿ ಈ ವರದಿ ಅನುಷ್ಠಾನಗೊಂಡಾಗ ನಾವೆಲ್ಲ ಆದಷ್ಟುಬೇಗನೆ ಬಹುಶಃ ಇದರಿಂದ ನಮ್ಮ ಜನತೆಗೆ ಪ್ರಯೋಜನ ಸಿಗುತ್ತದೆ, ಈ ದೇಶದಲ್ಲಿ ಹಿಂದುಳಿದ ವರ್ಗದವರು ಮುಂದುವರಿದ ವರ್ಗದವರಿಗೆ ಸಮಾನರಾಗಿ ಬಾಳುವಂತಹ ಸಂದರ್ಭ ಜೀವನದಲ್ಲಿ ಖಂಡಿತಾ ಬರಬಹುದು ಎನ್ನುವ ದೊಡ್ಡ ಆಶೋತ್ತರವನ್ನು ಕಂಡುಕೊಂಡೆವು. ಆದರೆ ಪ್ರತಿ ಸಾರಿಯೂ ಹಿಂದುಳಿದ ಸಮಾಜಕ್ಕೆ ಈ ಚಿನ್ನಪ್ಪರೆಡ್ಡಿಯವರ ವರದಿಯನ್ನು ಈ ಸದನದಲ್ಲಿ ಅನುಷ್ಠಾನಗೊಳಿಸುವಂತಹ ಸಂದರ್ಭ ಆಗದ ರೀತಿಯಲ್ಲಿ ನಮ್ಮ ಜಿಲ್ಲೆ ಮತ್ತು ಈ ರಾಜ್ಯದಲ್ಲಿ ಹಿಂದುಳಿದ ವರ್ಗದವರು ನಾವೆಲ್ಲ ಸತ್ಯಾಗ್ರಹವನ್ನು ಮಾಡುವಂತಹ ಸಂದರ್ಭ ಉಂಟಾಯಿತು. ನಾನು ಆಡಳಿತಪಕ್ಷದ ಸದಸ್ಯನಾದರೂ ಸಹ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗುತ್ತಿರುವ ವೇಳೆಯಲ್ಲಿ ಸರ್ಕಾರಿ ಅಧಿಕಾರಿಗಳ ಕಛೇರಿಗಳ ಮುಂದ ಹಳ್ಳಿ ಹಳ್ಳಿಗಳಲ್ಲಿ ಕಛೇರಿ ವೇಳೆಯಲ್ಲಿ ನಾವು ಸತ್ಯಾಗ್ರಹವನ್ನು ಮಾಡಿ ಈ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ಹೇಳಿ ಬಹಳಷ್ಟು ಒತ್ತಾಯವನ್ನು ಮಾಡುತ್ತಿದ್ದೆವು.

ಏನೇ ಇರಲಿ, ಬಂಗಾರಪ್ಪನವರ ಸರ್ಕಾರೆಕ್ಕೆ ಈ ವರದಿಯನ್ನು ಜಾರಿಗೊಳಿಸಬೇಕೆಂಬ ಆಸೆಯಿತ್ತು ಕಾತುರ ಇತ್ತು. ಆದರೆ ವಾತಾವರಣ ಅನುಕೂಲವಾಗಲಿಲ್ಲ, ಅದು ತಮಗೆಲ್ಲ ಗೊತ್ತುಂಟು. ಮಂಡಲ ವರದಿಯನ್ನು ಜಾರಿಗೆ ತಂದಾಗ ನಾವು ಪತ್ರಿಕೆಗಳಲ್ಲಿ ನೋಡಿದ್ದೆವು ಹಿಂದುಳಿದ ವರ್ಗದವರು ಇದು ಜಾರಿಯಾಗಬಾರದೆಂದು ಮೈಗೆ ಬೆಂಕಿಯನ್ನು ಹಚ್ಚಿಕೊಂಡು ದಹನ ಮಾಡಿಕೊಂಡರು ಆತ್ಮಾಹುತಿ ಮಾಡಿಕೊಂಡರು ಎಂದು ಪತ್ರಿಕೆಗಳಲ್ಲಿ ಪ್ರಚಾರ ಮಾಡಿದರು. ಯಾವ ಹಿಂದುಳಿದ ವರ್ಗದ ಈ ಮಂಡಲ ವರದಿ ಜಾರಿಗೆ ಬರುತ್ತದೆಂದು ಹೇಳುವಾಗ ಮೈಗೆ ಬೆಂಕಿಯನ್ನು ಹಚ್ಚಿ ಕೊಳ್ಳುತ್ತಾನೆ? ನಿಜವಾಗಿ ಮುಂದುವರಿದ ಜನಾಂಗದವರು ಸ್ಥಾಪಿತ ಹಿತಾಸಕ್ತಿಗಳು ಹಿಂದುಳಿದ ವಿದ್ಯಾರ್ಥಿಗಳ ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿಕೊಟ್ಟು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅವರು ಆತ್ಮಾಹುತಿ ಮಾಡಿಕೊಂಡಿದ್ದಾರೆಂದು ದೊಡ್ಡ ಪ್ರಚಾರವನ್ನು ಮಾಡಿಬಿಟ್ಟರು. ಯಾವ ಮೂರ್ಖರು ಸಹ ಹಿಂದುಳಿದ ವರ್ಗದವರಿಗೆ ಬುದ್ಧಿಯೇ ಇಲ್ಲವೆಂದು ನಾವು ಭಾವಿಸಿದ್ದಾದರೂ ಇಂತಹ ಹೇಯ ಕೃತ್ಯ ಬಹುಶಃ ಹಿಂದುಳಿದ ಸಮಾಜಕ್ಕೆ ಪ್ರಯೋಜನವಾಗುವಂತಹ ಸಂದರ್ಭದಲ್ಲಿ ಅವನು ತನ್ನನ್ನು ತಾನೇ ಈ ವರದಿಯನ್ನು ಅನುಷ್ಠಾನ ಗೊಳಿಸಬಾರದೆಂದು ಹೇಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದು ಹೇಳಿ ಯಾವ ಮುರ್ಖರು ಸಹ ಮಾಡಲಿಕ್ಕೆ ಇಲ್ಲ. ಬಹುಶಃ ಸ್ಥಾಪಿತ ಹಿತಾಸಕ್ತಿಗಳು ಇದು ಅನುಷ್ಠಾನವಾಗಬಾರದೆಂದು ಹೇಳಿ ಇಂತಹ ಅಪಪ್ರಚಾರವನ್ನು ಮಾಡಿ ಈ ವರದಿಯನ್ನು ಜಾರಿಗೊಳಿಸಲಿಕ್ಕೆ ಬಹಳಷ್ಟು ತೊಂದರೆಯನ್ನು ಮಾಡಿದರು. ನಮ್ಮ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಯಾವ ರೀತಿಯಿಂದಲಾದರೂ ಸರಿ ಈ ವರದಿಯನ್ನು ಜಾರಿಗೆ ತರಲೇಬೇಕೆಂದು ಹೇಳಿ ಒಂದು ದೃಢಸಂಕಲ್ಪ ಮಾಡಿದರು. ಹುಟ್ಟುಹೋರಾಟಗಾರರಾಗಿ ಅವರ ಜೀವನದ ಉದ್ದಕ್ಕೂ ಬಡವರ ಬಗ್ಗೆ ಶ್ರೀಮಂತರ ವಿರುದ್ಧ ಹೋರಾಟಮಾಡಿದವರು. ಹಿಂದುಳಿದ ಜನಗಳ ಪಾಪದ ಜನರ ಕಷ್ಟಕಾರ್ಪಣ್ಯಗಳ ಬಹಳಷ್ಟು ಅನುಭವಗಳನ್ನು ಉಳ್ಳಂತಹ ಆ ಜೀವನದ ಚಿತ್ರವನ್ನು ತನ್ನ ಕಣ್ಣಮುಂದೆ ಕಂಡಂತಹ ವೀರಪ್ಪಮೊಯಿಲಿಯವರು ಬಹಳ ದೃಢಸಂಕಲ್ಪದಿಂದ ಈ ವರದಿಯನ್ನು ಅನುಷ್ಠಾನಗೊಳಿಸಿದರು. ನಾನೇ ಒಂದೇ ಒಂದು ಸಲ ಅವರ ಹತ್ತಿರ ಹೇಳಿದೆ. ಹೇಗಾದರೂ ಮಾಡಿ ಅದನ್ನು ಅನುಷ್ಠಾನಗೊಳಿಸಿ, ಇಲ್ಲದಿದ್ದರೆ ನಾವು ಇಷ್ಟೆಲ್ಲ ಮಂದಿ ಹಿಂದುಳಿದ ವರ್ಗದವರು ಮತ್ತು ಮುಂದುವರಿದ ಜನಾಂಗದವರು ಚಿನ್ನಪ್ಪರೆಡ್ಡಿಯವರ ವರದಿಯನ್ನು ಅನುಷ್ಠಾನಗೊಳಿಸಬೇಕೆಂಬ ದೊಡ್ಡ ಮಹತ್ವಾಕಾಂಕ್ಷೆಯಿಂದ ಇರುವಾಗ ಹಿಂದುಳಿದ ವರ್ಗದ ಮುಖ್ಯಮಂತ್ರಿಯಾದ ನೀವು ಈ ವರದಿಯನ್ನು ಅನುಷ್ಠಾನಗೊಳಿಸಲೇಬೇಕು ಎಂದು ಹೇಳುವಾಗ ಬರುವಂತಹ ಅಡೆತಡೆಗಳು ಏನೇ ಇರಲಿ ತೊಂದರೆಗಳು ಏನೇ ಇರಲಿ ಖಂಡಿತ ಇದನ್ನು ಜಾರಿಗೊಳಿಸುತ್ತೇನೆಂದು ಹೇಳಿ ಜಾರಿಗೊಳಿಸಿ ಸಾಧಿಸಿಬಿಟ್ಟಿರು. ಬಹುಶಃ ಯಾವ ಬದಲಾವಣೆಯಾದರೂ ಸಹ ಸಮಾಜದ ಒಂದು ಪ್ರೀತಿ ವಿಶ್ವಾಸವನ್ನು ಗಳಿಸಿ ಬರುವಂತಹ ತೊಂದರೆ ಗಳನ್ನು ಚಾಕಚಕ್ಯತೆಯಿಂದ ಸರಿಪಡಿಸಿಕೊಂಡು ಹೋಗುವಂತಹ ರಾಜಕೀಯ ಮುತ್ಸದ್ದಿತನವನ್ನು ತೋರಿಸಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕಾದ ಸಂದರ್ಭ ಮತ್ತು ಅಗತ್ಯ ಬಂದಾಗ ವೀರಪ್ಪಮೊಯಿಲಿಯರು ಮುಂದುವರಿದ ಜನಾಂಗದ ಕೆಲವೊಂದು ಹಿಂದುಳಿದ ವರ್ಗಗಳಿಗೆ ಸಹಾಯ ಮಾಡುವ ದೃಷ್ಟಿಯಿಂದ ಲಿಂಗಾಯಿತ

ಜನಗಳಿಗೂ ಹಾಗೂ ಒಕ್ಕಲಿಗ ಜನಾಂಗದ ಆ ಪಾಪದ ಜನಗಳಿಗೂ ಅನುಕೂಲವಾಗುವಂತೆ ಕೆಲವೊಂದು ಬದಲಾವಣೆ ಮಾಡಿರುವುದರಲ್ಲಿ ಖಂಡಿತಾ ತಪ್ಪಿಲ್ಲವೆಂದು ನಾನು ಭಾವಿಸುತ್ತಿದ್ದೇನೆ. ಏಕೆಂದರೆ, ಈ ಹಿಂದುಳಿದ ವರ್ಗಗಳಲ್ಲಿ ಉತ್ತಮವಾದ ಒಂದು ಅಂಶವನ್ನು ನಾನು ಕಂಡಿದ್ದೇನೆ. ಏನೆಂದರೆ, ಶ್ರೀಮಂತ ವರ್ಗದವರಿಗೆ ಅವರು ಹಿಂದುಳಿದ ವರ್ಗದವರಾದೂ ಸಹ ಅದರ ಪ್ರಯೋಜನವನ್ನು ಪಡೆಯಬಾರದು. ಇನ್‌ಕಂಟ್ಯಾಕ್ಸ್ ಕಟ್ಟುವವರು, ಸೇಲ್ಸ್‌ಟ್ಯಾಕ್ಸ್ ಕಟ್ಟುವವರು 20 ಎಕರೆಗಿಂತ ಹೆಚ್ಚು ಭೂಮಿ ಇರುವವರು ಅಥವಾ ದೊಡ್ಡ ಹುದ್ದೆಯಲ್ಲಿರುವಂತಹ ಗೆಜೆಟೆಡ್ ಆಫೀಸರ್ ಮಕ್ಕಳಿಗೆ ಇದರ ಪ್ರಯೋಜನ ಖಂಡಿತ ಸಿಗಬಾರದೆಂಬ ತತ್ವವನ್ನು ಒಳಗೊಂಡ ಚಿನ್ನಪ್ಪರೆಡ್ಡಿಯವರ ವರದಿಯನ್ನು ಜಾರಿಗೊಳಿಸಿದ ಸರ್ಕಾರ ಅದನ್ನು ತಲೆಯಲ್ಲಿಟ್ಟುಕೊಂಡು ಅದಕ್ಕೆ ಬೇಕಾದ ಕಾನೂನನ್ನು ಮಾಡಿದ್ದಾರೆ. ನಾನು ಬಹಳ ಹೆಮ್ಮೆ ಪಡುತ್ತಿದ್ದೇನೆ, ನಾನು ಒಬ್ಬ ಹಿಂದುಳಿದ ಸಮಾಜಕ್ಕೆ ಸೇರಿದವನಾಗಿದ್ದೇನೆ. ಹಿಂದುಳಿದ ವರ್ಗದಿಂದ ಬಂದವನು ನಾನು. ನನಗೆ ಪ್ರಯೋಜನ ಸಿಕ್ಕುವುದು ಬೇಡ. ನಿಜವಾಗಿಯೂ ಸಿಕ್ಕಲೇಬಾರದು. ಆದರೆ, ಮುಂದುವರಿದ ವರ್ಗಧ ಜನರಲ್ಲಿರುವ ಬಹಳಷ್ಟು ಬಡವರಿಗೆ ಪ್ರಯೋಜನ ಸಿಗಬೇಕೆಂಬ ದೃಷ್ಟಿಯಿಂದ, ನಮ್ಮ ಸರ್ಕಾರದವರು ಈ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಉತ್ತಮವಾದ ರೀತಿಯಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಇಂತಹ ಉತ್ತಮ ವರದಿ ಇವತ್ತು ಕಾನೂನಾಗಿ, ಹೊರಕ್ಕೆ ಬರುವಾಗ ವಿರೋಧಪಕ್ಷದವರು ಎಲ್ಲಾ ಕೋಮಿನವರು, ಎಲ್ಲಾ ಸಮಾಜದವರು ಬೆನ್ನುಚಪ್ಪರಿಸಿ, ಅಭಿನಂದಿಸಬೇಕಾದುದ್ದು ನಮ್ಮ ಕೆಲಸ ಏಕೆಂದರೆ, ಮಾನ್ಯ ರಾಮಯ್ಯನವರು ಒಳ್ಳೆಯ ಮಾತನ್ನು ಹೇಳಿದರು. ಅದೇನೆಂದರೆ ಯಾವ ಕ್ರಾಂತಿಕಾರದ ಬದಲಾವಣೆಯಾದರೂ ಸಹ ಆ ಸಮಾಜದ ಎಲ್ಲರ ಪ್ರೀತಿ ವಿಶ್ವಾಸವನ್ನು ಗಳಿಸುವಂಥ ಕೆಲಸವಾಗಬೇಕು. ಬಡವರಿಗೆ ಉದ್ಧಾರ ಮಾಡುವಾಗ, ಶ್ರೀಮಂತರ ಸಂಪತ್ತಿನಲ್ಲಿ ಸ್ವಲ್ಪ ಕಡಿಮೆಯಾಗಬೇಕಾಗುವುದು ಸ್ವಾಭಾವಿಕ. ಹಿಂದುಳಿದವರ್ಗದವರಿಗೆ ಅನುಕೂಲ ಮಾಡುವಾಗ, ಈ ದೇಶದಲ್ಲಿ, ಈ ರಾಜ್ಯದಲ್ಲಿ ಸುಮಾರು 72 ಅಂಶ, ಹಿಂದುಳಿದ ವರ್ಗ ಅಥವಾ ಹರಿಜನ ಗಿರಿಜನರು ಸೇರಿರುವಂಥ ಈ ಸಮಾಜದಲ್ಲಿ , ಇಂದು ಸರ್ಕಾರಿ ಉದ್ಯೋಗಗಳಲ್ಲಿ ಎಷ್ಟು ಜನರು, ಹಿಂದುಳಿದವರ್ಗದವರು ಉದ್ಯೋಗದಲ್ಲಿದ್ದಾರೆ? ಎಷ್ಟು ಜನ ಹೈಕೋರ್ಟ್ ಜಡ್ಜ್ ಆಗಿದ್ದಾರೆ, ಎಷ್ಟು ಜನ ಗವರ್ನರ್ ಆಗಿದ್ದಾರೆ ಎಷ್ಟು ಜನರು ಕಾರ್ಯದರ್ಶಿಯವರಾಗಿದ್ದಾರೆ. ನಿಜವಾಗಿಯೂ ಏನಾದರೂ ಸರ್ಕಾರದ ಉದ್ಯೋಗದಲ್ಲಿದ್ದರೆ, ಜವಾನನಾಗಿ ಕ್ಲರ್ಕ್ ಆಗಿ, ಇರುತ್ತಾರೆಯೇ ವಿನಹ ಅಚ್ಚುಕಟ್ಟಿನ ಆಡಳಿತ ನಡೆಸುವಂಥ ಸ್ಥಾನದಲ್ಲಿ ಹಿಂದುಳಿದವರ್ಗದವರು, ಅವರ ಸಂಖ್ಯೆಗೆ ಅನುಸಾರವಾಗಿ ಖಂಡಿತ ಪಡೆಯಲಿಲ್ಲ. ಆ ಅನ್ಯಾಯವನ್ನು ನಾವು ಹೋಗಲಾಡಿಸಬೇಕಾಗಿದೆ. ವಿಧಾನ ಸೌಧದಲ್ಲಿ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಹಾಕಿಕೊಂಡಿದ್ದೇವೆ. ಮಹಾತ್ಮಗಾಂದಿಯವರು ತಮ್ಮ 18 ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹಿಂದುಳಿದವರ್ಗದವರಿಗೆ, ಹರಿಜನರಿಗೆ ನ್ಯಾಯವನ್ನು ಒದಗಿಸಬೇಕೆಂದು ಹೇಳಿದ್ದರು. ನಮ್ಮ ಮುಂದೆ ನ್ಯಾಯದ ತಕ್ಕಡಿ ಕಾಣುತ್ತಾ ಇದೆ. ಆ ತಕ್ಕಡಿಯನ್ನು ನೋಡುವಾಗ ಒಬ್ಬ ಮುಂದುವರಿದ ಸಮಾಜದವರ ಒಂದು ತ್ರಾಸಿನಲ್ಲಿ ಇನ್ನೊಂದು ತ್ರಾಸಿನಲ್ಲಿ ಅದಕ್ಕೆ ಸಮಾನವಾದಂಥ ಭಾರ ಅಥವಾ ಎತ್ತರ ಬರಬೇಕಾದರೆ, 10 ಜನ ಹಿಂದುಳಿದವರ್ಗದವರನ್ನು

ಇನ್ನೊಂದು ತ್ರಾಸಿನಲ್ಲಿ ತೂಗಿದರೆ ಮಾತ್ರ ಆ ನ್ಯಾಯದ ಮುಳ್ಳು ನೇರವಾಗಿ ನಿಲ್ಲುತ್ತದೆ. ಈ ತಾರತಮ್ಯವನ್ನು ಹೋಗಲಾಡಿಸಬೇಕಾದರೆ, ಮಾನ್ಯ ವೀರಪ್ಪಮೊಯಿಲಿಯವರು ಧೈರ್ಯದಿಂದ ತಂದಂಥ ಈ ಹಿಂದುಳಿದ ವರ್ಗದ ಈ ವಿಧೇಯಕ, ಹಿಂದುಳಿದ ವರ್ಗಕ್ಕೆ ಹೊಸ ಶಕ್ತಿಯಾಗಿ, ಹೊಸ ಚೇತನವಾಗಿ ಮುಂದುವರಿಯುವುದಕ್ಕೆ ಖಂಡಿತ ಪ್ರೇರಕ ಶಕ್ತಿಯಾಗುತ್ತದೆ. ಅಂತಹ ಉತ್ತಮ ಕೆಲಸಕ್ಕೆ, ಉತ್ತಮ ವಿಧೇಯಕಕ್ಕೆ ಪ್ರತಿಯೊಂದು ವರ್ಗದವರೂ, ಪ್ರತಿಯೊಂದು ರಾಜಕೀಯ ಪಕ್ಷದವರೂ ಸಹಾಯವನ್ನು ಮಾಡುವಂಥ ಕರ್ತವ್ಯ, ಒಮ್ಮತ್ತದ ಬೆಂಬಲವನ್ನು ನೀಡುವಂಥಾದ್ದು ನಮ್ಮ ಆದ್ಯ ಧರ್ಮವಾಗಿದೆ ಎಂದು ನಾನು ಭಾವಿಸುತ್ತೇನೆ. ಮೊನ್ನೆಯ ವಿಧಾನಸಭೆಯ ಕಡೆಯ ಅಧಿವೇಶನ ಎಂದು ಹೋಗುವಾಗ ನಾನು ಬಹಳ ಚಿಂತಿತನಾಗಿದ್ದೆ. ನಾವು ವಿಧಾನ ಸಭೆಯನ್ನು ಪ್ರವೇಶಿಸುವಾಗ, ಯಾವ ಹಿಂದುಳಿದ ವರ್ಗದವರಿಗೆ 68 ಪರ್‌ಸೆಂಟ್ ಸೌಲಭ್ಯ ಸಿಕ್ಕಿತೋ, ನಾವು ವಿಧಾನ ಸಭೆಯನ್ನು ಬಿಟ್ಟುಹೋಗುವಾಗ, ಅದು ಒಂದು ಡೋಲಾಯಮಾನವಾದಂಥ ಪರಿಸ್ಥಿತಿ ಉಂಟಾಗಿ, ಶೂನ್ಯದ ಚಿಂತನೆ ನಮ್ಮ ಕಣ್ಮುಂದೆ ಬರುವಾಗ, ನಾವು ವಿಧಾನ ಸಭೆಗೆ ಪ್ರವೇಶಿಸುವಾಗ ಯಾವ ಹಕ್ಕುಬಾಧ್ಯತೆಗಳು ಹಿಂದುಳಿದ ಸಮಾಜಕ್ಕೆ ಇತ್ತೋ, ಅದನ್ನು ಬಿಟ್ಟು ಹೋಗುವಾಗ, ಈ ತೊಂದರೆಯನ್ನು, ಈ ಸಮಾಜಕ್ಕೆ ಕೊಟ್ಟು ಹೋದೆವಲ್ಲಾ ಎಂಬ ಚಿಂತೆ ಇತ್ತು. ಮಾನ್ಯ ವೀರಪ್ಪ ಮೊಯ್ಲಿಯವರು ಧೈರ್ಯಮಾಡಿ, ವಿಶೇಷ ಅಧಿವೇಶನವನ್ನು ಕರೆದು ಈ ಕೊರತೆಯನ್ನು ನೀಗಿಸುವುದಕ್ಕೆ ಬಹಳಷ್ಟು ಉತ್ತಮವಾದ ಶಾಸನವನ್ನು ತಂದಿದ್ದಾರೆ. ಇದಕ್ಕೆ ಎಲ್ಲರೂ ಬೆಂಬಲವನ್ನು ನೀಡಿ, ನಮ್ಮನ್ನು ಕರೆಯಲೇ ಇಲ್ಲವೆಂದು ವಿರೋಧಪಕ್ಷದವರು ಹೇಳಬಹುದು. ಕರೆಯದೇ ಇದ್ದರೂ ಸಹ ಈ ವಿಧಾನ ಸಭೆಯಲ್ಲಿ ಅವರಿಗೆ ಮಾತನಾಡುವ ಅವಕಾಶವುಂಟು. ತಮ್ಮ ಮನಸ್ಸಿನ ಇಂಗಿತವನ್ನು ಜನರಿಗೆ ತೋರ್ಪಡಿಸುವ ಅವಕಾಶವುಂಟು. ಆದ್ದರಿಂದ, ಕರೆಯಲೇಬೇಕೆಂದು ಇಲ್ಲ. ರಾಜಕೀಯ ಮುಖಂಡರು, ಕೆಲವು ಸಂದರ್ಭಗಳಲ್ಲಿ, ಕರೆಯದೇ ಹೋಗಬೇಕಾಗುತ್ತದೆ. ಏಕೆಂದರೆ, ನಾವು ಜನತೆಯ ಪ್ರತಿನಿಧಿಗಳು. ಜನತೆಯ ಪ್ರತಿನಿಧಿಗಳಾಗಿ, ಸಣ್ಣ ವಿಚಾರಕ್ಕೆ ಸಿಟ್ಟುಮಾಡಿಕೊಂಡು, ನಮ್ಮ ಹಕ್ಕುಬಾಧ್ಯತೆಗಳನ್ನು ಸರಿಯಾಗಿ, ನಿರ್ವಹಿಸದೇ ಹೋದರೆ, ಜನರು ನಮ್ಮನ್ನು ಶಪಿಸುತ್ತಾರೆ. ಆದ್ದರಿಂದ, ಇಲ್ಲಿ ಅವರು ಕರೆಯಲಿ ಅಥವಾ ಕರೆಯದೇ ಇರಲಿ, ವಿಧಾನ ಸಭೆ ನಮ್ಮದು, ಶಾಸನ ಮಾಡುವಂಥಾದ್ದು ನಮ್ಮ ಕೆಲಸ ಎಂದು ತಿಳಿಯಬೇಕು. ಇಂತಹ ಅಮೂಲ್ಯವಾದ ಶಾಸನ ಮಾಡುವ ಕಾಲದಲ್ಲಿ, ನಮ್ಮನ್ನು ಕರೆಯಲಿಲ್ಲ, ಪೂರ್ವಭಾವಿಯಾಗಿ ನಮ್ಮೊಂದಿಗೆ ಪರ್ಯಾಲೋಚನೆ ಮಾಡಲಿಲ್ಲವೆಂಬ ಕ್ಷುಲ್ಲಕ ವಿಚಾರವನ್ನು ಮುಂದಿಟ್ಟುಕೊಂಡು, ಇಂತಹ ಶ್ರೇಷ್ಠವಾದ ವಿಧೇಯಕಕ್ಕೆ ನಾವು ಹೊರಗೆ ಇರುವುದು ಉತ್ತಮವಲ್ಲವೆಂದು ನಾನು ಹೇಳುತ್ತೇನೆ. ಅವರಲ್ಲಿಯೂ ಸಹ ಹಿಂದುಳಿದ ವರ್ಗದ ಬಗ್ಗೆ ಬಹಳಷ್ಟು ಚಿಂತನೆ ಮಾಡುವಂಥ ಅನೇಕ ಮುಖಂಡರನ್ನು ನಾವು ಕಾಣುತ್ತಾ ಇದ್ದೇವೆ.

ಶ್ರೀ ಬಿ.ಎಂ. ಇದಿನಬ್ಬ :- ಮಾನ್ಯ ವೈ.ಕೆ.ರಾಮಯ್ಯನವರು ಸಭೆಯಲ್ಲಿ ಹಾಜರಿದ್ದು ಒಳ್ಳೆಯ ಮಾತನಾಡಿದ್ದಾರೆ. ಅವರು ಟೀಕೆ ಮಾಡಲಿ, ಏನೇ ಮಾಡಲಿ. ಆದರೆ, ಅವರ ಒಳ್ಳೆಯ ವಿಚಾರಕ್ಕೆ ಸಂತೋಷವಾಗುತ್ತದೆ.

* ಶ್ರೀ ಕೆ.ಸೋಮಪ್ಪ ಸುವರ್ಣ:- ನಾವು, ನಮ್ಮ ಜಿಲ್ಲೆಯಲ್ಲಿ ಹಿಂದುಳಿದವರ್ಗದವರ ಸಮ್ಮೇಳನ ಮಾಡುವಾಗ, ಶ್ರೀಯುತ ಪಿ.ಜಿ.ಆರ್.ಸಿಂಧ್ಯರವರನ್ನು ಆಮಂತ್ರಿಸಿದ್ದೆವು. ಮಾನ್ಯ ಜಾಲಪ್ಪನವರು ಹಿಂದುಳಿದ ವರ್ಗಕ್ಕಾಗಿ ಬಹಳಷ್ಟು ಕೆಲಸ ಮಾಡಿದರು. ಅಂತಹ ಹಿಂದುಳಿದ ವರ್ಗದ ಮುಖಂಡರೆನಿಸುವವರು, ಇಂತಹ ಅಮೂಲ್ಯವಾದಂಥ ವಿಧೇಯಕವನ್ನು ನಮ್ಮ ಅಸೆಂಬ್ಲಿಯಲ್ಲಿ ತರುವಾಗ, ಅವರು ದೂರ ಇರುವುದು ಎಂದು ಹೇಳಿದರೆ, ನಿಜವಾಗಿಯೂ ಇವರಿಂದಾಗಿ, ಈ ಹಿಂದುಳಿದ ಸಮಾಜಕ್ಕೆ ಬಹಳಷ್ಟು ಅನ್ಯಾಯವಾಗಿದೆ ಎಂದು ನಾನು ಹೇಳಲಿಕ್ಕೆ ಬಹಳ ಬೇಸರಪಡುತ್ತಿದ್ದೇನೆ. ಏನೇ ಇರಲಿ, ಮಾನ್ಯ ವೀರಪ್ಪಮೊಯಿಲಿಯವರು ಬಹಳ ದೊಡ್ಡ ಧೈರ್ಯದಿಂದ, ಇಂತಹ ಕ್ರಾಂತಿಕಾರಕ ಬದಲಾವಣೆಯನ್ನು ತರುವಂಥ ಈ ವಿಧೇಯಕವನ್ನು ತಂದಿದ್ದಾರೆ. ನಾವೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡೋಣ. ಮಾನ್ಯ ರಾಮಯ್ಯನವರು ಹೇಳಿದಹಾಗೆ, ಮದ್ರಾಸಿನಲ್ಲಿ ಹಿಂದುಳಿದವರ್ಗದವರ ದೊಡ್ಡ ಶಕ್ತಿಯುಂಟು. ಮುಂದುವರಿದ ಜನಾಂಗಕ್ಕೆ ಸೇರಿದಂಥ ಜಯಲಲಿತಾರವರು ಬಹಳಷ್ಟು ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಯಾರೇ ಮಾಡಲಿ, ಹಿಂದುಳಿದ ವರ್ಗಕ್ಕೆ ಸಹಾಯ ಮಾಡುವವರನ್ನು, ಮುಂದುವರಿದ ವರ್ಗದವರಾಗಿರಬಹುದು, ಬೇರೆ ಪಕ್ಷದವರಾಗಿರಬಹುದು, ನಾವು ಅವರನ್ನು ಪೂಜಿಸಬೇಕು, ಅಭಿನಂದಿಸಬೇಕು. ಜಯಲಲಿತಾರವರು ಕೇಂದ್ರಸರ್ಕಾರದ ಕಣ್ಣನ್ನು ತೆರೆಯಿಸಿದ್ದಾರೆ. ಬಹುಶಃ ಕಾನೂನು ಏನಾದರೂ ಇದ್ದರೆ ನಾವು ಮಾಡುವವರು. ನಮಗಾಗಿ ಕಾನೂನು ಇದೆಯೇ ವಿನಹ, ಕಾನೂನಿಗಾಗಿ ನಾವು ಇಲ್ಲ. ಪಾರ್ಲಿಮೆಂಟ್ ಸದಸ್ಯರನ್ನು ಆರಿಸುವವರು ನಾವು, ಯಾವುದೇ ಘಟನೆ ಇದ್ದರೆ, ಅದು ಮನುಷ್ಯ ಮಾಡಿದ ಘಟನೆ. ಮನುಷ್ಯರಿಗೆ ಅನುಕೂಲವಾದಂಥ ರೀತಿಯಲ್ಲಿ, ಜನತೆಗೆ ಅನುಕೂಲವಾದಂಥ ರೀತಿಯಲ್ಲಿ ಘಟನೆ ಇರಬೇಕೇ ವಿನಃ ಘಟನೆಯನ್ನು ಕಣ್ಣುಮುಚ್ಚಿ, ಅಂದಾನುಕರಣ ಮಾಡುವಂಥ ಸಂದರ್ಭ ಇರಬಾರದು. ಸಂದರ್ಭ ಬಂದಾಗ, ಘಟನೆಗೆ ಎಷ್ಟೋ ತಿದ್ದುಪಡಿಗಳನ್ನು ತಂದಿದ್ದೇವೆ. ಇದಕ್ಕೂ ಸಹ ಬೇಕಾದ ತಿದ್ದುಪಡಿಯನ್ನು ಮಾಡಿ, ನತದೃಷ್ಟ ಸಮಾಜಕ್ಕೆ, ಶೋಷಿತ ವರ್ಗಕ್ಕೆ ಮಾತ್ರವಲ್ಲದೆ ಶತಮಾನಗಳಿಂದ ಶೂದ್ರರಾಗಿ , ಆ ಕಾಲಚಕ್ರದ ಮಹಿಮೆಯಿಂದ ತುಳಿಯಲ್ಪಟ್ಟಂಥ ಈ ಜನಗಳ ಉದ್ಧಾರಕ್ಕಾಗಿ, ಮಾನ್ಯ ಮೊಯಿಲಿಯವರು ತಂದಂಥ ಈ ವಿಧೇಯಕವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಭಕ್ತವತ್ಸಲಂ(ಕೆ.ಜಿ.ಎಫ್.):- ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಯವರು ಮೀಸಲಾತಿ ಬಗ್ಗೆ ವಿಶೇಷ ಸಭೆ ಕರೆದಿದ್ದಾರೆ. ಅದಕ್ಕೋಸ್ಕರ, ನನ್ನ ಪರವಾಗಿ ಮತ್ತು ನಮ್ಮ ಪಾರ್ಟಿ ಪರವಾಗಿ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇದು, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಮುಖ್ಯವಾದ ವಿಷಯ. ಇದರಲ್ಲಿ, ಷೆಡ್ಯೂಲ್ಡ್ ಕಾಸ್ಟ್, ಬ್ಯಾಕ್‌ವರ್ಡ್ ಕಾಸ್ಟ್, ಮತ್ತಿತರ ಜನಗಳಿಗೆ ಬಹಳ ಸಹಾಯ ಸಿಗುತ್ತಿದೆ. ಅದಕ್ಕೆ, ನಮ್ಮ ಅಧ್ಯಕ್ಷರು ಮತ್ತು ಎಲ್ಲಾ ಶಾಸಕರು, ಒಳ್ಳೆಯ ಒಪೀನಿಯನ್ ಕೊಟ್ಟಿದ್ದಾರೆ. ಮಾನ್ಯಮುಖ್ಯಮಂತ್ರಿಯವರು ಮಾತನಾಡತಕ್ಕ ಸಂದರ್ಭದಲ್ಲಿ, ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ಅದರ ಮೇಲೆ, ನಾವು ಇಲ್ಲಿ ಮಾತನಾಡುವ

ಅವಕಾಶ ಸಿಕ್ಕಿತ್ತು. ಈ ಮೀಸಲಾತಿ ಬಗ್ಗೆ, ಇಡೀ ಇಂಡಿಯಾದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ, ಸ್ವಲ್ಪ ಗಲಾಟೆ, ಹೋರಾಟ ಹೀಗೆ ಏನೇನೋ ಆಗಿದೆ. ಕರ್ನಾಟಕ ರಾಜ್ಯದಲ್ಲ 50 ಪರ್ಸೆಂಟ್ ಮೇಲೆ ರಿಸರ್ವೇಷನ್ ಮಾಡಬಾರದೆಂದು ಸುಪ್ರೀಂಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ನಾವೆಲ್ಲರೂ ಸಾರ್ವಜನಿಕರಿಂದ ಚುನಾಯಿತರಾಗಿ, ಈ ಸಭೆಗೆ ಆರಿಸಿ ಬಂದಿದ್ದೇವೆ. ಈ ನಿರ್ಣಯವನ್ನು ಪಾಸ್ ಮಾಡಿ, ಬಿಲ್ ಮಂಜೂರ್ಮಾಡಿ, ಪಾರ್ಲಿಮೆಂಟ್‌ಗೆ ಕಳುಹಿಸಿ, ಅಲ್ಲಿಂದ ರಾಷ್ಟ್ರಪತಿಗಳ ಸಹಿ ಪಡೆಯಬೇಕೆಂಬ ತೀರ್ಮಾನದ ಮೇಲೆ ಈ ಸಭೆಗೆ ಬಂದಿದ್ದೇವೆ. ಮತ್ತು ನಾವೆಲ್ಲರೂ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಇವತ್ತು ವಿರೋಧಪಕ್ಷದವರು ಬಂದಿಲ್ಲ, ಬಾಯ್‌ಕಾಟ್ ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಸ್ವಲ್ಪ ಡಿಫರೆನ್ಸ್ ಆಗಿ ಮಾತನಾಡಿದ್ದಾರೆ. ಇವರು ಸರಿಯಾಗಿ ಕರೆಯಲಿಲ್ಲ, ಚೀಫ್ ಮಿನಿಸ್ಟರ್ ಸರಿಯಾಗಿ ಕೋ-ಆಪರೇಟ್ ಮಾಡಲಿಲ್ಲ ಎನ್ನುವ ಮಾತು ಆಡಿದ್ದಾರೆ. ಅದರ ಬಗ್ಗೆ ತಮಿಳುನಾಡಿನ ಕಾರಣ ತೋರಿಸಿ ಮಾತನಾಡಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಇವತ್ತು ಮಾಡಿದುದ್ದು ಸರಿ ಎಂದು ಪಬ್ಲಿಕ್ ಹೇಳುತ್ತಾರೆ. ಎರಡು ತಿಂಗಳಲ್ಲಿ ಎಲೆಕ್ಷನ್ ಬರುತ್ತಿದೆ ಅದಕ್ಕೋಸ್ಕರ ಬಂಗಾರಪ್ಪನವರು ಮತ್ತು ಅಪೋಸಿಷನ್ ಲೀಡರ್‌ರವರು ಬಾಯ್‌ಕಾಟ್ ಮಾಡಿದ್ದಾರೆಂದು ಇವತ್ತು ಪಬ್ಲಿಕ್ ಹೇಳುತ್ತಿದ್ದಾರೆ. ಮುಖ್ಯ ಮಂತ್ರಿಗಳ ಸೀಟ್‌ನಲ್ಲಿ ಇವತ್ತು ಕುಳಿತಿರುವವರನ್ನು ವೀರಪ್ಪಮೊಯಿಲಿಯಾಗಿ ನಾನು ನೋಡುತ್ತಿಲ್ಲ, ಡಾಃ ಅಂಬೇಡ್ಕರ್ ಆಗಿ ಅವರನ್ನು ನಾನು ನೋಡುತ್ತಿದ್ದೇನೆ. ಅಂಬೇಡ್ಕರ್‌ರವರು ದೇಶದ ಜನಕ್ಕೆ ಏನೇನು ಮಾಡಬೇಕೆಂದು ಇದ್ದರೋ ಅದೇ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಇವರು ಮುಖ್ಯ ಮಂತ್ರಿಯಾಗಿ ಬಂದ ಒಂದೂವರೆ ವರ್ಷದಲ್ಲಿ ನಮ್ಮ ಕಾನ್ಸಿಟ್ಯೂಯೆನ್ಸಿಯಲ್ಲಿ ನಮ್ಮ ಜನಗಳಿಗೋಸ್ಕರ 12 ಕೋಟಿ ರೂಪಾಯಿಗಳ ಕೆಲಸ ಮಾಡಿಸಿದ್ದಾರೆ. ರಿಸರ್ವೇಷನ್ ಬಗ್ಗೆ ತಮಿಳುನಾಡು ಮುಖ್ಯ ಮಂತ್ರಿಗಳಾದ ಡಾ : ಜೆ. ಜಯಲಲಿತಾರವರು ಏನು ಮಾಡಿದ್ದಾರೆಂಬ ಬಗ್ಗೆ ಕೆಲವರು ಇಲ್ಲಿ ಮಾತನಾಡಿದ್ದಾರೆ. ತ್ರೂಔಟ್ ಇಂಡಿಯಾದಲ್ಲೇ ಅವರು ಫಸ್ಟ್ ಮಾಡಿದ್ದಾರೆ. ಅವರು ಅಲ್ಲಿ ಮಾಡಿರುವುದನ್ನು ನಮ್ಮ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಇಲ್ಲಿ ಫಾಲೋ ಮಾಡಿದ್ದಾರೆ. ಅದರಿಂದ ನಮಗೆ ಬಹಳ ಸಂತೋಷವಾಗಿದೆ. ತಮಿಳುನಾಡಿನಲ್ಲಿ ಆಲ್ ಪಾರ್ಟೀಸ್ ಕೋ-ಆಪರೇಟ್ ಮಾಡಿದಕ್ಕೆ ಅಲ್ಲಿ ಮಾಡಿದ್ದಾರೆಂದು ಬಂಗಾರಪ್ಪನವರು ಹೇಳಿದ್ದಾರೆ. ಅದೆಲ್ಲಾ ಸುಳ್ಳು. ಅಲ್ಲಿ ದೊಡ್ಡ ಪಾರ್ಟಿಯಾಗಿ, ಡಿ.ಎಂ.ಕೆ., ಜನತಾದಳ ಮತ್ತು ಪಾಟಾಳಿ ಮಕ್ಕಳ್ ಪಕ್ಷ ಎಲ್ಲಾ ಇದೆ. ಅವರೆಲ್ಲಾ ಅದಕ್ಕೆ ಏನೂ ಕೋ-ಆಪರೇಟ್ ಮಾಡಿಯೇ ಇಲ್ಲ. ಕೋ-ಆಪರೇಟ್ ಮಾಡಿದ್ದುದು ಅಂದರೆ, ಕಾಂಗ್ರೆಸ್ ಪಾರ್ಟಿ ಹಾಗೂ ಮುಸ್ಲೀಮ್‌ರ್ಸ್ ಲೀಗ್. ಅಲ್ಲಿ ಇವರ ಕೋ-ಆಪರೇಷನ್ ತೆಗೆದುಕೊಂಡು ಸ್ಪೆಷಲ್ ಹೌಸ್‌ನಲ್ಲಿ ರಿಸರ್ವೇಷನ್ 69 ಪರ್‌ಸೆಂಟ್ ಮಾಡಿದ್ದಾರೆ. ಇಲ್ಲಿ ಅಪೋಸೀಷನ್ ಪಾರ್ಟಿಯವರು ಮತ್ತು ಬಂಗಾರಪ್ಪನವರು ಮಾಡಿರುವುದು ಸರಿಯಲ್ಲ. ಅವರು ಇಲ್ಲಿ ಎಲೆಕ್ಷನ್‌ಗೋಸ್ಕರ ಪಾಲಿಟಿಕ್ಸ್ ಮಾಡಿದ್ದಾರೆ. ಅವರು ಚೀಫ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಎಂ.ಎಲ್.ಎ. ಆದ ನನಗೇ ಅವರು ಸೇವ್ ಮಾಡಲಿಲ್ಲ. ಈಗ ಅವರು ಇಲ್ಲಿ ಮಾತನಾಡುತ್ತಾರೆ. ಅವರ ಪಕ್ಕದಲ್ಲಿರುವ ನಜೀರ್ ಅಹಮದ್ ಅವರು ಎಷ್ಟೋ ರೌಡಿಸಂ ಮಾಡಿದರು, ಅದನ್ನು ಕಂಟ್ರೋಲ್ ಮಾಡುವುದಕ್ಕೆ

ಅವರಿಂದ ಆಗಲಿಲ್ಲ. ಅವರು ಚೀಫ್ ಮಿನಿಸ್ಟರ್ ಆಗಿದ್ದ ಕಾಲದಲ್ಲಿ ಮಾಡಿದ ಕೆಲಸಗಳ ಮೇಲೆ ಸಿ.ಬಿ.ಐ. ಕೇಸ್ ಇದೆ. ಮಾನ್ಯ ವೀರಪ್ಪಮೊಯಿಲಿಯವರ ಮೇಲೆ ಪಬ್ಲಿಕ್‌ನಲ್ಲಿ ಏನಾದರೂ ಡಿಫರೆನ್ಸ್ ಇದೆಯಾ? ಏನೂ ಇಲ್ಲ. ಅವರು ಬಂದ ಮೇಲೆ ಜನಗಳಿಗೆ ಒಳ್ಳೆಯ ಕೆಲಸ ಮಾಡಿದ್ದಾರೆ. ಡಾ : ಜೆ. ಜಯಲಲಿತರಾವರು ಏನು ರೂಟ್ ತೋರಿಸಿದ್ದಾರೋ ಆ ರೂಟ್‌ನಲ್ಲಿ ಇವರು ಈಗ ಮಾಡಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಬಹಳ ಥಾಂಕ್ಸ್ ಹೇಳುತ್ತೇನೆ. ನನ್ನ ಪರವಾಗಿ ಮತ್ತು ನನ್ನ ಇ.ಐ.ಡಿ.ಎಂ.ಕೆ. ಪರವಾಗಿ ಈ ಬಿಲ್‌ಗೆ ಈ ಸಂದರ್ಭದಲ್ಲಿ ಒಪ್ಪಿಗೆ ಕೊಡುತ್ತೇನೆ. ಇವತ್ತು ಅಪೊಸೀಷನ್ ಲೀಡರ್ ಮತ್ತು ಶಾಸಕರೆಲ್ಲಾ ಬಾಯ್‌ಕಾಟ್ ಮಾಡಿದ್ದಾರೆ. ಬಹಳ ಇಂಪಾರ್ಟೆಂಟ್ ಸಬ್‌ಜಕ್ಟ್ ಇದಾಗಿರುವುದರಿಂದ ಈ ರಾಜ್ಯದ ಮಕ್ಕಳಿಗೆ ಅವರು ದ್ರೋಹ ಮಾಡಿದ್ದಾರೆಂದು ನನ್ನ ಒಪೀನಿಯನ್ ಹೇಳಿ ಅವರು ಮಾಡಿದ್ದುದು ಸರಿಯಿಲ್ಲ, ಬಾಯ್‌ಕಾಟ್ ಮಾಡಿರುವುದನ್ನು ವಾಪಸ್ ತೆಗೆದುಕೊಂಡು ನಾಳೆ ಸಭೆಗೆ ಬಂದು ಅವರ ಒಪೀನಿಯನ್ ಏನು ಇದೆ ಎಂದು ಮಾತನಾಡಬೇಕೆಂದು ಕೇಳಿಕೊಂಡು ಅವರು ಬಾಯ್‌ಕಾಟ್ ಮಾಡಿರುವುದನ್ನು ನಾನು ಖಂಡಿಸಿ ನನ್ನ ಪರವಾಗಿ ಮತ್ತು ಎ.ಐ.ಡಿ.ಎಂ.ಕೆ. ಪರವಾಗಿ ನಾನು ಇಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

ಮಾನ್ಯ ಸದಸ್ಯರಾದ ಭಕವತ್ಸಲಂರವರು ಸದನದ ಬಾವಿಯಲ್ಲಿ ಧರಣಿ ಕುಳಿತುಕೊಂಡರು ನಂತರ ಮಾನ್ಯ ಉಪಾಧ್ಯಕ್ಷರ ಕೋರಿಕೆ ಮೇರೆಗೆ ತಮ್ಮ ಸ್ಥಳದಲ್ಲಿ ಕುಳಿತರು.

## ಪ್ರಕಟಣೆ

(1) ಉಪಾಧ್ಯಕ್ಷರು : ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 114 ರ ಮೇರೆಗೆ ದಿನಾಂಕ 19ನೇ ಸೆಪ್ಟೆಂಬರ್ 1994 ರಂದು ಕೂಡಲ ಸಂಗಮ ಅಭಿವೃದ್ಧಿ ಮಂಡಲ ವಿಧೇಯಕ 1994ನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಿತೆಂದು ತಿಳಿಸಿರುತ್ತಾರೆ.

(2) ವಿಧಾನ ಸಭಾ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ದಿನಾಂಕ 19ನೇ ಸೆಪ್ಟಂಬರ್, 1994ರಂದು 4-00 ಗಂಟೆಗೆ ಸಭೆ ಸೇರಿ ದಿನಾಂಕ 20ನೇ ಸೆಪ್ಟಂಬರ್ 1994ರಂದು ಬೆಳಗ್ಗೆ 11.30ಗೆ ಸಭೆಸೇರಿ 1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕದ ಮೇಲೆ ಚರ್ಚೆಯನ್ನು ಮುಂದುವರಿಸಿ ಮತಕ್ಕೆ ಹಾಕಲು ತೀರ್ಮಾನಿಸಿತು.

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

ಈಗ ಸದನದ ಕಲಾಪ ಮುಂದೂಡಲ್ಪಟ್ಟು ಮತ್ತೆ ನಾಳೆ ಬೆಳಿಗ್ಗೆ 11.30 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ಸದನವು 5 ಗಂಟೆ 37 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 20ನೇ ಸೆಪ್ಟೆಂಬರ್ ವರೆಗೆ 1994 ರ ಮಂಗಳವಾರ ಬೆಳಗ್ಗೆ 11.30 ಗಂಟೆಗೆ ಸೇರಲು ನಿಶ್ಚಯಿಸಿತು.)

* ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸುವುದಿಲ್ಲವೆಂದು ಸೂಚಿಸುತ್ತದೆ.